# Current affairs of August 2021 from KPSC Vaani

## 02-08-2021

### ಟೋಕಿಯೊ ಒಲಂಪಿಕ್ಸ್ ನಲ್ಲಿ ಕಂಚಿನ ಪದಕ ಜಯಿಸಿದ ಪಿ.ವಿ. ಸಿಂಧು



I* ಟೋಕಿಯೊ ಒಲಿಂಪಿಕ್ಸ್ ನಲ್ಲಿ ಇಸ್ರೇಲ್‌ನ ಜಿಮ್ನಾಸ್ಟಿಕ್ಸ್ ಪಟು ಆರ್ಟೆಮ್ ಡೊಲ್ಗೊಪ್ಯಾಟ್ ಅವರು ಆರ್ಟಿಸ್ಟಿಕ್ ಜಿಮ್ನಾಸ್ಟಿಕ್ಸ್ ಪುರುಷರ ವಿಭಾಗದ `ಫೈನಲ್‌ನ ಪಂದ್ಯದಲ್ಲಿ ಸ್ಪೇನ್‌ನ ರೇಡೆರ್ಲಿ ಜಪಾಟ ಅವರನ್ನು ಸೋಲಿಸಿ ಚಿನ್ನದ ಪದಕ ಜಯಿಸಿದ್ದಾರೆ.

* ಇಸ್ರೇಲ್ ದೇಶವು ಒಲಿಂಪಿಕ್ಸ್‌ನಲ್ಲಿ ಗೆದ್ದಿರುವ ಕೇವಲ 2 ನೇ ಚಿನ್ನದ ಪದಕ ಇದಾಗಿದೆ, ಈ ಹಿಂದೆ ಗಾಲ್ ಫ್ರಿಡ್ಮನ್ ಅವರು 2004 ರ ಅಥೆನ್ಸ್ ಕೂಟದ ಪುರುಷರ ಸೇಲ್‌ಬೋರ್ಡ್ ವಿಭಾಗದಲ್ಲಿ ಚಿನ್ನದ ಪದಕವನ್ನು ಜಯಿಸಿದ್ದರು.

* ಕಂಚಿನ ಪದಕವನ್ನು ಚೀನಾದ ಕ್ವಿಯಾವೊ ರೂಟಾಂಗ್ ಅವರು ಪಡೆದುಕೊಂಡಿದ್ದಾರೆ.

### ಟೋಕಿಯೋ ಒಲಿಂಪಿಕ್ಸ್ ಜರ್ಮನಿಯ ಜ್ವೆರೆವ್‌ಗೆ ಚಿನ್ನದ ಪದಕ



* ಟೋಕಿಯೊ ಒಲಿಂಪಿಕ್ಸ್ ನಲ್ಲಿ ಜರ್ಮನಿಯ ಅಲೆಕ್ಸಾಂಡರ್ ಜ್ವೆರೆವ್ ಅವರು ಪುರುಷರ ಟೆನಿಸ್ ಸಿಂಗಲ್ಸ್ ವಿಭಾಗದಲ್ಲಿ ಚಿನ್ನದ ಪದಕವನ್ನು ಜಯಿಸಿದ್ದಾರೆ.

* ಜರ್ಮನಿಯ ಅಲೆಕ್ಸಾಂಡರ್ ಜ್ವೆರೆವ್ ಅವರು ರಷ್ಯಾದ ಕರೆನ್ ಕ್ಯಾಚ್‌ನೋವ್ ವಿರುದ್ಧ ಗೆಲುವು ಸಾಧಿಸಿದ್ದಾರೆ, ಈ ಹಿಂದೆ 1988 ರಲ್ಲಿ ಸ್ಟೆಫಿ ಗ್ರಾಫ್ ಅವರು ಸಿಂಗಲ್ಸ್ ವಿಭಾಗದಲ್ಲಿ ಚಿನ್ನದ ಪದಕವನ್ನು ಜಯಿಸಿದ್ದರು.

### ಟೋಕಿಯೋ ಒಲಿಂಪಿಕ್ಸ್ ಜರ್ಮನಿಯ ಜ್ವೆರೆವ್‌ಗೆ ಚಿನ್ನದ ಪದಕ



* ಟೋಕಿಯೊ ಒಲಿಂಪಿಕ್ಸ್ ನಲ್ಲಿ ಜರ್ಮನಿಯ ಅಲೆಕ್ಸಾಂಡರ್ ಜ್ವೆರೆವ್ ಅವರು ಪುರುಷರ ಟೆನಿಸ್ ಸಿಂಗಲ್ಸ್ ವಿಭಾಗದಲ್ಲಿ ಚಿನ್ನದ ಪದಕವನ್ನು ಜಯಿಸಿದ್ದಾರೆ.

* ಜರ್ಮನಿಯ ಅಲೆಕ್ಸಾಂಡರ್ ಜ್ವೆರೆವ್ ಅವರು ರಷ್ಯಾದ ಕರೆನ್ ಕ್ಯಾಚ್‌ನೋವ್ ವಿರುದ್ಧ ಗೆಲುವು ಸಾಧಿಸಿದ್ದಾರೆ, ಈ ಹಿಂದೆ 1988 ರಲ್ಲಿ ಸ್ಟೆಫಿ ಗ್ರಾಫ್ ಅವರು ಸಿಂಗಲ್ಸ್ ವಿಭಾಗದಲ್ಲಿ ಚಿನ್ನದ ಪದಕವನ್ನು ಜಯಿಸಿದ್ದರು.

### ಟೋಕಿಯೋ ಒಲಿಂಪಿಕ್ಸ್ ನಲ್ಲಿ ಆಸ್ಟ್ರೇಲಿಯಾದ ಎಮ್ಮಾ ಮೆಕಿಯನ್ ಅವರು '7' ಪದಕ ಜಯಿಸಿದ್ದಾರೆ



* ಟೋಕಿಯೋ ಒಲಿಂಪಿಕ್ಸ್ ನಲ್ಲಿ ಆಸ್ಟ್ರೇಲಿಯಾದ ಈಜುಗಾರ್ತಿ ಎಮ್ಮಾ ಮೆಕಿಯನ್ ಅವರು ಒಟ್ಟಾರೆ '7' ಪದಕಗಳನ್ನು ಗೆಲ್ಲುವ ಮೂಲಕ ವಿಶ್ವ ದಾಖಲೆಯನ್ನು ನಿರ್ಮಿಸಿದ್ದಾರೆ.

* ಈ ಬಾರಿಯ ಟೋಕಿಯೋ ಒಲಿಂಪಿಕ್ಸ್ ಕೂಟದಲ್ಲಿ ಅತೀ ಹೆಚ್ಚು ಪದಕಗಳನ್ನು ಜಯಿಸಿದ ಮಹಿಳೆಗೆ ಪಾತ್ರರಾಗಿದ್ದಾರೆ, ಇವರು ನಾಲ್ಕು ಚಿನ್ನದ ಪದಕ ಹಾಗೂ ಮೂರು ಕಂಚಿನ ಪದಕಗಳನ್ನು ಪಡೆದುಕೊಂಡಿದ್ದಾರೆ.

* ಆಸ್ಟ್ರೇಲಿಯಾದ ಈಜುಗಾರ್ತಿ ಎಮ್ಮಾ ಮೆಕಿಯನ್ ಅವರು 4X100 ಫ್ರೀ ಸ್ಟೈಲ್ ರಿಲೆಯಲ್ಲಿ ಚಿನ್ನದ ಪದಕವನ್ನು ಪಡೆದು ವಿಶ್ವದಾಖಲೆಯನ್ನು ಬರೆದಿದ್ದಾರೆ.

* ಇದಕ್ಕೂ ಮೊದಲು 1952 ರಲ್ಲಿ ಸೋವಿಯತ್ ಒಕ್ಕೂಟದ ಜಿಮ್ನಾಸ್ಟ್ ಪಟುವಾದ ಮರಿಯ ಗೊರೊಖೊವಿಸ್ಕ '7' ಪದಕಗಳನ್ನು ಜಯಿಸಿದ್ದರು.

* ಈ ಹಿಂದೆ 2008 ರ ಬೀಜಿಂಗ್ ಒಲಿಂಪಿಕ್ಸ್'ನಲ್ಲಿ ಮೈಕಲ್ ಫೆಲ್ಪ್ಸ್ 8 ಪದಕಗಳನ್ನು ಜಯಿಸಿದ್ದರು

### ಮಹಿಳಾ ಅಥ್ಲೀಟ್ ಮಾನ್ ಕೌರ್ ನಿಧನ



* ಚಂಡೀಗಡ ನಗರದ ಮಹಿಳೆ ಶತಾಯುಷಿ ಅಥ್ಲೀಟ್ ಮಾನ್ ಕೌರ್ ಅವರು ತಮ್ಮ 105 ನೇ ವಯಸ್ಸಿನಲ್ಲಿ ವಿಧಿವಶರಾಗಿದ್ದಾರೆ.

* ಮಾನ್ ಕೌರ್ ಅವರು 1916 ರಲ್ಲಿ ಜನಿಸಿದರು, ಮಾನ್ ಕೌರ್ ಅವರು ತಮ್ಮ ಮೊದಲನೇ ಮಗನಾದ ಗುರುದೇವ್ ಅವರು ಓಟದ

ಸ್ಪರ್ಧೆಗಳಲ್ಲಿ ಭಾಗವಹಿಸುವುದನ್ನು ಕಂಡು ತಾವು ಕೂಡ ತಮ್ಮ 93ನೇ ವಯಸ್ಸಿನಲ್ಲಿ ಓಟದ ಸ್ಪರ್ಧೆಗಳಲ್ಲಿ ಭಾಗವಹಿಸಲು ಪ್ರಾರಂಭಿಸಿದರು.

* ಈ ಹಿಂದೆ 2007 ರಲ್ಲಿ ಚಂಡೀಗಢದಲ್ಲಿ ನಡೆದಿರುವ ಹಿರಿಯರ ಅಥ್ಲೆಟಿಕ್ಸ್ ಕೂಟದಲ್ಲಿ ಮೊದಲ ಪದಕವನ್ನು ಮಾನ್ ಕೌರ್ ಅವರು ಜಯಿಸಿದ್ದರು.

* ಮತ್ತೇ 2017 ರಲ್ಲಿ ನಡೆದಿರುವ ನ್ಯೂಜಿಲೆಂಡ್‌ನ ಆಕ್ಲೆಂಡ್‌ನ ವಿಶ್ವ ಹಿರಿಯರ ಕೂಟದ 100 ಮೀಟರ್ಸ್ ಓಟದಲ್ಲಿ ಚಿನ್ನದ ಪದಕವನ್ನು ಜಯಿಸಿ ಯುವ ಕ್ರೀಡಾ ಪ್ರತಿಭೆಗಳಿಗೆ ಮಾರ್ಗದರ್ಶನವಾಗಿದ್ದರು.

* ಪೋಲೆಂಡ್‌ನಲ್ಲಿ ನಡೆದಿರುವ ವಿಶ್ವ ಹಿರಿಯರ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ ಟ್ರ್ಯಾಕ್ ಮತ್ತು ಫೀಲ್ಡ್ ವಿಭಾಗಗಳಲ್ಲಿ ಚಿನ್ನದ ಪದಕವನ್ನು ಪಡೆದುಕೊಂಡಿದ್ದರು.

## ಟೋಕಿಯೋ ಒಲಿಂಪಿಕ್ಸ್ ನ 100 ಮೀ. ಓಟದ ಸ್ಪರ್ಧೆಯಲ್ಲಿ 3 ಪದಕ ಗೆದ್ದ ಜಮೈಕ



* ಪ್ರಸ್ತುತ ಜಮೈಕ ದೇಶದ ಅಥ್ಲೀಟ್‌ಗಳು ಟೋಕಿಯೋ ಒಲಿಂಪಿಕ್ಸ್‌ನಲ್ಲಿ ಮಹಿಳೆಯರ 100 ಮೀ. ಓಟದ ಸ್ಪರ್ಧೆಯಲ್ಲಿ ಮೂರೂ ಪದಕಗಳನ್ನು ಇವರೇ ಪಡೆದುಕೊಂಡಿದ್ದಾರೆ. ಎಲೈನ್ ಥಾಮ್ಸನ್ ಹೆರಾ ಅವರು ಚಿನ್ನದ ಪದಕವನ್ನು ಜಯಿಸಿದ್ದಾರೆ. ಶೆಲ್ಲಿ ಆಯನ್ ಫ್ರೇಸರ್ ಪ್ರೈಸ್ ಅವರು ಬೆಳ್ಳಿ ಪದಕವನ್ನು ಜಯಿಸಿದ್ದಾರೆ. ಶೆರಿಕಾ ಜಾನ್ಸನ್ ಅವರು ಕಂಚಿನ ಪದಕವನ್ನು ಜಯಿಸಿದ್ದಾರೆ.

* ಪ್ರಸ್ತುತ ವಿಶ್ವ ಕಂಡ 2 ನೇ ಅತಿ ವೇಗದ ಮಹಿಳೆ ಎಂಬ ದಾಖಲೆಗೆ ಎಲೈನ್ ಥಾಮ್ಸನ್ ಅವರು ಪಾತ್ರರಾಗಿದ್ದಾರೆ, ಹಾಗೂ ಅಮೇರಿಕದ ಫ್ಲಾರೆನ್ಸ್ ಗ್ರಿಫಿತ್ ಜಾಯ್ನರ್ ಅತಿವೇಗದ ಮಹಿಳೆ ಎಂಬ ದಾಖಲೆಯ ಪಟ್ಟವನ್ನು ಹೊಂದಿದ್ದಾರೆ, ಈ ಹಿಂದೆ 1988 ರಲ್ಲಿ ಇಂಡಿಯಾನಪೊಲಿಸ್‌ನಲ್ಲಿ ನಡೆದ ಕ್ರೀಡಾಕೂಟದಲ್ಲಿ ಅಮೇರಿಕದ ಫ್ಲಾರೆನ್ಸ್ ಗ್ರಿಫಿತ್ ಜಾಯ್ನರ್ ಕೇವಲ 10.49 ಸೆಕೆಂಡುಗಳಲ್ಲಿ ಗುರಿಯನ್ನು ತಲುಪಿ ವಿಶ್ವ ದಾಖಲೆಯನ್ನು ನಿರ್ಮಿಸಿದ್ದರು

## ಶ್ರೀಲಂಕಾ ವೇಗಿ ಇಸುರು ಉದಾನ ಅಂತಾರಾಷ್ಟ್ರೀಯ ಕ್ರಿಕೆಟ್ ಗೆ ವಿದಾಯ



* ಶ್ರೀಲಂಕಾ ದೇಶದ ಕ್ರಿಕೆಟ್ ತಂಡ ವೇಗದ ಬೌಲರ್ 33 ವರ್ಷದ ಇಸುರು ಉದಾನ ಅವರು ಅಂತಾರಾಷ್ಟ್ರೀಯ ಕ್ರಿಕೆಟ್ ಗೆ ವಿದಾಯವನ್ನು ಹೇಳಿದ್ದಾರೆ.

* ಇಸುರು ಉದಾನ ಅವರು ಇಲ್ಲಿಯತನಕ 21 ಏಕದಿನ ಪಂದ್ಯ, ಹಾಗೂ 34 ಟಿ20 ಪಂದ್ಯಗಳನ್ನೂ ಶ್ರೀಲಂಕಾ ತಂಡದ ಪರವಾಗಿ ಆಟವಾಡಿದ್ದಾರೆ.

* ಇಸುರು ಉದಾನ ಅವರು ಸ್ವಿಂಗ್ ಮತ್ತು ಸ್ಲೋವರ್ ಎಸೆತಗಳಿಗೆ ಹೆಸರುವಾಸಿಯಾಗಿದ್ದರು.

* 2009 ರ ಟಿ20 ವಿಶ್ವಕಪ್'ನ ಶ್ರೀಲಂಕಾ ಕ್ರಿಕೆಟ್ ತಂಡಕ್ಕೆ ಇಸುರು ಉದಾನ ಅವರು ಆಯ್ಕೆಯಾಗಿದ್ದರು. ನಂತರ 2018 ರಲ್ಲಿ ಉದಾನ ಅವರು ಮತ್ತೇ ರಾಷ್ಟ್ರೀಯ ತಂಡಕ್ಕೆ ಸೇರ್ಪಡೆಯಾದರು.

* ಇಸುರು ಉದಾನ ಅವರು IPL ನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಪರವಾಗಿ 10 ಪಂದ್ಯಗಳಲ್ಲಿ ಆಟವಾಡಿದ್ದರು.

## ಭಾರತಕ್ಕೆ ಒಂದು ತಿಂಗಳು ಭದ್ರತಾ ಮಂಡಳಿಯ ಅಧ್ಯಕ್ಷ ಸ್ಥಾನ




* ಭಾರತ ದೇಶವು ಆಗಸ್ಟ್ 1 ರಿಂದ ಒಂದು ತಿಂಗಳ ಅವಧಿಯ ತನಕ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಅಧ್ಯಕ್ಷತೆ ವಹಿಸಿಕೊಳ್ಳಲಿದೆ.

* ಸದ್ಯದಲ್ಲೇ ಭಾರತ ದೇಶವು ತನ್ನ 75 ನೇ ಸ್ವಾತಂತ್ರ್ಯೋತ್ಸವದ ದಿನವನ್ನು ಆಚರಿಸುವ ಸಂದರ್ಭದಲ್ಲೇ ಈ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಅಧ್ಯಕ್ಷತೆ ವಹಿಸಲು ಅವಕಾಶ ಲಭಿಸಿದೆ ಎಂಬ ವಿಷಯದ ಮಾಹಿತಿಯನ್ನು ವಿಶ್ವಸಂಸ್ಥೆಯಲ್ಲಿನ ಭಾರತದ ರಾಯಭಾರಿ ಟಿ.ಎಸ್.ತಿರುಮೂರ್ತಿ ಅವರು ವರ್ಚುಲ್ ಸಂದೇಶದ ಮೂಲಕ ತಿಳಿಸಿದ್ದಾರೆ.

* 'ಈ ಒಂದು ತಿಂಗಳ ಅವಧಿಯ ಕಾಲಾವಕಾಶದಲ್ಲಿ '3' ಪ್ರಮುಖ ವಿಷಯಗಳಾಗಿರುವ ಕಡಲ ಭದ್ರತೆ, ಶಾಂತಿ ಪಾಲನೆ ಹಾಗೂ ಭಯೋತ್ಪಾದನೆ ನಿಗ್ರಹಕ್ಕೆ ಸಂಬಂಧ ಪಟ್ಟಿರುವ ಕಾರ್ಯಕ್ರಮಗಳನ್ನು ಆಯೋಜಿಸಲು ಭಾರತ ತಯಾರಿ ನಡೆಸುತ್ತಿದೆ ಎಂದು ತಿರುಮೂರ್ತಿ ಅವರು ಮಾಹಿತಿ ನೀಡಿದ್ದಾರೆ.

* ಪ್ರಸ್ತುತ 2021 ರ ಜನೇವರಿ. 1 ರಂದು ಭಾರತವು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಶಾಶ್ವತವಲ್ಲದ ಸದಸ್ಯತ್ವ ಎರಡು ವರ್ಷಗಳ ಅಧಿಕಾರಾವಧಿಯುನ್ನು ಪ್ರಾರಂಭಿಸಿದೆ.

* ಭಾರತವು ಮೊದಲ ಬಾರಿ 2021 22 ರ ಅವಧಿಯ ಆಗಸ್ಟ್ ತಿಂಗಳಲ್ಲಿ ಭದ್ರತಾ ಮಂಡಳಿಯ ಅಧ್ಯಕ್ಷತೆಯನ್ನು ವಹಿಸಿಕೊಳ್ಳಲಿದೆ, ಹಾಗೂ 2022 ರ ವರ್ಷದ ಡಿಸೆಂಬರ್‌ನಲ್ಲಿ ಮತ್ತೇ ಭದ್ರತಾ ಮಂಡಳಿಯ ಅಧ್ಯಕ್ಷ ಸ್ಥಾನ ಭಾರತಕ್ಕೆ ಸಿಗಲಿದೆ ಎಂದು ತಿಳಿಸಿದ್ದಾರೆ

## G 20 ಸಂಸ್ಕೃತಿ ಮಂತ್ರಿಗಳ ಸಭೆ ಆಯೋಜಿಸಿದ ಇಟಲಿ



* ಇಟಲಿಯ ರೋಮ್‌ನಲ್ಲಿ ಮೊದಲ G 20 ಸಂಸ್ಕೃತಿ ಮಂತ್ರಿಗಳ ಸಭೆಯು ಇದೇ ಜುಲೈ. 29 ಮತ್ತು 30 ರಂದು ನಡೆದಿದೆ, ಪ್ರಸ್ತುತ ಇದು ಇಟಲಿಯ G 20 ಅಧ್ಯಕ್ಷತೆಯಲ್ಲಿ ಜರುಗಿದ ಎರಡು ದಿನಗಳ ಪ್ರಮುಖ ಕಾರ್ಯಕ್ರಮ ಇದಾಗಿತ್ತು.
* ರೋಮ್‌ನಲ್ಲಿ ಈ G 20 ಸಂಸ್ಕೃತಿ ಮಂತ್ರಿಗಳ ಶೃಂಗಸಭೆಯನ್ನು ಕೊಲೊಸಿಯಮ್ ಹಾಗೂ ಪ್ಲಝ್ಝೊ ಬಾರ್ಬೆರಿನಿ ಅವರು ಆಯೋಜಿಸಿದ್ದರು.
* ವಿಶ್ವದ 20 ದೊಡ್ಡ ಆರ್ಥಿಕತೆಗಳ ಸಂಸ್ಕೃತಿ ಮಂತ್ರಿಗಳು ಹಾಗೂ 40 ಉನ್ನತ ಮಟ್ಟದ ಸಾಂಸ್ಕೃತಿಕ ನಿಯೋಗಗಳು ಈ ಶೃಂಗಸಭೆಯಲ್ಲಿ ಭಾಗಿಯಾಗಿದ್ದವು.
* ಈ ಶೃಂಗಸಭೆಯಲ್ಲಿ ಇಟಾಲಿಯನ್ ಪ್ರಧಾನಿ ಮಾರಿಯೋ ಡ್ರಾಗಿ, ಸಂಸ್ಕೃತಿ ಸಚಿವ ಡರಿಯೋ ಫ್ರಾನ್ಸೆಸ್ಚಿನಿ ಹಾಗೂ ಯುನೆಸ್ಕೋ ಮಹಾನಿರ್ದೇಶಕ ಆಡ್ರೆ ಅಜೌಲೆ ಪಾಲ್ಗೊಂಡಿದ್ದರು.

## ನೌಕಾಪಡೆಯ ಉಪ ಮುಖ್ಯಸ್ಥರಾಗಿ ಘೋರ್ಮೇಡ್ ನೇಮಕ



* ಪ್ರಸ್ತುತ ನೌಕಾಪಡೆಯ ಉಪ ಮುಖ್ಯಸ್ಥರಾಗಿ ಘೋರ್ಮೇಡ್ ಅವರು ವೈಸ್ ಅಡ್ಮಿರಲ್ ಜಿ ಅಶೋಕ್ ಕುಮಾರ್ ಅವರಿಂದ ಅಧಿಕಾರ ಸ್ವೀಕರಿಸಿದರು.
* 1984 ರ ಜನವರಿ. 1 ರಂದು ವೈಸ್ ಅಡ್ಮಿರಲ್ ಘೋರ್ಮೇಡ್ ಅವರನ್ನು ನೌಕಾಪಡೆಗೆ ನೇಮಕ ಮಾಡಲಾಗಿದೆ, ಇವರು ನ್ಯಾವಿಗೇಷನ್ ನಿರ್ದೇಶನ ತಜ್ಞರಾಗಿದ್ದಾರೆ.
* 2017 ರಲ್ಲಿ ವೈಸ್ ಅಡ್ಮಿರಲ್ ಘೋರ್ಮೇಡ್ ಅವರಿಗೆ ರಾಷ್ಟ್ರಪತಿಗಳು ಅತಿ ವಿಶಿಷ್ಟ ಸೇವಾ ಪದಕವನ್ನು ನೀಡಲಾಗಿತ್ತು

## ಭಾರತ, ಯುಕೆ 'ಅಶ್ವಗಂಧ' ಕ್ಲಿನಿಕಲ್ ಪ್ರಯೋಗ ಆರಂಭ




* ಭಾರತೀಯ ಆಯುಷ್ ಸಚಿವಾಲಯವು UK ಯ ಲಂಡನ್ ಸ್ಕೂಲ್ ಆಫ್ ಹೈಜೀನ್ ಹಾಗೂ ಟ್ರಾಪಿಕಲ್ ಮೆಡಿಸಿನ್ (LSHTM) ಸಹಭಾಗಿತ್ವದಲ್ಲಿ 'ಅಶ್ವಗಂಧ' ಕ್ಲಿನಿಕಲ್ ಪ್ರಯೋಗಗಳನ್ನು ಆರಂಭಿಸಲಿದೆ, ಈ ಪ್ರಯೋಗವು COVID 19 ಸೋಂಕಿನ ಮೇಲೆ ಪರಿಣಾಮವನ್ನು ಪರಿಶೀಲಿಸಲು ನಡೆಸಲಿದೆ.
* ಅಖಿಲ ಭಾರತ ಆಯುರ್ವೇದ ಸಂಸ್ಥೆ (AIIA) ಹಾಗೂ ಲಂಡನ್ ಸ್ಕೂಲ್ ಆಫ್ ಹೈಜೀನ್ ಹಾಗೂ ಟ್ರಾಪಿಕಲ್ ಮೆಡಿಸಿನ್ (LSHTM) ಇತ್ತೀಚೆಗೆ ಅಶ್ವಗಂಧದ ವೈದ್ಯಕೀಯ ಪ್ರಯೋಗಗಳನ್ನು ನಡೆಸಲು ಉಭಯ ದೇಶಗಳು ಒಪ್ಪಿ ಪತ್ರಕ್ಕೆ ಸಹಿ ಹಾಕಿವೆ.
* ಯುಕೆ ಮೂರೂ ನಗರಗಳ ಲೀಸೆಸ್ಟರ್, ಬರ್ಮಿಂಗ್ಹ್ಯಾಮ್ ಹಾಗೂ ಲಂಡನ್'ನಲ್ಲಿನ 2,000 ಜನರ ಮೇಲೆ ಈ ಅಶ್ವಗಂಧದ ಕ್ಲಿನಿಕಲ್ ಪ್ರಯೋಗಗಳನ್ನು ನಡೆಯಲಿದೆ ಎಂದು ತಿಳಿಸಿದ್ದಾರೆ.
* ವೈಜ್ಞಾನಿಕವಾಗಿ ಅಶ್ವಗಂಧವನ್ನು ವಿಥಾನಿಯಾ ಸೊಮ್ನಿಫೆರಾ ಎನ್ನುವರು, ಸಾಮಾನ್ಯವಾಗಿ 'ಭಾರತೀಯ ಚಳಿಗಾಲದ ಚೆರ್ರಿ' ಎಂದು ಕರೆಯುತ್ತಾರೆ.

# 03- 08-2021

## ಪ್ರಧಾನಿ ಮೋದಿ ಡಿಜಿಟಲ್ ಪಾವತಿ ವ್ಯವಸ್ಥೆ 'e RUPI' ಗೆ ಚಾಲನೆ




* ಭಾರತೀಯ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ದೇಶದಲ್ಲಿ ಡಿಜಿಟಲ್ ಪಾವತಿಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ವಿಡಿಯೋ ಕಾನ್ಫರೆನ್ಸ್ ಮೂಲಕ 'ಇ ರೂಪಿ (e RUPI) ಆಯಪ್'ಗೆ ಚಾಲನೆಯನ್ನು ನೀಡಿದರು.
* ಈ 'ಇ ರೂಪಿ' ಆಯಪ್'ನ್ನು ಹಣಕಾಸು ಸೇವೆಗಳ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ಮತ್ತು ರಾಷ್ಟ್ರೀಯ ಆರೋಗ್ಯ ಪ್ರಾಧಿಕಾರದ ಸಹಯೋಗದೊಂದಿಗೆ ಭಾರತೀಯ ರಾಷ್ಟ್ರೀಯ ಪಾವತಿ ನಿಗಮ ಅಭಿವೃದ್ಧಿಪಡಿಸಿದೆ
* ಈ 'e RUPI' ಆಯಪ್ UPI ಪ್ಲಾಟ್'ಫಾರ್ಮ್ ನಲ್ಲಿ ಕಾರ್ಯ ನಿರ್ವಹಿಸಲಿದೆ, ಹಾಗೂ ಬಳಕೆದಾರರಿಗೆ ಭೌತಿಕ ಸಂವಹನದ ಅಗತ್ಯವಿಲ್ಲದೆ ನಿರ್ದಿಷ್ಟ ಸೇವೆಗಳನ್ನು ಪ್ರವೇಶಿಸಲು ಅವಕಾಶ ಮಾಡಿಕೊಡಲಾಗುತ್ತದೆ, ಇದರಿಂದ ಗ್ರಾಹಕರು ಹಾಗೂ ಸೇವಾ ಪೂರೈಕೆದಾರರು ಯಾವುದೇ ಭೌತಿಕ ಇಂಟರ್ಫೇಸ್ ಇಲ್ಲದೆ ವೋಚರ್'ಗಳನ್ನೂ ಬಳಸಿ ವ್ಯವಹಾರ ನಡೆಸಬಹುದಾಗಿದೆ.
* ದೇಶದಲ್ಲಿ ಕಲ್ಯಾಣ ಸೇವೆಗಳ ಸೋರಿಕೆ ನಿರೋಧಕ ವಿತರಣೆಯನ್ನು ಈ 'ಇ ರೂಪಿ' ಆಪ್ ಖಚಿತಪಡಿಸುತ್ತದೆ ಎಂದು ಸರ್ಕಾರ ತಿಳಿಸಿದೆ.
* ಇದು ಡಿಜಿಟಲ್ ಪಾವತಿಗಾಗಿ ನಗದು ರಹಿತ, ಹಾಗೂ ಸಂಪರ್ಕವಿಲ್ಲದ ಸಾಧನವಾಗಿದೆ, ಈ ಆಪ್ ಕ್ಯೂಆರ್ ಕೋಡ್ ಅಥವಾ SMS ಆಧಾರಿತ ಇ ವೋಚರ್'ಗಳಾಗಿವೆ ಹಣ ವರ್ಗಾವಣೆ ಮಾಡಲು ಬಳಸಬಹುದಾಗಿದೆ ಎಂದು ಸರ್ಕಾರ ತಿಳಿಸಿದೆ.

# Current affairs of August 2021 from KPSC Vaani

## ಮ್ಯಾನ್ಮಾರ್ ಮಿಲಿಟರಿ ತನ್ನ ನಾಯಕನನ್ನು ಪ್ರಧಾನಿ ಎಂದು ಘೋಷಿಸಿದೆ



* ಮಯನ್ಮಾರ್ ನ ಮಿಲಿಟರಿ ನಾಯಕರಾಗಿರುವ ಸೀನಿಯರ್ ಜನರಲ್ ಮಿನ್ ಆಂಗ್ ಹ್ಲೇಯಿಂಗ್ ಅವರನ್ನು ದೇಶದ ಪ್ರಧಾನಿ ಎಂದು ಮ್ಯಾನ್ಮಾರ್ ಮಿಲಿಟರಿ ಘೋಷಣೆ ಮಾಡಿದೆ, ಮುಂದಿನ 2023 ರಲ್ಲಿ ಚುನಾವಣೆ ನಡೆಸುವ ಸಂಧರ್ಬದ ತುರ್ತು ಪರಿಸ್ಥಿತಿಯ ಅವಧಿಯಲ್ಲಿ '2' ವರ್ಷಗಳ ಕಾಲ ಉಸ್ತುವಾರಿ ವಹಿಸಿಕೊಳ್ಳಲಿದೆ ಎಂದು ತಿಳಿಸಿದ್ದಾರೆ.

* ಪ್ರಸ್ತುತ ಮಯನ್ಮಾರ್ ಮಿಲಿಟರಿ ಪಡೆಯು ಸುಮಾರು ಆರು ತಿಂಗಳಿಂದ ಮಯನ್ಮಾರ್ ದೇಶದ ನಾಗರಿಕ ಸರ್ಕಾರದ ಅಧಿಕಾರವನ್ನು ಕಿತ್ತುಕೊಂಡದೆ, ಇದೀಗ ಮಯನ್ಮಾರ್ ಸೇನೆಯು 2023 ರಲ್ಲಿ ಚುನಾವಣೆ ನಡೆಸುವುದಾಗಿ ಘೋಷಣೆ ಮಾಡಿದೆ.

* ಮಯನ್ಮಾರ್ ದೇಶದಲ್ಲಿ 2023 ರ ಆಗಸ್ಟ್ ತಿಂಗಳಲ್ಲಿ ತುರ್ತು ಪರಿಸ್ಥಿತಿಯನ್ನು ತೆರವುಗೊಳಿಸಲಾಗುವುದು ಎಂದು ಸೇನಾ ಮುಖ್ಯಸ್ಥರು ಮಾಹಿತಿ ನೀಡಿದ್ದಾರೆ.

## ಉಪಗ್ರಹ ಚಿತ್ರದ ಸಹಾಯದಿಂದ ಈಶಾನ್ಯ ರಾಜ್ಯಗಳ ಗಡಿ ಗುರುತಿಸುವಿಕೆ




* ಇತ್ತೀಚಿಗೆ ಅಸ್ಸಾಂ ರಾಜ್ಯ ಮತ್ತು ಮಿಜೋರಾಂ ರಾಜ್ಯಗಳ ಗಡಿ ವಿವಾದವು ಉದ್ವೇಗಕ್ಕೆ ಕಾರಣವಾಗಿದ್ದವು, ಇದನ್ನ ಅರಿತ ಕೇಂದ್ರ ಸರ್ಕಾರವು ಇದೀಗ ಈ ರಾಜ್ಯಗಳ ಗಡಿ ವಿವಾದವನ್ನು ಉಪಗ್ರಹ ಚಿತ್ರದ ಸಹಾಯದೊಂದಿಗೆ ಈ ಈಶಾನ್ಯ ರಾಜ್ಯಗಳ ಗಡಿ ಗುರುತಿಸಲು ಕೇಂದ್ರ ಸರ್ಕಾರ ತೀರ್ಮಾನ ಕೈಗೊಂಡಿದೆ.

* ಈಶಾನ್ಯ ರಾಜ್ಯಗಳ ಗಡಿ ಗುರುತಿಸುವಿಕೆ ಹೊಣೆಗಾರಿಕೆಯನ್ನು ಈಶಾನ್ಯ ಮಂಡಳಿ ಹಾಗೂ ಬಾಹ್ಯಾಕಾಶ ಇಲಾಖೆಯ ಜಂಟಿ ಉಪಕ್ರಮವಾಗಿರುವ ಈಶಾನ್ಯ ಬಾಹ್ಯಾಕಾಶ ಅಪ್ಲಿಕೇಶನ್ ಕೇಂದ್ರಕ್ಕೆ ವಹಿಸಿದೆ ಎಂದು ಕೇಂದ್ರ ಸರ್ಕಾರದ ಹಿರಿಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

* ಉಪಗ್ರಹ ಸೆರೆಹಿಡಿಯುವ ಚಿತ್ರಗಳ ಸಹಾಯದಿಂದ ಅಂತರ ರಾಜ್ಯ ಗಡಿ ವಿವಾದಗಳನ್ನು ಬಗೆಹರಿಸಬಹುದು ಎಂದು ಈ ಹಿಂದೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ತಿಳಿಸಿದ್ದರು

## ಒಲಿಂಪಿಕ್ಸ್‌ನಲ್ಲಿ 5 ಚಿನ್ನದ ಪದಕ ಜಯಿಸಿದ ಅಮೆರಿಕದ ಕೇಲೆಬ್ ಡ್ರೆಸ್ಸೆಲ್



* ಪ್ರಸ್ತುತ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಅಮೇರಿಕದ ಈಜುಗಾರ ಕೇಲೆಬ್ ಡ್ರೆಸೆಲ್ ಅವರು 5 ಚಿನ್ನದ ಪದಕಗಳನ್ನು ಗೆದಿದ್ದಾರೆ. 4/100 ಮೀ. ಮೆಡ್ಲೆ ರಿಲೇ ಸ್ಪರ್ಧೆಯಲ್ಲಿ ಚಿನ್ನ 50 ಮೀ. ಫ್ರೀಸ್ಟೈಲ್ ಈಜು ಸ್ಪರ್ಧೆಯಲ್ಲಿ ಚಿನ್ನ 100 ಮೀ. ಬಟರ್‌ಫ್ಲೈನಲ್ಲಿ ಚಿನ್ನ 100 ಮೀ. ಫ್ರೀಸ್ಟೈಲ್‌ನಲ್ಲಿ ಚಿನ್ನ 4/100 ಮೀ. ಫ್ರೀಸ್ಟೈಲ್ ರಿಲೇಯಲ್ಲಿ ಚಿನ್ನದ ಪದಕವನ್ನು ಜಯಿಸಿದ್ದಾರೆ.

* ಅಮೇರಿಕ ಕ್ರೀಡಾಪಟುಗಳು: ಮಾರ್ಕ್ ಆಂಡ್ರೋ ಸ್ಪಿಟ್ಜ್ ಅವರು 1972 ರಲ್ಲಿ 7ಚಿನ್ನ, ಮ್ಯಾಥ್ಯೂ ನಿಕೋಲಸ್ ಬಿಯೊಂಡಿ ಅವರು 1988 ರಲ್ಲಿ 5 ಚಿನ್ನ, ಮೈಕೆಲ್ ಫೆಲ್ಪ್ಸ್ ಅವರು 2008 ರಲ್ಲಿ 8 ಚಿನ್ನ, ಹಾಗೂ 2016 ರಲ್ಲಿ 5 ಚಿನ್ನ ಜಯಿಸಿದ್ದಾರೆ

## ಟೋಕಿಯೋ ಒಲಂಪಿಕ್ಸ್‌ನ 100 ಮೀ. ಓಟದಲ್ಲಿ ಚಿನ್ನ ಗೆದ್ದ ಮಾರ್ಸೆಲ್ ಜೇಕಬ್ಸ್




* ಟೋಕಿಯೋ ಒಲಂಪಿಕ್ಸ್‌ನ 100 ಮೀ. ಓಟದಲ್ಲಿ ಚಿನ್ನ ಗೆದ್ದ ಮಾರ್ಸೆಲ್ ಜೇಕಬ್ಸ್ ಅವರು ಚಿನ್ನದ ಪದಕವನ್ನು ಜಯಿಸಿದ್ದಾರೆ.

* ವಿಶ್ವದ ವೇಗದ ಓಟಗಾರ ಎಂಬ ಖ್ಯಾತಿಗೆ ಉಸೇನ್ ಬೋಲ್ಟ್ ಪಾತ್ರರಾಗಿದ್ದರು, ಇದೀಗ ಇವರ ಹಾದಿಯಲ್ಲಿ ಮಾರ್ಸೆಲ್ ಜೇಕಬ್ಸ್ ಟೋಕಿಯೊ ಒಲಂಪಿಕ್ಸ್ ನಲ್ಲಿ ಚಿನ್ನದ ಪದಕ ಜಯಿಸಿದ್ದಾರೆ.

* ಪ್ರಸ್ತುತ ಮಾರ್ಸೆಲ್ ಜೇಕಬ್ಸ್ ಅವರು ಟೋಕಿಯೊ ಒಲಂಪಿಕ್ಸ್ ನ 100 ಮೀ. ಓಟದಲ್ಲಿ 9.80 ಸೆಕೆಂಡ್ ಗೆ ಗುರಿ ತಲುಪಿ ಈ ಸಾಧನೆ ಮಾಡಿದ್ದಾರೆ.

* ಇದೀಗ ಮಾರ್ಸೆಲ್ ಜೇಕಬ್ಸ್ ವಿಶ್ವದ ಅತ್ಯಂತ ವೇಗದ ಮನುಷ್ಯ ಎಂಬ ಖ್ಯಾತಿಗೆ ಪಾತ್ರರಾಗಿದ್ದಾರೆ.

## ಪ್ರಧಾನಿ ಮೋದಿ ಸಲಹೆಗಾರ ಅಮರ್ ಜಿತ್ ಸಿನ್ಹಾ ರಾಜೀನಾಮೆ



* ಪ್ರಸ್ತುತ ಪ್ರಧಾನ ಮಂತ್ರಿ ನರೇಂದ್ರ ಮೋದಿಯ ಕಾರ್ಯಾಲಯದಲ್ಲಿ ಸಲಹೆಗಾರರಾಗಿ ಕಾರ್ಯನಿರ್ವಹಿಸುತ್ತಿದ್ದ ಅಮರ್ ಜಿತ್ ಸಿನ್ಹಾ ಅವರು ರಾಜೀನಾಮೆ ನೀಡಿದ್ದಾರೆ.
* ಪ್ರಸ್ತುತ ಅಮರ್ ಜಿತ್ ಸಿನ್ಹಾ ಅವರು PMO ದಲ್ಲಿ ಸಾಮಾಜಿಕ ಸಂಬಂಧ ವ್ಯವಹಾರಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು. ಇವರು ಬಿಹಾರ ಕೇಡರ್ ನ 1983 ರ ತಂಡದ IAS ಅಧಿಕಾರಿಯಾಗಿದ್ದಾರೆ.
* 2019 ರಲ್ಲಿ ಅಮರ್ ಜಿತ್ ಸಿನ್ಹಾ ಅವರು ಗ್ರಾಮೀಣಾಭಿವೃದ್ಧಿ ಕಾರ್ಯದರ್ಶಿಯಾಗಿ ನಿವೃತ್ತಿಯಾದ ನಂತರ, 2020 ರ ಫೆಬ್ರುವರಿ ತಿಂಗಳಿನಿಂದ 2 ವರ್ಷಗಳ ಕಾಲ ಪ್ರಧಾನಿ ಕಾರ್ಯಾಲಯದ ಸಲಹೆಗಾರರಾಗಿ ಕಾರ್ಯ ನಿರ್ವಹಿಸುತ್ತಿದ್ದರು.

## ಇಟಲಿಯಿಂದ ಪುಣೆ ಮೆಟ್ರೋಗೆ ಭಾರತದ ಹಗುರವಾದ ಮೆಟ್ರೋ ರೈಲು



* ತಿತಾಗರ್ ವ್ಯಾಗನ್ಸ್ ಲಿಮಿಟೆಡ್ ಇಟಲಿಯಲ್ಲಿ ತನ್ನ ಘಟಕವನ್ನು ಹೊಂದಿದೆ, ಈ ಘಟಕವು ಪುಣೆ ಮೆಟ್ರೋ ಕೋಚ್‌ಗಾಗಿ ಮೊದಲ ಹಗುರವಾದ ರೈಲನ್ನು ಸಿದ್ಧಪಡಿಸಿದೆ.
* ಇಟಲಿಯಿಂದ ಒಟ್ಟು 34 ರೈಲುಗಳನ್ನು ಕಳುಹಿಸಲಾಗಿದೆ, ಈ ಎಲ್ಲ ರೈಲುಗಳು ಮೂರು ಬೋಗಿಗಳನ್ನು ಒಳಗೊಂಡಿರುತ್ತದೆ.
* ಪ್ರಸ್ತುತ ಈ ಮೆಟ್ರೋ ರೈಲುಗಳನ್ನು ವರ್ಚುವಲ್ ಸಭೆಯ ಮೂಲಕ ಬಿಡುಗಡೆ ಮಾಡಲಾಗಿದೆ, ಈ ಸಭೆಯಲ್ಲಿ ಇಟಲಿಯ ಭಾರತದ ರಾಯಭಾರಿ ನೀನಾ ಮಲ್ಹೋತ್ರಾ ಮತ್ತು ಭಾರತದಲ್ಲಿನ ಇಟಲಿಯ ರಾಯಭಾರಿ ವಿನ್ಸೆಂಜೊ ಡಿ ಲುಕಾ ಪಾಲ್ಗೊಂಡಿದ್ದರು.
* ಪುಣೆ ಮೆಟ್ರೋಗೆ ನೀಡಲಿರುವ ಮೆಟ್ರೋ ಕೋಚ್‌ಗಳನ್ನು ಭಾರತದಲ್ಲಿ ಮೊದಲ ಬಾರಿಗೆ ಅಲ್ಯೂಮಿನಿಯಂನಿಂದ ತಯಾರಿಸಲಾಗುತ್ತದೆ.
* ಉದಾಹರಣೆ ನಾಗಪುರ ಮೆಟ್ರೋ 16T ಆಕ್ಸಲ್ ಲೋಡ್'ನ ಹಗುರವಾದ ಕೋಚ್‌ಗಳಿಗಿಂತಲೂ, ಇವುಗಳು 15.5T ಆಕ್ಸಲ್ ಲೋಡ್ ಹೊಂದಿ ಹಗುರವಾಗಿರುತ್ತವೆ.
* ತಿತಾಗರ್ ವ್ಯಾಗನ್ಸ್ ಎಂಬುವದು ಪಶ್ಚಿಮ ಬಂಗಾಳದ ತಿತಾಗರ್ ಮೂಲದ ರೈಲ್ವೆ ವ್ಯಾಗನ್ ತಯಾರಕ ಘಟಕವಾಗಿದೆ, ಈ ಘಟಕದಲ್ಲಿ ಭಾರತೀಯ ರೈಲ್ವೇಸ್, ಬೈಲಿ ಸೇತುವೆಗಳು, ಹಾಗೂ ಗಣಿಗಾರಿಕೆ ಉಪಕರಣಗಳಿಗೆ ಕೋಚ್‌ಗಳನ್ನು ತಯಾರಿಸಲಾಗುತ್ತದೆ.

## ಮುಸ್ಲಿಂ ಮಹಿಳಾ ಹಕ್ಕುಗಳ ದಿನ



* ಪ್ರಸ್ತುತ ಭಾರತದಲ್ಲಿ ಆಗಸ್ಟ್. 01 ರಂದು ಮುಸ್ಲಿಂ ಮಹಿಳಾ ಹಕ್ಕುಗಳ ದಿನವನ್ನು ಆಚರಿಸಲಾಗಿತ್ತದೆ.
* 2019 ರ ಆಗಸ್ಟ್. 1ರಂದು ಸಂಸತ್ತಿನಲ್ಲಿ ಅನುಮೋದನೆಯಾಗಿರುವ ತ್ರಿವಳಿ ತಲಾಖ್ ಮಸೂದೆಯ ಹಿನ್ನೆಲೆಯಿಂದ ಮುಸ್ಲಿಂ ಮಹಿಳಾ ಹಕ್ಕುಗಳ ದಿನವನ್ನು ಆಗಸ್ಟ್ 1 ರಂದು ಆಚರಿಸಲಾಗುತ್ತದೆ.
* ತ್ರಿವಳಿ ತಲಾಖ್ ಎನ್ನುವ ಮಸೂದೆಯು ಮುಸ್ಲಿಂ ಮಹಿಳೆಯರನ್ನು ವಿಚ್ಛೇದನದ ರೂಪದಲ್ಲಿನ ಬಂದ ಸಾಮಾಜಿಕ ದುಶ್ಚಟಗಳ ಸಂಕೋಲೆಯಾಗಿತ್ತು ಇದೀಗ ಇದರಿಂದ ಮುಸ್ಲಿಂ ಮಹಿಳೆಯರನ್ನು ಮುಕ್ತಗೊಳಿಸಲಾಗಿದೆ.
* ತ್ರಿವಳಿ ತಲಾಖ್ ಕಾನೂನು 'ತ್ರಿವಳಿ ತಲಾಖ್' ನ್ನು ಕ್ರಿಮಿನಲ್ ಅಪರಾಧ ಎಂದು ಮಾಡಿದೆ, ಮುಸ್ಲಿಂ ಮಹಿಳೆಯರ ರಕ್ಷಣೆ ಹಾಗೂ ಕಾನೂನುಬದ್ಧವಾಗಿ ತಲಾಖ್ ಪದ್ಧತಿಯ ಅಪರಾಧವಾಗಿಸುತ್ತದೆ, ಈ ಕಾರಣದಿಂದ ಈ ದಿನವನ್ನು ಮುಸ್ಲಿಂ ಮಹಿಳಾ ಹಕ್ಕುಗಳ ದಿನವನ್ನಾಗಿ ಆಚರಣೆ ಮಾಡಲಾಗುತ್ತದೆ.
* ತ್ರಿವಳಿ ತಲಾಖ್ ಕಾಯ್ದೆಯ ಪ್ರಕಾರ, ತಲಾಕ್ ಘೋಷಣೆಯನ್ನು ಅಪರಾಧವೆಂದು ಪರಿಗಣಿಸಲಾಗುತ್ತದೆ, ಹಾಗೂ ಕಾನೂನಿನ ಅಡಿಯಲ್ಲಿ ದಂಡ ಹಾಗೂ 3 ವರ್ಷಗಳ ಜೈಲು ಶಿಕ್ಷೆ ವಿಧಿಸಲಾಗುತ್ತದೆ.
* ಹಲವು ದೇಶಗಳು ತ್ರಿವಳಿ ತಲಾಖ್ ನ್ನು ನಿಷೇಧಿಸಿವೆ: ಮೊದಲ ಈಜಿಪ್ಟ್ ದೇಶವು 1929 ರಲ್ಲಿ ತ್ರಿವಳಿ ತಲಾಖ್ ನ್ನು ನಿಷೇಧಿಸಿದೆ, ನಂತರ ದಿನಗಳಲ್ಲಿ ಅಂದರೆ 1956 ರಲ್ಲಿ ಸುಡಾನ್, ಪಾಕಿಸ್ತಾನ, ಮಲೇಷ್ಯಾ 1969 ರಲ್ಲಿ, ಬಾಂಗ್ಲಾದೇಶವು 1972 ರಲ್ಲಿ, ಇರಾಕ್ ರಾಷ್ಟ್ರವು 1959 ರಲ್ಲಿ, ಹಾಗೂ ಸಿರಿಯಾ ರಾಷ್ಟ್ರವು 1953 ರಲ್ಲಿ, ಇದೀಗ ಈ ಪಟ್ಟಿಗೆ ಭಾರತವು ಕೂಡ ಸೇರಿದೆ.

## ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಮುಕ್ತ ಚರ್ಚೆಯ ಅಧ್ಯಕ್ಷತೆ ನರೇಂದ್ರ ಮೋದಿ



* 2021 ರ ಆಗಸ್ಟ್. 9 ರಂದು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ (UNSC) ಮುಕ್ತ ಚರ್ಚೆಯ ಅಧ್ಯಕ್ಷತೆಯನ್ನು ವಹಿಸಲಿರುವ ಮೊದಲ ಭಾರತೀಯ ಪ್ರಧಾನಿ ನರೇಂದ್ರ ಮೋದಿ
* UNSC ಯಲ್ಲಿ ಕಡಲ ಭದ್ರತೆಯ ವಿಷಯದ ಕುರಿತು ಚರ್ಚೆ ನಡೆಯಲಿದೆ.
* UNSC ಯಲ್ಲಿ ಭಾರತವು ತನ್ನ 2 ವರ್ಷಗಳ ಅಧಿಕಾರಾವಧಿಯನ್ನು 2021 ರ ಜನವರಿ. 1 ರಂದು ಆರಂಭಿಸಿದೆ.
* UNSC ಯಲ್ಲಿ ಇದು ಭಾರತದ 7 ನೇ ಅವಧಿಯಾಗಿದೆ, ಈ ಅವಧಿಕ್ಕಿಂತ ಮೊದಲು ಭಾರತವು 1950 51, 1967 68, 1972 73, 1977 78, 1984 85, ಮತ್ತು 1991 92 ರಲ್ಲಿ UNSC ಯ ಸದಸ್ಯತ್ವ ಹೊಂದಿತ್ತು.
* ಎರಡನೇ ವಿಶ್ವ ಯುದ್ಧ ಸಮಯದಲ್ಲಿ ಲೀಗ್ ಆಫ್ ನೇಷನ್ಸ್ ವಿಶ್ವ ಶಾಂತಿಯನ್ನು ಕಾಪಾಡಿಕೊಳ್ಳವಲ್ಲಿ ವಿಫಲವಾದಾಗ ನಂತರ ದಿನಗಳಲ್ಲಿ UNSC ಅನ್ನು ರಚನೆ ಮಾಡಲಾಗಿದೆ.
* 1946 ರ ಜನವರಿ.17 ರಂದು UNSC ಯ ಮೊದಲ ಅಧಿವೇಶನವು ನಡೆಯಿತು.

## ಸಾಮಾನ್ಯ ವಿಮಾ ವ್ಯವಹಾರ ತಿದ್ದುಪಡಿ ಮಸೂದೆಯನ್ನು ಅಂಗೀಕರಿಸಿದ ಲೋಕಸಭೆ




* 2021 ರ ಆಗಸ್ಟ್. 2 ರಂದು ಲೋಕಸಭೆಯುಲ್ಲಿ 'ಸಾಮಾನ್ಯ ವಿಮಾ ವ್ಯವಹಾರ (ರಾಷ್ಟ್ರೀಕರಣ) ತಿದ್ದುಪಡಿ ಮಸೂದೆ'ಯನ್ನು ಯಾವುದೇ ಚರ್ಚೆಯಿಲ್ಲದೆ ಧ್ವನಿ ಮತದ ಮೂಲಕ ಅಂಗೀಕರಿಸಲಾಗಿದೆ.
* ಇದೀಗ ಸರ್ಕಾರಿ ಸ್ವಾಮ್ಯದ ಸಾಮಾನ್ಯ ವಿಮಾ ಕಂಪನಿಗಳಲ್ಲಿ ತನ್ನ ಪಾಲನ್ನು ಕಡಿಮೆ ಮಾಡಲು ಮತ್ತು ಅಗತ್ಯ ಸಂಪನ್ಮೂಲಗಳನ್ನು ಉತ್ಪಾದಿಸಲು ಕೇಂದ್ರ ಸರ್ಕಾರವು ಜನರಲ್ ಇನ್ಶೂರೆನ್ಸ್ ಬಿಸಿನೆಸ್ ತಿದ್ದುಪಡಿ ಮಸೂದೆ 2021 ನ್ನು ಅಂಗೀಕರಿಸಿದೆ.
* ಸಾರ್ವಜನಿಕ ವಲಯದ ವಿಮಾ ಕಂಪನಿಗಳಲ್ಲಿ ಹೆಚ್ಚಿನ ಖಾಸಗಿ ಭಾಗವಹಿಸುವಿಕೆಯನ್ನು ಆಕರ್ಷಿಸಲು, ಹಾಗೂ ಸಾಮಾಜಿಕ ರಕ್ಷಣೆಯನ್ನು ನೀಡಲು ಈ ಮಸೂದೆಯ ತಿದ್ದುಪಡಿ ಅಗತ್ಯವಾಗಿವೆ ಎಂದು ಸರ್ಕಾರ ತಿಳಿಸಿದೆ.
* ಕೇಂದ್ರ ಸರ್ಕಾರವು ಈ ಮಸೂದೆಯನ್ನು ಸರ್ಕಾರದ ಖಾಸಗೀಕರಣಕ್ಕೆ ಅನುಗುಣವಾಗಿ ಅಂಗೀಕರಿಸಲಾಗಿದೆ, ಹಾಗೂ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಖಾಸಗೀಕರಣದ ಕಾರ್ಯಸೂಚಿಯನ್ನು ಘೋಷಣೆ ಮಾಡಿದ್ದಾರೆ.
* 2021 ರ ಜುಲೈ. 30 ರಂದು ಸಾಮಾನ್ಯ ವಿಮಾ ವ್ಯವಹಾರ ತಿದ್ದುಪಡಿ ಮಸೂದೆ2021 ನ್ನು ಲೋಕಸಭೆಯಲ್ಲಿ ಮಂಡಿಸಲಾಗಿದೆ.
* 1972 ರ ಸಾಮಾನ್ಯ ವಿಮಾ ವ್ಯವಹಾರ ಕಾಯಿದೆ ಅಡಿಯಲ್ಲಿ ನಿಯಂತ್ರಿಸಲ್ಪಡುವ ಸಾರ್ವಜನಿಕ ವಲಯದ ವಿಮಾ ಕಂಪನಿಗಳಲ್ಲಿ ಹೆಚ್ಚಿನ ಖಾಸಗಿ ವಲಯದ ಪಾಲ್ಗೊಳ್ಳುವಿಕೆಯನ್ನು ಈ ಮಸೂದೆ ಒದಗಿಸಲಿದೆ ಎಂದು ತಿಳಿಸಿದ್ದಾರೆ.

# 04-08-2021

## ಟೋಕಿಯೋ ಒಲಿಂಪಿಕ್ಸ್ ನಲ್ಲಿ ಚೀನಾದ ಜಾಂಗ್‌ಗೆ ಚಿನ್ನ



* ಚೀನಾದ ಜಾಂಗ್ ಚಾಂಗೊಂಗ್ ಅವರು ಈ ಬಾರಿಯ ಟೋಕಿಯೋ ಒಲಿಂಪಿಕ್ಸ್ ನ ಪುರುಷರ 50 ಮೀಟರ್ಸ್ ರೈಫಲ್ 3 ಪೊಷಿಸನ್ ಶೂಟಿಂಗ್ ಸ್ಪರ್ಧೆಯಲ್ಲಿ ಚಿನ್ನದ ಪದಕವನ್ನು ಜಯಿಸಿದ್ದಾರೆ.
* ರಷ್ಯಾ ದೇಶದ ಒಲಿಂಪಿಕ್ ಸಮಿತಿಯ ಸರ್ಜಿ ಕಮೆನ್‌ಸ್ಕಿ ಅವರು ಬೆಳ್ಳಿ ಪದಕವನ್ನು ಜಯಿಸಿದ್ದಾರೆ.
* ಸರ್ಬಿಯಾದ ಸೆಬಿಚ್ ಮಿಲೆಂಕೊ ಅವರು ಕಂಚಿನ ಪದಕ ಜಯಿಸಿದ್ದಾರೆ.
* ಭಾರತದ ಐಶ್ವರ್ಯ ಪ್ರತಾಪ್ ಸಿಂಗ್ ತೋಮರ್ ಹಾಗೂ ಸಂಜೀವ್ ರಾಜಪೂತ್ ಫೈನಲ್‌ಗೆ ಅರ್ಹತೆ ಪಡೆಯುವಲ್ಲಿ ವಿಫಲರಾಗಿದ್ದಾರೆ.

## ನಾರ್ವೆಯ ಕಾರ್ಸ್ಟನ್ ವಾರ್ಹೋಮ್ ಗೆ ಟೋಕಿಯೋ ಒಲಿಂಪಿಕ್ಸ್‌ನಲ್ಲಿ ಚಿನ್ನ




* ಟೋಕಿಯೋ ಒಲಿಂಪಿಕ್ಸ್ ನ ಪುರುಷರ 400 ಮೀ. ಹರ್ಡಲ್ಸ್ ನಲ್ಲಿ ತಮ್ಮದೇ ಆದ ಎರಡು ಹಳೆಯ ದಾಖಲೆಗಳನ್ನೂ ಹಿಮ್ಮೆಟ್ಟಿ ಚಿನ್ನದ ಪದಕ ಜಯಿಸಿದ ನಾರ್ವೆಯ ಕಾರ್ಸ್ಟನ್ ವಾರ್ಹೋಮ್.
* ಒಲಿಂಪಿಕ್ಸ್ ನಲ್ಲಿ 400 ಮೀ. ಹರ್ಡಲ್ಸ್‌ನಲ್ಲಿ ನಾರ್ವೆಯ ಕಾರ್ಸ್ಟನ್ ವಾರ್‌ಹೋಮ್ ಕೇವಲ 45.94 ಸೆಕೆಂಡುಗಳಲ್ಲಿ ಗುರಿಯನ್ನು ತಲುಪಿ ಈ ಹಿಂದೆ ತಾವೇ ನಿರ್ಮಿಸಿರುವ ವಿಶ್ವ ದಾಖಲೆಯನ್ನು ಮುರಿದಿದ್ದಾರೆ.

## 11 ವರ್ಷದ ಬಾಲೆ ಜಗತ್ತಿನ ಅತ್ಯಂತ ಪ್ರತಿಭಾವಂತ ವಿದ್ಯಾರ್ಥಿನಿ



* ಪ್ರಸ್ತುತ ಭಾರತೀಯ ಮೂಲದ 11 ವರ್ಷದ ಅಮೆರಿಕನ್ ಬಾಲೆ ನತಾಶಾ ಪೇರಿ ಅವರು ಇದೀಗ ಜಗತ್ತಿನ ಅತ್ಯಂತ ಪ್ರತಿಭಾವಂತ ವಿದ್ಯಾರ್ಥಿ ಎಂಬ ಮಾನ್ಯತೆಯನ್ನು ಪಡೆದುಕೊಂಡಿದ್ದಾರೆ.
* ಪ್ರಸ್ತುತ ಅಮೆರಿಕದ ಉನ್ನತ ವಿಶ್ವವಿದ್ಯಾಲಯ ನಡೆಸುವ ಸ್ಕಾಲಸ್ಟಿಕ್ ಅಸ್ಸೆಸ್‌ಮೆಂಟ್ ಟೆಸ್ಟ್ ಹಾಗೂ ಅಮೆರಿಕನ್ ಕಾಲೇಜ್ ಟೆಸ್ಟಿಂಗ್ ಪರೀಕ್ಷೆಯಲ್ಲಿ ನೀಡಿದ ಅದ್ವಿತೀಯ ಫಲಿತಾಂಶ ವನ್ನು ಪರಿಗಣಿ ಈ ನತಾಶಾ ಪೇರಿ ಬಾಲೆಯನ್ನು ಜಗತ್ತಿನ ಅತ್ಯಂತ ಪ್ರತಿಭಾವಂತ ವಿದ್ಯಾರ್ಥಿ ಎಂದು ಗುರುತಿಸಲಾಗಿದೆ.
* ಅಮೆರಿಕದ ಉನ್ನತ ವಿಶ್ವವಿದ್ಯಾಲಯ ನಡೆಸುವ ಪರೀಕ್ಷೆಯಲ್ಲಿ ಎಸ್‌ಎಟಿ ಮತ್ತು ಎಸಿಟಿ ಪರೀಕ್ಷೆಯಲ್ಲಿ ಸುಮಾರು 84 ದೇಶಗಳ ಅಂದಾಜು 19,000 ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

# Current affairs of August 2021 from KPSC Vaani

## ಭಾರತೀಯ ಹಾಕಿ ತಂಡಕ್ಕೆ ಸೆಮಿ ಫೈನಲ್ ಸೋಲು



* ಪ್ರಸ್ತುತ ಟೋಕಿಯೊ ಒಲಿಂಪಿಕ್ಸ್ ಪುರುಷರ ಹಾಕಿ ಪಂದ್ಯಾವಳಿಯಲ್ಲಿ ಭಾರತದ ಹಾಕಿ ತಂಡವು ಸೆಮಿಫೈನಲ್ ಹಂತವನ್ನು ತಲುಪಿತ್ತು, ಆದರೆ ಈ ಸೆಮಿಫೈನಲ್ ಹಂತದಲ್ಲಿ ಭಾರತ ಹಾಕಿ ತಂಡವು ವಿಶ್ವ ಚಾಂಪಿಯನ್ ಬೆಲ್ಜಿಯಂ ಹಾಕಿ ತಂಡದ ವಿರುದ್ಧ ಸೋಲ ಅನುಭವಿಸಿದೆ.

* ಇದೀಗ ಭಾರತ ಹಾಕಿ ತಂಡವು ಕಂಚಿನ ಪದಕ ಪಡೆಯುವ ನಿರೀಕ್ಷೆಯಲ್ಲಿದೆ, ಇದಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರುಟ್ವೀಟ್ ಮೂಲಕ ಟೀಮ್ ಇಂಡಿಯಾಕ್ಕೆ ಶುಭ ಕೋರಿದ್ದಾರೆ.

* ಪ್ರಸ್ತುತ ಪ್ರಧಾನಿ ಮೋದಿ ಅವರು 'ಗೆಲುವು ಮತ್ತು ಸೋಲುಗಳು ಜೀವನದ ಒಂದು ಭಾಗವಾಗಿದೆ' ಎಂದು ಟ್ವೀಟ್ ಮೂಲಕ ತಿಳಿಸಿದ್ದಾರೆ.

* ಕಂಚಿನ ಪದಕಕ್ಕಾಗಿ 2 ನೇ ಸೆಮಿಫೈನಲ್ ನಲ್ಲಿ ಸೋತ ತಂಡದ ವಿರುದ್ಧ ಭಾರತ ಹಾಕಿ ತಂಡ ಆಟವಾಡಲಿದೆ.

## ದೇಶಾದ್ಯಂತ 1,000 ಖೇಲೋ ಇಂಡಿಯಾ ಕೇಂದ್ರಗಳ ಸ್ಥಾಪನೆ



* ಇದೀಗ ದೇಶಾದ್ಯಂತ 1,000 ಖೇಲೋ ಇಂಡಿಯಾ ಕೇಂದ್ರಗಳನ್ನು ಸ್ಥಾಪನೆ ಮಾಡಲಿದೆ ಎಂದು ಕೇಂದ್ರ ಸರ್ಕಾರ ಘೋಷಣೆ ಮಾಡಿದೆ, ಇದರಿಂದಾಗಿ ಭಾರತದಲ್ಲಿ ಕ್ರೀಡೆಗಳನ್ನು ಉತ್ತೇಜಿಸುವ ಉದ್ದೇಶದಿಂದ ಈ ಯೋಜನೆ ರೂಪಿಸಲಾಗಿದೆ ಎಂದು ಕೇಂದ್ರ ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವಾಲಯ ತಿಳಿಸಿದೆ.

* ಸದ್ಯ ಕೇಂದ್ರ ಸರ್ಕಾರವು ಭಾರತದಲ್ಲಿ 360 ಖೇಲೋ ಇಂಡಿಯಾ ಕೇಂದ್ರಗಳಿಗೆ ಸೂಚನೆಯನ್ನು ನೀಡಿದೆ.

* ಕೇಂದ್ರ ಸರ್ಕಾರದ ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವರಾದ ಅನುರಾಗ್ ಠಾಕೂರ್ ಅವರು ಈ ವಿಷಯವಾಗಿ ಅಂದರೆ ಖೇಲೋ ಇಂಡಿಯಾ ಯೋಜನೆಯಡಿ ಕ್ರೀಡಾಪಟುಗಳನ್ನು ಆಯ್ಕೆ ಮಾಡಲಾಗುತ್ತಿದೆ ಹಾಗೂ ವಾರ್ಷಿಕ 6.28 ಲಕ್ಷ ರೂ.ಗಳ ವಾರ್ಷಿಕ ಆರ್ಥಿಕ ನೆರವನ್ನು ನೀಡಲಾಗುತ್ತದೆ ಎಂದು ರಾಜ್ಯಸಭೆಗೆ ಲಿಖಿತ ರೂಪದಲ್ಲಿ ಮಾಹಿತಿಯನ್ನು ನೀಡಿದ್ದಾರೆ.

## ಟೋಕಿಯೋ ಒಲಿಂಪಿಕ್ಸ್ ನಲ್ಲಿ ಪೋಲೆಂಡ್‌ನ ಅನಿಟಾ ವ್ಲೊಡಾರ್ಕ್‌ಜಿಕ್‌ಗೆ ಚಿನ್ನ



* ಈ ಬಾರಿಯ ಟೋಕಿಯೋ ಒಲಿಂಪಿಕ್ಸ್ ನಲ್ಲಿ ಪೋಲೆಂಡ್‌ನ ಅನಿಟಾ ವ್ಲೊಡಾರ್ಕ್‌ಜಿಕ್ ಅವರು ಒಲಿಂಪಿಕ್ಸ್‌ನ ಟ್ರ್ಯಾಕ್ ಅಂಡ್ ಫೀಲ್ಡ್‌ನ ಒಂದೇ ಕ್ರೀಡೆಯಲ್ಲಿ ಸತತವಾಗಿ 3 ನೇ ಬಾರಿ ಚಿನ್ನದ ಪದಕವನ್ನು ಜಯಿಸಿದ ಮೊದಲ ಮಹಿಳಾ ಅಥ್ಲೀಟ್ ಇವರಾಗಿದ್ದಾರೆ.

* ಟೋಕಿಯೊ ಒಲಿಂಪಿಕ್ ಕ್ರೀಡೆಗಳ ಹ್ಯಾಮರ್ ಥ್ರೊ ಸ್ಪರ್ಧೆಯಲ್ಲಿ ಪೋಲೆಂಡ್‌ನ ಅನಿಟಾ ವ್ಲೊಡಾರ್ಕ್‌ಜಿಕ್ ಅವರು ಚಿನ್ನದ ಪದಕವನ್ನು ಜಯಿಸಿದ್ದಾರೆ.

* ಪೋಲೆಂಡ್‌ನ ಅನಿಟಾ ವ್ಲೊಡಾರ್ಕ್‌ಜಿಕ್ ಈ ಅಥ್ಲೀಟ್ 2012 ರ ಲಂಡನ್ ಹಾಗೂ 2016 ರ ರಿಯೊ ಕ್ರೀಡೆಗಳಲ್ಲೂ ಹ್ಯಾಮರ್ ಥ್ರೊ ಸ್ಪರ್ಧೆಯಲ್ಲಿ ಚಿನ್ನದ ಪದಕ ಜಯಿಸಿದ್ದರು, ಇದೀಗ ಇದು ಇವರ ಹ್ಯಾಮರ್ ಥ್ರೊ ಕ್ರೀಡೆಯಲ್ಲಿನ ಹ್ಯಾಟ್ರಿಕ್ ಸಾಧನೆಯಾಗಿದೆ.

* ಚೀನಾದ ವಾಂಗ್ ಝೆಂಗ್ ಅವರು ಬೆಳ್ಳಿ ಪದಕವನ್ನು ಪಡೆದುಕೊಂಡಿದ್ದಾರೆ. ಪೋಲೆಂಡ್‌ನ ಬೇರೆ ಸ್ಪರ್ಧಿ ಮಲ್ವಿನಾ ಕಪ್ರೋನ್ ಅವರು ಕಂಚಿನ ಪದಕವನ್ನು ಜಯಿಸಿದ್ದಾರೆ.

## '2' ಪ್ರಮುಖ ಸ್ಮಾರ್ಟ್ ಸಿಟಿ ಯೋಜನೆಗಳು GVMC ಯ ಅಡಿಯಲ್ಲಿ ಉದ್ಘಾಟನೆಯಾಗಲಿವೆ

KHELO INDIA

युवा कार्यक्रम और खेल मंत्रालय
Department of SPORTS

* ಸ್ಮಾರ್ಟ್ ಸಿಟಿ ಉಪಕ್ರಮದ ಅಡಿಯಲ್ಲಿ ಅಭಿವೃದ್ಧಿಪಡಿಸಲಾಗಿರುವ ಎರಡು ಪ್ರಮುಖ ಯೋಜನೆಗಳು ಬೃಹತ್ ವಿಶಾಖಪಟ್ಟಣಂ ಮುನ್ಸಿಪಲ್ ಕಾರ್ಪೊರೇಶನ್ (GVMC)ನ ಅಡಿಯಲ್ಲಿ ಉದ್ಘಾಟನೆಯಾಗಲು ಸಿದ್ಧವಾಗಿವೆ.

* ಈ ಸ್ಮಾರ್ಟ್ ಸಿಟಿ ಯೋಜನೆಯಡಿಯಲ್ಲಿ ಬೀಚ್ ರಸ್ತೆಯಲ್ಲಿ ವಿಎಂಆರ್‌ಡಿಎ ಪಾರ್ಕ್ ಹಾಗೂ ಜಗದಂಬ ಜಂಕ್ಷನ್‌ನಲ್ಲಿ ಮಲ್ಟಿ ಲೆವೆಲ್ ಕಾರ್ ಪಾರ್ಕಿಂಗ್ ಯೋಜನೆ ಪೂರ್ಣಗೊಂಡು ಉದ್ಘಾಟನೆಗೆ ಸಿದ್ಧವಾಗಿವೆ.

* ಬಹು ಹಂತದ ಕಾರ್ ಪಾರ್ಕಿಂಗ್ ಯೋಜನೆ (Multi Level car parkinga Project) MLCP ಯೋಜನೆಯು ಬೃಹತ್ ವಿಶಾಖಪಟ್ಟಣಂ ಮುನ್ಸಿಪಲ್ ಕಾರ್ಪೊರೇಶನ್ ನ ಪ್ರತಿಷ್ಠಿತ ಯೋಜನೆಯಲ್ಲಿ ಇದು ಒಂದಾಗಿದೆ.

* ವಿಶಾಖಪಟ್ಟಣಂ ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ (VMRDA ಪಾರ್ಕ್) ಈ ಉದ್ಯಾನವನ GVMC ಸ್ಮಾರ್ಟ್ ಸಿಟಿ ಯೋಜನೆಯ ಅಡಿಯಲ್ಲಿ ಕೈಗೆತ್ತಿಕೊಳ್ಳಲಾಗಿತ್ತು, ಈ ಉದ್ಯಾನವು 33 ಎಕರೆಗಳಲ್ಲಿ ವಿಸ್ತಾರವಾಗಿ ಹರಡಿದೆ ಹಾಗೂ ಎಲ್ಲಾ ವಲಯಗಳ ಜನರಿಗೆ ಮೂರು ವಲಯಗಳಲ್ಲಿ 33 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗಿದೆ.

* ಭಾರತ ಸರ್ಕಾರವು 2015 ರಲ್ಲಿ ನಗರ ಕಾರ್ಯಗಳನ್ನು ಸಂಯೋಜಿಸುವ ಉದ್ದೇಶದಿಂದ ಈ ಸ್ಮಾರ್ಟ್ ಸಿಟಿ ಮಿಷನ್ ಪ್ರಾರಂಭಿಸಿದೆ.

## ಪ್ರಾಣಿಗಳ ಜನನ ನಿಯಂತ್ರಣ ಘಟಕದ ಕಾರ್ಯಾರಂಭ ಶುರು



* ಪ್ರಾಣಿಗಳ ಜನನ ನಿಯಂತ್ರಣ ಕೇಂದ್ರವು ಮತ್ತೇ ತಮಿಳುನಾಡಿನ ಕೋನಕ್ಕರೈನಲ್ಲಿ ಕಾರ್ಯಾರಂಭ ಮಾಡಿದೆ.
* ಪ್ರಸ್ತುತ 2018 ರಲ್ಲಿ ಪ್ರಾಣಿ ಜನನ ನಿಯಂತ್ರಣ ಘಟಕವನ್ನು ಆರಂಭಿಸಲಾಗಿದೆ.
* ಈ ಪ್ರಾಣಿ ಜನನ ನಿಯಂತ್ರಣ ಘಟಕವು '5' ಪೂರ್ವ ಆಪರೇಟಿವ್ ಹಾಗೂ '5' ಶಸ್ತ್ರಚಿಕಿತ್ಸಾ ವಾರ್ಡ್‌ಗಳನ್ನು ಹೊಂದಿದೆ, ಈ ಕೇಂದ್ರವು ಒಂದು ದಿನದಲ್ಲಿ ಸರಿ ಸುಮಾರು 30 ನಾಯಿಗಳನ್ನು ಕ್ರಿಮಿನಾಶಕ ಮಾಡುವ ಸಾಮರ್ಥ್ಯವನ್ನು ಹೊಂದಿದೆ.
* ಪ್ರಸ್ತುತ ಬೀದಿ ನಾಯಿಗಳ ಜನಸಂಖ್ಯೆಯಲ್ಲಿ ಘಾತೀಯ ಬೆಳವಣಿಗೆಯನ್ನು ಪರೀಕ್ಷಿಸುವ ಉದ್ದೇಶವನ್ನು ಕ್ರಿಮಿನಾಶಕ ಡ್ರೈವ್ ಹೊಂದಿದೆ ಎಂದು ತಿಳಿಸಿದ್ದಾರೆ.
* ಪ್ರಾಣಿಗಳ ಜನನ ನಿಯಂತ್ರಣ ನಿಯಮ 2001 ರ, ಈ ನಿಯಮಗಳನ್ನು ಪ್ರಾಣಿಗಳ ಮೇಲಿನ ದೌರ್ಜನ್ಯ ತಡೆ ಕಾಯಿದೆಯಾಗಿದೆ ಇದನ್ನು 1960 ರ ಸೆಕ್ಷನ್ 38 ರ ಅಡಿಯಲ್ಲಿ ಜಾರಿಗೆತರಲಾಗಿದೆ.
* ಈ ನಿಯಮವು ಬೀದಿ ನಾಯಿಗಳ ಕ್ರಿಮಿನಾಶಕ ಹಾಗೂ ನಾಯಿಗಳ ಸಂಖ್ಯೆಯನ್ನು ಕಡಿಮೆ ಮಾಡಲು ಪ್ರಯತ್ನ ಪಡುತ್ತಿದೆ ಎಂದು ತಿಳಿಸಿದ್ದಾರೆ.

## ದೆಹಲಿ ಕ್ಯಾಬಿನೆಟ್ ವೈದ್ಯಕೀಯ ಆಮ್ಲಜನಕ ಉತ್ಪಾದನೆ ಪ್ರಚಾರ ನೀತಿಯನ್ನು ಅನುಮೋದಿಸಿದೆ



* ಪ್ರಸ್ತುತ ದೆಹಲಿ ಕ್ಯಾಬಿನೆಟ್ ವೈದ್ಯಕೀಯ ಆಮ್ಲಜನಕದ ಉತ್ಪಾದನೆ ಹಾಗೂ ಖಾಸಗಿ ವಲಯಗಳಿಗೆ ಆಮ್ಲಜನಕ ಟ್ಯಾಂಕರ್‌ಗಳಲ್ಲಿ ಹೂಡಿಕೆ ಮಾಡಲು ಹಾಗೂ ವೈದ್ಯಕೀಯ ಆಮ್ಲಜನಕಕ್ಕಾಗಿ ಶೇಖರಣಾ ಸೌಲಭ್ಯಗಳಲ್ಲಿ ಹೂಡಿಕೆ ಮಾಡಲು ಪ್ರೋತ್ಸಾಹ ನೀಡುವ ನೀತಿಗೆ ಅನುಮೋದನೆಯನ್ನು ನೀಡಿದೆ.
* ದೆಹಲಿ ಸರ್ಕಾರವು ಕೋವಿಡ್ 19 2 ನೇ ಅಲೆಯನ್ನು ನಿರ್ವಹಿಸುವಲ್ಲಿ ದೊಡ್ಡ ಸವಾಲನ್ನು ಎದುರಿಸಿದ, ಇದೀಗ ಆಮ್ಲಜನಕದ ಲಭ್ಯತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಈ ನೀತಿಗೆ ಅನುಮೋದನೆ ನೀಡಿದೆ.
* ಪ್ರಸ್ತುತ ದೆಹಲಿಯ ಲೆಫ್ಟಿನೆಂಟ್ ಗವರ್ನರ್ ಅನಿಲ್ ಬೈಜಾಲ್ ಅವರು 160 ಪ್ರೆಶರ್ ಸ್ವಿಂಗ್ ಆಡ್ಸರ್ಪ್ಶನ್ ಆಮ್ಲಜನಕದ ಸ್ಥಾವರಗಳ ಪ್ರಗತಿಯನ್ನು ಪರಿಶೀಲಿಸಿದ್ದಾರೆ, ಇದೀಗ ಈ ಆಮ್ಲಜನಕದ ಘಟಕಗಳನ್ನು ದೆಹಲಿಯ ಸಾರ್ವಜನಿಕ ವಲಯ ಮತ್ತು ಖಾಸಗಿ ವಲಯದ ಆಸ್ಪತ್ರೆಗಳಲ್ಲಿ ಸ್ಥಾಪಿಸಲಾಗುವುದು ಎಂದು ತಿಳಿಸಿದ್ದಾರೆ.
* ಈ 160 ಪ್ರೆಶರ್ ಸ್ವಿಂಗ್ ಆಡ್ಸರ್ಪ್ಶನ್ (PSA)ಗಳಿಂದ ಒಟ್ಟಾರೆಯಾಗಿ ಪ್ರತಿ ದಿನಕ್ಕೆ ಸುಮಾರು 148 MT ವೈದ್ಯಕೀಯ ಆಮ್ಲಜನಕ ಉತ್ಪಾದನೆ ಮಾಡಬಹುದು ಎಂದು ತಿಳಿಸಿದ್ದಾರೆ.

## ಕಾರ್ಗಿಲ್ ಜಿಲ್ಲೆಯ ಆರ್ಯನ್ ವ್ಯಾಲಿ ರಾಷ್ಟ್ರೀಯ ಗ್ರಿಡ್‌ಗೆ ಸಂಪರ್ಕ ಹೊಂದಿದೆ



* ಲಡಾಖ್‌ನ ಕಾರ್ಗಿಲ್ ಜಿಲ್ಲೆಯ ಆರ್ಯನ್ ವ್ಯಾಲಿಯಲ್ಲಿ 40 ಕಿಲೋಮೀಟರ್ ಟ್ರಾನ್ಸ್‌ಮಿಷನ್ ಲೈನ್ ನ್ನು ಯಶಸ್ವಿಯಾಗಿ ನಿಯೋಜಿಸಿದ ಪವರ್ ಗ್ರಿಡ್ ಕಾರ್ಪೊರೇಷನ್ ಆಫ್ ಇಂಡಿಯಾ.
* ಲಾಲೂಂಗ್, ಡಾರ್ಚಿಕ್, ಸಿಲ್ಮೂ, ಬಟಾಲಿಕ್, ಸಿನಿಕ್ಸೆ, ಹರ್ದಾಸ್, ಗಾರ್ಕಾನ್ ಮತ್ತು ಲಾಲೂಂಗ್ ನಿಂದ ಡಾರ್ಚಿಕ್ ನಡುವಿನ ಸುತ್ತಮುತ್ತಲಿನ ಗ್ರಾಮಗಳನ್ನು ಪ್ರಧಾನ ಮಂತ್ರಿಯ ಅಭಿವೃದ್ಧಿ ಕಾರ್ಯಕ್ರಮದ ಅಡಿಯಲ್ಲಿ ಪವರ್ ಗ್ರಿಡ್ ಸಂಪರ್ಕಿಸಲಾಗಿದೆ.
* ಪ್ರಸ್ತುತ ಕಾರ್ಗಿಲ್ ಜಿಲ್ಲೆಯ ಆರ್ಯನ್ ವ್ಯಾಲಿಯ ಎಲ್ಲಾ ಗ್ರಾಮಗಳು ಇದೀಗ 220 KV ಶ್ರೀನಗರ ಲೇಹ್ ಪ್ರಸರಣ ಮಾರ್ಗಗಳ ಮೂಲಕ ನ್ಯಾಷನಲ್ ಗ್ರಿಡ್‌ಗೆ ಸಂಪರ್ಕ ಹೊಂದಿಕೊಂಡಿವೆ, ಹಾಗೂ ಲೇಹ್ ಜಿಲ್ಲೆಯ ನುಬ್ರಾ ಕಣಿವೆಯ ಲಾರ್ಜಿಯಾಬ್ ನಂತಹ ಇತರ 20 ಹಳ್ಳಿಗಳ ವಿದ್ಯುದ್ದೀಕರಣವನ್ನು ಪವರ್ ಗ್ರಿಡ್ ಕಾರ್ಪೊರೇಷನ್ ಪೂರ್ಣಗೊಳಿಸಿದೆ.
* ಪವರ್ ಗ್ರಿಡ್ ಸಂಪರ್ಕದಿಂದ ಲಡಾಖ್ ಪ್ರದೇಶದ ದೂರದ ಹಳ್ಳಿಗಳಲ್ಲಿ ಆರ್ಥಿಕ ಅಭಿವೃದ್ಧಿಗೆ ಸಹಾಯ ಮಾಡುತ್ತದೆ ಎಂದು ತಿಳಿಸಿದೆ.
* ನ್ಯಾಷನಲ್ ಗ್ರಿಡ್ ಎನ್ನುವುದು ಭಾರತದಲ್ಲಿನ ಅಧಿಕ ವೋಲ್ಟೇಜ್ ವಿದ್ಯುತ್ ಪ್ರಸರಣ ಜಾಲವಾಗಿದೆ.
* ಪ್ರಸ್ತುತ ಭಾರತದಲ್ಲಿ ನ್ಯಾಷನಲ್ ಗ್ರಿಡ್'ನ್ನು ಸರ್ಕಾರಿ ಸ್ವಾಮ್ಯದ ಪವರ್ ಗ್ರಿಡ್ ಕಾರ್ಪೊರೇಶನ್ ಆಫ್ ಇಂಡಿಯಾವನ್ನು ಸರ್ಕಾರಿ ಸ್ವಾಮ್ಯದ ಪವರ್ ಸಿಸ್ಟಮ್ ಆಪರೇಷನ್ ಕಾರ್ಪೊರೇಷನ್ ಕಾರ್ಯ ನಿರ್ವಹಿಸುತ್ತದೆ.

# 05-08-2021

## ಟೋಕಿಯೋ ಒಲಿಂಪಿಕ್ಸ್ ನ ಮ್ಯಾರಥಾನ್ ಈಜು ಸ್ಪರ್ಧೆಯಲ್ಲಿ ಬ್ರೆಜಿಲ್‌ನ ಆಯನಾಗೆ ಚಿನ್ನ




* ಪ್ರಸ್ತುತ ಟೋಕಿಯೋ ಒಲಿಂಪಿಕ್ಸ್ ನ ಮ್ಯಾರಥಾನ್ ಈಜು ಸ್ಪರ್ಧೆಯ 10 ಕಿ.ಮೀ. ವಿಭಾಗದಲ್ಲಿ ಬ್ರೆಜಿಲ್‌ನ ಆಯನಾ ಮಾರ್ಸೆಲಾ ಕುನ್ಹಾ ಅವರು ಚಿನ್ನದ ಪದಕವನ್ನು ಜಯಿಸಿದ್ದಾರೆ, ಈ ಹಿಂದೆ ಈ ಸ್ಪರ್ಧೆಯಲ್ಲಿ ಶರೋನ್ ವ್ಯಾನ್ ರೌವೆಂಡಾಲ್ ಅವರು ಚಿನ್ನವನ್ನು ಪಡೆದುಕೊಂಡಿದ್ದರು.

* ಆಯನಾ ಮಾರ್ಸೆಲಾ ಕುನ್ಹಾ ಅವರು ವಿಶ್ವ ಚಾಂಪಿಯನ್‌ಷಿಪ್‌ನ ವೈಯಕ್ತಿಕ ವಿಭಾಗದಲ್ಲಿ ಒಟ್ಟು '5' ಚಿನ್ನ ಪದಕವನ್ನು ಜಯಿಸಿದ್ದಾರೆ.

* ಪ್ರಸ್ತುತ ನೆದರ್ಲೆಂಡ್ಸ್‌ನ ಶರೋನ್ ಅವರು ಬೆಳ್ಳಿ ಪದಕವನ್ನು ಜಯಿಸಿದರು.

* ಆಸ್ಟ್ರೇಲಿಯಾದ ಕರೀನಾ ಲೀ ಅವರು ಕಂಚಿನ ಪದಕವನ್ನು ಪಡೆದುಕೊಂಡರು.

## ಸ್ವದೇಶಿ ನಿರ್ಮಿತ ಯುದ್ಧನೌಕೆ ವಿಕ್ರಾಂತ್ ಸಂಚಾರ ಆರಂಭ



* ಸ್ವದೇಶಿ ನಿರ್ಮಿತ ಮೊದಲ ವಿಮಾನವಾಹಕ ಯುದ್ಧ ನೌಕೆ ವಿಕ್ರಾಂತ್ ತನ್ನ ಮೊದಲ ಸಮುದ್ರ ಪ್ರಯೋಗವನ್ನು ಆರಂಭಿಸಿದೆ, ಇದೀಗ ಇದು ಕೊಚ್ಚಿಯ ಸಮುದ್ರದಲ್ಲಿ ಅಭ್ಯಾಸವನ್ನು ಪ್ರಾರಂಭಿಸಿದೆ.

* 2022 ರ ಅವಧಿಗೆ ಭಾರತದ ನೌಕಾಪಡೆಗೆ INS ವಿಕ್ರಾಂತ್ ಸೇರ್ಪಡೆಗೊಳ್ಳಲು ಸಿದ್ಧವಾಗಿದೆ.

* ಭಾರತದಲ್ಲಿ ವಿನ್ಯಾಸಗೊಂಡು ನಿರ್ಮಾಣವಾಗಿರುವ ದೇಶದ ಅತ್ಯಂತ ದೊಡ್ಡ, ಸಂಕೀರ್ಣ ಯುದ್ಧನೌಕೆ ಇದಾಗಿದೆ ಎಂದು ತಿಳಿಸಿದ್ದಾರೆ.

* ಈ ಹಿಂದೆ 1999 ರಲ್ಲಿ ಈ ಯುದ್ಧನೌಕೆಯ ವಿನ್ಯಾಸ ಆರಂಭಿಸಲಾಗಿತ್ತು, ಇದರ ನಿರ್ಮಾಣದ ಕಾರ್ಯವು 2009 ರ ಫೆಬ್ರುವರಿಯಲ್ಲಿ ಆರಂಭಗೊಂಡಿತು.

* 2013 ರ ಆಗಸ್ಟ್ 12 ರಂದು ಯುದ್ಧನೌಕೆಯನ್ನು ಉದ್ಘಾಟಿಣೆ ಮಾಡಲಾಯಿತು, ಹಾಗೂ 2020 ರ ಡಿಸೆಂಬರ್'ನಲ್ಲಿ ಬೇಸಿನ್ ಟ್ರಯಲ್'ನ್ನು ಪೂರ್ಣಗೊಳಿಸಲಾಯಿತು, ಕೊಚ್ಚಿನ್ ಶಿಪ್ ಯಾರ್ಡ್ ನಲ್ಲಿ 23,000 ಕೋಟಿ ರೂ. ವೆಚ್ಚದಲ್ಲಿ ಯುದ್ಧನೌಕೆ ವಿಕ್ರಾಂತ್ ನಿರ್ಮಾಣವಾಗಿದೆ.

* ಪ್ರಸ್ತುತ ಭಾರತದ ಕಡಲತೀರದ ಹಿತಾಸಕ್ತಿಗಳನ್ನು ಕಾಪಾಡಲು ಈ ಯುದ್ಧನೌಕೆ ಬಳಸಲಾಗುತ್ತದೆ, ಆತ್ಮನಿರ್ಭರ ಭಾರತ್ ಹಾಗೂ ಮೇಕ್ ಇನ್ ಇಂಡಿಯಾದ ಭಾಗವಾಗಿ ಇದನ್ನು ನಿರ್ಮಾಣ ಮಾಡಲಾಗಿದೆ ಎಂದು ಭಾರತೀಯ ನೌಕಾಪಡೆಯ ವಕ್ತಾರ ಕಮಾಂಡರ್ ವಿವೇಕ್ ಮಧ್ವಲ್ ಅವರು ತಿಳಿಸಿದ್ದಾರೆ.

## ವಾಯುಪಡೆ ಮುಖ್ಯಸ್ಥ 'RKS ಭದೌರಿಯಾ' ಇಸ್ರೇಲ್‌ಗೆ ಭೇಟಿ



* ಪ್ರಸ್ತುತ ಭಾರತೀಯ ವಾಯುಪಡೆ ಮುಖ್ಯಸ್ಥ ಆರ್. ಕೆ.ಎಸ್ ಭದೌರಿಯಾ ಅವರು ಇಸ್ರೇಲ್ ಮತ್ತು ಭಾರತದ ರಕ್ಷಣಾ ಕ್ಷೇತ್ರಗಳಲ್ಲಿ ಸಹಕಾರ ಅಭಿವೃದ್ಧಿಯ ದ್ವಿಪಕ್ಷೀಯ ಸಂಬಂಧವನ್ನು ಬಲಗೊಳಿಸುವ ಸಲುವಾಗಿ ಇಸ್ರೇಲ್‌ಗೆ ಭೇಟಿ ನೀಡಿಲಿದ್ದಾರೆ.

* ಪ್ರಸ್ತುತ ಇಸ್ರೇಲ್ ಹಾಗೂ ಭಾರತ ಎರಡು ರಾಷ್ಟ್ರಗಳು ವಿವಿಧ ಕ್ಷೇತ್ರಗಳಲ್ಲಿ ಬಲವಾದ ಸಂಬಂಧಗಳನ್ನು ಹೊಂದಿವೆ, ಉದಾಹರಣೆಯಾಗಿ ರಕ್ಷಣಾ ಸಹಕಾರ ಹಾಗೂ ಸೇನಾ ವಿನಿಮಯಗಳಾಗಿವೆ ಎಂದು IAF ಟ್ವಿಟರ್ ನಲ್ಲಿ ತಿಳಿಸಿದೆ.

## ಟೋಕಿಯೋ ಒಲಿಂಪಿಕ್ಸ್ ಕಂಚು ಗೆದ್ದ ಭಾರತೀಯ ಬಾಕ್ಸರ್ ಲವ್ಲಿನಾ



* ಈ ಬಾರಿಯ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾರತದ ಬಾಕ್ಸರ್ ಲವ್ಲಿನಾ ಬೋರ್ಗೊಹೈನ್ ಅವರು ಮಹಿಳಾ ಬಾಕ್ಸಿಂಗ್‌ನ 69 KG ವಿಭಾಗದಲ್ಲಿ ಕಂಚಿನ ಪದಕವನ್ನು ಜಯಿಸಿದ್ದಾರೆ.

* ಇದೀಗ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾರತ ಜಯಿಸಿರುವ ಪದಕಗಳ ಸಂಖ್ಯೆ 3 ಕ್ಕೆ ಏರಿಕೆಯಾಗಿದೆ.

* ಈ ಮೊದಲು 2008 ರಲ್ಲಿ ಬಾಕ್ಸರ್ ವಿಜೇಂದರ್ ಸಿಂಗ್ ಹಾಗೂ 2012 ರಲ್ಲಿ ಎಂ.ಸಿ. ಮೇರಿ ಕೋಮ್ ಒಲಿಂಪಿಕ್ಸ್‌ನ ಬಾಕ್ಸಿಂಗ್ ವಿಭಾಗದಲ್ಲಿ ಕಂಚಿನ ಪದಕವನ್ನು ಜಯಿಸಿದ್ದರು, ಇದೀಗ ಬಾಕ್ಸಿಂಗ್ ವಿಭಾಗದಲ್ಲಿ ಪದಕ ಗೆದ್ದ ಭಾರತದ ಮೂರನೇ ಬಾಕ್ಸರ್ ಇವರಾಗಿದ್ದಾರೆ.

## ಟೋಕಿಯೋ ಒಲಿಂಪಿಕ್ಸ್ ನ ಸ್ಕೇಟ್‌ಬೋರ್ಡಿಂಗ್‌ನಲ್ಲಿ ಬಾಲಕಿಯರು ಸಾಧನೆ



* ಟೋಕಿಯೊ ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ 19 ವರ್ಷದ ಜಪಾನ್ ನ ಸಕುರಾ ಯೊಸೊಝುಮಿ ಅವರು ಮಹಿಳಾ ವಿಭಾಗದ ಸ್ಕೇಟ್‌ಬೋರ್ಡಿಂಗ್ ಪಾರ್ಕ್ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದಿದ್ದಾರೆ.
* ಜಪಾನ್ ದೇಶದ 12 ವರ್ಷದ ಕೊಕೊನಾ ಹಿರಾಕಿ ಅವರು ಇದೇ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಜಯಿಸಿದ್ದಾರೆ.
* ಬ್ರಿಟನ್‌'ನ 13 ವರ್ಷದ ಸ್ಕೈ ಬ್ರೌನ್ ಎಂಬ ಬಾಲಕಿ ಕಂಚಿನ ಪದಕವನ್ನು ಪಡೆದುಕೊಂಡಿದ್ದಾರೆ.
* ಇದೇ ಮೊದಲ ಬಾರಿಗೆ ಒಲಿಂಪಿಕ್ಸ್‌ನಲ್ಲಿ ಇದೇ ಮೊದಲ ಬಾರಿ ಆರಂಭಿಸಿದ ಸ್ಕೇಟ್‌ಬೋರ್ಡಿಂಗ್ ಸ್ಪರ್ಧೆ ಇದಾಗಿದೆ.
* ಈ ಹಿಂದೆ 1970 ರ ದಶಕದಲ್ಲಿ ದಕ್ಷಿಣ ಕ್ಯಾಲಿಫೋರ್ನಿಯಾದಲ್ಲಿ ಖಾಲಿ ಈಜುಕೊಳದಿಂದ ಸೃಷ್ಟಿಯಾಗಿರುವ ಕ್ರೀಡೆ ಇದಾಗಿದೆ.

## ಟೋಕಿಯೋ ಒಲಿಂಪಿಕ್ಸ್ ನಲ್ಲಿ ಭಾರತೀಯ ಪುರುಷರ ಹಾಕಿ ತಂಡಕ್ಕೆ ಕಂಚ



* ಟೋಕಿಯೊ ಒಲಂಪಿಕ್ಸ್ ನ ಕ್ರೀಡಾಕೂಟದಲ್ಲಿ ಭಾರತೀಯ ಪುರುಷರ ಹಾಕಿ ತಂಡವು 41 ವರ್ಷಗಳ ಬಳಿಕ ಕಂಚಿನ ಪದಕ ಜಯಿಸಿದೆ.
* ಭಾರತ ಹಾಕಿ ತಂಡಕ್ಕೆ ಪ್ರಧಾನಿ ಮೋದಿ ಹಾಗೂ ರಾಷ್ಟ್ರಪತಿ ರಾಮನಾಥ್ ಕೋವಿಂದ್, ಮತ್ತು ಉಪರಾಷ್ಟ್ರಪತಿ ವೆಂಕಯ್ಯ ನಾಯ್ಡು ಅಭಿನಂದನೆಗಳನ್ನು ತಿಳಿಸಿದ್ದಾರೆ ಜೊತೆಗೆ ಇದು ಭಾರತಕ್ಕೆ ಐತಿಹಾಸಿಕ ವಿಜಯವಾಗಿದೆ.
* ಟೋಕಿಯೊ ಒಲಿಂಪಿಕ್ಸ್ ನಲ್ಲಿ ಭಾರತದ ಪುರುಷರ ಹಾಕಿ ತಂಡವು ಜರ್ಮನಿ ಹಾಕಿ ತಂಡದ ವಿರುದ್ಧ ಜಯಸಾಧಿಸಿ ಕಂಚಿನ ಪದಕವನ್ನು ಪಡೆದುಕೊಂಡಿದ್ದಾರೆ, ಹಾಗೂ 1980 ರ ನಂತರ ಮೊದಲ ಬಾರಿಗೆ ಒಲಿಂಪಿಕ್ಸ್ ನಲ್ಲಿ ಭಾರತೀಯ ಹಾಕಿ ತಂಡ ಪದಕ ಜಯಿಸಿದೆ.

## ಕೇಂದ್ರ ಸರ್ಕಾರದಿಂದ 'ಸಮಗ್ರ ಶಿಕ್ಷಣ ಅಭಿಯಾನ' 5 ವರ್ಷ ವಿಸ್ತರಣೆ

SAMAGRA SHIKSHA ABHIYAN

* ಕೇಂದ್ರ ಸರ್ಕಾರವು 2021 ರ ಏಪ್ರಿಲ್. 1 ರಿಂದ 2026 ರ ಮಾರ್ಚ್. 31 ರವರೆಗೆ 'ಸಮಗ್ರ ಶಿಕ್ಷಣ ಅಭಿಯಾನ' 5 ವರ್ಷ ವಿಸ್ತರಣೆ ಮಾಡಲು ಅನುಮೋದನೆ ನೀಡಿದೆ, ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ತಿಳಿಸಿದ್ದಾರೆ.
* ಕೇಂದ್ರ ಸಚಿವ ಸಂಪುಟವು ಅಂದಾಜು 2.94 ಲಕ್ಷ ಕೋಟಿ ರೂ.ಗಳ ವೆಚ್ಚದಲ್ಲಿನ ಸಮಗ್ರಾ ಶಿಕ್ಷಣ ಅಭಿಯಾನ 2.0 ಗೆ ಅನುಮೋದನೆ ನೀಡಿದೆ.
* ಈ ಸಮಗ್ರ ಶಿಕ್ಷಣ ಅಭಿಯಾನ 2.0 ದಿಂದ ಪ್ರಸ್ತುತ ಎಲ್ಲಾ ಬಾಲಕಿಯರ ಹಾಸ್ಟೆಲ್'ಗಳಲ್ಲಿ ಸ್ಯಾನಿಟರಿ ಪ್ಯಾಡ್ ಗಳನ್ನು ನೀಡಲಾಗುವದು, ಇದರ ಜೊತೆಯಲ್ಲಿ ಎಲ್ಲಾ ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯಗಳನ್ನು 12 ನೇ ತರಗತಿಯವರೆಗೆ ಮೇಲ್ದರ್ಜೆ ಮಾಡುವದು ಇನ್ನು ಹಲವು ನಿಬಂಧನೆಗಳು ಈ ಸಮಗ್ರ ಶಿಕ್ಷಣ ಅಭಿಯಾನದಲ್ಲಿ ಸೇರಿ ಕೊಂಡಿವೆ.
* ಕೇಂದ್ರ ಸರ್ಕಾರವು 2021 ರ ಏಪ್ರಿಲ್. 1 ರಿಂದ 2026 ರ ಮಾರ್ಚ್. 31 ರವರೆಗೆ 'ಸಮಗ್ರ ಶಿಕ್ಷಣ ಅಭಿಯಾನ' 5 ವರ್ಷ ವಿಸ್ತರಣೆ ಮಾಡಲು ಅನುಮೋದನೆ ನೀಡಿದೆ, ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ತಿಳಿಸಿದ್ದಾರೆ.
* ಕೇಂದ್ರ ಸಚಿವ ಸಂಪುಟವು ಅಂದಾಜು 2.94 ಲಕ್ಷ ಕೋಟಿ ರೂ.ಗಳ ವೆಚ್ಚದಲ್ಲಿನ ಸಮಗ್ರಾ ಶಿಕ್ಷಣ ಅಭಿಯಾನ 2.0 ಗೆ ಅನುಮೋದನೆ ನೀಡಿದೆ.
* ಈ ಸಮಗ್ರ ಶಿಕ್ಷಣ ಅಭಿಯಾನ 2.0 ದಿಂದ ಪ್ರಸ್ತುತ ಎಲ್ಲಾ ಬಾಲಕಿಯರ ಹಾಸ್ಟೆಲ್'ಗಳಲ್ಲಿ ಸ್ಯಾನಿಟರಿ ಪ್ಯಾಡ್ ಗಳನ್ನು ನೀಡಲಾಗುವದು, ಇದರ ಜೊತೆಯಲ್ಲಿ ಎಲ್ಲಾ ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯಗಳನ್ನು 12 ನೇ ತರಗತಿಯವರೆಗೆ ಮೇಲ್ದರ್ಜೆ ಮಾಡುವದು ಇನ್ನು ಹಲವು ನಿಬಂಧನೆಗಳು ಈ ಸಮಗ್ರ ಶಿಕ್ಷಣ ಅಭಿಯಾನದಲ್ಲಿ ಸೇರಿ ಕೊಂಡಿವೆ.

## ಮಾಲ್ಡೀವ್ಸ್ ಶೈಲಿಯ ವಾಟರ್ ವಿಲ್ಲಾಗಳು ಲಕ್ಷದ್ವೀಪದಲ್ಲಿ ಸ್ಥಾಪನೆ



* ಶೀಘ್ರದಲ್ಲೇ ಲಕ್ಷದ್ವೀಪದಲ್ಲಿ 800 ಕೋಟಿ ವೆಚ್ಚದ ಮಾಲ್ಡೀವ್ಸ್ ಶೈಲಿಯ ವಾಟರ್ ವಿಲ್ಲಾಗಳನ್ನು ಸ್ಥಾಪನೆ ಮಾಡಲಾಗುವದು ಎಂದು ಲಕ್ಷದ್ವೀಪದ ಆಡಳಿತಾಧಿಕಾರಿ ಪ್ರಫುಲ್ ಖೋಡಾ ಪಟೇಲ್ ತಿಳಿಸಿದ್ದಾರೆ.
* ಭಾರತದಲ್ಲಿಯೇ ಇದೇ ಮೊದಲ ಯೋಜನೆಯಾಗಿದೆ ಇದರ ಅಡಿಯಲ್ಲಿ ಸೌರಶಕ್ತಿ ಚಾಲಿತ ಹಾಗೂ ಪರಿಸರ ಸ್ನೇಹಿ ವಾಟರ್ ವಿಲ್ಲಾ ಮೂಲಕ ಎಲ್ಲ ರೀತಿಯ ಸೌಲಭ್ಯವನ್ನು ನೀಡಲಾಗುವದು ಎಂದಿದ್ದಾರೆ.
* ಪ್ರಸ್ತುತ ಲಕ್ಷದ್ವೀಪದ ಮಿನಿಕಾಯ್, ಸುಹೇಲಿ ಮತ್ತು ಕದ್ಮತ್ ದ್ವೀಪಗಳಲ್ಲಿ ಈ ಮಾಲ್ಡೀವ್ಸ್ ಶೈಲಿಯ ವಾಟರ್ ವಿಲ್ಲಾಗಳನ್ನು ಸ್ಥಾಪಿಸಲಾಗುತ್ತದೆ ಎಂದು ತಿಳಿಸಿದ್ದಾರೆ.
* 2019 ರಲ್ಲಿ ಲಕ್ಷದ್ವೀಪ ಆಡಳಿತವು ಪರಿಸರ ಪ್ರವಾಸೋದ್ಯಮ ಯೋಜನೆಗಳನ್ನು ಅಭಿವೃದ್ಧಿಪಡಿಸಲು ಜಾಗತಿಕ ಟೆಂಡರ್'ನ್ನು ಮಂಡನೆ ಮಾಡಿತ್ತು.
* ಅರಬ್ಬಿ ಸಮುದ್ರದಲ್ಲಿನ 36 ದ್ವೀಪಗಳ ಒಂದು ದ್ವೀಪಸಮೂಹವೆ ಲಕ್ಷದ್ವೀಪವಾಗಿದೆ, ಹಾಗೂ ಈ ಲಕ್ಷದ್ವೀಪ ಭಾರತದ ಅತಿ ಚಿಕ್ಕ ಕೇಂದ್ರಾಡಳಿತ ಪ್ರದೇಶವಾಗಿದೆ, ಕವರಟ್ಟಿ ಎಂಬ ಪ್ರದೇಶವು ಲಕ್ಷದ್ವೀಪದ ರಾಜಧಾನಿಯಾಗಿದೆ.
* ಪ್ರಸ್ತುತ ಲಕ್ಷದ್ವೀಪವು ಕೇರಳ ಹೈಕೋರ್ಟ್ ಅಡಿಯ ನ್ಯಾಯವ್ಯಾಪ್ತಿಯನ್ನು ಹೊಂದಿದೆ.

# Current affairs of August 2021 from KPSC Vaani

## ಟೋಕಿಯೊ ಒಲಂಪಿಕ್ಸ್ ನ ಮಹಿಳೆಯರ 400 ಮೀಟರ್ ಹರ್ಡಲ್ಸ್ ನಲ್ಲಿ ಸಿಡ್ನಿ ಮೆಕ್ಲಾಫ್ಲಿನ್ ಗೆ ಚಿನ್ನ




* ಈ ಬಾರಿಯ ಟೋಕಿಯೊ ಒಲಂಪಿಕ್ಸ್ ನಲ್ಲಿ ಮಹಿಳಾ ವಿಭಾಗದ 400 ಮೀ. ಹರ್ಡಲ್ಸ್ ನಲ್ಲಿ ಅಮೆರಿಕದ ಓಟಗಾರ್ತಿ ಸಿಡ್ನಿ ಮೆಕ್ಲಾಫ್ಲಿನ್ ಅವರು ಚಿನ್ನದ ಪದಕವನ್ನು ಜಯಿಸಿದ್ದಾರೆ.
* ಈ ಸ್ಪರ್ಧೆಯಲ್ಲಿ ಡೆಲಿಲಾ ಮುಹಮ್ಮದ್ ಅವರು ಬೆಳ್ಳಿ ಪದಕವನ್ನು ಜಯಿಸಿದ್ದಾರೆ.
* ನೆದರ್ಲೆಂಡ್ಸ್ ನ ಫೆಮ್ಕೆ ಬೋಲ್ ಎನ್ನುವರು ಈ ಸ್ಪರ್ಧೆಯಲ್ಲಿ ಕಂಚಿನ ಪದಕವನ್ನು ಜಯಿಸಿದ್ದಾರೆ.
* ಪ್ರಸ್ತುತ ಸಿಡ್ನಿ ಮೆಕ್ಲಾಫ್ಲಿನ್ ಅವರು 2019ರ ವಿಶ್ವ ಚಾಂಪಿಯನ್ ಶಿಪ್ ನಲ್ಲಿ ಬೆಳ್ಳಿ ಪದಕ ಜಯಿಸಿದ್ದರು, ಅಲ್ಲದೇ ಇತ್ತೀಚಿಗೆ ಜೂನ್ ತಿಂಗಳಿನಲ್ಲಿ ನಡೆದ ಒಲಿಂಪಿಕ್ ಟ್ರಯಲ್ಸ್ ನಲ್ಲಿ 400 ಮೀಟರ್ ಹರ್ಡಲ್ಸ್ ನ್ನು ಕೇವಲ 51.90 ಸೆಕೆಂಡುಗಳಲ್ಲಿ ಮುಗಿಸಿ ವಿಶ್ವದಾಖಲೆ ಬರೆದಿದ್ದರು, ಆದರೆ ಈ ಟೋಕಿಯೋ ಒಲಿಂಪಿಕ್ ಫೈನಲ್ ನಲ್ಲಿ ಕೇವಲ 51.40 ಸೆಕೆಂಡುಗಳಲ್ಲಿ ಓಡಿ ಹೊಸ ವಿಶ್ವ ದಾಖಲೆಯನ್ನು ನಿರ್ಮಿಸಿದ್ದಾರೆ.

## ಭೂಕಂಪದ ಎಚ್ಚರಿಕೆ ಮೊಬೈಲ್ ಆಪ್ ನ್ನು ಬಿಡುಗಡೆ ಮಾಡಿದ IIT ರೂರ್ಕಿ



* ಉತ್ತರಾಖಂಡ್ ರಾಜ್ಯದ ರೂರ್ಕಿಯಲ್ಲಿನ ಭಾರತೀಯ ತಂತ್ರಜ್ಞಾನ ಸಂಸ್ಥೆ (IIT ರೂರ್ಕೀ) ಯು ಭೂಕಂಪದ ಮುಂಚಿನ ಎಚ್ಚರಿಕೆ ಮೊಬೈಲ್ ಆಪ್'ನ್ನು ಬಿಡುಗಡೆ ಮಾಡಿದೆ.
* ಉತ್ತರಾಖಂಡ ರಾಜ್ಯದ ವಿಪತ್ತು ನಿರ್ವಹಣಾ ಪ್ರಾಧಿಕಾರವು ಈ ಮೊಬೈಲ್ ಆಪ್ ನ್ನು ಸಿದ್ಧಪಡಿಸಿದೆ.
* ಈ ಆಪ್ ಭೂಕಂಪದ ಆರಂಭವನ್ನು ಪತ್ತೆಹಚ್ಚಬಲ್ಲದು ಹಾಗೂ ರಾಜ್ಯದಲ್ಲಿ ಗಮನಾರ್ಹವಾದ ನಡುಕ ಸಂಭವಿಸುವಕ್ಕಿಂತ ಮೊದಲೇ ಎಚ್ಚರಿಕೆಗಳನ್ನು ನೀಡುತ್ತದೆ ಎಂದಿದ್ದಾರೆ.
* ಈ ಆಪ್ ನ್ನು ಕೇಂದ್ರ ಭೂ ವಿಜ್ಞಾನ ಸಚಿವಾಲಯದ ಸಹಾಯದೊಂದಿಗೆ ಮೊದಲು ಉತ್ತರಾಖಂಡದ ಗರ್ವಾಲ್ ಪ್ರದೇಶಕ್ಕೆ ಪ್ರಾಯೋಗಿಕವಾಗಿ ಪ್ರಾರಂಭಿಸಿಲಾಗಿದೆ.
* ಉತ್ತರಾಖಂಡದ ಗರ್ವಾಲ್ ಹಾಗೂ ಕುಮಾನ್ ಪ್ರದೇಶಗಳ ಹೆಚ್ಚಿನ ಭೂಪ್ರದೇಶಗಳಲ್ಲಿ ಈ ಆಪ್ ನ ಸಂವೇದಕಗಳನ್ನು ಅಳವಡಿಸಲಾಗಿದೆ.
* EEW (earthquake early warning) ವ್ಯವಸ್ಥೆಯು ಭೂಕಂಪಗಳ ಅಲೆಗಳ ವೇಗದ ಆಧಾರದ ಮೇಲೆ ತನ್ನ ಕಾರ್ಯನಿರ್ವಹಿಸುತ್ತದೆ, ಹಾಗೂ ಎಚ್ಚರಿಕೆಯನ್ನು ನೀಡುತ್ತದೆ


# 06-08-2021

## ಟೋಕಿಯೋ ಒಲಿಂಪಿಕ್ಸ್ ನ ಕುಸ್ತಿಯಲ್ಲಿ ಭಾರತದ ರವಿ ದಹಿಯಾಗೆ ಬೆಳ್ಳಿ ಪದಕ



* ಟೋಕಿಯೊ ಒಲಿಂಪಿಕ್ಸ್ ನ ಪುರುಷರ ಕುಸ್ತಿ ವಿಭಾಗದಲ್ಲಿ ಭಾರತದ ರವಿಕುಮಾರ್ ದಹಿಯಾ ಅವರು ಬೆಳ್ಳಿ ಪದಕವನ್ನು ಜಯಿಸಿದ್ದಾರೆ.
* ಕುಸ್ತಿ ಪಟು ರವಿಕುಮಾರ್ ದಹಿಯಾ ಅವರು ಪುರುಷರ 57 KG ವಿಭಾಗದ ಫೈನಲ್ ನಲ್ಲಿ ವಿಶ್ವ ಚಾಂಪಿಯನ್ ರಷ್ಯಾದ ಜವೂರ್ ಉಗುವೆ ಅವರ ವಿರುದ್ಧ ಸೋಲು ಅನುಭವಿಸಿ ಚಿನ್ನ ಗೆಲ್ಲುವಲ್ಲಿ ವಿಫಲರಾಗಿ ಬೆಳ್ಳಿ ಪದಕವನ್ನು ಪಡೆದುಕೊಂಡಿದ್ದಾರೆ.
* ಒಲಿಂಪಿಕ್ಸ್ ನಲ್ಲಿ ಪದಕ ಗೆಲ್ಲುತ್ತಿರುವ ಭಾರತದ 5 ನೇ ಕುಸ್ತಿಪಟು ಇವರಾಗಿದ್ದಾರೆ.
* ಒಲಿಂಪಿಕ್ಸ್ ಕುಸ್ತಿಯಲ್ಲಿ ಪದಕ ಗೆದ್ದ ಭಾರತೀಯರು: ಕೆ.ಡಿ. ಜಾಧವ್ 1952 ರಲ್ಲಿ ಕಂಚು. ಸುಶೀಲ್ ಕುಮಾರ್ 2008 ರಲ್ಲಿ ಕಂಚು, ಮತ್ತು 2012 ರಲ್ಲಿ ಬೆಳ್ಳಿ. ಯೋಗೇಶ್ವರ್ ದತ್ 2012 ರಲ್ಲಿ ಕಂಚು. ಸಾಕ್ಷಿ ಮಲಿಕ್ 2016 ರಲ್ಲಿ ಕಂಚು. ರವಿಕುಮಾರ್ ದಹಿಯಾ 2021 ರಲ್ಲಿ ಬೆಳ್ಳಿ ಪದಕವನ್ನು ಜಯಿಸಿದ್ದಾರೆ.
* ಪ್ರಸ್ತುತ ಹರಿಯಾಣ ಸರ್ಕಾರವು ಬೆಳ್ಳಿ ಪದಕ ವಿಜೇತರಾದ ರವಿಕುಮಾರ್ ದಹಿಯಾಗೆ 4 ಕೋಟಿ ನಗದು ಬಹುಮಾನವನ್ನು ಹಾಗೂ ಕ್ಲಾಸ್ 1 ದರ್ಜೆಯ ಉದ್ಯೋಗ ಒದಗಿಸಲಾಗುವದು ಎಂದು ಘೋಷಣೆ ಮಾಡಿದೆ.
* ಅಲ್ಲದೇ ಶೇ. 50 ರಷ್ಟು ರಿಯಾಯಿತಿಯೊಂದಿಗೆ ಹರಿಯಾಣ ರಾಜ್ಯದ ಯಾವುದೇ ಪ್ರದೇಶದಲ್ಲಿ ಒಂದು ಪ್ಲಾಟ್ ನೀಡಲಾಗುವುದು, ಹಾಗೂ ರವಿಕುಮಾರ್ ದಹಿಯಾ ಅವರ ಗ್ರಾಮವಾದ ನಹ್ರಿಯಲ್ಲಿ ಕುಸ್ತಿ ತರಬೇತಿಗಾಗಿ ಒಳಾಂಗಣ ಕ್ರೀಡಾಂಗಣ ನಿರ್ಮಿಸುವುದಾಗಿ ಹರಿಯಾಣ ಸರ್ಕಾರ ಘೋಷಣೆ ಮಾಡಿದೆ.

## ಮ್ಯಾರಥಾನ್ ಈಜು ಸ್ಪರ್ಧೆಯಲ್ಲಿ ಜರ್ಮನಿಯ ಫ್ಲೋರಿಯನ್ ವೆಲ್‌ಬ್ರಾಕ್‌ಗೆ ಚಿನ್ನ




* ಟೋಕಿಯೊ ಒಲಿಂಪಿಕ್ಸ್ ನ ಮ್ಯಾರಥಾನ್ ಈಜು ಸ್ಪರ್ಧೆಯ 10 ಕಿ.ಮೀ. ವಿಭಾಗದಲ್ಲಿ ಜರ್ಮನಿಯ ಫ್ಲೋರಿಯನ್ ವೆಲ್‌ಬ್ರಾಕ್' ಅವರು ಚಿನ್ನದ ಪದಕವನ್ನು ಜಯಿಸಿದ್ದಾರೆ.
* ಹಂಗೇರಿಯ ಕ್ರಿಸ್ಟೋಫ್ ರಾಸೊವಸ್ಕಿ ಅವರು ಬೆಳ್ಳಿ ಪದಕ

ಜಯಿಸಿದರು.
* ಇಟಲಿಯ ಗ್ರೆಗೊರಿಯೊ ಪಾಲ್ಟ್ರಿನೆರಿ ಅವರು ಕಂಚಿನ ಪದಕವನ್ನು ಪಡೆದುಕೊಂಡರು.
* ಇದೇ ಮ್ಯಾರಥಾನ್ ಈಜು ಸ್ಪರ್ಧೆಯ ಕೂಟದಲ್ಲಿ ಜರ್ಮನಿಯ ಫ್ಲೋರಿಯನ್ ವೆಲ್‌ಬ್ರಾಕ್ 1500 ಮೀ. ಫ್ರೀಸ್ಟೈಲ್‌ನಲ್ಲಿ ಕಂಚಿನ ಪದಕವನ್ನು ಜಯಿಸಿದ್ದರು, ಹಾಗೂ ಇಟಲಿಯ ಗ್ರೆಗೊರಿಯೊ ಪಾಲ್ಟ್ರಿನೆರಿ ಅವರು 800 ಮೀ. ಫ್ರೀಸ್ಟೈಲ್ ವಿಭಾಗದಲ್ಲಿ ಬೆಳ್ಳಿ ಪದಕ ಜಯಿಸಿದ್ದರು.

## ಟೋಕಿಯೋ ಒಲಿಂಪಿಕ್ಸ್ ನ ಪುರುಷರ ಹಾಕಿ ಫೈನಲ್ ಪಂದ್ಯದಲ್ಲಿ ಚಿನ್ನ ಗೆದ್ದ ಬೆಲ್ಜಿಯಂ



* ಟೋಕಿಯೊ ಒಲಿಂಪಿಕ್ಸ್ ನ ಆಸ್ಟ್ರೇಲಿಯಾ ಹಾಗೂ ಬೆಲ್ಜಿಯಂ ನ ಪುರುಷರ ಹಾಕಿ ಫೈನಲ್ ಪಂದ್ಯವು 1 1ರಿಂದ ಡ್ರಾ ಆಯಿತು, ಈ ಕಾರಣದಿಂದ ಬೆಲ್ಜಿಯಂ ಪುರುಷರ ಹಾಕಿ ತಂಡವು ಶೂಟೌಟ್ನಲ್ಲಿ 3 2 ಅಂತರದಿಂದ ಆಸ್ಟ್ರೇಲಿಯಾ ತಂಡವನ್ನು ಸೋಲಿಸಿ ಚೊಚ್ಚಲ ಒಲಿಂಪಿಕ್ಸ್ ನ ಚಿನ್ನದ ಪ್ರಶಸ್ತಿಯನ್ನು ಪಡೆದುಕೊಂಡಿದೆ.
* ಆಸ್ಟ್ರೇಲಿಯದ ಹಾಕಿ ತಂಡವು ಬೆಳ್ಳಿ ಪದಕವನ್ನು ಪಡೆದುಕೊಂಡಿತು.
* ಈ ಹಿಂದೆ 2004 ರ ಒಲಿಂಪಿಕ್ಸ್ ನಲ್ಲಿ ಆಸ್ಟ್ರೇಲಿಯಾ ಪದಕವನ್ನು ಗೆದ್ದುಕೊಂಡಿತ್ತು.
*ಈ ಬಾರಿಯ ಟೋಕಿಯೋ ಒಲಿಂಪಿಕ್ಸ್ ನಲ್ಲಿ ಭಾರತ ಹಾಕಿ ತಂಡವು ಜರ್ಮನಿ ವಿರುದ್ಧ ಜಯ ಸಾಧಿಸಿ ಕಂಚಿನ ಪದಕವನ್ನು ಪಡೆದುಕೊಂಡಿದೆ

## ದೇಶದಲ್ಲಿ ಇಲ್ಲಿಯತನಕ 49 ಕೋಟಿ ಡೋಸ್ ಕೋವಿಡ್ ಲಸಿಕೆ ನೀಡಿದ ಆರೋಗ್ಯ ಸಚಿವಾಲಯ



* ಪ್ರಸ್ತುತ ದೇಶದಲ್ಲಿ ಲಸಿಕೆ ಅಭಿಯಾನ ಆರಂಭವಾಗಿದೆ, ಇಲ್ಲಿಯತನಕ ಒಟ್ಟಾರೆ 49 ಕೋಟಿ ಡೋಸ್ ಕೋವಿಡ್ 19 ಲಸಿಕೆಯನ್ನು ನೀಡಲಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.
* ಇದೀಗ ಭಾರತದಲ್ಲಿ ಒಟ್ಟಾರೆ 50.29 ಲಕ್ಷಕ್ಕೂ ಅಧಿಕ ಡೋಸ್ ಲಸಿಕೆ ನೀಡಿದೆ, ಅಲ್ಲದೇ 18 ರಿಂದ 44 ವರ್ಷದವರಿಗೆ 27 ,26 ,494 ಜನರಿಗೆ ಮೊದಲ ಡೋಸ್ ಮತ್ತು 4 ,81 ,823 ಜನರಿಗೆ ಎರಡನೇ ಡೋಸ್ ನೀಡಲಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಮಾಹಿತಿ ನೀಡಿದೆ.

## ಚೀನಾ ಜಾಗತಿಕವಾಗಿ 2 ಬಿಲಿಯನ್ ಡೋಸ್ ಕೋವಿಡ್ ಲಸಿಕೆ ಪೂರೈಸುವುದಾಗಿ ಭರವಸೆ ನೀಡಿದೆ



* ಚೀನಾ ದೇಶವು ಈ ವರ್ಷ ಜಾಗತಿಕವಾಗಿ '2' ಬಿಲಿಯನ್ ಡೋಸ್ ಕೋವಿಡ್ 19 ಲಸಿಕೆ ಪೂರೈಕೆ ಮಾಡುವದಾಗಿ ಚೀನಾ ಅಧ್ಯಕ್ಷ ಕ್ಸಿ ಜಿನ್ ಪಿಂಗ್ ಅವರು ಭರವಸೆಯನ್ನು ನೀಡಿದ್ದಾರೆ, ಹಾಗೂ ಕೋವಾಕ್ಸಿನ್ ಲಸಿಕೆಗೆ 100 ಮಿಲಿಯನ್ ಅಮೆರಿಕನ್ ಡಾಲರ್ ದೇಣಿಗೆಯನ್ನು ನೀಡುವದಾಗಿ ತಿಳಿಸಿದೆ.
* ಈ ಹಿಂದೆ 2019 ರ ಡಿಸೆಂಬರ್ ನಲ್ಲಿ ಮೊದಲ ಬಾರಿಗೆ ಕೊರೋನಾ (ಕೋವಿಡ್ 19) ಪ್ರಕರಣ ಪತ್ತೆಯಾದ ವುಹಾನ್ ಕೇಂದ್ರ ಸೇರಿ ಚೀನಾದ ಅನೇಕ ಪ್ರದೇಶಗಳಲ್ಲಿ ಇದೀಗ 1285 ರೋಗಿಗಳು ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಮಾಹಿತಿ ನೀಡಿದೆ.
* ಚೀನಾ ವಿದೇಶಾಂಗ ಸಚಿವಾಲಯ ನೀಡಿರುವ ಮಾಹಿತಿಯ ಪ್ರಕಾರ 10 ಮಿಲಿಯನ್ ಕೋವಾಕ್ಸಿನ್ ಸೇರಿ 750 ಮಿಲಿಯನ್ ಡೋಸ್ ಲಸಿಕೆಯನ್ನು ವಿವಿಧ ದೇಶಗಳಿಗೆ ಪುರಕೆ ಮಾಡುವದಾಗಿ ತಿಳಿಸಿದೆ.

## ಕರ್ನಾಟಕ ರಾಜ್ಯದ ಮುಖ್ಯಮಂತ್ರಿ ಪ್ರಧಾನ ಕಾರ್ಯದರ್ಶಿಯಾಗಿ ಮಂಜುನಾಥ್ ಪ್ರಸಾದ್ ನೇಮಕ



* ಪ್ರಸ್ತುತ ಕರ್ನಾಟಕ ರಾಜ್ಯದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಪ್ರಧಾನ ಕಾರ್ಯದರ್ಶಿಯಾಗಿ ಮಂಜುನಾಥ್ ಪ್ರಸಾದ್ ಅವರನ್ನು ನೇಮಕ ಮಾಡಲಾಗಿದೆ.
* ಈ ಹಿಂದೆ ಮಂಜುನಾಥ್ ಪ್ರಸಾದ್ ಅವರು ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯಾಗಿದ್ದರು.
* ಈ ಹಿಂದೆ ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿರುವ ಸಮಯದಲ್ಲಿ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿ ಇ.ವಿ. ರಮಣ ರೆಡ್ಡಿ ಅವರು ಕಾರ್ಯ ನಿರ್ವಹಿಸುತ್ತಿದ್ದರು, ಇದೀಗ ಅವರನ್ನು ಕೈಗಾರಿಕೆ ಇಲಾಖೆಗೆ ವರ್ಗಾವಣೆ ಮಾಡಿದೆ ಎಂದು ಸರ್ಕಾರ ತಿಳಿಸಿದೆ.

# Current affairs of August 2021 from KPSC Vaani

## ಝೂೋಯೋಲೋಜಿಕಲ್ ಸರ್ವೇ ಆಫ್ ಇಂಡಿಯಾದ 1 ನೇ ಮಹಿಳಾ ನಿರ್ದೇಶಕಿಯಾಗಿ ಧೃತಿ ಬ್ಯಾನರ್ಜಿ ನೇಮಕ



* ಪ್ರಸ್ತುತ ಭಾರತ ಸರ್ಕಾರವು ಝೂೋಯೋಲೋಜಿಕಲ್ ಸರ್ವೇ ಆಫ್ ಇಂಡಿಯಾ (ZSI)ದ ಹೊಸ ನಿರ್ದೇಶಕರಾಗಿ ಡಾ.ಧೃತಿ ಬ್ಯಾನರ್ಜಿಯವರ ನೇಮಕ ಮಾಡಿದೆ.
*ಪ್ರಸ್ತುತ ಧೃತಿ ಬ್ಯಾನರ್ಜಿ ಅವರು ಉತ್ತಮ ವಿಜ್ಞಾನಿಯಾಗಿದ್ದಾರೆ, ಇವರು ಪ್ರಾಣಿಶಾಸ್ತ್ರ, ಜೀವಿವರ್ಗೀಕರಣ ಶಾಸ್ತ್ರ, ಹಾಗೂ ರೂಪವಿಜ್ಞಾನದ ಜೊತೆಗೆ ಆಣ್ವಿಕ ವ್ಯವಸ್ಥೆಯಲ್ಲಿ ಸಂಶೋಧನೆ ನಡೆಸುತ್ತಿದ್ದರು.
* ಧೃತಿ ಬ್ಯಾನರ್ಜಿ ಅವರು 2012 ರಿಂದ ZSI ನ ಡಿಜಿಟಲ್ ಸೀಕ್ವೆನ್ಸ್ ಮಾಹಿತಿ ಯೋಜನೆಯ ಸಂಯೋಜಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.
* 1916 ರ ಜುಲೈ ನಲ್ಲಿ ಝೂೋಯೋಲೋಜಿಕಲ್ ಸರ್ವೆ ಆಫ್ ಇಂಡಿಯಾವನ್ನು ಸ್ಥಾಪನೆ ಮಾಡಲಾಗಿದೆ, ಹಾಗೂ ಇದು ತನ್ನ ಪ್ರಧಾನ ಕಛೇರಿಯು ಕೋಲ್ಕತ್ತದಲ್ಲಿ ಹೊಂದಿದೆ.
* ZSI ಒಟ್ಟು 16 ಪ್ರಾದೇಶಿಕ ಕೇಂದ್ರಗಳನ್ನು ಹೊಂದಿದೆ, ಇದು ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತದೆ.
* ಈ ಝೂೋಯೋಲೋಜಿಕಲ್ ಸರ್ವೆ ಆಫ್ ಇಂಡಿಯಾ ಭಾರತದಲ್ಲಿನ ಪ್ರಾಣಿಗಳ ಸಮೀಕ್ಷೆ, ಸಂಶೋಧನೆಯ ಅಧ್ಯಯನ ಮಾಡುತ್ತದೆ.
* ಪ್ರಸ್ತುತ 1949 ರಿಂದ ZSI ನಲ್ಲಿ ಮಹಿಳಾ ವಿಜ್ಞಾನಿಗಳ ನೇಮಕ ಮಾಡುವ ಪ್ರಕ್ರಿಯೇ ಆರಂಭವಾಗಿದೆ, ಮೊದಲ ಮಹಿಳಾ ನಿರ್ದೇಶಕಿಯಾಗಿ ಮೀರಾ ಮನ್ಸುಖಾನಿ ಅವರನ್ನು ನೇಮಕ ಮಾಡಲಾಗಿತ್ತು.

## ಆಹಾರ ವಿತರಣೆಗಾಗಿ ಇ ಸೈಕಲ್‌ಗಳು



* ಹೈದರಾಬಾದ್‌ನಲ್ಲಿ ಫುಡ್ ಡೆಲಿವರಿ ಪ್ಲಾಟ್‌ಫಾರ್ಮ್ ಸ್ವಿಗ್ಗಿ ಮತ್ತು ಹೀರೋ ಲೆಕ್ಟ್ರೋ ಕಾರ್ಗೋ ಜೊತೆಯಾಗಿ ಎಲೆಕ್ಟ್ರಿಕ್ ಸೈಕಲ್‌ಗಳನ್ನು ಪ್ರಾರಂಭಿಸುತ್ತಿದೆ.
* ಹೈದರಾಬಾದ್ ನಲ್ಲಿ ಇ ಸೈಕಲ್‌ಗಳನ್ನು 2021 ರ ಆಗಸ್ಟ್ ನಲ್ಲಿ ಪ್ರಾಯೋಗಿಕವಾಗಿ ಬಿಡುಗಡೆ ಮಾಡಲಾಗುವುದು ಎಂದು ತಿಳಿಸಿದೆ.
* ಪ್ರಸ್ತುತ ಈ ಇ ಸೈಕಲ್ ಗಳು ಕೈಗೆಟುಕುವವು ಬೆಳೆಗಳಲ್ಲಿ ಹಾಗೂ ಇಂಗಾಲದ ಹೆಜ್ಜೆಗುರುತನ್ನು ಕಡಿಮೆ ಮಾಡಲು ಸಹಾಯ ಮಾಡಲಿವೆ ಎಂದು ತಿಳಿಸಿದ್ದಾರೆ.
* ಪ್ರಸ್ತುತ ಸ್ವಿಗ್ಗಿ ಯನ್ನು 2014 ರಲ್ಲಿ ಸ್ಥಾಪನೆ ಮಾಡಲಾಗಿದೆ, ಇದೀಗ ಇದು ಭಾರತದ ಅತಿದೊಡ್ಡ ಆನ್‌ಲೈನ್ ಆಹಾರ ವಿತರಣಾ ವೇದಿಕೆಯಾಗಿದೆ. ಇದು100 ಕ್ಕೂ ಅಧಿಕ ಭಾರತೀಯ ನಗರಗಳಲ್ಲಿ ಕಾರ್ಯನಿರ್ವಹಿಸುತ್ತದೆ.


## '2' ಡೋಸ್ ಲಸಿಕೆ ಹಾಕಿದ ಜನರಿಗೆ ಪ್ರಯಾಣಕ್ಕಾಗಿ ಆರ್‌ಟಿ ಪಿಸಿಆರ್ ವರದಿ ಅಗತ್ಯವಿಲ್ಲ



* ಕೇಂದ್ರ ಸರ್ಕಾರವು ಕೋವಿಡ್ 19 ಲಸಿಕೆಗಳನ್ನು '2' ಡೋಸ್ ಪಡೆದ ಜನರು ರಾಜ್ಯಾದ್ಯಂತ ಸಂಚರಿಸಲು ಆರ್‌ಟಿ ಪಿಸಿಆರ್ ವರದಿ ಕಡ್ಡಾಯವಲ್ಲ ಎಂದು ಅಧಿಸೂಚನೆಯನ್ನು ಹೊರಡಿಸಿದೆ.
* ರಾಷ್ಟ್ರೀಯ ಇಮ್ಯೂನೈಸೇಶನ್ ಆನ್ ನ್ಯಾಷನಲ್ ಟೆಕ್ನಿಕಲ್ ಅಡ್ವೈಸರಿ ಗ್ರೂಪ್ (NTAGI) ಪ್ರಕಾರ ಒಬ್ಬ ವ್ಯಕ್ತಿಗೆ ಸಂಪೂರ್ಣ ಲಸಿಕೆ ಹಾಕಿದ್ದರೆ, ಅವರ ಪ್ರಯಾಣಕ್ಕಾಗಿ RT PCR ಪರೀಕ್ಷಾ ವರದಿ ಅಗತ್ಯವಿಲ್ಲ ಎಂದು ತಿಳಿಸಿದೆ.
* ತಮಿಳುನಾಡು ಸರ್ಕಾರವು ನೆಗೆಟಿವ್ ಆರ್‌ಟಿ ಪಿಸಿಆರ್ ಪರೀಕ್ಷಾ ವರದಿ ಹಾಗೂ ಕೇರಳದಿಂದ ರಾಜ್ಯಕ್ಕೆ ಬರುವ ಜನರಿಗೆ ಸಂಪೂರ್ಣ ಕೋವಿಡ್ 19 ಲಸಿಕೆ (ಎರಡು ಡೋಸ್‌ಗಳೊಂದಿಗೆ) ಯ ಪ್ರಮಾಣಪತ್ರವನ್ನು ಕಡ್ಡಾಯಗೊಳಿಸಿದೆ.
* ಪ್ರಸ್ತುತ ಕರ್ನಾಟಕ ರಾಜ್ಯವು ಕೇರಳ ಹಾಗೂ ಮಹಾರಾಷ್ಟ್ರ ರಾಜ್ಯದಿಂದ ಬರುವ ಜನರಿಗೆ RT PCR ನೆಗೆಟಿವ್ ವರದಿಗಳನ್ನು ಕಡ್ಡಾಯಗೊಳಿಸಿದೆ.

# 07-08-2021

## ಟೋಕಿಯೋ ಒಲಿಂಪಿಕ್ಸ್ ಇಟಲಿ, ಜಮೈಕಾಗೆ ರಿಲೇ ಪದಕ



* ಈ ಬಾರಿಯ ಟೋಕಿಯೊ ಒಲಿಂಪಿಕ್ಸ್ ನ ಪುರುಷರ 4x100 ಮೀಟರ್ಸ್ ರಿಲೇಯ ಅಂತಿಮ ಲ್ಯಾಪ್‌ನಲ್ಲಿ ಫಿಲಿಪ್ಪೊ ತೊರ್ಟು ಅವರು ಇಟಲಿಗೆ ಚಿನ್ನದ ಪದಕ ಗೆದ್ದು ನೀಡಿದರು. ಬ್ರಿಟನ್ ಬೆಳ್ಳಿ ಪದಕವನ್ನು ಜಯಿಸಿದೆ. ಕೆನಡಾ ಕಂಚಿನ ಪದಕವನ್ನು ಜಯಿಸಿದೆ.
* ಮಹಿಳಾವಿಭಾಗದ 4x100 ಮೀಟರ್ಸ್ ರಿಲೆಯಲ್ಲಿ ಚಿನ್ನದ ಪದಕವನ್ನು ಜಮೈಕಾ ದೇಶ ಜಯಿಸಿದೆ. ಅಮೆರಿಕ ದೇಶವು ಬೆಳ್ಳಿ ಪದಕವನ್ನು ಜಯಿಸಿದೆ. ಬ್ರಿಟನ್ ದೇಶವು ಕಂಚಿನ ಪದಕವನ್ನು ಜಯಿಸಿದೆ.
* ಮಹಿಳಾ ವಿಭಾಗದ 1500 ಮೀ. ಓಟದಲ್ಲಿ ಕೆನ್ಯಾದ ಫೇತ್ ಕಿಪ್ಯೆಗನ್ ಅವರು ಚಿನ್ನವನ್ನು ಜಯಿಸಿದ್ದಾರೆ. ಬ್ರಿಟನ್ ನ ಲಾರಾ ಮುಯಿರ್

ಅವರು ಬೆಳ್ಳಿ ಜಯಿಸಿದ್ದಾರೆ. ನೆದರ್ಲೆಂಡ್ಸ್‌ನ ಸಿಫಾನ್ ಹಸನ್ ಅವರು ಕಂಚಿನ ಪದಕವನ್ನು ಜಯಿಸಿದ್ದಾರೆ.
* ಮಹಿಳಾ ವಿಭಾಗದ 400 ಮೀ. ಓಟದಲ್ಲಿ ಬಹಾಮದ ಶಾನೆ ಮಿಲ್ಲರ್ ಅವರು ಚಿನ್ನವನ್ನು ಜಯಿಸಿದ್ದಾರೆ. ಡೊಮಿನಿಕಾ ರಿಪಬ್ಲಿಕ್‌ನ ಮರಿಲೀಡಿ ಪೌಲಿನೊ ಅವರು ಬೆಳ್ಳಿ ಪದಕವನ್ನು ಜಯಿಸಿದ್ದಾರೆ. ಅಮೆರಿಕದ ಅಲಿಸನ್ ಫೆಲಿಕ್ಸ್ ಕಂಚಿನ ಪದಕವನ್ನು ಜಯಿಸಿದ್ದಾರೆ.

## ಟೋಕಿಯೋ ಒಲಿಂಪಿಕ್ಸ್ ನ ಮಹಿಳಾ ಫುಟ್‌ಬಾಲ್ ಪಂದ್ಯದಲ್ಲಿ ಚಿನ್ನ ಜಯಿಸಿದ ಕೆನಡಾ



* ಟೋಕಿಯೋ ಒಲಿಂಪಿಕ್ಸ್ ನ ಮಹಿಳಾ ಫುಟ್‌ಬಾಲ್ ಪಂದ್ಯದಲ್ಲಿ ಕೆನಡಾ ದೇಶದ ಮಹಿಳಾ ತಂಡವು ಸ್ವೀಡನ್ ದೇಶದ ಮಹಿಳಾ ತಂಡದ ವಿರುದ್ಧ ಗೆದ್ದು ಚಿನ್ನದ ಪದಕವನ್ನು ಪಡೆದುಕೊಂಡಿದೆ.
* ಪ್ರಸ್ತುತ ಕೆನಡಾ ಮತ್ತು ಸ್ವೀಡನ್ ದೇಶಗಳ ಉಭಯ ತಂಡಗಳು 1 1 ಗೋಲುಗಳಿಂದ ಸಮಬಲ ಪಡೆದುಕೊಂಡವು, ನಂತರ ವಿಜೇತರನ್ನು ಘೋಷಿಸಲು ಪೆನಾಲ್ಟಿ ಶೂಟೌಟ್ ಮೊರೆ ಹೋಗಲಾಯಿತು, ಇದರಲ್ಲಿ ಕೆನಡಾ ತಂಡವು ಜಯಿಸಿತು.
* ಅಮೆರಿಕ ಮಹಿಳಾ ಫುಟ್‌ಬಾಲ್ ತಂಡವು ಕಂಚಿನ ಪದಕವನ್ನು ಪಡೆದುಕೊಂಡಿದೆ.

## ಟೋಕಿಯೋ ಒಲಿಂಪಿಕ್ಸ್ ನ ಬೀಚ್ ವಾಲಿಬಾಲ್‌ನಲ್ಲಿ ಅಮೆರಿಕಕ್ಕೆ ಚಿನ್ನ



* ಅಮೇರಿಕ ದೇಶವು ಅಪ್ರಿಲ್ ರಾಸ್ ಹಾಗೂ ಅಲಿಕ್ಸ್ ಕ್ಲೈನ್‌ಮನ್ ಟೋಕಿಯೋ ಒಲಿಂಪಿಕ್ಸ್‌ನ ಮಹಿಳಾ ಬೀಚ್ ವಾಲಿಬಾಲ್‌ನಲ್ಲಿ ಚಿನ್ನದ ಪದಕವನ್ನು ಜಯಿಸಿದೆ. ಆಸ್ಟ್ರೇಲಿಯಾ ತಂಡವು ಬೆಳ್ಳಿ ಪದಕವನ್ನು ಜಯಿಸಿದೆ. ಸ್ವಿಟ್ಜರ್ಲೆಂಡ್‌ನ ತಂಡವು ಕಂಚಿನ ಪದಕವನ್ನು ಜಯಿಸಿದೆ.
* ಈ ಹಿಂದೆ ಆಸ್ಟ್ರೇಲಿಯಾ ತಂಡವು 2000 ರ ಸಿಡ್ನಿ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕವನ್ನು ಜಯಿಸಿತ್ತು.

## ಟೋಕಿಯೋ ಒಲಿಂಪಿಕ್ಸ್ ನ ಬಾಕ್ಸಿಂಗ್ ವಿಭಾಗದಲ್ಲಿ ಕ್ಯೂಬಾದ ಲಾ ಕ್ರೂಜ್‌ಗೆ ಚಿನ್ನ



* ಟೋಕಿಯೊ ಒಲಿಂಪಿಕ್ಸ್ ನಲ್ಲಿ ಬಾಕ್ಸಿಂಗ್ ವಿಭಾಗದಲ್ಲಿ ಕ್ಯೂಬಾದ ಲಾ ಕ್ರೂಜ್ ಅವರು ಚಿನ್ನ ಪದಕವನ್ನು ಜಯಿಸಿದ್ದಾರೆ, ಈ ಹಿಂದೆ ಇವರ ಮೇಲೆ ದರೋಡೆಕೋರರಿಂದ ಗುಂಡಿನ ದಾಳಿ ನಡೆದಿತ್ತು.
* ಟೋಕಿಯೊ ಒಲಿಂಪಿಕ್ಸ್ ನ ಬಾಕ್ಸಿಂಗ್‌ನಲ್ಲಿ ಕ್ಯೂಬಾಗೆ ಇದು 3 ನೇ ಚಿನ್ನದ ಪದಕವನ್ನು ಪಡೆದುಕೊಂಡಿದೆ.
* ಈ ಹಿಂದೆ ಸಶಸ್ತ್ರ ದರೋಡೆಕೋರರು ಲಾ ಕ್ರೂಜ್ ಅವರ ಮೇಲೆ 2014 ರಲ್ಲಿ ಗುಂಡಿನ ದಾಳಿಯನ್ನು ನಡೆಸಿದ್ದರು, ಇದಾದ ನಂತರ 2016 ರಲ್ಲಿ ರಿಯೊ ಕೂಟದಲ್ಲಿ ಲಾ ಕ್ರೂಜ್ ಅವರು ಚಿನ್ನ ಜಯಿಸಿದ್ದರು.

## ಖೇಲ್ ರತ್ನ ಪ್ರಶಸ್ತಿಗೆ ಮೇಜರ್ ಧ್ಯಾನ್ ಚಂದ್ ಖೇಲ್ ರತ್ನ ಪ್ರಶಸ್ತಿ ಎಂದು ಮರುನಾಮಕರಣ



* 2020 ರ ಟೋಕಿಯೊ ಒಲಿಂಪಿಕ್ಸ್'ನಲ್ಲಿ ಭಾರತದ ಪುರುಷರ ಹಾಕಿ ತಂಡವು ಸುಮಾರು 41 ವರ್ಷಗಳ ನಂತರ ಭಾರತದ ರಾಷ್ಟ್ರೀಯ ಕ್ರೀಡೆ ಹಾಕಿಯಲ್ಲಿ ದಾಖಲೆಯನ್ನು ನಿರ್ಮಿಸಿದೆ, ಕಂಚಿನ ಪದಕವನ್ನು ಜಯಿಸಿದೆ.
* ಭಾರತೀಯ ಮಹಿಳಾ ಹಾಕಿ ತಂಡವು ಕಂಚಿನ ಪದಕವನ್ನು ಪಡೆಯುವಲ್ಲಿ ಬ್ರಿಟನ್ ತಂಡದ ವಿರುದ್ಧ ಸೋಲು ಅನುಭವಿಸಿ 4ನೇ ಸ್ಥಾನವನ್ನು ಪಡೆದುಕೊಂಡಿದೆ.
* ಈ ಹಿಂದೆ ಭಾರತದ ಹಾಕಿ ತಂಡವು 1980 ರಲ್ಲಿ ಚಿನ್ನದ ಪದಕ ಜಯಿಸಿತ್ತು.
* ಒಲಿಂಪಿಕ್ ನಲ್ಲಿ ಭಾರತ ಹಾಕಿ ತಂಡವು ಇಲ್ಲಿಯವರೆಗೆ '6' ಬಾರಿ ಚಿನ್ನದ ಪದಕವನ್ನು ಜಯಿಸಿದೆ.
* ಭಾರತೀಯ ಪ್ರಧಾನ ಮಂತ್ರಿ ಮೋದಿ ಅವರು ಇದೀಗ ಖೇಲ್ ರತ್ನ ಪ್ರಶಸ್ತಿಯನ್ನು ಮೇಜರ್ ಧ್ಯಾನ್ ಚಂದ್ ಖೇಲ್ ರತ್ನ ಪ್ರಶಸ್ತಿಯನ್ನು ಎಂದು ಮರು ನಾಮಕರಣ ಮಾಡಿ ಆದೇಶ ಹೊರಡಿಸಿದೆ.

## ಗ್ರಾಮೀಣ ಡಿಜಿಟಲ್ ಸಾಕ್ಷರತಾ ಅಭಿಯಾನ ಯೋಜನೆ




* ಪ್ರಧಾನ ಮಂತ್ರಿ ಗ್ರಾಮೀಣ ಡಿಜಿಟಲ್ ಸಾಕ್ಷರತಾ ಅಭಿಯಾನ ಯೋಜನೆಯಡಿ 2021 ರ ಆಗಸ್ಟ್. 2 ರ ಸಮಯಕ್ಕೆ ಸರಿಸುಮಾರು 5 ಕೋಟಿ ಫಲಾನುಭವಿಗಳನ್ನು ನೋಂದಾಯಿಸಲಾಗಿದೆ, ಹಾಗೂ 4 ಕೋಟಿ

ಫಲಾನುಭವಿಗಳಿಗೆ ತರಬೇತಿ ನೀಡಲಾಗಿದೆ ಎಂದು ಇದೇ ಆಗಸ್ಟ್. 7 ರಂದು ಸರ್ಕಾರ ಘೋಷಣೆ ಮಾಡಿದೆ.

* ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಸ್ಮೃತಿ ಇರಾನಿ ಮಾಹಿತಿ ನೀಡಿರುವ ಪ್ರಕಾರ 2 ಕೋಟಿಗೂ ಹೆಚ್ಚು ಮಹಿಳಾ ಫಲಾನುಭವಿಗಳು ನೋಂದಾಯಿಸಿಕೊಂಡಿದ್ದಾರೆ ಎಂದು ತಿಳಿಸಿದ್ದಾರೆ.

* ಪ್ರಸ್ತುತ ಈ ಯೋಜನೆಯನ್ನು ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ 6 ಕೋಟಿ ಜನರನ್ನು ಡಿಜಿಟಲ್ ಸಾಕ್ಷರರನ್ನಾಗಿಸಲು ಪ್ರಾರಂಭಿಸಲಾಗಿದೆ.

* ಭಾರತದ ಗ್ರಾಮೀಣ ಪ್ರದೇಶಗಳಲ್ಲಿ ಮಾತ್ರ ಈ ಯೋಜನೆಯು ಅನ್ವಯವಾಗುತ್ತದೆ.

## ವಿಶ್ವದ ಮೊದಲ ಅಣು ಬಾಂಬ್ ಸ್ಫೋಟದ 76 ನೇ ವಾರ್ಷಿಕೋತ್ಸವವನ್ನು ಆಚರಣೆ



* ಜಪಾನ್ ದೇಶದ ಹಿರೋಷಿಮಾ ಮತ್ತು ನಾಗಸಾಕಿಯ ಮೇಲೆ ನಡೆದ ವಿಶ್ವದ ಮೊದಲ ಪರಮಾಣು ಬಾಂಬ್ ಸ್ಫೋಟದ 76 ನೇ ವಾರ್ಷಿಕೋತ್ಸವದ ನೆನಪಿಗಾಗಿ ಜಪಾನ್ ಪ್ರಧಾನಮಂತ್ರಿ ಯೋಶಿಹಿಡೆ ಸುಗಾ ಅವರು ಸ್ಮಾರಕಕ್ಕೆ ಉಪಸ್ಥಿತರಿದ್ದರು, ಹಾಗೂ ಈ ಸ್ಫೋಟದ ವಾರ್ಷಿಕೋತ್ಸವವನ್ನು ಒಂದು ನಿಮಿಷ ಮೌನವಾಗಿ ಆಚರಣೆ ಮಾಡಿದರು.

* ಈ ಹಿಂದೆ 1945 ರ ಆಗಸ್ಟ್ 6 ಮತ್ತು ಆಗಸ್ಟ್ 9 ರಂದು ಯುನೈಟೆಡ್ ಸ್ಟೇಟ್ಸ್ '2' ಪರಮಾಣು ಬಾಂಬ್ ಸ್ಫೋಟಗಳನ್ನು ಜಪಾನ್ ದೇಶದ ನಗರಗಳಾಗಿರುವ ಹಿರೋಶಿಮಾ ಮತ್ತು ನಾಗಸಾಕಿ ಮೇಲೆ ಹಾಕಿತ್ತು, ಈ ಬಾಂಬ್ ಸ್ಫೋಟದಲ್ಲಿ ಸರಿ ಸುಮಾರು 129,000 ದಿಂದ 226,000 ಜನರನ್ನು ಪ್ರಾಣವನ್ನು ಬಿಟ್ಟರು.

* ಯುನೈಟೆಡ್ ಸ್ಟೇಟ್ಸ್ ಸೇನಾಪಡೆಯ 1945 ರ ಜುಲೈ ತಿಂಗಳಿನಲ್ಲಿ ಪಾಟ್ಸ್‌ಡ್ಯಾಮ್ ಘೋಷಣೆ ಮಾಡಿ ಜಪಾನಿನ ಸಶಸ್ತ್ರ ಪಡೆಗಳ ಬೇಷರತ್ ಶರಣಾಗತಿಯಾಗಲು ಕರೆ ನೀಡಿದರು, ಆದರೆ ಜಪಾನ್ ದೇಶದ ಅಲ್ಟಿಮೇಟಮ್ ಇದನ್ನು ನಿರ್ಲಕ್ಷ ಮಾಡಿತ್ತು ಇದರಿಂದಾಗಿ ಈ ಬಾಂಬ ಸ್ಫೋಟ ನಡೆಯಿತು.

* ವಿಶ್ವದ ಮೊದಲ ಪರಮಾಣು ಬಾಂಬ್‌ನ್ನು 'ಲಿಟಲ್ ಬಾಯ್' ಎಂದು ಕರೆಯುತ್ತಿದ್ದರು.

* ಯುನೈಟೆಡ್ ಸ್ಟೇಟ್ಸ್, ಜಪಾನ್ ದೇಶದ ನೈಋತ್ಯ ನಗರವಾಗಿರುವ ಹಿರೋಶಿಮಾ ಮೇಲೆ ಹಾಕಿತ್ತು ಆ ಸಮಯದಲ್ಲಿ ತಕ್ಷಣವೇ 80,000 ಜನರು ಬಲಿಯಾದರು. ಮತ್ತೇ ಆಗಸ್ಟ್. 9 ರಂದು ಯುನೈಟೆಡ್ ಸ್ಟೇಟ್ಸ್ 'ಫ್ಯಾಟ್ ಮ್ಯಾನ್' ಎಂಬ 2 ನೇ ಬಾಂಬ್ ನ್ನು ನಾಗಸಾಕಿಯ ಮೇಲೆ ಹಾಕಿತ್ತು ಆ ಸಮಯದಲ್ಲಿ 74,000 ಜನರು ಬಲಿಯಾದರು, ಈ ಬಾಂಬ್ ದಾಳಿಯ ಪರಿಣಾಮವಾಗಿ ಜಪಾನ್ ದೇಶ ಶರಣಾಗಿ 2ನೇ ಮಹಾಯುದ್ಧ ಕೊನೆಗೊಳಿಸಿತ್ತು.

## 'PM DAKSH' ಪೋರ್ಟಲ್ ಹಾಗೂ ಮೊಬೈಲ್ ಆಪ್ ಆರಂಭ




* 2021 ರ ಆಗಸ್ಟ್. 7 ರಂದು ದೆಹಲಿಯ ಡಾ.ಅಂಬೇಡ್ಕರ್ ಅಂತರಾಷ್ಟ್ರೀಯ ಕೇಂದ್ರದಲ್ಲಿನ ನಳಂದ ಸಭಾಗಣದಲ್ಲಿ ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವರಾಗಿರುವ ಡಾ. ವೀರೇಂದ್ರ ಕುಮಾರ್ ಅವರು 'PM DAKSH' ಪೋರ್ಟಲ್ ಮತ್ತು 'PM DAKSH' ಮೊಬೈಲ್ ಆಪ್'ನ್ನು ಆರಂಭಿಸಿದ್ದಾರೆ.

* ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯವು ರಾಷ್ಟ್ರೀಯ ಇ ಆಡಳಿತ ವಿಭಾಗದ ಸಹಯೋಗದೊಂದಿಗೆ PM DAKSH ಪೋರ್ಟಲ್ ಹಾಗೂ ಮೊಬೈಲ್ ಆಪ್'ನ್ನು ಅಭಿವೃದ್ಧಿಪಡಿಸಿದೆ, ಈ ಆಪ್ ಹಿಂದುಳಿದ ವರ್ಗಗಳು, ಪರಿಶಿಷ್ಟ ಜಾತಿಗಳು ಹಾಗೂ ಸಫಾಯಿ ಕರಮಚಾರಿಗಳಿಗೆ ಕೌಶಲ್ಯ ಅಭಿವೃದ್ಧಿ ಯೋಜನೆಗಳನ್ನು ಪ್ರವೇಶಿಸಲು ಆಪ್'ನ್ನು ಅಭಿವೃದ್ಧಿಪಡಿಸಲಾಗಿದೆ ಎಂದು ತಿಳಿಸಿದ್ದಾರೆ.

## 7 ನೇ ರಾಷ್ಟ್ರೀಯ ಕೈಮಗ್ಗ ದಿನ ಆಚರಣೆ




* ಆಗಸ್ಟ್. 7 ರಂದು ಕೇಂದ್ರ ಜವಳಿ ಸಚಿವಾಲಯವು 7 ನೇ ರಾಷ್ಟ್ರೀಯ ಕೈಮಗ್ಗ ದಿನವನ್ನು ಆಯೋಜಿಸಲು ಸಿದ್ಧವಾಗಿದೆ.

* ಪ್ರಧಾನಿ ನರೇಂದ್ರ ಮೋದಿ ಅವರು ಮೊದಲ ರಾಷ್ಟ್ರೀಯ ಕೈಮಗ್ಗ ದಿನವನ್ನು 2015 ರ ಆಗಸ್ಟ್. 7 ರಂದು ಚೆನ್ನೈನಲ್ಲಿ ಉದ್ಘಾಟಣೆ ಮಾಡಿದ್ದಾರೆ.

* ಈ ಕೈಮಗ್ಗ ದಿನದ ಸಂದರ್ಭದಲ್ಲಿ ನೇಕಾರಿಕೆ ಸಮುದಾಯವನ್ನು ಭಾರತದ ಸಾಮಾಜಿಕ ಆರ್ಥಿಕ ಅಭಿವೃದ್ಧಿಯಲ್ಲಿನ ಅವರ ಕೊಡುಗೆಗಳನ್ನೂ ಗೌರವಿಸಲಾಗುತ್ತದೆ, ಹಾಗೂ 3ಕೈಮಗ್ಗ ಕರಕುಶಲ ಗ್ರಾಮಗಳನ್ನು ಸ್ಥಾಪನೆ ಮಾಡಲಾಗುತ್ತದೆ. ಕೇರಳದ ತಿರುವನಂತಪುರಂನಲ್ಲಿ ಕೋವಲಂ ಗ್ರಾಮ. ಅಸ್ಸಾಂನ ಗೋಲಘಾಟ್ ಜಿಲ್ಲೆಯ ಮೊಹಪರ ಗ್ರಾಮ. ಶ್ರೀನಗರದ ಬುದ್ಗಾಂನಲ್ಲಿ ಕಣಿಹಾಮ ಗ್ರಾಮ.

* ಪ್ರಸ್ತುತ ಕೇಂದ್ರ ಜವಳಿ ಸಚಿವಾಲಯವು ರಾಜ್ಯ ಸರ್ಕಾರಗಳ ಸಹಭಾಗಿತ್ವದಲ್ಲಿ, 3 ಕೈಮಗ್ಗ ಕರಕುಶಲ ಗ್ರಾಮಗಳನ್ನು ಸ್ಥಾಪನೆ ಮಾಡಲಿದೆ.

* 1905 ರ ಆಗಸ್ಟ್. 7 ರ ಕೈಮಗ್ಗದ ಸ್ವದೇಶಿ ಚಳುವಳಿಯನ್ನು ಪ್ರಾರಂಭವಾಗಿದೆ, ಹಾಗೂ ಈ ದಿನದಂದು ಭಾರತದಾದ್ಯಂತ ಇರುವ ಕೈಮಗ್ಗ ನೇಕಾರರು ಹಾಗೂ ಕುಶಲಕರ್ಮಿಗಳಿಗೆ ಗೌರವ ನೀಡಲು ಆಚರಣೆ ಮಾಡಲಾಗುತ್ತದೆ.

* ಭಾರತದ ಪ್ರತಿಯೊಂದು ರಾಜ್ಯವು ವಿಭಿನ್ನ ನೇಯ್ಗೆಯಲ್ಲಿ ಪರಿಣತಿ ಹೊಂದಿದೆ. ಅಸ್ಸಾಂ ಕಮ್ರುಪ್ ಹತ್ತಿ ಮತ್ತು ಎರಿ ರೇಷ್ಮೆಗೆ ಪರಿಣತಿಯಾಗಿದೆ. ನಾಗಾಲ್ಯಾಂಡ್ ನ ದಿಮಾಪುರ ಹಾಗೂ ಫೆಕ್ ಪಟ್ಟಣಗಳು ಬ್ಯಾಕ್‌ಸ್ಟ್ರಾಪ್ ಲೂಮ್ ಜವಳಿಗಳಿಗೆ ಹೆಸರುವಾಸಿಯಾಗಿದೆ. ಆಂಧ್ರಪ್ರದೇಶ ವೆಂಕಟಗಿರಿಯ ಉತ್ತಮ ಹತ್ತಿ ಮತ್ತು ರೇಷ್ಮೆ ನೇಯ್ಗೆಗೆ ಹೆಸರುವಾಸಿಯಾಗಿದೆ. ಒಡಿಶಾ ಉತ್ತಮ ಹತ್ತಿ ಮತ್ತು ರೇಷ್ಮೆಯಲ್ಲಿ ಮಣಿಯಬಂಧ ವೆಫ್ಟ ಇಕಾಟ್‌ಗೆ ಹೆಸರುವಾಸಿಯಾಗಿದೆ.

### ಟೋಕಿಯೋ ಒಲಿಂಪಿಕ್ ನಲ್ಲಿ ಭಾರತೀಯ ಮಹಿಳಾ ಹಾಕಿ ತಂಡಕ್ಕೆ ಸೋಲು



* ಈ ಬಾರಿಯ ಟೋಕಿಯೊ ಒಲಂಪಿಕ್ಸ್ ಟೂರ್ನಿಯಲ್ಲಿ ಭಾರತೀಯ ಮಹಿಳಾ ಹಾಕಿ ತಂಡವು ಪದಕ ಗೆಲುವಲ್ಲಿ ವಂಚಿತವಾಗಿದೆ, ಆದರೆ ಉತ್ತಮ ಪ್ರದರ್ಶವನ್ನು ನೀಡಿದೆ, ಇದಕ್ಕಾಗಿ ಹರಿಯಾಣ ಸರ್ಕಾರವು ಭಾರತ ಮಹಿಳಾ ಹಾಕಿ ತಂಡಕ್ಕೆ ಉಡುಗೊರೆ ಘೋಷಣೆ ಮಾಡಿದೆ.
* ಪ್ರಸ್ತುತ ಹರಿಯಾಣ ರಾಜ್ಯ ಸರ್ಕಾರವು ರಾಜ್ಯದ ಮಹಿಳಾ ಹಾಕಿ ತಂಡದ '9' ಆಟಗಾರರಿಗೆ ತಲಾ 50 ಲಕ್ಷ ನಗದು ಬಹುಮಾನ ನೀಡಲಿದೆ ಎಂದು ಮುಖ್ಯಮಂತ್ರಿ ಮನೋಹರ್ ಲಾಲ್ ಖಟ್ಟರ್ ಅವರು ತಿಳಿಸಿದ್ದಾರೆ.
* ಭಾರತೀಯ ಮಹಿಳಾ ಹಾಕಿ ತಂಡವು ಬ್ರಿಟನ್ ತಂಡದ ವಿರುದ್ಧ ಸೋಲು ಅನುಭವಿಸಿ ಕಂಚಿನ ಪದಕವನ್ನು ಪಡೆಯುವಲ್ಲಿ ವಿಫಲವಾಗಿದೆ, ಪ್ರಸ್ತುತ ಭಾರತ ಮಹಿಳಾ ಹಾಕಿತಂಡ 4 ನೇ ಸ್ಥಾನವನ್ನು ಪಡೆದುಕೊಂಡು ಒಲಂಪಿಕ್ಸ್ ಕ್ರೀಡಾಕೂಟದಿಂದ ಹೊರ ನಡೆದಿದೆ.

## 09-08-2021

### ಟೋಕಿಯೋ ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ನೀರಜ್ ಚೋಪ್ರಾಗೆ ಚಿನ್ನ



* ಪ್ರಸ್ತುತ ಟೋಕಿಯೋ ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಭಾರತದ ಜಾವೆಲಿನ್ ಥ್ರೋ ಅಥ್ಲೀಟ್ ನೀರಜ್ ಚೋಪ್ರಾ ಅವರು ಚಿನ್ನದ ಪದಕವನ್ನು ಜಯಿಸಿ ಇತಿಹಾಸ ಸೃಷ್ಟಿಸಿದ್ದಾರೆ.
* ನೀರಜ್ ಚೋಪ್ರಾ ಅವರು ಪುರುಷರ ಜಾವೆಲಿನ್ ಥ್ರೋ'ನಲ್ಲಿ 87.58 ಮೀ. ಎಸೆದು ದಾಖಲೆಯನ್ನು ನಿರ್ಮಿಸಿದ್ದಾರೆ ಇದರಿಂದಾಗಿ ಇವರಿಗೆ ಚಿನ್ನದ ಪದಕ ಲಭಿಸಿದೆ.
* ಹರಿಯಾಣ ಸಿಎಂ ಮನೋಹರ್ ಲಾಲ್ ಖಟ್ಟರ್ ಅವರು ಟೋಕಿಯೋ ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಭಾರತಕ್ಕೆ ಮೊದಲ ಚಿನ್ನದ ಪದಕ ಗೆದ್ದಿರುವ ನೀರಜ್ ಚೋಪ್ರಾ ಅವರಿಗೆ 6 ಕೋಟಿ ರೂ. ನಗದು ಬಹುಮಾನ ಘೋಷಣೆ ಮಾಡಿದ್ದಾರೆ.
* ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (BCCI) ನೀರಜ್ ಚೋಪ್ರಾಗೆ 1 ಕೋಟಿ ರೂ. ಬಹುಮಾನ ಘೋಷಣೆ ಮಾಡಿದೆ ಎಂದು BCCI ಕಾರ್ಯದರ್ಶಿ ಜಯ್ ಶಾ ಅವರು ತಿಳಿಸಿದ್ದಾರೆ.
* ಪ್ರಸ್ತುತ ಪಂಜಾಬ್ ಮುಖ್ಯಮಂತ್ರಿ ಕ್ಯಾಪ್ಟನ್ ಅಮರಿಂದರ್ ಸಿಂಗ್ ಅವರು ಕೂಡ ಚಿನ್ನದ ಪದಕ ಗೆದ್ದ ನೀರಜ್ ಚೋಪ್ರಾಗೆ 2 ಕೋಟಿ ರೂ. ಬಹುಮಾನ ಘೋಷಣೆ ಮಾಡಿದ್ದಾರೆ, ಮೂಲತಃ ನೀರಜ್ ಚೋಪ್ರಾ ಅವರು ಪಂಜಾಬ್ ರಾಜ್ಯದವರಾಗಿದ್ದು ಇದು ರಾಜ್ಯಕ್ಕೆ ಹೆಮ್ಮೆಯ ವಿಚಾರ ಎಂದು ತಿಳಿಸಿದರು.
* ನೀರಜ್ ಚೋಪ್ರಾ ಅವರಿಗೆ ಒಟ್ಟಾರೆ 12 ಕೋಟಿ 25 ಲಕ್ಷ ರೂ. ಬಹುಮಾನದ ಘೋಷಣೆಯಾಗಿದೆ ಎಂದು ತಿಳಿದು ಬಂದಿದೆ.

### ಟೋಕಿಯೊ ಒಲಿಂಪಿಕ್ಸ್ ನ ಪುರುಷರ ಮ್ಯಾರಥಾನ್ ಪ್ರಶಸ್ತಿ ಪಡೆದ ಕೀನ್ಯಾದ ಎಲಿಯುಡ್ ಕಿಪ್ಚೋಗೆ



* ಟೋಕಿಯೊ ಒಲಿಂಪಿಕ್ಸ್ ನ ಪುರುಷರ ಮ್ಯಾರಥಾನ್ ಓಟದಲ್ಲಿ ಕೀನ್ಯಾದ ಎಲಿಯುಡ್ ಕಿಪ್ಚೋಗೆ ಅವರು 2 ಗಂಟೆ 08 ನಿಮಿಷ 38 ಸೆಕೆಂಡಿನಲ್ಲಿ ಗುರಿ ತಲುಪಿ ಚಿನ್ನದ ಪದಕವನ್ನು ಜಯಿಸಿ ವಿಶ್ವ ದಾಖಲೆ ವೀರರಾಗಿ ಹೊರ ಹೊಮ್ಮಿದರು, ಹಾಗೂ ಸತತವಾಗಿ ಮ್ಯಾರಥಾನ್ ಪ್ರಶಸ್ತಿಗಳನ್ನು ಜಯಿಸಿರುವ 3 ನೇ ಓಟಗಾರರಾಗಿದ್ದಾರೆ.
* ಕೀನ್ಯಾದ ಎಲಿಯುಡ್ ಕಿಪ್ಚೋಗೆ ಅವರು 2013 ರಿಂದ 15 ಮ್ಯಾರಥಾನ್'ಗಳಲ್ಲಿ ಭಾಗವಹಿಸಿ 13 ಮ್ಯಾರಥಾನ್'ಗಳಲ್ಲಿ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ.
* ನೆದರ್ಲೆಂಡ್ಸ್'ನ ಅಬ್ದಿ ನಗೆಯೆ ಅವರು ಬೆಳ್ಳಿ ಪದಕವನ್ನು ಜಯಿಸಿದರು.
* ಬೆಲ್ಜಿಯಂನ ಬಶೀರ್ ಅಬ್ದಿ ಅವರು ಕಂಚಿನ ಪದಕವನ್ನು ಜಯಿಸಿದರು.

### ದೇಶದ ಮೊದಲ ಸೋಲಾರ್ ಗ್ರಾಮ



* ಪ್ರಸ್ತುತ ಮಧ್ಯಪ್ರದೇಶ ರಾಜ್ಯದ ಬಚಾಗೆ ಗ್ರಾಮವು ದೇಶದ ಮೊದಲ ಸೋಲಾರ್ ಗ್ರಾಮವಾಗಿದೆ, ಈ ಗ್ರಾಮಕ್ಕೆ ಮಧ್ಯಪ್ರದೇಶ ರಾಜ್ಯದ ರಾಜ್ಯಪಾಲ ಮಾಂಗುಭಾಯ್ ಸಿ ಪಟೇಲ್ ಭೇಟಿ ನೀಡಿ ಇಲ್ಲಿರುವಂತಹ ಬುಡಕಟ್ಟು ಕುಟುಂಬ ಜೊತೆ ಸಮಯವನ್ನು ಕಳೆದರು.
* ಈ ಗ್ರಾಮದಲ್ಲಿ 74 ಮನೆಗಳಿವೆ ಇಲ್ಲಿರುವ ಪ್ರತಿಯೊಂದು ಮನೆಯೂ ಸೋಲಾರ್ ಫಲಕ, ಬ್ಯಾಟರಿ ಒಲೆಗಳಿವೆ, ಈ ಗ್ರಾಮದಲ್ಲಿನ ಮನೆಯಲ್ಲಿ

ಅಡುಗೆ ಮಾಡಲು ಸೌದೆ ಅಥವಾ ಗ್ಯಾಸ್ ಒಲೆಗಳನ್ನು ಬಳಕೆ ಮಾಡುವದಿಲ್ಲ ಎಂದು ತಿಳಿದು ಬಂದಿದೆ.
* ಸುಮಾರು '2' ವರ್ಷಗಳ ಹಿಂದೆ IIT ಬಾಂಬೆ ಹಾಗೂ ಒಎನ್‌ಜಿಸಿ ಜಂಟಿ ಸಹಯೋಗದಲ್ಲಿ ವಿದ್ಯಾ ಭಾರತಿ ಸಂಸ್ಥೆಯು ಈ ಗ್ರಾಮಕ್ಕೆ ಭೇಟಿ ನೀಡಿ 2017 ರಲ್ಲಿ ಈ ಗ್ರಾಮವನ್ನು ಸೋಲಾರ್ ಗ್ರಾಮವನ್ನಾಗಿ ಮಾಡಲು ನಿರ್ಧಾರವನ್ನು ಕೈಗೊಂಡಿದ್ದವು, ಇದೀಗ ವಿದ್ಯಾ ಭಾರತಿ ಸಂಸ್ಥೆಯು 2019 ರಲ್ಲಿ ಈ ಗ್ರಾಮವನ್ನು ಸಂಪೂರ್ಣ ಸೋಲಾರ್ ಗ್ರಾಮವನ್ನಾಗಿ ಬದಲಾಯಿಸಿದೆ.

## ಟೋಕಿಯೋ ಒಲಿಂಪಿಕ್ಸ್ ನಲ್ಲಿ ಕಂಚು ಗೆದ್ದ ಭಾರತೀಯ ಕುಸ್ತಿಪಟು ಬಜರಂಗ್ ಪೂನಿಯ



* ಟೋಕಿಯೊ ಒಲಿಂಪಿಕ್ಸ್ ನಲ್ಲಿ ಭಾರತೀಯ ಕುಸ್ತಿಪಟು ಬಜರಂಗ್ ಪೂನಿಯಾ ಅವರು ಕಂಚಿನ ಪದಕವನ್ನು ಜಯಿಸಿದ್ದಾರೆ.
* ಕುಸ್ತಿಪಟು ಬಜರಂಗ್ ಪೂನಿಯಾ ಅವರು ಪುರುಷರ 65 KG ವಿಭಾಗದಲ್ಲಿ ಕಜಕಸ್ತಾನದ ದೌಲೆತ್ ನಿಯಾಜ್‌ಬೆಕೊವ್ ವಿರುದ್ಧ ಸ್ಪರ್ಧಿಸಿ ಕಂಚಿನ ಪದಕವನ್ನು ಜಯಿಸಿದ್ದಾರೆ.
* ರಾಷ್ಟ್ರಪತಿ ರಾಮನಾಥ್ ಕೋವಿಂದ್, ಹಾಗೂ ಪ್ರಧಾನಿ ನರೇಂದ್ರ ಮೋದಿ, ಕುಸ್ತಿಪಟು ಬಜರಂಗ್ ಪೂನಿಯಾ ಅವರಿಗೆ ಅಭಿನಂದನೆಗಳನ್ನು ತಿಳಿಸಿದರು.
* ವಿಶ್ವ ಕುಸ್ತಿ ಚಾಂಪಿಯನ್‌ಶಿಪ್‌ನಲ್ಲಿ 3 ಪದಕಗಳನ್ನು ಗೆದ್ದ ಏಕೈಕ ಭಾರತೀಯ ಕುಸ್ತಿಪಟು ಬಜರಂಗ್ ಪುನಿಯಾ.

## ಕೋವಿಡ್ 19 ಸಾಂಕ್ರಾಮಿಕದ ಅವಧಿಯಲ್ಲಿ 80 ಕೋಟಿ ಜನರಿಗೆ ಉಚಿತ ಪಡಿತರ



* ಪ್ರಸ್ತುತ ಕೋವಿಡ್ 19 ಸಾಂಕ್ರಾಮಿಕದ ಅವಧಿಯಲ್ಲಿ ದೇಶದಾದ್ಯಂತ ಸುಮಾರು 80 ಕೋಟಿ ಜನರಿಗೆ ಉಚಿತವಾಗಿ ಪಡಿತರವನ್ನು ನೀಡಲಾಗುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದ್ದಾರೆ.
* ಪ್ರಧಾನಿ ನರೇಂದ್ರ ಮೋದಿ ಅವರು ಮಧ್ಯಪ್ರದೇಶದ ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಅನ್ನ ಯೋಜನೆಯ ಫಲಾನುಭವಿಗಳ ಜೊತೆ ವರ್ಚುವಲ್ ಸಭೆಯ ಮೂಲಕ ಸಂವಾದವನ್ನು ನಡೆಸಿದರು ಇದೇ ಸಂಧರ್ಭದಲ್ಲಿ ದೇಶದಾದ್ಯಂತ 80 ಕೋಟಿ ಜನರಿಗೆ ಉಚಿತ ಪಡಿತರವನ್ನು ನೀಡಲಾಗಿದೆ ಎಂದು ತಿಳಿಸಿದರು.
* ಪ್ರಸ್ತುತ ಕೇಂದ್ರ ಸರ್ಕಾರವು ಬಡವರ ಆಹಾರ ಹಾಗೂ ಉದ್ಯೋಗಕ್ಕಾಗಿ ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ್ ಅನ್ನ ಯೋಜನೆ ಅಥವಾ ಪ್ರಧಾನ ಮಂತ್ರಿ ರೋಜಗಾರ್ ಯೋಜನೆಗೆ ಸರ್ಕಾರವು ಆದ್ಯತೆ ನೀಡಿದೆ ಎಂದು ತಿಳಿಸಿದರು.

## ಬಾರ್ಸಿಲೋನಾ ತಂಡಕ್ಕೆ ವಿದಾಯ ತಿಳಿಸಿದ ಲಿಯೊನೆಲ್ ಮೆಸ್ಸಿ




* ಅರ್ಜೆಂಟೀನಾದ ಹಿರಿಯ ಫುಟ್‌ಬಾಲ್ ಆಟಗಾರ ಲಿಯೊನೆಲ್ ಮೆಸ್ಸಿ ಅವರು ಬಾರ್ಸಿಲೋನಾ ಎಫ್‌ಸಿ (ಫುಟ್ಬಾಲ್ ಕ್ಲಬ್) ತಂಡಕ್ಕೆ ವಿದಾಯವನ್ನು ಘೋಷಿಸಿದ್ದಾರೆ.
* 34 ವರ್ಷ ವಯಸ್ಸಿನ ಲಿಯೊನೆಲ್ ಮೆಸ್ಸಿ, ಸುಮಾರು 21 ವರ್ಷಗಳಿಂದ ಬಾರ್ಸಿಲೋನಾ ತಂಡದಲ್ಲಿ ಆಟವಾಡುತ್ತಿದ್ದರು, ಹಾಗೂ 682 ಗೋಲುಗಳ ದಾಖಲೆಯನ್ನು ನಿರ್ಮಿಸಿದ್ದಾರೆ.
* ಮೆಸ್ಸಿ ಅವರು ಬಾರ್ಸಿಲೋನಾ ಕ್ಲಬ್‌ನೊಂದಿಗೆ 778 ಪಂದ್ಯಗಳಲ್ಲಿ ಆಟವಾಡಿದ್ದಾರೆ, ಸ್ಪೇನೀಶ್ ಲೀಗ್ 520 ಪಂದ್ಯಗಳಲಿ ಆಟವಾಡಿ ಒಟ್ಟು 474 ಗೋಲುಗಳನ್ನು ಗಳಿಸಿದ್ದರು.
* ಲಿಯೊನೆಲ್ ಮೆಸ್ಸಿ ಅವರು ಸುಮಾರು 2 ದಶಕಗಳನ್ನು ಬಾರ್ಸಿಲೋನ ಕ್ಲಬ್‌ನೊಂದಿಗೆ ಕಳೆದಿದ್ದಾರೆ, ಇವರು 2004 ರಲ್ಲಿ ಮೊದಲ ಪಂದ್ಯವನ್ನು ಆಡಿದ್ದಾರೆ.
* ಬಾರ್ಸಿಲೋನ ಕ್ಲಬ್‌ನೊಂದಿಗೆ 17 ವರ್ಷಗಳ ಕಾಲ ಆಟವಾಡಿದ್ದಾರೆ, 4 ಬಾರಿ ಚಾಂಪಿಯನ್ಸ್ ಲೀಗ್, 10 ಬಾರಿ ಸ್ಪೇನೀಶ್ ಲೀಗ್, 7 ಬಾರಿ ಕೋಪಾ ಡೆಲ್ ರೇ ಮತ್ತು 8 ಬಾರಿ ಸ್ಪೇನೀಶ್ ಸೂಪರ್ ಕಪ್ ಗೆಲ್ಲುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದಾರೆ.

## ದೇಶದ ಮೊದಲ ಟ್ರಾನ್ಸ್‌ಜೆಂಡರ್ ಕ್ಲಿನಿಕ್ ತೆಲಂಗಾಣದಲ್ಲಿ ಪ್ರಾರಂಭ




* ದೇಶದ ಮೊದಲ ಟ್ರಾನ್ಸ್‌ಜೆಂಡರ್ ಕ್ಲಿನಿಕ್ ನ್ನು ತೆಲಂಗಾಣ ರಾಜ್ಯದ ಹೈದರಾಬಾದ್‌ನಲ್ಲಿ ಮೊದಲ '2' ಟ್ರಾನ್ಸ್‌ಜೆಂಡರ್ ಕ್ಲಿನಿಕ್‌ಗಳನ್ನು ಪ್ರಾಂಭಿಸಿದೆ.
* ಈ ಟ್ರಾನ್ಸಜೆಂಡರ್ ಕ್ಲಿನಿಕ್ ಗಳ ಯೋಜನೆ ಕಡ್ಡಾಯ ಟ್ರಾನ್ಸ್‌ಜೆಂಡರ್ ವ್ಯಕ್ತಿಗಳ ಕಾಯಿದೆ 2019 ರ ಕೇಂದ್ರ ಸರ್ಕಾರದ ಯೋಜನೆಗಳ ಭಾಗವಾಗಿದೆ.
* ಪ್ರಸ್ತುತ ಹೈದರಾಬಾದ್‌ನಲ್ಲಿ ಟ್ರಾನ್ಸ್‌ಜೆಂಡರ್‌ಗಳಲ್ಲಿ HIV ಪ್ರಕರಣಗಳು ಹೆಚ್ಚಾಗಿವೆ ಈ ಕಾರಣದಿಂದ ನಗರವನ್ನು ಆರಂಭದ ಸ್ಥಳವಾಗಿ ಆಯ್ಕೆ ಮಾಡಿದ್ದಾರೆ.
* ಭಾರತ ದೇಶವು ಅಮೇರಿಕಾ ಏಜೆನ್ಸಿ ಫಾರ್ ಇಂಟರ್‌ನ್ಯಾಷನಲ್

ಡೆವಲಪ್‌ಮೆಂಟ್‌ನ, ಹಾಗೂ ರಾಷ್ಟ್ರೀಯ ಏಡ್ಸ್ ನಿಯಂತ್ರಣ ಸಂಸ್ಥೆಯೊಂದಿಗೆ ಪಾಲುದಾರಿಕೆಯನ್ನು ಹೊಂದಿದೆ, ಅಲ್ಲದೇ 2030 ರ ಸಮಯಕ್ಕೆ ಏಡ್ಸ್ ನ್ನು ನಿರ್ಮೂಲನೆ ಮಾಡುವ ಗುರಿಯನ್ನು ಹೊಂದಿದೆ.

* ಈ ಕ್ಲಿನಿಕ್ ನ್ನು ಸಂಪೂರ್ಣವಾಗಿ ಟ್ರಾನ್ಸ್ ಜೆಂಡರ್ ಗಳ ನೇತೃತ್ವದಲ್ಲಿ ಕಾರ್ಯ ನಿರ್ವಹಿಸುತ್ತದೆ, ಹಾಗೂ ಕ್ಲಿನಿಕ್ ಆರೋಗ್ಯ ಸೇವೆಗಳು, ಹಾರ್ಮೋನ್ ಥೆರಪಿ ಹಾಗೂ ಲಿಂಗ ದೃಢೀಕರಣ ಪ್ರಕ್ರಿಯೆಗಳ ಮಾರ್ಗದರ್ಶನದ ಮಾಹಿತಿಯ ಜೊತೆಗೆ ಔಷಧಿಗಳನ್ನು ನೀಡುತ್ತದೆ.

## ಪ್ರಧಾನಿ ಮೋದಿ ಉಜ್ವಲ2 ಯೋಜನೆಯನ್ನು ಆರಂಭಿಸಲಿದ್ದಾರೆ



* ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಉಜ್ವಲ ಎಂಬ ಉಚಿತ ಎಲ್‌ಪಿಜಿ (LPG) ಸಂಪರ್ಕ ಯೋಜನೆಯ 2 ನೇ ಆವೃತ್ತಿಯನ್ನು ಉತ್ತರ ಪ್ರದೇಶ ರಾಜ್ಯದಿಂದ ಆಗಸ್ಟ್. 10ರಂದು ಆರಂಭಿಸಲಿದ್ದಾರೆ.

* ಈ 2016 ರಲ್ಲಿ ಉತ್ತರ ಪ್ರದೇಶ ರಾಜ್ಯದಿಂದ ಈ ಉಜ್ವಲ ಯೋಜನೆಯ ಮೊದಲ ಆವೃತ್ತಿಯನ್ನು ಪ್ರಾರಂಭಿಸಿದ್ದರು.

* ಪ್ರಧಾನಮಂತ್ರಿ ಮೋದಿಯವರು ಉತ್ತರ ಪ್ರದೇಶ ರಾಜ್ಯದ ಮಹೋಬಾ ಜಿಲ್ಲೆಯಿಂದ ವರ್ಚುವಲ್ ಸಭೆಯ ಮೂಲಕ '1' ಕೋಟಿ ಅಧಿಕ LPG ಸಂಪರ್ಕವನ್ನು ನೀಡುವ ಮೂಲಕ ಉಜ್ವಲ 2 ಯೋಜನೆಯನ್ನು ಆರಂಭಿಸಲಿದ್ದಾರೆ.

* ಪ್ರಧಾನಿ ನರೇಂದ್ರ ಮೋದಿ ಅವರು 2016 ರಲ್ಲಿ ಈ ಪ್ರಧಾನ ಮಂತ್ರಿ ಉಜ್ವಲ ಯೋಜನೆ (PMUY) ಯೋಜನೆಯನ್ನು ಪ್ರಾರಂಭಿಸಿದ್ದಾರೆ.

* 2020 ರ ವೇಳೆಗೆ ಸುಮಾರು '8' ಕೋಟಿ ಮಹಿಳೆಯರಿಗೆ LPG ಸಂಪರ್ಕಗಳನ್ನು ನೀಡಲು ನಿರ್ಧರಿಸಿತ್ತು, ಆದರೆ 2019 ರ ಸೆಪ್ಟೆಂಬರ್ ವೇಳೆಗೆ '8' ಕೋಟಿ ಮಹಿಳೆಯರಿಗೆ LPG ಸಂಪರ್ಕಗಳನ್ನು ನೀಡಿ ಗುರಿ ಸಾಧಿಸಿದೆ.

## ರೈತರ ಮಕ್ಕಳಿಗೆ ರಾಜ್ಯ ಸರ್ಕಾರದಿಂದ ವಿದ್ಯಾರ್ಥಿ ವೇತನ



* ಕರ್ನಾಟಕ ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಬಸವರಾಜ ಬೊಮ್ಮಾಯಿ ಅವರು ಅಧಿಕಾರವನ್ನು ಸ್ವೀಕಾರ ಮಾಡಿದ ನಂತರ ಅಂದರೆ ಇದೀಗ ರಾಜ್ಯದ ರೈತರ ಮಕ್ಕಳಿಗೆ ಶಿಷ್ಯ ವೇತನವನ್ನು ನೀಡಲು ಸರ್ಕಾರದಿಂದ ಅಧಿಕೃತ ಆದೇಶ ಹೊರಡಿಸಿದ್ದಾರೆ.

* ರಾಜ್ಯದ ರೈತರ ಮಕ್ಕಳು ಪಿಯುಸಿ, ಡಿಪ್ಲೊಮಾ, ಐಟಿಐ ಓದುತ್ತಿರುವ ವಿದ್ಯಾರ್ಥಿಗಳಿಗೆ 2,500 ರೂ, ವಿದ್ಯಾರ್ಥಿನಿಯರಿಗೆ 3,000 ರೂ. ಶಿಷ್ಯ ವೇತನ ನೀಡಲಾಗುವುದು

* ಪದವಿ ಬಿಎ, ಬಿಎಸ್ಸಿ, ಬಿಕಾಂ ವಿದ್ಯಾರ್ಥಿಗಳಿಗೆ 5000 ರೂಪಾಯಿ ಮತ್ತು ವಿದ್ಯಾರ್ಥಿನಿಯರಿಗೆ 5500 ರೂ. ಶಿಷ್ಯ ವೇತನ ನೀಡಲಾಗುವುದು.

* ಎಲ್.ಎಲ್.ಬಿ, ಪ್ಯಾರಾಮೆಡಿಕಲ್, ಬಿ ಫಾರ್ಮ, ನರ್ಸಿಂಗ್ ವಿದ್ಯಾರ್ಥಿಗಳಿಗೆ 7,500 ರೂಪಾಯಿ, ವಿದ್ಯಾರ್ಥಿನಿಯರಿಗೆ 8000 ರೂ. ಶಿಷ್ಯ ವೇತನ ನೀಡಲಾಗುವುದು.

* ಎಂಬಿಬಿಎಸ್, ಬಿಇ, ಬಿಟೆಕ್, ಪಿಜಿ ವಿದ್ಯಾರ್ಥಿಗಳಿಗೆ 10,000 ರೂ, ವಿದ್ಯಾರ್ಥಿನಿಯರಿಗೆ 11,000 ರೂ. ಶಿಷ್ಯ ವೇತನ ನೀಡಲಾಗುತ್ತದೆ, ಹಾಗೂ ಇದಲ್ಲದೇ ಕೃಷಿ ಜಮೀನು ಹೊಂದಿದ ರೈತರ ಮಕ್ಕಳಿಗೆ ಶಿಷ್ಯವೇತನ ನೀಡಲಾಗುವುದು ಎಂದು ತಿಳಿಸಿದ್ದಾರೆ.

## ದೆಹಲಿಯ ರೋಹಿಣಿಯಲ್ಲಿ ಸ್ಥಾಪನೆಯಾದ ಮೊದಲ ಪ್ರಾಣಿ DNA ಪ್ರಯೋಗಾಲಯ



* ಪ್ರಸ್ತುತ ಮೊದಲ 'ಪ್ರಾಣಿ (ಅನಿಮಲ್) DNA ಪ್ರಯೋಗಾಲಯ' ದೆಹಲಿಯ ರೋಹಿಣಿಯಲ್ಲಿನ ವಿಧಿ ವಿಜ್ಞಾನ ಪ್ರಯೋಗಾಲಯದಲ್ಲಿ ಸ್ಥಾಪನೆಯಾಗಿದೆ.

* ಪ್ರಸ್ತುತ ವನ್ಯಜೀವಿ ವಿಧಿವಿಜ್ಞಾನವು ಅಪರಾಧ ತನಿಖೆಯ ಹೊಸ ಕ್ಷೇತ್ರವಾಗಿದೆ.

* ಈ ಮೊದಲು ಪ್ರಾಣಿಗಳ ಮಾದರಿಗಳನ್ನು ಪರೀಕ್ಷೆ ಮಾಡಿ ಫಲಿತಾಂಶಗಳನ್ನು ಪಡೆಯಲು ಪ್ರಾಣಿಗಳ DNA ಪರೀಕ್ಷಾ ಸೌಲಭ್ಯಗಳೊಂದಿಗೆ ಬೇರೆ ಬೇರೆ ರಾಜ್ಯಗಳಿಗೆ ರವಾನಿಸಲಾಗುತಿತ್ತು.

* ದೆಹಲಿ ಪೊಲೀಸರು ಪ್ರಾಣಿಗಳ DNA ಪ್ರಯೋಗಾಲಯವನ್ನು ಬಳಸಿಕೊಂಡು ಗೋಹತ್ಯೆ, ಪ್ರಾಣಿಗಳ ಅಕ್ರಮ ವ್ಯಾಪಾರ ಹಾಗೂ ಪ್ರಾಣಿ ಸಂಬಂಧಿತ ಪ್ರಕರಣಗಳ ಬಗ್ಗೆ ತನಿಖೆ ನಡೆಸಲು ಬಳಸುತ್ತಾರೆ.

* DNA ಪರೀಕ್ಷೆಗಳನ್ನು ಪ್ರಾಣಿಗಳ ನಡುವಿನ ಸಂಬಂಧ ಹಾಗೂ ಗುಣಲಕ್ಷಣಗಳಿಗಾಗಿ ಬಳಸುತ್ತಾರೆ.

## ಭಾರತದ ನಗರ ವ್ಯಾಪ್ತಿಯಲ್ಲಿ ಕೋವಿಡ್ 19 ನಿಂದ 13 ದಶಲಕ್ಷಕ್ಕೂ ಅಧಿಕ ಜನರು ಮೃತಪಟ್ಟಿದ್ದಾರೆ




* 2021 ರ ಯುಗೊವ್ ಮಿಂಟ್ ಸಿಪಿಆರ್ ಮಿಲೇನಿಯಲ್ ಸಮೀಕ್ಷೆಯ ಇತ್ತೀಚಿನ ಅಧಿಕೃತ ಅಂಕಿ ಅಂಶಗಳ ಪ್ರಕಾರ 13 ದಶಲಕ್ಷಕ್ಕೂ ಅಧಿಕ ಭಾರತೀಯರು ಕೋವಿಡ್ 19 ಸಾಂಕ್ರಾಮಿಕ ರೋಗಕ್ಕೆ

ಬಲಿಯಾಗಿದ್ದಾರೆ.

* 2021 ರ ಜೂನ್ ಜುಲೈ ತಿಂಗಳಿನ ನಡುವೆ ಯುಗೊವ್ ಮಿಂಟ್ ಸಿಪಿಆರ್ ಮಿಲೇನಿಯಲ್ ಆನ್‌ಲೈನ್‌ನಲ್ಲಿ ಸಮೀಕ್ಷೆಯನ್ನು ನಡೆಸಿತ್ತು, ಈ ಸಮೀಕ್ಷೆಯ ಪ್ರಕಾರ, 2021 ರ ಪ್ರಾರಂಭದಿಂದಲೂ ಕೋವಿಡ್ 19 ನಿಂದ ಭಾರತದ ನಗರ ನೆಟಿಜನ್‌ಗಳಲ್ಲಿ 13.9 ಮಿಲಿಯನ್ ಸಾವುಗಳಾಗಿವೆ.

# 10-08-2021

## ನೌಕಾಪಡೆಯ ಯುದ್ಧ ವೀರ ಕಮಾಂಡರ್ ಗೋಪಾಲ್ ರಾವ್ ನಿಧನ



* ನೌಕಾಪಡೆಯ ಯುದ್ಧ ವೀರ ಕಮಾಂಡರ್ ಗೋಪಾಲ್ ರಾವ್ ಅವರು ತಮ್ಮ 95 ವರ್ಷ ವಯಸ್ಸಿನಲ್ಲಿ ವಿಧಿವಶರಾಗಿದ್ದಾರೆ, ಇವರು 1971 ರ ಯುದ್ಧ ವೀರ ಹಾಗೂ ಭಾರತದ 2 ನೇ ಅತ್ಯುನ್ನತ ಮಿಲಿಟರಿ ಪ್ರಶಸ್ತಿಯಾಗಿರುವ ಮಹಾ ವೀರ ಚಕ್ರ ಪ್ರಶಸ್ತಿಯನ್ನು ಪಡೆದಿದ್ದರು.

* ಈ ಹಿಂದೆ 1971 ರ ಡಿಸೆಂಬರ್. 4 ರಂದು ನಡೆದ ಆಪರೇಷನ್ ಟ್ರೈಡೆಂಟ್ ಗನ ಕರಾಚಿ ಬಂದರಿನ ಮೇಲೆ ದಾಳಿ ಮಾಡಿದ ಟಾಸ್ಕ್ ಗ್ರೂಪ್ನ INS ಕಿಲ್ತಾನ್ ಹಾಗೂ INS ಕಾಟ್ಚಾಲ್ ನ ಕಮಾಂಡರ್ ಆಗಿ ಕಾರ್ಯ ನಿರ್ವಹಿಸಿದ್ದರು, ಇದೀಗ ಈ ಡಿಸೆಂಬರ್. 4 ನ್ನು ನೌಕಾಪಡೆಯ ದಿನವೆಂದು ಆಚರಣೆ ಮಾಡಲಾಗುತ್ತಿದೆ.

* ಕಮಾಂಡರ್ ಗೋಪಾಲ್ ರಾವ್ ಅವರು 1926 ರ ನವೆಂಬರ್. 13 ರಂದು ಮಂಗಳೂರಿನಲ್ಲಿ ಜನಿಸಿದರು, ಹಾಗೂ 1950 ರ ಏಪ್ರಿಲ್. 21 ರಂದು ಭಾರತೀಯ ನೌಕಾಪಡೆ ಸೇವೆಗೆ ನಿಯೋಜನೆಗೊಂಡರು.

## 56 ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಸರಳವಾಗಿ ಆಚರಣೆ ಮಾಡಿದ ಸಿಂಗಪುರ




* ಸಿಂಗಪುರ ದೇಶವು ಕೋವಿಡ್ 19 ಸಾಂಕ್ರಾಮಿಕ ರೋಗವನ್ನು ತಡೆಯಲು ಹೇರಲಾಗಿರುವ ಸಾರ್ವಜನಿಕ ಆರೋಗ್ಯ ಕ್ರಮಗಳ ಕಾರಣದಿಂದಾಗಿ ತನ್ನ 56 ನೇ ಸ್ವಾತಂತ್ರ್ಯ ದಿನವನ್ನು ಸರಳವಾಗಿ ಆಚರಣೆ ಮಾಡಿದೆ.

* ಆದರೆ ಸಿಂಗಪುರ ದೇಶವು ಆಗಸ್ಟ್. 21 ರಂದು ಸ್ವಾತಂತ್ರ್ಯ ದಿನಾಚರಣೆಯ ಭಾಗವಾಗಿ ಪೂರ್ಣ ಪ್ರಮಾಣದ ಮೆರವಣಿಗೆಯ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ.

* ಈ 56 ನೇ ಸ್ವಾತಂತ್ರ್ಯ ದಿನದ ಸರಳ ಆಚರಣೆಯಲ್ಲಿ ಸಿಂಗಪುರ ರಾಷ್ಟ್ರದ ಸಶಸ್ತ್ರ ಪಡೆಗಳು ಪರೇಡ್ ನಡೆಸಿದವು, ಆದರೆ ಈ ಆಚರಣೆಯಲ್ಲಿ ಕೇವಲ 600 ಜನ ಮಾತ್ರ ಪಾಲ್ಗೊಂಡಿದ್ದರು ಎಂದು ನ್ಯೂಸ್ ಏಷ್ಯಾ ಮಾಹಿತಿ ನೀಡಿದೆ.5898

## ಪ್ರವಾಸಿಗರನ್ನು ಆಕರ್ಷಿಸುವ ಸಲುವಾಗಿ ಲಡಾಖ್ ನ ನಿರ್ಬಂಧ ತೆರವು



* ಪ್ರಸ್ತುತ ದೇಶೀಯ ಪ್ರವಾಸಿಗರನ್ನು ಆಕರ್ಷಿಸಲು ಕೇಂದ್ರಾಡಳಿತ ಪ್ರದೇಶ ಲಡಾಖ್ ನ, ಚೀನಾ ಪಾಕಿಸ್ತಾನ ಗಡಿಯಲ್ಲಿನ ಸಂರಕ್ಷಿತ ಪ್ರದೇಶಗಳಿಗೆ ಭಾರತೀಯರಿಗೆ ಭೇಟಿ ನೀಡಲು ವಿಧಿಸಿದ್ದ ಒಳರೇಖೆ ಅನುಮತಿಯ ನಿರ್ಬಂಧವನ್ನು ತೆರವುಗೊಳಿಸಲಾಗಿದೆ ಎಂದು ಲಡಾಖ್ ಕೇಂದ್ರಾಡಳಿತ ಪ್ರದೇಶದ ಗೃಹ ಸಚಿವಾಲಯವು ಅಧಿಸೂಚನೆ ಹೊರಡಿಸಿದೆ.

* ಪ್ರಸ್ತುತ ಭಾರತೀಯ ಪ್ರಜೆಗಳು, ದೇಶೀಯ ಪ್ರವಾಸಿಗರು ಹಾಗೂ ಸ್ಥಳೀಯ ನಿವಾಸಿಗಳಿಗೆ ಹೇರಲಾಗಿದ್ದ ಐಎಲ್‌ಪಿ ನಿರ್ಬಂಧವನ್ನು ಸಂಪೂರ್ಣವಾಗಿ ತೆರವುಗೊಳಿಸಲಾಗಿದೆ ಎಂದು ಲಡಾಖ್ ಕೇಂದ್ರಾಡಳಿತ ಪ್ರದೇಶದ ಗೃಹ ಸಚಿವಾಲಯವು ತಿಳಿಸಿದೆ.

* ವಿದೇಶಿಯರು ಈ ಸಂರಕ್ಷಿತ ಪ್ರದೇಶಗಳಿಗೆ ಭೇಟಿ ನೀಡಲು ಇಚ್ಛಿಸಿದ್ದಲಿ ಪರವಾನಗಿ ಅರ್ಜಿಯನ್ನು ಪಡೆಯಬೇಕು ಆ ಪರವಾನಗಿಯ ಅರ್ಜಿ 7 ದಿನಗಳಿಂದ 15 ದಿನಗಳವರೆಗೆ ಮಾನ್ಯತೆಯನ್ನು ಹೊಂದಿರಲಿದೆ ಎಂದು ತಿಳಿಸಿದ್ದಾರೆ.

* ಭಾರತೀಯ ಪ್ರವಾಸಿಗರು ಲಡಾಖ್'ನ ನುಬ್ರಾ ಕಣಿವೆ, ಪಾಂಗೊಂಗ್ ಸರೋವರ, ಸೊಮೊರಿರಿ ಸರೋವರ ಮತ್ತು ಆರ್ಯನ್ ಗ್ರಾಮಗಳ ಸಂರಕ್ಷಿತ ಪ್ರದೇಶಗಳಿಗೆ ಪ್ರಯಾಣ ಬೆಳೆಸಬಹುದಾಗಿದೆ.

* ಲಡಾಖ್'ನ ಈ ಸಂರಕ್ಷಿತ ಪ್ರದೇಶಗಳು ಪಾಕಿಸ್ತಾನದ ಗಡಿ ನಿಯಂತ್ರಣ ರೇಖೆ(ಎಲ್‌ಒಸಿ) ಹಾಗೂ ಚೀನಾದ ನಿಯಂತ್ರಣ ರೇಖೆ (ಎಲ್‌ಎಸಿ) ಹತ್ತಿರ ಇವೆ.

## 75 ನೇ ಸ್ವಾತಂತ್ರದ ಸಂಭ್ರಮಾಚರಣೆಯನ್ನು ಆರಂಭಿಸಿದ 'BRO'

Border Roads Organisation

* ಭಾರತದ 75 ವರ್ಷಗಳ ಸ್ವಾತಂತ್ರ್ಯದ ನೆನಪಿಗಾಗಿ 'ಆಜಾದಿ ಕಾ ಅಮೃತ್ ಮಹೋತ್ಸವ' ಆಚರಣೆಯನ್ನು ಬಾರ್ಡರ್ ರೋಡ್ಸ್ ಆರ್ಗನೈಸೇಶನ್ (BRO) ಪ್ರಾರಂಭಿಸಿದೆ.

* ಆಗಸ್ಟ್ 15 ರ ಸ್ವಾತಂತ್ರ್ಯ ದಿನದಂದು ಭಾರತದ 75 ಅತ್ಯುನ್ನತ ಪಾಸ್‌ಗಳಲ್ಲಿ ರಾಷ್ಟ್ರೀಯ ಧ್ವಜವನ್ನು ಬಿಡುಗಡೆ ಮಾಡಲಾಗುತ್ತಿದೆ.

* 2021 ರ ಆಗಸ್ಟ್. 07 ರಂದು BRO ಧೈರ್ಯಶಾಲಿ ಪ್ರಶಸ್ತಿ ವಿಜೇತರು ಹಾಗೂ ಯುದ್ಧ ವೀರರಿಗೆ ಉತ್ತರಾಖಂಡದ ಪಿಪಾಲ್ಕೋಟಿ ಮತ್ತು ಪಿಥೋರಗರಃ ಹಾಗೂ ಸಿಕ್ಕಿಂನ ಚಾಂದ್ಮರಿಯಲ್ಲಿ ಪ್ರಶಸ್ತಿ ಪ್ರದಾನ ಮಾಡಿತು.

* ಭಾರತದ 75 ನೇ ಸ್ವಾತಂತ್ರ್ಯದ ವಾರ್ಷಿಕೋತ್ಸವದ ನೆನಪಿಗಾಗಿ ಭಾರತ ಸರ್ಕಾರವು 2020 ರ ಆಗಸ್ಟ್. 15 ರಂದು 'ಆಜಾದಿ ಕಾ ಅಮೃತ್ ಮಹೋತ್ಸವ'ವನ್ನು ಆರಂಭಿಸಿದೆ, ಇದು 2023 ರ ಆಗಸ್ಟ್. 15 ರವರೆಗೆ ನಡೆಯಲಿದೆ.

* BRO ಒಂದು ಭಾರತದ ರಸ್ತೆ ನಿರ್ಮಾಣದ ಪಡೆಯಾಗಿದೆ, ಇದು 19 ರಾಜ್ಯಗಳು ಹಾಗೂ 3 ಕೇಂದ್ರಾಡಳಿತ ಪ್ರದೇಶಗಳ ಜೊತೆಗೆ ನೆರೆಯ ರಾಷ್ಟ್ರಗಳಾಗಿರುವ ಭೂತಾನ್, ಅಫ್ಘಾನಿಸ್ತಾನ, ಮ್ಯಾನ್ಮಾರ್, ತಜಕಿಸ್ತಾನ್ ಹಾಗೂ ಶ್ರೀಲಂಕಾದ ಮೂಲಸೌಕರ್ಯ ಕಾರ್ಯಾಚರಣೆಗಳನ್ನು ನಡೆಸುತ್ತದೆ.

## ಚೀನಾ ದೇಶವು ಟಿಬೆಟ್‌ನ ಲಾಸಾ ವಿಮಾನ ನಿಲ್ದಾಣದಲ್ಲಿ ಹೊಸ ಟರ್ಮಿನಲ್ ಆರಂಭ



* ಪ್ರಸ್ತುತ ಟಿಬೆಟ್‌ನ ಲಾಸಾ ವಿಮಾನ ನಿಲ್ದಾಣದಲ್ಲಿ ಚೀನಾ ದೇಶವು ಹೊಸದಾಗಿ ನಿರ್ಮಿಸಿದ ಟರ್ಮಿನಲ್ ನ್ನು ಪ್ರಾರಂಭಿಸಿದೆ.

* ಇದು ಟಿಬೆಟ್‌ನ ಅತಿದೊಡ್ಡ ಟರ್ಮಿನಲ್ ಆಗಿದೆ, ಇದರಿಂದಾಗಿ ಹಿಮಾಲಯ ಪ್ರದೇಶದಲ್ಲಿನ ಸಾರಿಗೆ ಮೂಲಸೌಕರ್ಯವನ್ನು ಉತ್ತಮ ಗೊಳಿಸಲು ತೆರೆಯಲಾಗಿದೆ, ಈ ಹೊಸ ಟರ್ಮಿನಲ್ ಪ್ರಯಾಣಿಕರಿಗೆ ಹಾಗೂ ಸರಕು ಸಾಗಣೆಗೆ ಉತ್ತೇಜನ ನೀಡಲಿದೆ, ಅಲ್ಲದೇ ದಕ್ಷಿಣ ಏಷ್ಯಾದ ಜಾಗತಿಕ ಲಾಜಿಸ್ಟಿಕ್ಸ್ ಹಬ್ ಆಗಲು ಟಿಬೆಟ್ ಗೆ ಸಹಾಯ ಮಾಡಲಿದೆ ಎಂದಿದ್ದಾರೆ.

* ಹೊಸದಾಗಿ ನಿರ್ಮಿಸಿದ ಟರ್ಮಿನಲ್ ವಿಮಾನ ನಿಲ್ದಾಣ ಯೋಜನೆಯು 603 ದಶಲಕ್ಷ ವೆಚ್ಚದಲ್ಲಿ ಪೂರ್ಣಗೊಂಡಿದೆ, ಹಾಗೂ ಈ ಲಾಸಾ ವಿಮಾನ ನಿಲ್ದಾಣವು 9 ಮಿಲಿಯನ್ ಪ್ರಯಾಣಿಕರ ವಾರ್ಷಿಕ ನಿರ್ವಹಣಾ ಸಾಮರ್ಥ್ಯವನ್ನು ಪೂರೈಸಲಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ, ಇದರೊಂದಿಗೆ ಸುಮಾರು 80,000 ಮೆಟ್ರಿಕ್ ಟನ್ನಳಷ್ಟು ಸರಕುಗಳನ್ನು ಸಹ ನಿರ್ವಹಿಸುವ ಸಾಮರ್ಥ್ಯ ಹೊಂದಿದೆ.

* ಪ್ರಸ್ತುತ ಟಿಬೆಟ್ '5' ವಿಮಾನ ನಿಲ್ದಾಣಗಳನ್ನು ಹೊಂದಿದೆ, ಅವುಗಳು ಭಾರತ ಹಾಗೂ ನೇಪಾಳದ ಗಡಿಯ ಹತ್ತಿರದಲ್ಲಿವೆ.

* ಲಾಸಾ ನಗರವು 17 ನೇ ಶತಮಾನದ ಮಧ್ಯಭಾಗದಿಂದ ಟಿಬೆಟ್'ನ ಧಾರ್ಮಿಕ ಮತ್ತು ಆಡಳಿತಾತ್ಮಕ ರಾಜಧಾನಿಯಾಗಿದೆ, ಇಲ್ಲಿ ಸಾಂಸ್ಕೃತಿಕವಾಗಿ ಮಹತ್ವದ ಪೊಟಾಲ ಅರಮನೆ, ಜೋಖಾಂಗ್ ದೇವಸ್ಥಾನ ಹಾಗೂ ನಾರ್ಬುಲಿಂಗ ಅರಮನೆಗಳನ್ನು ಹೊಂದಿದ ನಗರವಾಗಿದೆ.

## ಅಫ್ಘಾನಿಸ್ತಾನದ ಪ್ರಾಂತೀಯ ರಾಜಧಾನಿಯ ಮೇಲಿನ ತಾಲಿಬಾನ್ ದಾಳಿಯನ್ನು ಹಿಮ್ಮೆಟ್ಟಿಸಿದ ಅಫಘಾನ್ ಪಡೆ



* ಅಫಘಾನ್ ಪಡೆಗಳು 2021 ರ ಆಗಸ್ಟ್. 9 ರಂದು ಉತ್ತರ ಪ್ರಾಂತ್ಯದ ಸಮಂಗನ್ ನ ಪ್ರಾಂತ್ಯದ ರಾಜಧಾನಿ ಅಯ್ಬಕ್ ನಗರಕ್ಕೆ ದಾಳಿ ಮಾಡುವ ಮೂಲಕ ತಾಲಿಬಾನ್ ಉಗ್ರರನ್ನು ಹಿಮ್ಮೆಟ್ಟಿಸಿದೆ.

* ಈ ಅಫಘಾನ್ ಪಡೆಯ ದಾಳಿಯಲ್ಲಿ ಸುಮಾರು 20 ತಾಲಿಬಾನ್ ಉಗ್ರರು ಹತರಾಗಿದ್ದಾರೆ, ನಂತರ ತಾಲಿಬಾನ್ ಹೋರಾಟಗಾರರು ಸುತ್ತಮುತ್ತಲಿನ ಪ್ರದೇಶಗಳಿಗೆ ಪಲಾಯನ ಬೆಳಸಿದರು.

* ಈ ಹಿಂದೆ, ಆಗಸ್ಟ್ 7 ರಂದು ತಾಲಿಬಾನ್ ಉಗ್ರರು ದಾಳಿಮಾಡಿ '3' ಪ್ರಾಂತೀಯ ರಾಜಧಾನಿ ನಗರಗಳಾಗಿರುವ ತಲುಕಾನ್, ಸಾರಿ ಪುಲ್ ಹಾಗೂ ಜರಂಜ್‌ಗಳ ಮೇಲೆ ಹಿಡಿತವನ್ನು ಸಾಧಿಸಿದ್ದರು.

* ತಾಲಿಬಾನ್ ಉಗ್ರರು ಈ ಹಿಂದಿನ 3 ತಿಂಗಳಲ್ಲಿ ಅಂದಾಜು 200 ಜಿಲ್ಲೆಗಳನ್ನು ವಶಪಡಿಸಿಕೊಂಡಿದ್ದಾರೆ.

* ದೇಶದಲ್ಲಿ ಅಂತರ್ಯುದ್ಧವನ್ನು ತಡೆಗಟ್ಟುವ ನಿಟ್ಟಿನಲ್ಲಿ ಪಾಕಿಸ್ತಾನ ರಾಷ್ಟ್ರವು ರಾಜತಾಂತ್ರಿಕ ಒತ್ತಡದಿಂದ ಅಫ್ಘಾನಿಸ್ತಾನದಲ್ಲಿ ಪ್ರಾದೇಶಿಕ ಸಮ್ಮೇಳನವನ್ನು ಶೀಘ್ರದಲ್ಲೇ ಆಯೋಜಿಸಲು ಮುಂದಾಗಿದೆ.

* 2001 ರ ಯುದ್ಧದ ಸಮಯದಲ್ಲಿ ಗುಂಪು ಅಧಿಕಾರದಿಂದ ಕುಸಿದ ನಂತರ ಅಫ್ಘಾನಿಸ್ತಾನದಲ್ಲಿ ತಾಲಿಬಾನ್ ದಂಗೆ ಪ್ರಾರಂಭವಾಗಿದೆ.

* ಸದ್ಯ ಅಫ್ಘಾನಿಸ್ತಾನದ 85% ನಗರಗಳು ತಾಲಿಬಾನ್ ನಿಯಂತ್ರಣದಲ್ಲಿವೆ.

## ಅಡುಗೆ ತೈಲ ಉತ್ಪಾದನೆಯಲ್ಲಿ ಸ್ವಾವಲಂಬನೆ, ಪ್ರಧಾನಿ ಮೋದಿ

* ಪ್ರಸ್ತುತ ಪ್ರಧಾನಿ ನರೇಂದ್ರ ಮೋದಿಯವರು ಅಡುಗೆ ಎಣ್ಣೆ ಆಮದಿನ ಮೇಲಿರುವ ಅವಲಂಬನೆ ಕಡಿಮೆಗೊಳಿಸಲು ಮತ್ತು ಎಲ್ಲ ರೀತಿಯ ಅಡುಗೆ ಎಣ್ಣೆ ಉತ್ಪಾದನೆಯಲ್ಲಿ ದೇಶವನ್ನು ಸ್ವಾವಲಂಬಿಯಾಗಿಸುವ ಪ್ರಮುಖ ಉದ್ದೇಶದಿಂದ 'ನ್ಯಾಷನಲ್ ಎಡಿಬಲ್ ಆಯಿಲ್ ಮಿಷನ್ ಆಯಿಲ್ ಪಾಮ್ (ಎನ್ಎಂಇಒಪಿ) ನ್ನು ಘೋಷಣೆ ಮಾಡಿದರು.

* ಪ್ರಧಾನಿ ಮೋದಿ ಅವರು ಈ ಮಿಷನ್‌ಗಾಗಿ 11 ಸಾವಿರ ಕೋಟಿ ರೂ. ಗಿಂತಲೂ ಅಧಿಕ ಬಂಡವಾಳ ಹೂಡಿಕೆ ಮಾಡಲಾಗುತ್ತದೆ ಎಂದು ತಿಳಿಸಿದರು.

* ಇದೀಗ ಭಾರತ ದೇಶವು ಅಕ್ಕಿ, ಗೋದಿ ಹಾಗೂ ಸಕ್ಕರೆ ಉತ್ಪಾದನೆಯಲ್ಲಿ ಸ್ವಾಲಂಬನೆ ಸಾಧಿಸಿ ಒಂದು ಹೆಜ್ಜೆ ಮುಂದೆ ಸಾಗಿದೆ, ಇದೀಗ ಅಡುಗೆ ಎಣ್ಣೆಯನ್ನು ಬೃಹತ್ ಪ್ರಮಾಣದಲ್ಲಿ ಆಮದು ಮಾಡಿ ಕೊಳ್ಳುತ್ತಿರುವ ಕಾರಣದಿಂದಾಗಿ ಈ ಮಿಷನ್ ಪ್ರಾರಂಭಿಸಿದ್ದಾರೆ.

* ಸದ್ಯದ ಪರಿಸ್ಥಿತಿಯಲ್ಲಿ ತಾಳೆ ಎಣ್ಣೆ ಆಮದು ಪ್ರಮಾಣ ಶೇ 55 ರಷ್ಟಿದೆ ಎಂದಿದ್ದಾರೆ.

## ಮೊದಲ ಬಾರಿ ITBP ಗೆ ಮಹಿಳಾ ಅಧಿಕಾರಿಗಳ ನೇಮಕ



* ಇದೇ ಮೊದಲ ಬಾರಿಗೆ ಯುದ್ಧಭೂಮಿಯಲ್ಲಿ ಕರ್ತವ್ಯ ನಿರ್ವಹಿಸಲು ಇಂಡೋ ಟಿಬೆಟಿಯನ್ ಗಡಿ ಪೊಲೀಸ್ ಪಡೆ (ITBP)ಗೆ ಮಹಿಳಾ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ.

* ಉತ್ತರಾಖಂಡದ ಡೆಹ್ರಾಡೂನ್ ನ ಮಸ್ಸೂರಿಯ ತರಬೇತಿ ಅಕಾಡೆಮಿಯಲ್ಲಿ ಪ್ರಕೃತಿ ಹಾಗೂ ದೀಕ್ಷಾ ಎಂಬ ಮಹಿಳಾ ಅಧಿಕಾರಿಗಳು ಯಶಸ್ವಿಯಾಗಿ ತರಬೇತಿ ಮುಗಿಸಿದ್ದಾರೆ, ಇದೀಗ ಇವರು ITBP ಯಲ್ಲಿ ಅಸಿಸ್ಟಂಟ್ ಕಮಾಂಡೆಂಟ್ ಹುದ್ದೆಗೆ ನೇಮಕಗೊಂಡಿದ್ದಾರೆ.

* 2016 ರಿಂದ ITBP ಯಲ್ಲಿ ಮಹಿಳಾ ಅಧಿಕಾರಿಗಳ ನೇಮಕದ ಪ್ರಕ್ರಿಯೆ ಆರಂಭವಾಗಿದೆ, ಇವರನ್ನು UPSC ಪರೀಕ್ಷೆ ಮೂಲಕ ಆಯ್ಕೆ ತರಬೇತಿ ನೀಡಿ ನಂತರ ಸೇವೆಗೆ ನೇಮಕ ಮಾಡಿಕೊಳ್ಳುತ್ತಾರೆ.

## ವಿಶ್ವ ಸಿಂಹ ದಿನ



* ಪ್ರತಿವರ್ಷ ಆಗಸ್ಟ್. 10 ರಂದು ಸಿಂಹಗಳ ಬಗ್ಗೆ ಜಾಗೃತಿ ಮೂಡಿಸುವ ಸಲುವಾಗಿ ವಿಶ್ವ ಸಿಂಹ ದಿನವನ್ನು ಆಚರಿಸಲಾಗುತ್ತದೆ.

* ವರ್ಲ್ಡ್ ವೈಡ್ ಫಂಡ್ (WWF) ಪ್ರಕಾರ ಸಿಂಹವನ್ನು ಸಾಮಾನ್ಯವಾಗಿ "ಕಾಡಿನ ರಾಜ" ಎಂದು ಕರೆಯತ್ತಾರೆ.

* ಈ ಹಿಂದೆ 2013 ರಲ್ಲಿ ಸಿಂಹವನ್ನು ರಕ್ಷಿಸುವ ಉಪಕ್ರಮವು ಆರಂಭಿಸಲಾಗಿದೆ, ಈ ಹಿನ್ನಲೆಯಿಂದಾಗಿ ಮೊದಲ ವಿಶ್ವ ಸಿಂಹ ದಿನವನ್ನು 2013 ರಲ್ಲಿ ಆಚರಣೆ ಮಾಡಲಾಗಿದೆ.

* ಗುಜರಾತ್ ನ ಗಿರ್ ರಾಷ್ಟ್ರೀಯ ಉದ್ಯಾನವನದಲ್ಲಿ ಏಷ್ಯಾಟಿಕ್ ಸಿಂಹಗಳ ಕೊನೆಯ ಜನಸಂಖ್ಯೆ ಕಂಡುಬರುತ್ತವೆ, 2020 ರಲ್ಲಿ ಈ ಉದ್ಯಾನವನದಲ್ಲಿ ಸಿಂಹಗಳ ಜನಸಂಖ್ಯೆಯು ಸುಮಾರು 29% ಹೆಚ್ಚಾಗಿದೆ ಎಂದು ತಿಳಿಸಿದ್ದಾರೆ.

## ಕ್ವಿಟ್ ಇಂಡಿಯಾ ಚಳುವಳಿಯ 79 ನೇ ವಾರ್ಷಿಕೋತ್ಸವ




* ನವದೆಹಲಿಯ ಭಾರತದ ರಾಷ್ಟ್ರೀಯ ಆರ್ಕೈವ್ಸ್‌ನಲ್ಲಿ "ಕ್ವಿಟ್ ಇಂಡಿಯಾ ಚಳುವಳಿಯ 79 ನೇ ವಾರ್ಷಿಕೋತ್ಸವದ ಅಂಗವಾಗಿ, ಕೇಂದ್ರ ಸಂಸ್ಕೃತಿ, ಪ್ರವಾಸೋದ್ಯಮ ಮತ್ತು ಈಶಾನ್ಯ ಪ್ರದೇಶದ ಅಭಿವೃದ್ಧಿ ಸಚಿವರು 2021 ರ ಆಗಸ್ಟ್. 8 ರಂದು ಪ್ರದರ್ಶನವನ್ನು ಉದ್ಘಾಟಣೆ ಮಾಡಿದರು.

* ಪ್ರಸ್ತುತ "ಆಜಾದಿ ಕಾ ಅಮೃತ್ ಮಹೋತ್ಸವ" ಉಪಕ್ರಮದ ಒಂದು ಭಾಗವಾಗಿ ಈ ಚಳುವಳಿಯ ಪ್ರದರ್ಶನವನ್ನು ಭಾರತದ ರಾಷ್ಟ್ರೀಯ ದಾಖಲೆಗಳಲ್ಲಿ ಸೇರಿಸಲಾಗಿದೆ.

* ಈ ಕ್ವಿಟ್ ಇಂಡಿಯಾ ಚಳುವಳಿಯನ್ನು 1942 ರ ಆಗಸ್ಟ್. 8 ರಂದು ಮಹಾತ್ಮ ಗಾಂಧಿ ಅವರು ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಬಾಂಬೆ ಅಧಿವೇಶನದಲ್ಲಿ ಆರಂಭಿಸಿದರು, ಈ ಚಳುವಳಿಯನ್ನು ಆಗಸ್ಟ್ ಚಳುವಳಿ ಎಂದು ಕರೆಯುತ್ತಾರೆ.

* ಈ ಚಳುವಳಿಯನ್ನು 2 ನೇ ಮಹಾಯುದ್ಧದ ಸಂಧರ್ಭದಲ್ಲಿ ಆರಂಭಿಸಲಾಯಿತು, ಹಾಗೂ ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯನ್ನು ಕೊನೆಗೊಳಿಸುವಂತೆ ಒತ್ತಡ ಹೇರಲಾಯಿತು, ಆದರು ಬ್ರಿಟಿಷರು ಸ್ವಾತಂತ್ರ್ಯವನ್ನು ನೀಡಲು ನಿರಾಕರಿಸಿ, ಯುದ್ಧ ಮುಗಿದ ನಂತರ ಮಾತ್ರ ಸ್ವಾತಂತ್ರ್ಯವನ್ನು ನೀಡಬಹುದು ಎಂದು ತಿಳಿಸಿದ್ದರು.

# 11-08-2021

## ಭಾರತೀಯ ಸೇನೆಯ 'ಮಿಷನ್ ಒಲಿಂಪಿಕ್ಸ್ ವಿಂಗ್' ಯೋಜನೆ ಅಡಿಯಲ್ಲಿ ಕ್ರೀಡಾಪಟುಗಳಿಗೆ ತರಬೇತಿ




* ಪ್ರಸ್ತುತ ಭಾರತೀಯ ಸೇನೆಯ "ಮಿಷನ್ ಒಲಿಂಪಿಕ್ಸ್ ವಿಂಗ್" ಯೋಜನೆ ಅಡಿಯಲ್ಲಿ ಸುಮಾರು 450 ಕ್ಕೂ ಅಧಿಕ ಅಥ್ಲೀಟ್‌ಗಳಿಗೆ ತರಬೇತಿಯನ್ನು ನೀಡಲಾಗುತ್ತಿದೆ ಎಂದು ತಿಳಿಸಿದ್ದಾರೆ.

* ಇತ್ತೀಚಿಗೆ ಟೋಕಿಯೊದಲ್ಲಿ ನಡೆದ ಒಲಿಂಪಿಕ್ಸ್ ನ ಪುರುಷರ 'ಜಾವೆಲಿನ್ ಥ್ರೋ' ನಲ್ಲಿ ನೀರಜ್ ಚೋಪ್ರಾ ಅವರು ಚಿನ್ನದ ಪದಕವನ್ನು ಜಯಿಸಿದ್ದಾರೆ, ಪ್ರಸ್ತುತ ನೀರಜ್ ಚೋಪ್ರಾ 2016 ರ ಮೇ ತಿಂಗಳಲ್ಲಿ ಭಾರತೀಯ ಸೇನೆಗೆ ಸೇರಿಕೊಂಡಿದ್ದರು.

* ಇದೀಗ ಭಾರತೀಯ ಸೇನೆಯು ಒಟ್ಟು 11 ಕ್ರೀಡೆಗಳಲ್ಲಿ ಕ್ರೀಡಾಪಟುಗಳಿಗೆ ತರಬೇತಿ ನೀಡಲು ಈ ಯೋಜನೆಯನ್ನು ತಂದಿದೆ.

* ಭಾರತೀಯ ಸೇನೆಯು 'ಮಿಷನ್ ಒಲಿಂಪಿಕ್ಸ್ ವಿಂಗ್' ಯೋಜನೆಯಲ್ಲಿ '5' ವಿಭಾಗಗಳಿವೆ, ರೋಯಿಂಗ್, ಶೂಟಿಂಗ್,

ಈಕ್ವೆಸ್ಟ್ರಿಯನ್, ಸೇಲಿಂಗ್ ಹಾಗೂ ಆರ್ಮಿ ಸ್ಪೋರ್ಟ್ಸ್ ಇನ್ಸ್‌ಟಿಟ್ಯೂಟ್ ಇವೆ.

* ಪ್ರಸ್ತುತ ಭಾರತೀಯ ಆರ್ಮಿ ಸ್ಪೋರ್ಟ್ಸ್ ಇನ್ಸ್‌ಟಿಟ್ಯೂಟ್ (ASI) ನಲ್ಲಿ 200 ಕ್ಕೂ ಅಧಿಕ ಅಥ್ಲೀಟ್‌ಗಳಿಗೆ ಅಥ್ಲೆಟಿಕ್ಸ್, ಆರ್ಚರಿ, ಬಾಕ್ಸಿಂಗ್, ಕುಸ್ತಿ, ವೇಟ್‌ಲಿಫ್ಟಿಂಗ್, ಫೆನ್ಸಿಂಗ್ ಹಾಗೂ ಡೈವಿಂಗ್ ಕ್ರೀಡೆಗಳಲ್ಲಿ ತರಬೇತಿ ನೀಡಲಾಗುತ್ತಿದೆ ಎಂದು ತಿಳಿಸಿದ್ದಾರೆ.

* ಇತ್ತೀಚಿಗೆ ನಡೆದ ಟೋಕಿಯೊ ಒಲಿಂಪಿಕ್ಸ್ ನ ಕ್ರೀಡಾಕೂಟದಲ್ಲಿ ಭಾರತೀಯ ಸೇನೆಯ 16 ಯೋಧರು ಸ್ಪರ್ಧಿಸಿದ್ದರು.

## ಪ್ರತಿ ವರ್ಷ ಆಗಸ್ಟ್. '7' ರಂದು ರಾಷ್ಟ್ರೀಯ ಜಾವಲಿನ ದಿನ ಆಚರಣೆ



* ಇತ್ತೀಚಿಗೆ ನಡೆದ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ನೀರಜ್ ಚೋಪ್ರಾ ಅವರು 'ಜಾವೆಲಿನ್ ಥ್ರೋ' ನಲ್ಲಿ ಚಿನ್ನದ ಪದಕವನ್ನು ಜಯಿಸಿ ದಾಖಲೆಯನ್ನು ನಿರ್ಮಿಸಿದ್ದಾರೆ, ಈ ಕಾರಣದಿಂದಾಗಿ ಪ್ರತಿ ವರ್ಷವು ಆಗಸ್ಟ್. '7' ರಂದು ರಾಷ್ಟ್ರೀಯ ಜಾವೆಲಿನ್ ದಿನವೆಂದು ಆಚರಣೆ ಮಾಡಲು ಭಾರತ ಅಥ್ಲೆಟಿಕ್ಸ್ ಫೆಡರೇಶನ್ ಯೋಜನಾ ಆಯೋಗದ ಅಧ್ಯಕ್ಷ ಲಲಿತ್ ಭಾನೋಟ್ ಅವರು ತಿಳಿಸಿದ್ದಾರೆ.

* ಪ್ರಸ್ತುತ ನೀರಜ್ ಚೋಪ್ರಾ ಅವರು ಈ 'ಜಾವೆಲಿನ್ ಥ್ರೋ' ಕ್ರೀಡಾಕೂಟದಲ್ಲಿ 87.58 ಮೀ. ಜಾವೆಲಿನ್ ಎಸೆದು ಮೊದಲ ಚಿನ್ನದ ಪದಕವನ್ನು ಜಯಿಸಿದ್ದಾರೆ.

* ಪ್ರಸ್ತುತ ಜಾವೆಲಿನ್ ನ್ನು ರಾಷ್ಟ್ರೀಯ ಮಟ್ಟದಲ್ಲಿ ಪ್ರೋತ್ಸಾಹಿಸಲಾಗುತ್ತದೆ, ಹಾಗೂ ಜಿಲ್ಲಾ ಮಟ್ಟಗಳಲ್ಲಿ ಜಾವೆಲಿನ್ ಸ್ಪರ್ಧೆ ಹಮ್ಮಿಕೊಂಡು ಎಲ್ಲಾ ಫೆಡರೇಷನ್‌ಗಳಿಗೂ ಅಗತ್ಯವಿರುವ ಜಾವೆಲಿನ್ ನ್ನು ಭಾರತ ಅಥ್ಲೆಟಿಕ್ಸ್ ಫೆಡರೇಶನ್ ನೀಡಲಿದೆ ಎಂದು ತಿಳಿಸಿದ್ದಾರೆ.

* ಭಾರತ ಅಥ್ಲೆಟಿಕ್ಸ್ ಫೆಡರೇಶನ್ (AFI) 2018 ರಲ್ಲಿ ರಾಷ್ಟ್ರೀಯ ಜಾವೆಲಿನ್ ಥ್ರೋ ಚಾಂಪಿಯನ್‌ಷಿಪ್'ನ್ನು ಆರಂಭಿಸಿದೆ.

## ಪ್ರಧಾನಿ ಮೋದಿ 'ಉಜ್ವಲಾ 2.0' ಗೆ ಚಾಲನೆ




* ಪ್ರಧಾನಿ ಮೋದಿ ಅವರು ಪ್ರಧಾನ ಮಂತ್ರಿ ಉಜ್ವಲಾ ಯೋಜನೆಯ 2ನೇ ಹಂತದ 'ಉಜ್ವಲಾ 2.0' ಗೆ ವರ್ಚುವಲ್ ಸಭೆಯ ಮೂಲಕ ಚಾಲನೆಯನ್ನು ನೀಡಿದ್ದಾರೆ.

* ಮೋದಿ ಅವರು ಉತ್ತರ ಪ್ರದೇಶದ ಮಹೋಬಾ ನಗರದ 10 ಜನ ಮಹಿಳೆಯರಿಗೆ ಉಚಿತ ಅಡುಗೆ ಅನಿಲ (LPG) ಸಿಲಿಂಡರ್‌ಗಳನ್ನು ವರ್ಚುವಲ್ ಸಭೆಯ ಮೂಲಕ ನೀಡಿ ಕೆಲ ಫಲಾನುಭವಿಗಳ ಜೊತೆ ಚರ್ಚೆಯನ್ನು ನಡೆಸಿದರು.

* ಪ್ರಧಾನಿ ಮೋದಿ ವರ್ಚುವಲ್ ಸಭೆಯ ಮೂಲಕ ನೀಡಿರುವ ಪರವಾಗಿ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಸಿಲಿಂಡರ್ ಹಾಗೂ ದಾಖಲೆ ಪತ್ರಗಳನ್ನು ಫಲಾನುಭವಿಗಳಿಗೆ ನೀಡಿದರು.

## ಭಾರತ್ ಬಯೋಟೆಕ್ ಘಟಕ ಸ್ಥಾಪನೆಗೆ ಗುಜರಾತ್‌ನ ಅಂಕ್ಲೇಶ್ವರದಲ್ಲಿ ಅನುಮತಿ ನೀಡಿದ ಕೇಂದ್ರ




* ಪ್ರಸ್ತುತ 'ಕೋವಿಡ್ 19' ಕೋವ್ಯಾಕ್ಸಿನ್ ಲಸಿಕೆಯನ್ನು ಉತ್ಪಾದಣೆ ಮಾಡುವ ಭಾರತ್ ಬಯೋಟೆಕ್ ಘಟಕಕ್ಕೆ ಗುಜರಾತ್ ರಾಜ್ಯದ ಅಂಕಲೇಶ್ವರದಲ್ಲಿ ಕೇಂದ್ರ ಸರ್ಕಾರವು ಅನುಮತಿಯನ್ನು ನೀಡಿದೆ ಕೇಂದ್ರ ಸಚಿವ ಮನ್‌ಸುಖ್ ಮಾಂಡವೀಯಾ ತಿಳಿಸಿದರು.

* ಈ ಮಾಹಿತಿಯನ್ನು ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯಾ ಅವರು ಟ್ವೀಟ್ ಮಾಡುವ ಮೂಲಕ ತಿಳಿಸಿದ್ದಾರೆ, ಈ ಘಟಕದಿಂದಾಗಿ ದೇಶದಲ್ಲಿ ಕೋವಿಡ್ ಲಸಿಕೆ ಲಭ್ಯತೆಯ ಪ್ರಮಾಣ ಹೆಚ್ಚಾಗಲಿದೆ ಎಂದಿದ್ದಾರೆ.

## ಸರ್ಕಾರಿ ಸಮಾರಂಭಗಳಲ್ಲಿ ಹೂಗುಚ್ಛ ಶಾಲು ನೀಡಿಕೆ ನಿಷೇಧಿಸಿ ಸಿಎಂ ಬೊಮ್ಮಾಯಿ



* ಪ್ರಸ್ತುತ ಕರ್ನಾಟಕ ರಾಜ್ಯ ಸರ್ಕಾರದ ಸಭೆ ಸಮಾರಂಭಗಳಲ್ಲಿ ಇನ್ನು ಮುಂದೆ ಹೂಗುಚ್ಛ, ಹಾರ, ಶಾಲುಗಳನ್ನು ನಿಷೇಧಿಸುವುದಾಗಿ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರು ಆದೇಶಿಸಿದ್ದಾರೆ.

* ಬೆಂಗಳೂರು ವಿಧಾನಸೌಧದಲ್ಲಿ ನಡೆದ ಹಿರಿಯ ಪೊಲೀಸ್ ಅಧಿಕಾರಿಗಳ ಸಭೆಯಲ್ಲಿ ಹೂಗುಚ್ಛ ಸ್ವೀಕರಿಸಲು ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರು ನಿರಾಕರಿಸಿದರು, ಇನ್ನು ಮುಂದೆ ಸಭೆ ಸಮಾರಂಭಗಳಲ್ಲಿ ಹೂಗುಚ್ಛ, ಹಾರ, ಶಾಲುಗಳನ್ನು ನೀಡುವದನ್ನು ನಿಷೇಧಿಸಿದ್ದಾರೆ, ನಂತರ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್ ಅವರು ಈ ವಿಷಯದ ಬಗ್ಗೆ ಸುತ್ತೋಲೆ ಹೊರಡಿಸಿದ್ದಾರೆ.

* ಇನ್ನು ಮುಂದೆ ರಾಜ್ಯದ ಅಧಿಕಾರಿಗಳ ಸಭೆ ಸಮಾರಂಭಗಳಲ್ಲಿ ಹೂಗುಚ್ಛ, ಹಾರ, ತುರಾಯಿ, ಹಣ್ಣಿನ ಬುಟ್ಟಿ, ಶಾಲು, ನೆನಪಿನ ಕಾಣಿಕೆಗಳನ್ನು ನೀಡದಂತೆ ಆದೇಶ ಹೊರಡಿಸಿದ್ದಾರೆ, ಈ ಎಲ್ಲಾ ಕಾಣಿಕೆಗಳ ಬದಲಾಗಿ ಕನ್ನಡ ಪುಸ್ತಕಗಳನ್ನು ನೀಡಬಹುದು ಎಂದು ತಿಳಿಸಿದ್ದಾರೆ.

## ದೆಹಲಿ ಸರ್ಕಾರವು ಮುಖ ರಹಿತ ಸಾರಿಗೆ ಸೇವೆಗಳನ್ನು ಪ್ರಾರಂಭಿಸಲಿದೆ




* ಪ್ರಸ್ತುತ 2021 ರ ಆಗಸ್ಟ್.11 ರಂದು ದೆಹಲಿ ಸರ್ಕಾರವು ಮುಖರಹಿತ ಸಾರಿಗೆ ಸೇವೆಗಳನ್ನು ಆರಂಭಿಸಲಿದೆ, ಇದರಲ್ಲಿ ಎಲ್ಲಾ ಚಾಲನಾ ಪರವಾನಗಿಗಳು, ನೋಂದಣಿ ಹಾಗೂ ಪರವಾನಗಿಗೆ ಸಂಬಂಧಿಸಿದ ಸೇವೆಗಳನ್ನು ಆನ್‌ಲೈನ್ ಮೂಲಕ ತರಲಿದೆ ಎಂದು ಅರವಿಂದ ಕೇಜ್ರಿವಾಲ ತಿಳಿಸಿದ್ದಾರೆ.

* ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ I.P ಯಲ್ಲಿ ನಡೆದ ಸಮಾರಂಭದಲ್ಲಿ 33 ಮುಖರಹಿತ ಸೇವೆಗಳನ್ನು ಆರಂಭಿಸಿದರು, ಹಾಗೂ IP ಎಸ್ಟೇಟ್, ಸರಾಯ್ ಕಾಲ್ ಖಾನ್, ಜನಕಪುರಿ ಹಾಗೂ ವಸಂತ ವಿಹಾರ್ ಎಂಬ '4' ವಲಯಗಳ ಕಚೇರಿಗಳನ್ನು ಸ್ಥಗಿತಗೊಳಿಸಲಾಗುವದು, ಹಾಗೂ ದಕ್ಷಿಣ ವಲಯದ ಮೋಟಾರು ಪರವಾನಗಿ (MLO) ಕಚೇರಿಗಳು ರಾಜಾ ಉದ್ಯಾನ ಹಾಗೂ ದ್ವಾರಕಾ ಕ್ರಮವಾಗಿ ತಮ್ಮ ವಾಹನ ಮತ್ತು ಸಾರಥಿ ಸಂಬಂಧಿತ ಕಾರ್ಯಗಳನ್ನು ನೋಡಿಕೊಳ್ಳಲಿವೆ ಎಂದಿದ್ದಾರೆ.

* ಮುಖ ರಹಿತ ಸಾರಿಗೆ ಸೇವೆಗಳು: ಡ್ರೈವಿಂಗ್ ಲೈಸೆನ್ಸ್ ನವೀಕರಣ, ಕಲಿಕಾ ಪರವಾನಗಿ, ಮಾಲೀಕತ್ವದ ವರ್ಗಾವಣೆ, ನಕಲಿ ನೋಂದಣಿ ಪ್ರಮಾಣಪತ್ರ, ಸರಕು ಮತ್ತು ಪ್ರಯಾಣಿಕ ವಾಹನಗಳಿಂದ ಹೊಸ ಅನುಮತಿ, ಅಂತರಾಷ್ಟ್ರೀಯ ಚಾಲನಾ ಪರವಾನಗಿ, ವಿಳಾಸ ಬದಲಾವಣೆ, ಹೀಗೆ ಹಲವು ಮುಖ ರಹಿತ ಸೇವೆಗಳನ್ನು ಒಳಗೊಂಡಿರಲಿದೆ ಎಂದು ತಿಳಿಸಿದ್ದಾರೆ.

## ಹ್ಯುಂಡೈ ಭಾರತದಲ್ಲಿ N ಲೈನ್ ಕಾರುಗಳನ್ನು ಬಿಡುಗಡೆ ಮಾಡಲಿದೆ




* ಪ್ರಸ್ತುತ 2021 ರಲ್ಲಿ ಹ್ಯುಂಡೈ ಮೋಟಾರ್ ಇಂಡಿಯಾ ಲಿಮಿಟೆಡ್ ಭಾರತಕ್ಕೆ ತನ್ನ ಮೊದಲ N ಲೈನ್ ಕಾರುಗಳನ್ನು ಬಿಡುಗಡೆ ಮಾಡುವದಾಗಿ ಘೋಷಿಸಿದೆ.

* ಹ್ಯುಂಡೈ N ವಿಭಾಗವು ಡಿಸೆಂಬರ್ 2013 ರಲ್ಲಿ ಆರಂಭವಾಗಿದೆ, N ದಕ್ಷಿಣ ಕೊರಿಯಾದ ನಮ್ಯಂಗ್ R&D; ಕೇಂದ್ರವನ್ನು ಸೂಚಿಸುತ್ತದೆ.

* N ಲೈನ್ ಮಾದರಿಗಳು ಗ್ರಾಹಕರಿಗೆ ಮೋಟಾರ್ ಸ್ಪೋರ್ಟ್ಸ್ ಪ್ರೇರಿತ ಸ್ಟೈಲಿಂಗ್ ಸೂಚನೆಗಳನ್ನು ನೀಡುತ್ತವೆ. ಇದು ಉತ್ಸಾಹ ಮತ್ತು ಕ್ರೀಡಾಸಕ್ತಿಯನ್ನು ಹುಟ್ಟುಹಾಕುತ್ತವೆ ಎಂದು ದಕ್ಷಿಣ ಕೊರಿಯಾದ ಕಾರು ತಯಾರಕರು ತಿಳಿಸಿದ್ದಾರೆ.

* ಹ್ಯುಂಡೈN ಲೈನ್ ನ್ನು ಯುರೋಪ್, ದಕ್ಷಿಣ ಕೊರಿಯಾ, ಯುಎಸ್ ಹಾಗೂ ರಷ್ಯಾ ದೇಶಗಳಲ್ಲಿ ಮಾರಾಟ ಮಾಡುತ್ತಿದೆ.

* ಎನ್ ಲೈನ್ ಎಂದರೇ ಪ್ರಪಂಚದಾದ್ಯಂತದ ವಾಹನ ತಯಾರಕರು ತಮ್ಮ ಉಪ ಬ್ರಾಂಡ್‌ಗಳನ್ನು ಹೊಂದಿದ್ದಾರೆ, ಉದಾಹರಣೆಗೆ, ಬಿಎಂಡಬ್ಲ್ಯು (BMW) ಎಂಪರ್ಫಾರ್ಮೆನ್ಸ್ ವಿಭಾಗವನ್ನು ಹೊಂದಿದೆ, ಮರ್ಸಿಡಿಸ್ ಬೆಂಜ್ ಎಎಮ್‌ಜಿ ವಿಭಾಗ ಹೊಂದಿದೆ, ಅದೇ ರೀತಿಯಲ್ಲಿ ಹ್ಯುಂಡೈ ತನ್ನ ಎನ್ ಲೈನ್ (N LINE) ಹಾಗೂ N ಬ್ಯಾಡ್ಜ್ಡ್ ಕಾರುಗಳನ್ನು ಬಿಡುಗಡೆಗೊಳಿಸಿದೆ.

* ಹುಂಡೈ ಮೋಟಾರ್ ಕಂಪನಿಯು ದಕ್ಷಿಣ ಕೊರಿಯಾದ ಬಹುರಾಷ್ಟ್ರೀಯ ಆಟೋಮೋಟಿವ್ ತಯಾರಿಕೆ ಕಂಪನಿಯಾಗಿದೆ, ಹಾಗೂ ತನ್ನ ಪ್ರಧಾನ ಕಚೇರಿಯನ್ನು ಸಿಯೋಲ್‌ನಲ್ಲಿ ಹೊಂದಿದೆ.

* ಹುಂಡೈ ಮೋಟಾರ್ ಕಂಪನಿಯುನ್ನು 1967 ರಲ್ಲಿ ಸ್ಥಾಪಿಸಲಾಗಿದೆ.

## ಉತ್ತರ ಪ್ರದೇಶ ಸರ್ಕಾರವು ಕಾಕೋರಿ ರೈಲು ದರೋಡೆಯನ್ನು ಕಾಕೋರಿ ರೈಲು ಕ್ರಮ ಎಂದು ಮರುನಾಮಕರಣ ಮಾಡಿದೆ




* ಪ್ರಸ್ತುತ ಉತ್ತರ ಪ್ರದೇಶ ಸರ್ಕಾರವು 'ಕಾಕೋರಿ ರೈಲು ದರೋಡೆಯನ್ನು' ಎಂಬ ಸ್ವಾತಂತ್ರ್ಯ ಚಳುವಳಿಯನ್ನು 'ಕಾಕೋರಿ ಟ್ರೈನ್ ಆಕ್ಷನ್' ಎಂದು ಮರುನಾಮಕರಣ ಮಾಡಿದೆ, ಹಾಗೂ ಉತ್ತರ ಪ್ರದೇಶದ ಕಾಕೋರಿಯಲ್ಲಿ ರೈಲ ದರೋಡೆ ಮಾಡಿ ಗಲ್ಲಿಗೇರಿಸಲಾಗಿರುವ ಕ್ರಾಂತಿಕಾರಿಗಳಿಗೆ ಗೌರವ ನಮನಗಳನ್ನು ಸಲ್ಲಿಸಿದೆ.

* ಈ ಹಿಂದೆ 1925 ರಲ್ಲಿ ಕ್ರಾಂತಿಕಾರಿಗಳು ಶಸ್ತ್ರಾಸ್ತ್ರಗಳನ್ನು ಖರೀದಿಸುವ ನಿಟ್ಟಿನಲ್ಲಿ ರೈಲನ್ನು ದರೋಡೆ ಮಾಡಿದ್ದರು, ಈ ಕ್ರಾಂತಿಕಾರಿಗಳು ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದಾರೆ ಹೊರತು ಬೇರೆ ಯಾವುದೇ ಪಿತೂರಿಯನ್ನು ಮಾಡಿಲ್ಲವೆಂದು ಪರಿಗಣಿಸಿ ಹೆಸರನ್ನು ಬದಲಾಯಿಸಲಾಗಿದೆ ಎಂದಿದ್ದಾರೆ.

* ಕಾಕೋರಿ ರೈಲು ಕ್ರಮವು: ಭಾರತೀಯ ಸ್ವಾತಂತ್ರ್ಯ ಚಳುವಳಿಯ ಸಮಯದಲ್ಲಿ ಅಂದರೆ 1925 ರ ಆಗಸ್ಟ್. 9 ರಂದು ಬ್ರಿಟಿಷ್ ರಾಜ್ ವಿರುದ್ಧ ಉತ್ತರ ಪ್ರದೇಶದ ಲಕ್ನೋ ಸಮೀಪದ ಕಾಕೋರಿ ಎಂಬ ಹಳ್ಳಿಯಲ್ಲಿ ನಡೆದ ರೈಲು ದರೋಡೆ ಇದಾಗಿದೆ, ಈ ದರೋಡೆಯನ್ನು ಹಿಂದೂಸ್ತಾನ್ ರಿಪಬ್ಲಿಕನ್ ಅಸೋಸಿಯೇಷನ್ (HRA) ಆಯೋಜಿಸಿತ್ತು.

* ಸ್ವಾತಂತ್ರ್ಯ ಪಡೆಯುವ ಉದ್ದೇಶದಿಂದ ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ಕ್ರಾಂತಿಕಾರಿ ಚಟುವಟಿಕೆಗಳನ್ನು ಕೈಗೊಳ್ಳಲು HRA ಯನ್ನು ರಾಮ್ ಪ್ರಸಾದ್ ಬಿಸ್ಮಿಲ್ ಮತ್ತು ಅಶ್ಫಕುಲ್ಲಾ ಖಾನ್ ಅವರು ಸ್ಥಾಪಿಸಿದ್ದಾರೆ.

* ಹಿಂದುಸ್ತಾನ್ ಸೋಷಿಯಲಿಸ್ಟ್ ರಿಪಬ್ಲಿಕನ್ ಅಸೋಸಿಯೇಷನ್ (HSRA) ಎಂಬುವದು ಕ್ರಾಂತಿಕಾರಿ ಸಂಘಟನೆಯಾಗಿದೆ, ಇದನ್ನು ಹಿಂದೂಸ್ತಾನ್ ರಿಪಬ್ಲಿಕನ್ ಅಸೋಸಿಯೇಷನ್ (HRA) ಎಂದು ಕರೆಯುತ್ತಿದ್ದರು.

## ಭಾರತದ ಮೊದಲ ಇಂಟರ್ನೆಟ್ ಆಡಳಿತ ವೇದಿಕೆ




* ಭಾರತದ ಮೊದಲ ಇಂಟರ್ನೆಟ್ ಆಡಳಿತ ವೇದಿಕೆ (IIGF)ಯನ್ನು ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು 2021 ರ ಅಕ್ಟೋಬರ್. 20 ರಿಂದ 3 ದಿನಗಳ ಕಾಲ ನಡೆಸಲಿದೆ.
* ಪ್ರಸ್ತುತ ಇಂಟರ್‌ನೆಟ್ ಗವರ್ನೆನ್ಸ್ ಫೋರಂ ಆರಂಭವನ್ನು ಅನಿಲ್ ಕುಮಾರ್ ಜೈನ್, ನ್ಯಾಷನಲ್ ಇಂಟರ್‌ನೆಟ್ ಎಕ್ಸ್‌ಚೇಂಜ್ ಆಫ್ ಇಂಡಿಯಾ, ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ ಮತ್ತು ಸಮನ್ವಯ ಸಮಿತಿಯ ಅಧ್ಯಕ್ಷರು ಘೋಷಣೆ ಮಾಡಿದ್ದಾರೆ.
* ವಿದ್ಯಾರ್ಥಿಗಳು ಹಾಗೂ ಯುವಕರು ಅಕ್ಟೋಬರ್ ನಲ್ಲಿ ಆರಂಭವಾಗುವ ಮುಖ್ಯ ಸಮಾರಂಭದಲ್ಲಿ ಭಾಗವಹಿಸುವ ಉದ್ದೇಶದಿಂದ ಪೂರ್ವ ಕಾರ್ಯಕ್ರಮಗಳನ್ನು ಕಾಲೇಜುಗಳು ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ಆಯೋಜಿಸಲಾಗುವುದುಎಂದು ತಿಳಿಸಿದ್ದಾರೆ.
* IIGF ಎಂದರೆ ಇಂಟರ್ನೆಟ್ ಆಡಳಿತ ನೀತಿ ಚರ್ಚಾ ವೇದಿಕೆಯಾಗಿದೆ, ಹಾಗೂ ಇದು ವಿಶ್ವಸಂಸ್ಥೆಯ ಅಡಿಯಲ್ಲಿ ಇಂಟರ್ನೆಟ್ ಆಡಳಿತ ವೇದಿಕೆಯ ಭಾರತೀಯ ಆವೃತ್ತಿಯಾಗಿದೆ.
* ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ IGF ನ್ನು ಸ್ಥಾಪಿಸಲು 2006 ರಲ್ಲಿ ಘೋಷಣೆ ಮಾಡಿದರು.

## ಕೋವಿನ್ ಪೋರ್ಟಲ್ ಮೂಲಕ ಕೋವಿಡ್ 19 ಲಸಿಕೆಯನ್ನು ಪಡೆಯಲು ಭಾರತವು ವಿದೇಶಿ ಪ್ರಜೆಗಳಿಗೆ ಅವಕಾಶ ನೀಡಿದೆ




* ಭಾರತದಲ್ಲಿ ನೆಲೆಸಿರುವ ವಿದೇಶಿ ಪ್ರಜೆಗಳಿಗೆ ಭಾರತವು ಕೋವಿನ್ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳುವ ಮೂಲಕ ಕೋವಿಡ್ 19 ಲಸಿಕೆಯನ್ನು ಪಡೆಯಲು ಅವಕಾಶ ನೀಡಿದೆ.
* ಪ್ರಸ್ತುತ ವಿದೇಶಿ ಪ್ರಜೆಗಳು ತಮ್ಮ ಪಾಸ್ಪೋರ್ಟ್'ನ್ನು ಗುರುತಿನ ದಾಖಲೆಯಾಗಿ ಬಳಸಿಕೊಂಡು ಕೋವಿನ್ ಪೋರ್ಟಲ್‌ನಲ್ಲಿ ಹೆಸರನ್ನು ನೋಂದಾಯಿಸಿ ಲಸಿಕೆ ಪಡೆಯಬಹುದಾಗಿದೆ ಎಂದು ತಿಳಿಸಿದೆ.
* ಭಾರತದಲ್ಲಿ 2021 ರ ಜನವರಿ. 16 ರಿಂದ ರಾಷ್ಟ್ರೀಯ ಕೋವಿಡ್ 19 ಲಸಿಕೆ ಕಾರ್ಯಕ್ರಮವನ್ನು ಜಾರಿಗೆ ತರಲಾಗಿದೆ, ಭಾರತ ದೇಶವು ಇಲ್ಲಿಯವರೆಗೆ 51 ಕೋಟಿಗೂ ಅಧಿಕ ಲಸಿಕೆಯ ಪ್ರಮಾಣಗಳನ್ನು ನೀಡಿದೆ.
* ಕೋವಿನ್ ಎಂದರೆ ಕೋವಿಡ್ 19 ಲಸಿಕೆಗಾಗಿ ನೋಂದಾಯಿಸಲು ಭಾರತ ಸರ್ಕಾರದ ತೆರೆದಿರುವ ವೆಬ್ ಪೋರ್ಟಲ್ ಆಗಿದೆ, ಈ ಪೋರ್ಟಲ್ ಡಿಜಿಟಲ್ ರೂಪದಲ್ಲಿ ಲಸಿಕೆ ಪ್ರಮಾಣಪತ್ರಗಳನ್ನು ನೀಡುತ್ತದೆ.

# 12-08-2021

## ಮಹಾರಾಷ್ಟ್ರ ಸರ್ಕಾರವು ಮಾಜಿ ಪ್ರಧಾನಿ ರಾಜೀವ್ ಗಾಂಧಿ ಹೆಸರಲ್ಲಿ ಐಟಿ ಪ್ರಶಸ್ತಿ ಘೋಷಿಸಿದೆ



* ಇತ್ತೀಚಿಗೆ ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ದೇಶದ ಅತ್ಯುನ್ನತ ಕ್ರೀಡಾ ಪುರಸ್ಕಾರ ಖೇಲ್ ರತ್ನ ಪ್ರಶಸ್ತಿಯಿಂದ ಮಾಜಿ ಪ್ರಧಾನಿ ರಾಜೀವ್ ಗಾಂಧಿಯವರ ಹೆಸರನ್ನು ತೆಗೆದುಹಾಕಿದೆ, ಆದರೆ ಇದೀಗ ಮಹಾರಾಷ್ಟ್ರ ಸರ್ಕಾರವು ಮಾಹಿತಿ ತಂತ್ರಜ್ಞಾನ (IT) ಸಂಘಟನೆಗಳಿಗೆ ಸನ್ಮಾನ ಮಾಡುವ ಪ್ರಶಸ್ತಿಗೆ ಮಾಜಿ ಪ್ರಧಾನಿ ರಾಜೀವ್ ಗಾಂಧಿಯವರ ಹೆಸರನ್ನು ಘೋಷಣೆ ಮಾಡಿದೆ.
* ಮಾಜಿ ಪ್ರಧಾನಿ ರಾಜೀವ್ ಗಾಂಧಿಯವರು 1984 ರಿಂದ 1989 ರವರೆಗೆ ದೇಶದ ಪ್ರಧಾನಿಯಾಗಿ ಸೇವೆ ಸಲ್ಲಿಸಿದ್ದಾರೆ, ಅಲ್ಲದೇ ಇವರು ಐಟಿ (IT) ಕ್ಷೇತ್ರಕ್ಕೆ ಅಪಾರವಾದ ಕೊಡುಗೆಯನ್ನು ನೀಡಿದ್ದಾರೆ, ಇವರ ಈ ಕೊಡುಗೆಯನ್ನು ಸ್ಮರಿಸಲು ಮಹಾರಾಷ್ಟ್ರ ಸರ್ಕಾರ ರಾಜೀವ್ ಗಾಂಧಿ ಹೆಸರಿನಲ್ಲಿ ಪ್ರಶಸ್ತಿಯನ್ನು ಘೋಷಿಸಿದೆ.
* ಇನ್ನು ಮುಂದೆ ಪ್ರತಿವರ್ಷವು ಈ ಪ್ರಶಸ್ತಿಯನ್ನು ನೀಡಲಾಗುತ್ತದೆ ಎಂದು ಮಹಾ ಸರ್ಕಾರದ ಆದೇಶ ಹೊರಡಿಸಿದೆ.

## ಅಮೆರಿಕ ಭಾರತ ದೇಶಗಳ ಮಧ್ಯೆ ಹವಾಮಾನ ಮುನ್ಸೂಚನೆ ಸುಧಾರಣೆ ಒಪ್ಪಂದ



* ಪ್ರಸ್ತುತ ಅಮೆರಿಕ ಭಾರತ ದೇಶಗಳ ನಡುವೆ ಮುಂಗಾರು ಹಾಗೂ ಹವಾಮಾನ ಮುನ್ಸೂಚನೆಯ ಸುಧಾರಣೆಯ ಕಾರಣಗಳಿಂದ ಉಭಯ ದೇಶಗಳ 2 ಸಂಸ್ಥೆಗಳು ಮುಂಗಾರು ದತ್ತಾಂಶವನ್ನು ವಿಶ್ಲೇಷಿಸುವ ಒಪ್ಪಂದಕ್ಕೆ ಪರಸ್ಪರ ಒಪ್ಪಿ ಸಹಿ ಹಾಕಿವೆ.
* ಅಮೆರಿಕ ಭಾರತ ದೇಶಗಳ ನಡುವಿನ ಈ ಒಪ್ಪಂದಕ್ಕೆ ಭಾರತದ ರಾಷ್ಟ್ರೀಯ ಸಾಗರ ತಂತ್ರಜ್ಞಾನ ಸಂಸ್ಥೆಯ ನಿರ್ದೇಶಕರಾದ ಜಿ.ಎ. ರಾಮದಾಸ್ ಹಾಗೂ ಅಮೇರಿಕದ ನ್ಯಾಷನಲ್ ಓಷನಿಕ್ ಅಂಡ್ ಅಟ್ಮಾಸ್ಫೆರಿಕ್ ಅಡ್ಮಿನಿಸ್ಟ್ರೇಷನ್ ನ ಹಂಗಾಮಿ ಮುಖ್ಯ ವಿಜ್ಞಾನಿ ಕ್ರೇಗ್ ಮ್ಯಾಕ್‌ಲಿಯನ್ ಅವರು ಈ ಸಹಿ ಹಾಕಿದ್ದಾರೆ.
* ಈ ಹಿಂದೆ ಅಕ್ಟೋಬರ್ ತಿಂಗಳಿನಲ್ಲಿ ಭಾರತದ ಭೂ ವಿಜ್ಞಾನ ಸಚಿವಾಲಯ ಹಾಗೂ ಎನ್‌ಓಎಎ ಮಧ್ಯೆ ಆಗಿರುವ ಭೂ ವಿಜ್ಞಾನ

ಕ್ಷೇತ್ರದಲ್ಲಿ ತಾಂತ್ರಿಕ ಸಹಕಾರದ ಒಡಂಬಡಿಕೆಯ ಮುಂದಿನ ಭಾಗವಾಗಿ ಈ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

* ಈ ಹಿಂದೆ ಅಮೇರಿಕದಲ್ಲಿನ ಭಾರತೀಯ ರಾಯಭಾರಿ ತರಣ್‌ಜಿತ್ ಸಿಂಗ್ ಸಂಧು ಹಾಗೂ ಅಮೇರಿಕದ ವಾಣಿಜ್ಯ ಇಲಾಖೆಯ ಸಹಾಯಕ ಕಾರ್ಯದರ್ಶಿ ಹಾಗೂ ಹಂಗಾಮಿ ಆಡಳಿತಾಧಿಕಾರಿ ಡಾ. ನೇಲ್ ಎ ಜಾಕೋಬ್ಸ್ ಅವರು ಈ ಭೂ ವಿಜ್ಞಾನ ಕ್ಷೇತ್ರದಲ್ಲಿ ತಾಂತ್ರಿಕ ಸಹಕಾರದ ಒಡಂಬಡಿಕೆಗೆ ಸಹಿ ಹಾಕಿದ್ದರು.

## ಲಿಯೊನೆಲ್ ಮೆಸ್ಸಿ ಪ್ಯಾರೀಸ್ ಸೈಂಟ್ ಜಮೈನ್ ಕ್ಲಬ್ ಜತೆ ಒಪ್ಪಂದ



* ಅರ್ಜೆಂಟೀನಾದ ಪ್ರತಿಷ್ಠಿತ ಫುಟ್ ಬಾಲ್ ಆಟಗಾರ ಲಿಯೊನೆಲ್ ಮೆಸ್ಸಿ ಅವರು ಇತ್ತೀಚಿಗೆ ಬಾರ್ಸಿಲೋನಾ ಫುಟ್ಬಾಲ್ ಕ್ಲಬ್ ಜತೆಗಿನ ಒಪ್ಪಂದ ಮುಕ್ತಾಯದ ನಂತರ ಹೊರಬಂದಿದ್ದರು, ಇದೀಗ ಲಿಯೊನೆಲ್ ಮೆಸ್ಸಿ ಅವರು ಪ್ಯಾರೀಸ್ ಸೈಂಟ್ ಜಮೈನ್ (PSG) ಕ್ಲಬ್ ಜೊತೆಗೆ '2' ವರ್ಷಗಳ ಅವಧಿಗೆ ಒಪ್ಪಂದ ಮಾಡಿಕೊಂಡಿದ್ದಾರೆ ಎಂದು ಪಿಎಸ್‌ಜಿ ಪ್ರಕಟಣೆಯಲ್ಲಿ ತಿಳಿಸಿದೆ.

* ಲಿಯೊನೆಲ್ ಮೆಸ್ಸಿ ಅವರು ಪ್ಯಾರೀಸ್ ಸೈಂಟ್ ಜಮೈನ್ (PSG) ಕ್ಲಬ್ ಜೊತೆ ನನ್ನ ವೃತ್ತಿ ಜೀವನದ ಹೊಸ ಅಧ್ಯಾಯ ಪ್ರಾರಂಭಿಸಲು ಖುಷಿಯಾಗುತ್ತದೆ ಎಂದು ತಿಳಿಸಿದರು.

## ಇಸ್ರೋ ಭೂ ಪರಿವೀಕ್ಷಣೆ ಉಪಗ್ರಹ EOS 03 ಯಶಸ್ವಿಯಾಗಿ ಉಡಾವಣೆ ಮಾಡಿದೆ



* ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ISRO) ಇದೀಗ ಭೂ ಪರಿವೀಕ್ಷಣೆ EOS 03 ಉಪಗ್ರಹವನ್ನು ಯಶಸ್ವಿಯಾಗಿ ಉಡಾವಣೆ ಮಾಡಿದೆ.

* ಈ ಉಪಗ್ರಹವು ಶ್ರೀಹರಿಕೋಟದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಜಿಎಸ್‌ಎಲ್‌ವಿ ಎಫ್10 ರಾಕೆಟ್ ಬಳಸಿಕೊಂಡು ಬೆಳಗ್ಗೆ ಸಮಯ 05.43 ಕ್ಕೆ ಉಡಾವಣೆಯಾಗಿದೆ ಎಂದು ಇಸ್ರೋ ತಿಳಿಸಿದೆ.

* ಈ ಉಪಗ್ರಹವು ಮೇಘಸ್ಫೋಟ ಸೇರಿದಂತೆ, ಕೃಷಿ, ಅರಣ್ಯ, ಜಲಮೂಲಗಳು, ನೈಸರ್ಗಿಕ ವಿಕೋಪಗಳ ಮೇಲ್ವಿಚಾರಣೆಯನ್ನು ಮಾಡುತ್ತದೆ ಅಲ್ಲದೇ ದೇಶದ ನೈಜ ಸಮಯದ ಚಿತ್ರಗಳನ್ನು ಸಂಗ್ರಹಿಸುವ ಸಾಮರ್ಥ್ಯವನ್ನು ಹೊಂದಿದೆ, ಹಾಗೂ ಈ ಉಪಗ್ರಹ ಯೋಜನೆಯು 10 ವರ್ಷಗಳವರೆಗೆ ಮುಂದೆ ಸಾಗಲಿದೆ ಎಂದು ಇಸ್ರೋ ತಿಳಿಸಿದೆ.

* ಈ ಹಿಂದೆ ಫೆಬ್ರುವರಿ ತಿಂಗಳಿನಲ್ಲಿ ಬ್ರೆಜಿಲ್ ನ ಭೂ ಪರಿವೀಕ್ಷಣಾ ಉಪಗ್ರಹ ಅಮೇಜಾನಿಯಾ ೧ ಉಡಾವಣೆ ಮಾಡಲಾಗಿದೆ ಎಂದು ಇಸ್ರೋ ತಿಳಿಸಿದೆ.

## ಅಫ್ಘಾನಿಸ್ತಾನದಲ್ಲಿನ ಭಾರತದ ಹೆಲಿಕಾಪ್ಟರ್ ತಾಲಿಬಾನ್ ಉಗ್ರರ ವಶಕ್ಕೆ



* ಪ್ರಸ್ತುತ ಭಾರತ ಸರ್ಕಾರವು 2019 ರಲ್ಲಿ ಉಡುಗೊರೆ ರೂಪದಲ್ಲಿ ಅಫ್ಘಾನಿಸ್ತಾನ ದೇಶಕ್ಕೆ ಎಂಐ 24 ವಿ ಕದನ ಹೆಲಿಕಾಪ್ಟರ್'ನ್ನು ನೀಡಿತ್ತು, ಇದೀಗ ಆ ಹೆಲಿಕಾಪ್ಟರ್'ನ್ನು ತಾಲಿಬಾನ್ ಉಗ್ರರು ವಶಪಡಿಸಿಕೊಂಡಿದ್ದಾರೆ.

* ಪ್ರಸ್ತುತ ಉತ್ತರ ಅಫ್ಘಾನಿಸ್ತಾನದ ಕುಂದುಜ್ ವಿಮಾನ ನಿಲ್ದಾಣವನ್ನು ತಾಲಿಬಾನ್ ಉಗ್ರರು ತಮ್ಮ ವಶಕ್ಕೆ ಪಡೆದುಕೊಂಡಿದ್ದಾರೆ ಅದರಲ್ಲಿ ಭಾರತ ನೀಡಿರುವ ಹೆಲಿಕಾಪ್ಟರ್ ಕೂಡ ಇದೆ ಎಂದು ತಿಳಿದು ಬಂದಿದೆ.

* ಈ ಹಿಂದೆ 2019 ರಲ್ಲಿ ಭಾರತ ಸರ್ಕಾರವು (4) ನಾಲ್ಕು ಎಂಐ 24 ವಿ ಹೆಲಿಕಾಪ್ಟರ್‌ಗಳನ್ನು ಅಫ್ಘಾನಿಸ್ತಾನ ವಾಯುಪಡೆಗೆ ಉಡುಗೊರೆ ರೂಪದಲ್ಲಿ ನೀಡಿತ್ತು, ಅವುಗಳಲ್ಲಿ ಇದೀಗ ಒಂದು ಕದನ ಹೆಲಿಕಾಪ್ಟರ್ ತಾಲಿಬಾನ್ ಉಗ್ರರು ವಶಪಡಿಸಿಕೊಂಡಿದ್ದಾರೆ.

* ತಾಲಿಬಾನ್ ಉಗ್ರರು ಅಫ್ಘಾನಿಸ್ತಾನ ಕುಂದುಜ್ ರಾಜಧಾನಿ ಪ್ರದೇಶದಲ್ಲಿ ಸೈನಿಕರ ವಿರುದ್ಧ ಹೋರಾಡಿ ಇಡೀ ನಗರವನ್ನು ವಶಕ್ಕೆ ಪಡೆದುಕೊಂಡರು, ಅಲ್ಲದೇ ವಿಮಾನ ನಿಲ್ದಾಣದಲ್ಲಿರು ಸೈನಿಕರು ಉಗ್ರರಿಗೆ ಶರಣಾಗಿ ತಮ್ಮ ಸೇನಾ ಶಸ್ತ್ರಾಸ್ತ್ರ, ವಾಹನಗಳು ಹಾಗೂ ಇನ್ನಿತರ ಸಲಕರಣೆಗಳನ್ನು ಉಗ್ರರ ವಶಕ್ಕೆ ನೀಡಿದ್ದಾರೆ ಎಂದು ತಿಳಿದು ಬಂದಿದೆ.

* ತಾಲಿಬಾನ್ ಉಗ್ರರು ವಿಮಾನ ನಿಲ್ದಾಣವನ್ನು ವಶಕ್ಕೆ ಪಡೆದಿರುವ ವಿಡಿಯೊವನ್ನು ಹಾಗೂ ಹಲವು ಚಿತ್ರಗಳನ್ನು ಪೋಸ್ಟ್ ಮಾಡಿದ್ದಾರೆ.

## ಬಾಲಾಪರಾಧಿಗಳ ವಯೋಮಿತಿ ಇಳಿಕೆ ಇಲ್ಲ



* ಪ್ರಸ್ತುತ ಗೃಹ ಖಾತೆ ವ್ಯವಹಾರಗಳ ಸಂಸದೀಯ ಸ್ಥಾಯಿ ಸಮಿತಿಯು ಬಾಲಾಪರಾಧಿಗಳ ವಯೋಮಿತಿಯನ್ನು 16 ವರ್ಷಕ್ಕೆ ಇಳಿಕೆ ಮಾಡುವುದು ಬೇಡವೆಂದು ಸರ್ಕಾರಕ್ಕೆ ಶಿಫಾರಸು ಮಾಡಿದೆ.

* ಪ್ರಸ್ತುತ 18 ವರ್ಷ ವಯಸ್ಸಿನವರನ್ನು ಶಿಕ್ಷಿಸಲು ಪೋಕ್ಸೋ ಕಾಯ್ದೆ ಪ್ರಬಲವಾಗಿದೆ, ಈ ಕಾರಣದಿಂದ ನಿಗದಿಪಡಿಸಿದ 18 ವರ್ಷ ವಯೋಮಿತಿಯನ್ನು 16 ವರ್ಷಕ್ಕೆ ಇಳಿಸಬೇಕಾದ ಅನಿವಾರ್ಯತೆವಿರುವದಿಲ್ಲ ಎಂದು ಸಂಸದೀಯ ಸಮಿತಿಯು ತನ್ನ ಅಭಿಪ್ರಾಯವನ್ನು ತಿಳಿಸಿದೆ.

* ಪೋಕ್ಸೋ ಕಾಯ್ದೆ ಅಡಿಯಲ್ಲಿ 18 ವರ್ಷ ಆಸುಪಾಸಿನ ಮಕ್ಕಳು ಅಪರಾಧ ಪ್ರಕರಣಗಳಲ್ಲಿ ತೊಡಗಿಕೊಂಡಿರುವುದು ಪೋಲಿಸ್ ದಾಖಲೆಗಳಿಂದ ತಿಳಿದು ಬರುತ್ತಿದೆ.
* 2015 ರ ಪೋಕ್ಸೋ ಕಾನೂನಿನ ಅನ್ವಯ ಬಾಲಾಪರಾದಿಗಳಿಗೆ ಶಿಕ್ಷೆ ನೀಡಲಾಗುತ್ತಿದೆ, ಇದರಿಂದಾಗಿ ಬಾಲಾಪರಾದಿ ವಯಸ್ಸಿನ ಮಿತಿಯನ್ನು 16 ವರ್ಷಕ್ಕೆ ಇಳಿಸುವ ಪ್ರಸ್ತಾವನೆಯನ್ನು ಕೈಬಿಡಲಾಗಿದೆ ಎಂದು ತಿಳಿಸಿದ್ದಾರೆ.

## NMHC ಯನ್ನು ಅಂತಾರಾಷ್ಟ್ರೀಯ ಪ್ರವಾಸಿ ತಾಣವಾಗಿ ಅಭಿವೃದ್ಧಿ



* ನ್ಯಾಷನಲ್ ಮಾರಿಟೈಮ್ ಹೆರಿಟೇಜ್ ಕಾಂಪ್ಲೆಕ್ಸ್ (NMHC)ನ್ನು ಅಂತರಾಷ್ಟ್ರೀಯ ಪ್ರವಾಸಿ ತಾಣವಾಗಿ ಅಭಿವೃದ್ಧಿಪಡಿಸಲಾಗುವದು, ಹಾಗೂ ಇದು ಗುಜರಾತ್‌ನ ಲೋಥಲ್‌ನಲ್ಲಿ ಭಾರತದ ಕಡಲ ಪರಂಪರೆಯ ಪರಂಪರೆಗೆ ಸಾಕ್ಷಿಯಾಗಿದೆ.
* ಪ್ರಸ್ತುತ ಕಡಲತೀರದ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಪ್ರವಾಸಿಗರನ್ನು ಆಕರ್ಷಣೆ ಮಾಡುವ ನಿಟ್ಟಿನಲ್ಲಿ ರಾಷ್ಟ್ರೀಯ ಕಡಲ ಪರಂಪರೆಯ ವಸ್ತುಸಂಗ್ರಹಾಲಯ, ಕಡಲ ಸಂಶೋಧನಾ ಸಂಸ್ಥೆ, ಹೆರಿಟೇಜ್ ಥೀಮ್ ಪಾರ್ಕ್, ಭೂದೃಶ್ಯ ಮತ್ತು ಮನರಂಜನಾ ಸ್ಥಳಗಳನ್ನು ಒಳಗೊಂಡಿರಲಿದೆ, ಹಾಗೂ ಈ ತಾಣವನ್ನು ಭಾರತದ ಕಡಲ ಪರಂಪರೆಯನ್ನು ಪ್ರದರ್ಶಿಸಲು ಬಳಕೆ ಮಾಡಲಾಗುತ್ತದೆ ಎಂದು ತಿಳಿಸಿದೆ.
* ಇದೀಗ ಗುಜರಾತಿನ ಲೋಥಲ್ ಪ್ರದೇಶದಲ್ಲಿ NMHC ಯನ್ನು ಅಂತರಾಷ್ಟ್ರೀಯ ಪ್ರವಾಸಿ ತಾಣವಾಗಿ ಅಭಿವೃದ್ಧಿಪಡಿಸಲಾಗುವುದು ಎಂದು ತಿಳಿಸಿದ್ದಾರೆ, ಸದ್ಯ ಈ ಪ್ರದೇಶವು ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೆ ಭಾರತದ ಕಡಲ ಪರಂಪರೆಯನ್ನು ತೋರಲಿದೆ ಎಂದು ತಿಳಿಸಿದ್ದಾರೆ.
* ಈ ಪ್ರದೇಶವು ಭಾರತದ ಎಲ್ಲಾ ಕರಾವಳಿ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳು ಕಲಾಕೃತಿಗಳನ್ನು ಪ್ರದರ್ಶಿಸುವ ಮಂಟಪಗಳನ್ನು ಹೊಂದಿದೆ.

## ಹಾಂಗ್ ಕಾಂಗ್ ಚೀನಾದ ನಿರ್ಬಂಧ ವಿರೋಧಿ ಕಾನೂನನ್ನು ಅಳವಡಿಸಿಕೊಳ್ಳಲು ಸಿದ್ಧವಾಗಿದೆ



* ಚೀನಾದ ನಿರ್ಬಂಧ ವಿರೋಧಿ ಕಾನೂನನ್ನು ಹಾಂಕಾಂಗ್ ಜಾರಿಗೆ ತರಲು ಸಿದ್ಧವಾಗಿದೆ, ಈ ದೇಶದಲ್ಲಿ ಕೆಲ ರೂಪದಲ್ಲಿ ಜಾರಿಗೆ ತರಲಿದೆ ಹಾಗೂ ಅಂತರಾಷ್ಟ್ರೀಯ ಕಂಪನಿಗಳ ಮೇಲೆ ಹೊಸ ನಿಯಂತ್ರಣವನ್ನು ಹೇರಲಿದೆ ಎಂದು ತಿಳಿಸಿದೆ.
* ಹಾಂಗ್ ಕಾಂಗ್ ಮತ್ತು ಕ್ಸಿನ್ ಜಿಯಾಂಗ್'ನಲ್ಲಿನ ದಮನದ ನಂತರ ಅಂದರೆ 2021 ರ ಜೂನ್ ನಲ್ಲಿ ಹೇರಲಾದ ಪಾಶ್ಚಾತ್ಯ ದಂಡಗಳನ್ನು ಎದುರಿಸಲು ಅಂಗೀಕರಿಸಿದ ರಬ್ಬರ್ ಸ್ಟಾಂಪ್ ಶಾಸಕಾಂಗವು ಚೀನಾದಲ್ಲಿ ನಿರ್ಬಂಧ ವಿರೋಧಿ ಕಾನೂನನ್ನು ಅಂಗೀಕರಿಸಿತು.
* ಪ್ರಸ್ತುತ ಚೀನಾದ ಸಾರ್ವಭೌಮತ್ವ, ಭದ್ರತೆ ಹಾಗೂ ಅಭಿವೃದ್ಧಿ ಹಿತಾಸಕ್ತಿಗಳನ್ನು ರಕ್ಷಿಸಿಕೊಳ್ಳುವುದು, ಈ ನಿರ್ಬಂಧಗಳ ವಿರೋಧಿ ಕಾನೂನಿನ ಮೂಲ ಉದ್ದೇಶವಾಗಿದೆ.
* ಹಾಂಗ್ ಕಾಂಗ್ ಪೀಪಲ್ಸ್ ರಿಪಬ್ಲಿಕ್ ಆಫ್ ಚೀನಾದ ವಿಶೇಷ ಆಡಳಿತ ಪ್ರದೇಶವಾಗಿದೆ.
* ಹಾಂಗ್ ಕಾಂಗ್ ನ ಮೊದಲ ಅಫೀಮು ಯುದ್ಧದ ನಂತರ ಕ್ವಿಂಗ್ ಸಾಮ್ರಾಜ್ಯವು ಕ್ಸಿನಾನ್ ಕೌಂಟಿಯಿಂದ ಹಾಂಗ್ ಕಾಂಗ್ ದ್ವೀಪವನ್ನು ಬಿಟ್ಟುಕೊಟ್ಟ ತದನಂತರ ಅಂದರೆ 1841 ರಲ್ಲಿ ಹಾಂಗ್ ಕಾಂಗ್ ನ್ನು ಬ್ರಿಟಿಷ್ ಸಾಮ್ರಾಜ್ಯದ ವಸಾಹತು ಎಂದು ಸ್ಥಾಪನೆ ಮಾಡಲಾಗಿದೆ.

## 2020 ರ ಜಾಗತಿಕ ಯುವ ಅಭಿವೃದ್ಧಿ ಸೂಚ್ಯಂಕ



* ಭಾರತ ದೇಶವು 2020 ರ ಜಾಗತಿಕ ಯುವ ಅಭಿವೃದ್ಧಿ ಸೂಚ್ಯಂಕದ 181 ದೇಶಗಳ ಪೈಕಿ 122 ನೇ ಸ್ಥಾನದಲ್ಲಿದೆ.
* 2020 ರ ಜಾಗತಿಕ ಯುವ ಅಭಿವೃದ್ಧಿ ಸೂಚ್ಯಂಕದಲ್ಲಿ ಸಿಂಗಾಪುರ ದೇಶವು ಮೊದಲ ಬಾರಿಗೆ ಅಗ್ರಸ್ಥಾನದಲ್ಲಿದೆ, ನಂತರದ ಸ್ಥಾನಗಳಲ್ಲಿ ಸ್ಲೊವೇನಿಯಾ, ನಾರ್ವೆ, ಮಾಲ್ಟಾ ಮತ್ತು ಡೆನ್ಮಾರ್ಕ್ ದೇಶಗಳಿವೆ.
* 2020 ರ ಜಾಗತಿಕ ಯುವ ಅಭಿವೃದ್ಧಿ ಸೂಚ್ಯಂಕದಲ್ಲಿ ಕೆಳಗಿನ ದೇಶಗಳು: ಸೇರಿವೆ ಚಾಡ್, ಮಧ್ಯ ಆಫ್ರಿಕಾ ಗಣರಾಜ್ಯ, ದಕ್ಷಿಣ ಸುಡಾನ್, ಅಫ್ಘಾನಿಸ್ತಾನ ಮತ್ತು ನೈಜರ್ ದೇಶಗಳಿವೆ.
* ವಿಶ್ವಾದ್ಯಂತ ಯುವಜನರ ಸ್ಥಿತಿಯು ಅನಾದರೆ 2010 ಮತ್ತು 2018 ರ ಮಧ್ಯೆ 3.1 ಶೇಕಡಾದಷ್ಟು ಸುಧಾರಿಸಿದೆ ಎಂದು ಸೂಚ್ಯಂಕವು ತಿಳಿಸಿದೆ.
* ಈ ಸೂಚ್ಯಂಕವು ದೇಶಗಳ ಶಿಕ್ಷಣ, ಆರೋಗ್ಯ, ಉದ್ಯೋಗ, ಸಮಾನತೆ ಮತ್ತು ಸೇರ್ಪಡೆ, ರಾಜಕೀಯ ಹಾಗೂ ಸಾಕ್ಷರತೆ, ಮತದಾನ ಸೇರಿ 27 ಸೂಚಕಗಳ ಆಧಾರದ ಮೇಲೆ ಸ್ಕೋರ್‌ನ್ನು ನೀಡುತ್ತದೆ.

# 13-08-2021

## ಕೇಂದ್ರ ಗೃಹ ಕಾರ್ಯದರ್ಶಿ ಅಜಯ್ ಕುಮಾರ್ ಭಲ್ಲಾ ಸೇವಾವಧಿ ಒಂದು ವರ್ಷ ವಿಸ್ತರಣೆ



* ಪ್ರಸ್ತುತ ಕೇಂದ್ರ ಸಿಬ್ಬಂದಿ ಸಚಿವಾಲಯವು ಕೇಂದ್ರ ಗೃಹ ಕಾರ್ಯದರ್ಶಿ ಅಜಯ್ ಕುಮಾರ್ ಭಲ್ಲಾ ಅವರ ಸೇವಾ ಅವಧಿಯನ್ನು ಒಂದು ವರ್ಷದವರೆಗೆ ವಿಸ್ತರಿಸಲಾಗಿದೆ ಎಂದು ಅಧಿಕೃತವಾಗಿ ಆದೇಶಿಸಿದೆ.
* ಅಜಯ್ ಕುಮಾರ್ ಭಲ್ಲಾ ಅವರು ಅಸ್ಸಾಂ ಮೇಘಾಲಯ ಕೇಡರ್‌ನ 1984ನೇ ಬ್ಯಾಚ್'ನ IAS ಅಧಿಕಾರಿಯಾಗಿದ್ದಾರೆ, ಇವರನ್ನು ಕೇಂದ್ರ ಗೃಹ ಕಾರ್ಯದರ್ಶಿಯಾಗಿ 2019ರಲ್ಲಿ ನೇಮಕ ಮಾಡಲಾಗಿದೆ.

## ನ್ಯಾ. ನಾರಿಮನ್ ಸುಪ್ರೀಂ ಕೋರ್ಟ್‌ನಿಂದ ನಿವೃತ್ತಿ



* ಐತಿಹಾಸಿಕ ತೀರ್ಪುಗಳ ಸರದಾರ ನ್ಯಾ. ರೋಹಿಂಟನ್ ಫಾಲಿ ನಾರಿಮನ್, ಸುಪ್ರೀಂ ಕೋರ್ಟ್‌ನಿಂದ ಇತ್ತೀಚಿಗೆ ನಿವೃತ್ತರಾಗಿದ್ದಾರೆ.
* ನ್ಯಾ. ನಾರಿಮನ್ ಅವರು 2014ರ ಜು. 7ರಂದು ಸುಪ್ರೀಂ ಕೋರ್ಟ್ ನ್ಯಾಯಾಮೂರ್ತಿಯಾಗಿ ಅಧಿಕಾರ ಸ್ವೀಕರಿಸಿದ್ದರು ಸರಿ ಸುಮಾರು 13,500ಕ್ಕೂ ಅಧಿಕ ಪ್ರಕರಣಗಳ ತೀರ್ಪುಗಳನ್ನು ನೀಡಿದ್ದಾರೆ.
* ನ್ಯಾ. ನಾರಿಮನ್ ಅವರು ಮೂಲಭೂತ ಹಕ್ಕುಗಳ ಸಂರಕ್ಷಣೆ, ಐಟಿ (IT) ಕಾಯ್ದೆಯಡಿ ಬಂಧಿಸುವ ಅಧಿಕಾರವನ್ನು ರದ್ದು ಮಾಡಿದ್ದಾರೆ, ಹಾಗೂ ಸಲಿಂಗ ಕಾಮವನ್ನು ಶಿಕ್ಷಾರ್ಹ ಪ್ರಕರಣಗಳ, ಮತ್ತು ಶಬರಿಮಲೆ ದೇಗುಲಕ್ಕೆ ಎಲ್ಲಾ ವಯೋಮಾನದ ಮಹಿಳೆಯರ ಪ್ರವೇಶಕ್ಕೆ ಅವಕಾಶ ಕಲ್ಪಿಸಿದ್ದಾರೆ, ಇನ್ನು ಅನೇಕ ಪ್ರಕರಣಗಳಲ್ಲಿ ಐತಿಹಾಸಿಕ ತೀರ್ಪು ನೀಡಿದ್ದಾರೆ.

## ಮಹಿಳಾ ಸೈನಿಕರ ಕನ್ಯತ್ವ ಪರೀಕ್ಷೆ ರದ್ದು ಪಡಿಸಿದ ಇಂಡೊನೇಷ್ಯಾ



* ಇಂಡೊನೇಷ್ಯಾದ ಸೇನೆಗೆ ಹೊಸದಾಗಿ ಸೇವೆಗೆ ಸೇರಿಕೊಳ್ಳುವ ಮಹಿಳಾ ಸೈನಿಕರಿಗೆ ಕಡ್ಡಾಯ ಕನ್ಯತ್ವ ಪರೀಕ್ಷೆಯನ್ನು ನಡೆಸುತ್ತಿದ್ದರು, ಇದೀಗ ಈ ಪರೀಕ್ಷೆಯನ್ನು ರದ್ದು ಪಡಿಸಿದ್ದಾರೆ, ಈ ನಿರ್ಧಾರವನ್ನು ಅಂತಾರಾಷ್ಟ್ರೀಯ ಮಾನವ ಹಕ್ಕುಗಳ ಸಂಸ್ಥೆ ಸ್ವಾಗತಿಸಿದೆ.
* ಸುಮಾರು 7 ವರ್ಷಗಳ ಹಿಂದೆ ಕನ್ಯತ್ವ ಪರೀಕ್ಷೆಗೆ ವೈಜ್ಞಾನಿಕ ಆಧಾರವಿಲ್ಲ ಎಂದು ವಿಶ್ವ ಆರೋಗ್ಯ ಸಂಸ್ಥೆ ಘೋಷಣೆ ಮಾಡಿತ್ತು, ಆದರು ಇಂಡೊನೇಷ್ಯಾ ಸೇನೆಯು ತನ್ನ ಮಹಿಳಾ ಸೈನಿಕರಿಗೆ ಕನ್ಯತ್ವ ಪರೀಕ್ಷೆಯನ್ನು ನಡೆಸುತ್ತಿತ್ತು, ಇದೀಗ ಈ ಪರೀಕ್ಷೆಯನ್ನು ರದ್ದು ಪಡಿಸಿದ್ದಾರೆ ಎಂದು ಸೇನಾ ಮುಖ್ಯಸ್ಥ ಅಂದಿಕಾ ಪೆರ್ಕಸಾ ಮಾಧ್ಯಮದ ಮುಂದೆ ಮಾಹಿತಿಯನ್ನು ನೀಡಿದ್ದಾರೆ.
* ಆದರೆ ಪ್ರಸ್ತುತ ಇಂಡೊನೇಷ್ಯಾದ ವಾಯುಪಡೆ ಹಾಗೂ ನೌಕಾಪಡೆಗಳಲ್ಲಿ ಇನ್ನು ಈ ಕನ್ಯತ್ವ ಪರೀಕ್ಷೆ ನಡೆಸಲಾಗುತ್ತಿದೆ ಈ ಪಡೆಗಳಲ್ಲಿಯೂ ಕೂಡ ಕನ್ಯತ್ವ ಪರೀಕ್ಷೆಯನ್ನು ರದ್ದುಗೊಳಿಸಬೇಕಾಗಿದೆ ಎಂದಿದ್ದಾರೆ.

## ನ್ಯೂಯಾರ್ಕ್‌ನ ಮೊದಲ ಮಹಿಳಾ ಗವರ್ನರ್ 'ಕ್ಯಾತಿ ಹೊಚುಲ್'



* ಪ್ರಸ್ತುತ ನ್ಯೂಯಾರ್ಕ್'ನ ಸರಿ ಸುಮಾರು 233 ವರ್ಷಗಳ ಸುದೀರ್ಘ ಇತಿಹಾಸದಲ್ಲಿ ಇದೇ ಮೊದಲ ಬಾರಿ ಮಹಿಳಾ ಗವರ್ನರ್ ಆಗಿ ಕ್ಯಾತಿ ಹೊಚುಲ್ ಆಯ್ಕೆಯಾಗಿದ್ದಾರೆ.
* ಈ ಹಿಂದಿನ ಗವರ್ನರ್'ಆಗಿದ್ದ ಆಂಡ್ರ್ಯೂ ಕ್ಯುಮೊ ಅವರು ತಮ್ಮ ಕಚೇರಿಯ '11' ಮಹಿಳಾ ಸಿಬ್ಬಂದಿಗಳಿಗೆ ಲೈಂಗಿಕ ಕಿರುಕಳ ನೀಡಿರುವ ಆರೋಪದ ಹಿನ್ನಲೆಯಿಂದ ರಾಜೀನಾಮೆ ನೀಡಿದ್ದಾರೆ, ಇದೀಗ ಇವರ ಸ್ಥಾನಕ್ಕೆ ಲೆಫ್ಟಿನೆಂಟ್ ಗವರ್ನರ್ ಕ್ಯಾತಿಯನ್ನು ಅವರನ್ನು ಆಯ್ಕೆಮಾಡಲಾಗಿದೆ.
* 'ಕ್ಯಾತಿ ಹೊಚುಲ್' ಅವರು ನ್ಯೂಯಾರ್ಕ್'ನ 57ನೇ ಗವರ್ನರ್ ಆಗಿ ಸೇವೆ ಸಲ್ಲಿಸಲು ಆರಂಭಿಸಿದ್ದಾರೆ.
* 'ಕ್ಯಾತಿ ಹೊಚುಲ್' ಅವರು 2014 ಮತ್ತು 2018'ರ ಚುನಾವಣೆಯಲ್ಲಿ ಜಯಿಸಿ ಅಭಿವೃದ್ಧಿ ಮಂಡಳಿಗಳ ಅಧ್ಯಕ್ಷತೆ ನಿರ್ವಹಿಸುತ್ತಿದ್ದರು, ಇದರ ಜೊತೆಯಲ್ಲಿ ಹೆರಾಯಿನ್ ಮತ್ತು ಒಪಿಯಾಡ್ ನಿಂದನೆಯನ್ನು ಎದುರಿಸುವ ಕಾರ್ಯಪಡೆಯ ಸಹ ಅಧ್ಯಕ್ಷರಾಗಿದ್ದರು.
* ಕ್ಯಾತಿ ಅವರು 2015'ರಲ್ಲಿ ಕಾಲೇಜು ಕ್ಯಾಂಪಸ್‌ಗಳಲ್ಲಿ ಆಗುವ ದೌರ್ಜನ್ಯವನ್ನು ಎದುರಿಸಲು 'ಇನಫ್ ಈಸ್ ಇನಫ್' ಎಂಬ ಅಭಿಯಾನವನ್ನು ಆರಂಭಿಸಿದ್ದರು.

## ಕೇಂದ್ರ ಸರ್ಕಾರದಿಂದ ಮಹಿಳಾ ಸ್ವಸಹಾಯ ಗುಂಪುಗಳಿಗೆ 'ಬೆಂಬಲ ನಿಧಿ' ಬಿಡುಗಡೆ



* ಪ್ರಧಾನಿ ನರೇಂದ್ರ ಮೋದಿ ಅವರು ಮಹಿಳಾ ಸ್ವಸಹಾಯ ಗುಂಪುಗಳಿಗೆ ದೀನದಯಾಳ್ ಅಂತ್ಯೋದಯ ಯೋಜನೆ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ ಅಡಿಯಲ್ಲಿ ಆರ್ಥಿಕ ಬೆಂಬಲವನ್ನ ಬಿಡುಗಡೆ ಮಾಡಿದ್ದಾರೆ.
* ಪ್ರಧಾನ ಮೋದಿ ಅವರು 4 ಲಕ್ಷಕ್ಕೂ ಅಧಿಕ ಎಸ್‌ಎಚ್‌ಜಿಗಳಿಗೆ 1,625 ಕೋಟಿ ರೂ. ಬಂಡವಾಳೀಕರಣ ಬೆಂಬಲ ನಿಧಿಯನ್ನ ಬಿಡುಗಡೆ ಮಾಡಿದ್ದಾರೆ, ಮತ್ತು ಆಹಾರ ಸಂಸ್ಕರಣಾ ಕೈಗಾರಿಕೆಗಳ ಸಚಿವಾಲಯದ ಸೂಕ್ಷ್ಮ ಆಹಾರ ಸಂಸ್ಕರಣಾ ಉದ್ಯಮಗಳ ಯೋಜನೆಯ ಪಿಎಂ ಔಪಚಾರಿಕೀಕರಣದ ಅಡಿಯಲ್ಲಿ, 7,500 ಎಸ್‌ಎಚ್‌ಜಿ ಸದಸ್ಯರಿಗೆ 25

ಕೋಟಿ ರೂ. ಹಾಗೂ ಮಿಷನ್ ಅಡಿಯಲ್ಲಿ ಪ್ರಚಾರ ಮಾಡುತ್ತಿರುವ 75 ರೈತ ಉತ್ಪಾದಕ ಸಂಸ್ಥೆಗಳಿಗೆ 4.13 ಕೋಟಿ ರೂ. ನಿಧಿಯನ್ನು ಬಿಡುಗಡೆ ಮಾಡಿದ್ದಾರೆ.

* ಮೋದಿ ಸರ್ಕಾರವು ಮಹಿಳೆಯರಿಗಾಗಿ ಬ್ಯಾಂಕ್ ಖಾತೆಗಳನ್ನು ತೆರೆದಿವೆ ಹಾಗೂ SHGಗಳಿಗೆ ಯಾವುದೇ ಖಾತರಿಯಿಲ್ಲದೆ ಸಾಲಗಳನ್ನು ನೀಡಿದ್ದೇವೆ ಎಂದು ತಿಳಿಸಿದ್ದಾರೆ.

## ವಿಶ್ವ ರ್‍ಯಾಂಕಿಂಗ್‌ನಲ್ಲಿ ನೀರಜ್ ಚೋಪ್ರಾ'ಗೆ 2ನೇ ಸ್ಥಾನ



* ಒಲಿಂಪಿಕ್ಸ್‌ನ ಅಥ್ಲೆಟಿಕ್ಸ್‌ನಲ್ಲಿ ಭಾರತಕ್ಕೆ ಮೊಟ್ಟಮೊದಲ ಬಾರಿ ಚಿನ್ನ ಪದಕವನ್ನು ಗೆದ್ದುಕೊಟ್ಟ ನೀರಜ್ ಚೋಪ್ರಾ ಅವರು ಇದೀಗ ಪುರುಷರ ಜಾವೆಲಿನ್ ಥ್ರೋ ವಿಶ್ವ ರ್‍ಯಾಂಕಿಂಗ್‌ನಲ್ಲಿ 2ನೇ ಸ್ಥಾನದಲ್ಲಿದ್ದಾರೆ.

* ಪ್ರಸ್ತುತ ವಿಶ್ವ ಅಥ್ಲೆಟಿಕ್ಸ್ ರ್‍ಯಾಂಕಿಂಗ್ಸ್ ಪ್ರಕಾರ ಜರ್ಮನಿಯ ಜೊಹಾನ್ಸ್ ವೆಟರ್ ಅವರು ಸುಮಾರು 1396 ಅಂಕಗಳನ್ನು ಪಡೆದು ಅಗ್ರಸ್ಥಾನದಲ್ಲಿದ್ದಾರೆ.

* ಭಾರತೀಯ ನೀರಜ್ ಚೋಪ್ರಾ ಅವರು ಸುಮಾರು 1315 ಅಂಕಗಳನ್ನು ಪಡೆದು 2ನೇ ಸ್ಥಾನದಲ್ಲಿದ್ದಾರೆ.

* ಇತ್ತೀಚಿಗೆ ನಡೆದ ಟೋಕಿಯೊ ಒಲಿಂಪಿಕ್ಸ್‌ನ ಜಾವೆಲಿನ್ ಥ್ರೋ ವಿಭಾಗದಲ್ಲಿ ನೀರಜ್ ಚೋಪ್ರಾ ಅವರು ಗರಿಷ್ಠ 87.58 ಮೀ. ದೂರ ಜಾವೆಲಿನ್ ಎಸೆದು ಭಾರತಕ್ಕೆ ಚಿನ್ನದ ಪದಕವನ್ನು ಗೆದ್ದುಕೊಟ್ಟಿದ್ದಾರೆ.

## ತಾಂತ್ರಿಕ ದೋಷದಿಂದ `EOS 3' ಉಪಗ್ರಹ ಕಕ್ಷೆಗೆ ತಲುಪುವಲ್ಲಿ ವಿಫಲ



* ಭಾರತೀಯ ಬಾಹ್ಯಕಾಶ ಸಂಶೋಧನಾ ಸಂಸ್ಥೆಯ (ISRO) ಭೂಮಿಯ ಪರಿವೀಕ್ಷಣೆ EOS 3 ಉಪಗ್ರಹವು ಬಾಹ್ಯಾಕಾಶದ ಭೂ ವಾತಾವರಣವನ್ನು ದಾಟಿ ಮೇಲೇರುವಾಗ 2ನೇ ಹಂತದಲ್ಲಿ ಕಕ್ಷೆಗೆ ತಲುಪುವಲ್ಲಿ ವಿಫಲವಾಗಿದೆ ಎಂದು ತಿಳಿದು ಬಂದಿದೆ.

* ಪ್ರಸ್ತುತ EOS 3 ಉಪಗ್ರಹವು GSLV F10 ಬಳಸಿ ಬೆಳಿಗ್ಗೆ ಜಾವ ಸುಮಾರು 5.45ಕ್ಕೆ ಶ್ರೀಹರಿಕೋಟದ ಸತೀಶ್ ಧವನ್ ಬಾಹ್ಯಕಾಶ ಕೇಂದ್ರದಿಂದ ಉಡಾವಣೆಯಾಗಿತ್ತು.

* ಈ EOS 3 ಉಪಗ್ರಹದ ಕ್ರಯೋಜನಿಕ್ ಯಂತ್ರದಲ್ಲಿ ತಾಂತ್ರಿಕ ದೋಷ ಕಂಡು ಬಂದ ಹಿನ್ನೆಲೆ ವಿಫಲವಾಗಿದೆ ಎಂದಿದ್ದಾರೆ, ಆದರೆ ಈ ಉಪಗ್ರಹವು 2020ರ ಮಾರ್ಚ್‌ನಲ್ಲಿ ಉಡಾವಣೆಯಾಗಬೇಕಿತ್ತು, ಆ ಸಮಯದಲ್ಲಿಯೂ ಕೂಡ ಕೊನೆಯ ಹಂತದಲ್ಲಿ ತಾಂತ್ರಿಕ ದೋಷದಿಂದ ರದ್ದಾಗಿತ್ತು.

## ಕೇಂದ್ರ ಸರ್ಕಾರವು ಫಿಟ್ ಇಂಡಿಯಾ ಫ್ರೀಡಂ ರನ್ ಆರಂಭಿಸಿದೆ




* 2021ರ ಆಗಸ್ಟ್ 13 ರಂದು ಕೇಂದ್ರ ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವ ಅನುರಾಗ್ ಠಾಕೂರ್ ಅವರು 'ಆಜಾದಿ ಕಾ ಅಮೃತ್ ಮಹೋತ್ಸವ' ಆಚರಿಸಲು ಫಿಟ್ ಇಂಡಿಯಾ ಫ್ರೀಡಂ ರನ್ 2.0 ಕಾರ್ಯಕ್ರಮವನ್ನು ದೇಶಾದ್ಯಂತ 75 'ಐಕಾನಿಕ್' ಸ್ಥಳಗಳಲ್ಲಿ ಕಾರ್ಯಕ್ರಮವನ್ನು ಆರಂಭಿಸಿದ್ದಾರೆ.

* ಈ ಫಿಟ್ ಇಂಡಿಯಾ ಫ್ರೀಡಂ ರನ್ 2.0 ಕಾರ್ಯಕ್ರಮ 2021ರ ಅಕ್ಟೋಬರ್.2 ರಂದು ಮುಕ್ತಾಯಗೊಳ್ಳಲಿದೆ ಎಂದು ತಿಳಿಸಿದ್ದಾರೆ.

* ಪ್ರಸ್ತುತ ದೆಹಲಿಯ ಮೇಜರ್ ಧ್ಯಾನ್ ಚಂದ್ ರಾಷ್ಟ್ರೀಯ ಕ್ರೀಡಾಂಗಣದಿಂದ ಫಿಟ್ ಇಂಡಿಯಾ ಫ್ರೀಡಂ ರನ್ 2.0 ಕಾರ್ಯಕ್ರಮವನ್ನು ಆರಂಭಿಸಿದ್ದಾರೆ.

* ಫಿಟ್ ಇಂಡಿಯಾ ಫ್ರೀಡಮ್ ರನ್ ಕಾರ್ಯಕ್ರಮ 744 ಜಿಲ್ಲೆಗಳು, 75 ಹಳ್ಳಿಗಳು ಮತ್ತು 744 ಜಿಲ್ಲೆಗಳು ಮತ್ತು 30,000 ಶಿಕ್ಷಣ ಸಂಸ್ಥೆಗಳಲ್ಲಿ ಆಯೋಜಿಸಲಾಗಿದೆ.

* ಈ ಹಿಂದೆ 2020'ರ ಆಗಸ್ಟ್ 15 ರಿಂದ ಅಕ್ಟೋಬರ್ 2, ವರೆಗೆ ಫಿಟ್ ಇಂಡಿಯಾ ಫ್ರೀಡಂ ರನ್'ನ ಮೊದಲ ಆವೃತ್ತಿಯನ್ನು ಆಯೋಜಿಸಲಾಗಿತ್ತು.

* ಈ ಫಿಟ್ ಇಂಡಿಯಾ ಫ್ರೀಡಂ ರನ್ ಅಭಿಯಾನದಿಂದ ಜನರು ಸೋಮಾರಿತನ, ಬೊಜ್ಜು, ಒತ್ತಡ, ಮತ್ತು ರೋಗಗಳಿಂದ ಮುಕ್ತವಾಗಿಸಲು ಈ ಕಾರ್ಯಕ್ರಮವನ್ನು ಪ್ರಾರಂಭಿಸಿದ್ದಾರೆ.

## ಘಜ್ನವಿ (Ghaznavi) ಕ್ಷಿಪಣಿಯನ್ನು ಪರೀಕ್ಷಿಸಿದ ಪಾಕಿಸ್ತಾನ



* ಪಾಕಿಸ್ತಾನ ದೇಶವು 2021ರ ಆಗಸ್ಟ್. 12ರಂದು ಮೇಲ್ಮೈಯಿಂದ ಮೇಲ್ಮೈಗೆ ಪರಮಾಣು ಸಾಮರ್ಥ್ಯದ ಘಜ್ನವಿ ಬ್ಯಾಲಿಸ್ಟಿಕ್ ಕ್ಷಿಪಣಿಯ ಯಶಸ್ವಿ ತರಬೇತಿ ಉಡಾವಣೆಯನ್ನು ನಡೆಸಿದೆ.

* ಪ್ರಸ್ತುತ ಪಾಕಿಸ್ತಾನ ಸೇನೆಯ ಕಾರ್ಯತಂತ್ರದ ಪಡೆಯ ಕಮಾಂಡ್ ಕಾರ್ಯಾಚರಣೆಯ ಸನ್ನದ್ಧತೆಯನ್ನು ಖಚಿತಪಡಿಸಿಕೊಳ್ಳಲು ಈ ತರಬೇತಿ ಆರಂಭಿಸಿದೆ.

* ಪಾಕಿಸ್ತಾನದ ಈ ಘಜ್ನವಿ ಕ್ಷಿಪಣಿಯು ಸುಮಾರು 290 ಕೀ. ಮೀ.

ವ್ಯಾಪ್ತಿಯವರೆಗೆ ವಿವಿಧ ಸಿಡಿತಲೆಗಳನ್ನು ಹೊತ್ತೊಯ್ಯುವ ಸಾಮರ್ಥ್ಯವನ್ನು ಹೊಂದಿದೆ, ಹಾಗೂ ಈ ಕ್ಷಿಪಣಿಯನ್ನು ಹಗಲು ಮತ್ತು ರಾತ್ರಿ ಎರಡು ವಿಧಾನಗಳಲ್ಲಿ ಪರೀಕ್ಷಿಸಲಾಗಿದೆ.

* ಈ ಘಜ್ನವಿ ಕ್ಷಿಪಣಿಯು ಹೈಪರ್ಸಾನಿಕ್ ಮೇಲ್ಮೈಯಿಂದ ಮೇಲ್ಮೈಗೆ ಕಡಿಮೆ ಶ್ರೇಣಿಯ ಬ್ಯಾಲಿಸ್ಟಿಕ್ ಕ್ಷಿಪಣಿಯಾಗಿದೆ, ಇದನ್ನು ಪಾಕಿಸ್ತಾನ ರಾಷ್ಟ್ರೀಯ ಅಭಿವೃದ್ಧಿ ಸಂಕೀರ್ಣದಿಂದ ಅಭಿವೃದ್ಧಿಪಡಿಸಲಾಗಿದೆ, ಅಲ್ಲದೆ ಇದಕ್ಕೆ 11ನೇ ಶತಮಾನದ ಮುಸ್ಲಿಂ ತುರ್ಕಿಕ್ ವಿಜಯಶಾಲಿಯಾದ ಘಜ್ನವಿಯ ಹೆಸರನ್ನು ಇಡಲಾಗಿದೆ, ಇದನ್ನು 2012'ರಲ್ಲಿ ಪಾಕಿಸ್ತಾನ ಸೇನೆಯ ಸೇವೆಗೆ ಸೇರ್ಪಡೆಯಾಗಿದೆ.

## ಆಗಸ್ಟ್.12: ವಿಶ್ವ ಆನೆ ದಿನ




* ವಿಶ್ವದಾದ್ಯಂತ ಆಗಸ್ಟ್.12 ರಂದು ವಿಶ್ವ ಆನೆ ದಿನವನ್ನು ಆಚರಣೆ ಮಾಡುತ್ತಾರೆ, ಈ ದಿನದಂದು ಆನೆಗಳ ಬಗ್ಗೆ ಜಾಗೃತಿ ಮೂಡಿಸಲು ಹಾಗೂ ಪರಿಸರ ವ್ಯವಸ್ಥೆಯಲ್ಲಿ ಆನೆಗಳ ಮಹತ್ವವನ್ನು ತಿಳಿಸಲು ಆಚರಿಸಲಾಗುತ್ತದೆ.

* 2020'ರ ವಿಶ್ವ ಆನೆ ದಿನದ ಥೀಮ್ 'ಹಾಥಿ ಹಮಾರ ಸಾಥಿ', ಆದರೆ 2021'ರ ವಿಶ್ವ ಆನೆ ದಿನದ ಥೀಮ್ ಇನ್ನೂ ಘೋಷಣೆ ಮಾಡಿಲ್ಲ.

* ಪ್ರಸ್ತುತ 2012ರ ಆಗಸ್ಟ್. 12ರಂದು ಮೊದಲ ವಿಶ್ವ ಆನೆ ದಿನವನ್ನು ಆಚರಿಸಲಾಗಿದೆ, ಈ ದಿನವು ಏಷ್ಯನ್ ಹಾಗೂ ಆಫ್ರಿಕನ್ ಆನೆಗಳ ದುರವಸ್ಥೆಯನ್ನು ತೋರಿಸಿದೆ.

* ಪ್ರಸ್ತುತ ಕೆನಡಾದ ಚಲನಚಿತ್ರ ನಿರ್ಮಾಪಕ ಪೆಟ್ರೀಷಿಯಾ ಸಿಮ್'ನ ದತ್ತಿ ಸಂಸ್ಥೆ 'ವರ್ಲ್ಡ್ ಎಲಿಫೆಂಟ್ ಸೊಸೈಟಿ' ಹಲವಾರು ಜನರಿಗೆ ಶಿಕ್ಷಣವನ್ನು ನೀಡಿ ಆನೆ ರಕ್ಷಣೆಗಾಗಿ ಅಂತರಾಷ್ಟ್ರೀಯ ಮಟ್ಟದಲ್ಲಿ ಜಾಗೃತಿ ಮೂಡಿಸಿದೆ, ಪ್ರಸ್ತುತ ಈ ಸೊಸೈಟಿಯು 100 ಆನೆ ಸಂರಕ್ಷಣಾ ಸಂಸ್ಥೆಗಳ ಸಹಯೋಗದೊಂದಿಗೆ ಕೆಲಸ ಮಾಡುತ್ತಿದೆ.

* ವರ್ಲ್ಡ್ ವೈಡ್ ಫಂಡ್ ಫಾರ್ ನೇಚರ್ (WWF)ನ ಪ್ರಕಾರ ಸರಿಸುಮಾರು 440,000 ಆನೆಗಳು ಭೂಮಿಯ ಮೇಲೆ ಬದುಕಿವೆ ಎಂದು ತಿಳಿಸಿದೆ.

# 14-08-2021

## ಭಾರತೀಯ ಅಂಡರ್ 19 ವಿಶ್ವಕಪ್ ವಿಜೇತ ಉನ್ಮುಕ್ತ್ ಚಂದ್ ಕ್ರಿಕೆಟಿಗೆ ವಿದಾಯ



* ಭಾರತೀಯ ಅಂಡರ್ 19 ವಿಶ್ವಕಪ್ ವಿಜೇತ ತಂಡದ ನಾಯಕನಾಗಿದ್ದ ಉನ್ಮುಕ್ತ್ ಚಂದ್ ರವರು ಕ್ರಿಕೆಟಿಗೆ ವಿದಾಯ ಘೋಷಣೆ ಮಾಡಿದ್ದಾರೆ, ಹಾಗೂ ವಿದೇಶಿ ಲೀಗ್‌ಗಳಲ್ಲಿ ಆಡುವದೇ ಮುಂದಿನ ಗುರಿಯಾಗಿದೆ ಎಂದಿದ್ದಾರೆ.

* 2012 ರ ಅಂಡರ್ 19 ವಿಶ್ವಕಪ್ ಫೈನಲ್‌ನಲ್ಲಿ ಆಸ್ಟ್ರೇಲಿಯ ವಿರುದ್ಧ ಉನ್ಮುಕ್ತ್ ಚಂದ್ ಅವರು ಅಜೇಯ 111 ರನ್ ಕಲೆಹಾಕಿ ಭಾರತಕ್ಕೆ ಚಾಂಪಿಯನ್ ಪಟ್ಟವನ್ನು ತಂದು ಕೊಟ್ಟಿದ್ದಾರೆ.

* ಉನ್ಮುಕ್ತ್ ಚಂದ್ ಅವರು 67 ಪ್ರಥಮ ದರ್ಜೆ ಪಂದ್ಯಗಳಲ್ಲಿ 3,379 ರನ್, 120 ಲಿಸ್ಟ್ ಎ ಪಂದ್ಯಗಳಲ್ಲಿ 4,505 ರನ್, ಟಿ20 ಕ್ರಿಕೆಟ್‌ನಲ್ಲಿ 1,565 ರನ್ ಬಾರಿಸಿದ ಇತಿಹಾಸ ಇವರದಿದೆ.

## ಜರ್ಮನಿಯಲ್ಲಿನ ಬರ್ಲಿನ್ ಗೋಡೆಗೆ 60 ವರ್ಷದ ಸ್ಮರಣಾರ್ಥ ಕಾರ್ಯಕ್ರಮ



* ಪೂರ್ವ ಜರ್ಮನ್ ಅಧಿಕಾರಿಗಳು ಪೂರ್ವ ಹಾಗೂ ಪಶ್ಚಿಮ ಜರ್ಮನಿ ಬೇರ್ಪಡಿಸಲು ನಿರ್ಮಿಸಿರುವ ಬರ್ಲಿನ್ ಗೋಡೆಗೆ ಇದೀಗ 60 ವರ್ಷ ಪೂರೈಸಿದೆ ಈ ಹಿನ್ನಲೆಯಲ್ಲಿ ಜರ್ಮನಿಯಲ್ಲಿ ಬರ್ಲಿನ್ ಗೋಡೆಯ ಸ್ಮರಣೆ ಕಾರ್ಯಕ್ರಮ ನಡೆಸಲಾಗಿದೆ.

* ಈ ಗೋಡೆಯು 1961 ರ ಆಗಸ್ಟ್. 13 ರಂದು ನಿರ್ಮಾಣ ಆರಂಭಿಸಿದ ಕಮ್ಯುನಿಸ್ಟ್ ರ ಆಡಳಿತಕ್ಕೆ ಅಂತ್ಯದ ಆರಂಭವಾಗಿದೆ ಎಂದು ತಿಳಿಸಿದ್ದಾರೆ, ಹಾಗೂ ಆ ಸಂಧರ್ಭದಲ್ಲಿ ಫ್ಯಾಸಿಸಂನಿಂದ ಜರ್ಮನಿಯ ದೇಶವನ್ನು ರಕ್ಷಣೆ ಮಾಡಲು ಈ ಬರ್ಲಿನ್ ಗೋಡೆಯನ್ನು ನಿರ್ಮಿಸಲಾಗಿದೆ ಎಂದಿದ್ದಾರೆ.

* ಪ್ರಸ್ತುತ ಈ ಬರ್ಲಿನ್ ಗೋಡೆಯು 155 ಕೀ.ಮೀ. ವರೆಗೆ ವಿಸ್ತರಿಸಿದೆ, ಈ ಗೋಡೆಯನ್ನು ದಾಟಲು ಜನರು ಸಾಮೂಹಿಕ ಪ್ರತಿಭಟನೆಗಳನ್ನು ನಡೆಸಿದರು ಇಅದನ್ನ ಅರಿತ ಪೂರ್ವ ಜರ್ಮನಿಯ ಅಧಿಕಾರಿಗಳು ಅನಿವಾರ್ಯವಾಗಿ ಗೋಡೆಯ ಗೇಟುಗಳನ್ನು ತೆರೆಯಬೇಕಾಯಿತು, ಇದಾದ ಒಂದೇ ವರ್ಷದಲ್ಲಿ ಪೂರ್ವ ಮತ್ತು ಪಶ್ಚಿಮ ಜರ್ಮನಿ ಮತ್ತೆ ಒಗ್ಗಟ್ಟಾದವು.

## ಭಾರತೀಯ ಮಹಿಳಾ ಫುಟ್‌ಬಾಲ್ ತಂಡಕ್ಕೆ ಮುಖ್ಯ ಕೋಚ್ ಆಗಿ ಥಾಮಸ್ ಡೆನ್ನರ್ಬಿ



* ಪ್ರಸ್ತುತ ಭಾರತೀಯ ಮಹಿಳಾ ಫುಟ್‌ಬಾಲ್ ತಂಡದ ಮುಖ್ಯ ಕೋಚ್ ಆಗಿ ಥಾಮಸ್ ಡೆನ್ನರ್‌ಬಿ ಅವರು ಅತೀ ಶೀಘ್ರವೇ ಅಧಿಕಾರವನ್ನು ಸ್ವೀಕಾರ ಮಾಡಲಿದ್ದಾರೆ ಎಂದು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್

ಪ್ರಧಾನ ಕಾರ್ಯದರ್ಶಿ ಕುಶಲ್ ದಾಸ್ ತಿಳಿಸಿದ್ದಾರೆ.
* ಸ್ವೀಡನ್ ದೇಶದ ಥಾಮಸ್ ಡೆನ್ನರ್ಬಿ ಅವರು ಈ ಮೊದಲು ಭಾರತದ 17 ವರ್ಷದೊಳಗಿನ ಮಹಿಳಾ ತಂಡದ ಮುಖ್ಯ ಕೋಚ್ ಆಗಿದ್ದರು.
* ಪ್ರಸ್ತುತ 2022 ರಲ್ಲಿ ಭಾರತದಲ್ಲೇ ನಡೆಯುವ ಎಎಫ್‌ಸಿ ಏಷ್ಯಾಕಪ್ ಟೂರ್ನಿಯ ಮಹಿಳಾ ಸೀನಿಯರ್ ತಂಡಕ್ಕೆ ಇವರ ಕೋಚ್ ಲಭಿಸಲಿದೆ.
* ಸ್ವೀಡನ್ ಮಹಿಳಾ ತಂಡವು ಥಾಮಸ್ ಅವರ ಮಾರ್ಗದರ್ಶನದಲ್ಲಿ 2011 ರ ವಿಶ್ವಕಪ್‌ನಲ್ಲಿ 3ನೇ ಸ್ಥಾನ ಪಡೆದಿದೆ, ಅಲ್ಲದೇ 2012 ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಸ್ವೀಡನ್ ಮಹಿಳಾ ತಂಡವು ಕ್ವಾರ್ಟರ್‌ಫೈನಲ್ ಹಂತವನ್ನು ತಲುಪಿತ್ತು.

## ದೇಶದ ಮೊದಲ 'ಡ್ರೋನ್ ವಿಧಿವಿಜ್ಞಾನ ಪ್ರಯೋಗಾಲಯ' ಕೇರಳ ರಾಜ್ಯದಲ್ಲಿ ಆರಂಭ



* ಪ್ರಸ್ತುತ ಕೇರಳ ರಾಜ್ಯದ ಪೊಲೀಸ್ ಇಲಾಖೆಯು ದೇಶದ ಮೊದಲ 'ಡ್ರೋನ್ ವಿಧಿವಿಜ್ಞಾನ ಪ್ರಯೋಗಾಲಯ ಹಾಗೂ ಸಂಶೋಧನಾ ಕೇಂದ್ರ'ಕ್ಕೆ ಚಾಲನೆಯನ್ನು ನೀಡಿದೆ.
* ಕೇರಳ ರಾಜ್ಯದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಕೇಂದ್ರವನ್ನು ಉದ್ಘಾಟಿಸಿದರು.
* ಡ್ರೋನ್‌ಗಳನ್ನು ಬಳಕೆ ಮಾಡಿಕೊಂಡು ನಡೆಸುವ ದಾಳಿಗಳು ದೇಶದಲ್ಲಿ ಭದ್ರತಾ ವ್ಯವಸ್ಥೆಗೆ ಒಳಪಟ್ಟಿರುವ ಸವಾಲುಗಳನ್ನು ಸಮರ್ಥವಾಗಿ ಎದುರಿಸುವ ಉದ್ದೇಶದಿಂದ ಈ ಕೇಂದ್ರವನ್ನು ಸ್ಥಾಪಿಸಲಾಗಿದೆ ಎಂದು ಪೊಲೀಸ್ ಇಲಾಖೆಯು ತಿಳಿಸಿದೆ.
* ಈ ಡ್ರೋನ್ ವಿಧಿವಿಜ್ಞಾನ ಪ್ರಯೋಗಾಲಯವು ಡ್ರೋನ್ ನಿರೋಧಕ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲಿದೆ, ಸುಮಾರು 5ಕಿ.ಮೀ. ವ್ಯಾಪ್ತಿಯಲ್ಲಿ ಹಾರಾಟ ನಡೆಸುವ ಎಲ್ಲ ಡ್ರೋನ್‌ಗಳನ್ನು ಪತ್ತೆ ಪಡುವದು ಮತ್ತು ಅವುಗಳ ಕಾರ್ಯವನ್ನು ನಿಷ್ಕ್ರಿಯಗೊಳಿಸುವ ಸಾಮರ್ಥ್ಯವನ್ನು ಈ ವ್ಯವಸ್ಥೆ ಹೊಂದಿರಲಿದೆ ಎಂದು ತಿಳಿಸಿದ್ದಾರೆ.

## ಕರ್ನಾಟಕದ ನೆಲ್ಸನ್ ಮಂಡೇಲಾ ಡಿಯೋಗ ಸಿದ್ದಿ ನಿಧನ



* ಬುಡಕಟ್ಟು ಸಿದ್ದಿ ಸಮುದಾಯದ ಪ್ರಮುಖರಾದ ಡಿಯೋಗ ಸಿದ್ದಿ ಅವರು ತಮ್ಮ 75 ನೇ ವಯಸ್ಸಿನಲ್ಲಿ ವಿಧಿವಶರಾಗಿದ್ದಾರೆ, ಹಾಗೂ ಇವರು ಕರ್ನಾಟಕದ ನೆಲ್ಸನ್ ಮಂಡೇಲಾ ಎಂಬ ಖ್ಯಾತಿಯನ್ನು ಪಡೆದಿದ್ದರು.
* ಡಿಯೋಗ ಸಿದ್ದಿ ಅವರು '5' ದಶಕಗಳಿಂದ ವಿವಿಧ ಹೋರಾಟ ಹಾಗೂ ಸಂಘಟನೆಗಳಲ್ಲಿ ಭಾಗಿಯಾಗಿದ್ದರು, ಅಲ್ಲದೇ "ಗ್ರೀನ್ ಇಂಡಿಯಾ" ಸಂಸ್ಥೆಯ ಕಾರ್ಯಕರ್ತರಾಗಿ ಸೇವೆ ಸಲ್ಲಿಸಿದ್ದಾರೆ.
* ಡಿಯೋಗ ಸಿದ್ದಿ ಅವರು ವನಶ್ರೀ ಗಿರಿಜನರ ವಿವಿಧೋದ್ದೇಶಗಳ ಸಹಕಾರ ಸಂಘವನ್ನು ಸ್ಥಾಪನೆ ಮಾಡಿ ಅದರ ಅಧ್ಯಕ್ಷ ಸ್ಥಾನವನ್ನು ವಹಿಸಿಕೊಂಡಿದ್ದರು.
* ಕರ್ನಾಟಕ ರಾಜ್ಯ ಸರ್ಕಾರವು ಡಿಯೋಗ ಸಿದ್ದಿ ಅವರು ಬುಡಕಟ್ಟು ಸಮುದಾಯದ ಏಳಿಗೆಗಾಗಿ ಶ್ರಮಿಸಿರುವ ಕಾರ್ಯವನ್ನು ಪರಿಗಣಿಸಿ 'ವಾಲ್ಮೀಕಿ ಪ್ರಶಸ್ತಿ' ಪ್ರದಾನ ನೀಡಿತ್ತು.

## ಪ್ರಧಾನಿ ನರೇಂದ್ರ ಮೋದಿ ಆಗಸ್ಟ್. 14 ನ್ನು 'ವಿಭಿಶಿಕಾ ಸ್ಮಾರಕ ದಿನ' ಎಂದು ಘೋಷಣೆ



* ಪ್ರಧಾನಿ ನರೇಂದ್ರ ಮೋದಿ ಅವರು ಆಗಸ್ಟ 14 ಅನ್ನು 'ವಿಭಜನ್ ವಿಭಿಶಿಕಾ ಸ್ಮೃತಿ ದಿನ' ಅಥವಾ 'ವಿಭಿಶಿಕಾ ಸ್ಮಾರಕ ದಿನ' ಎಂದು ಘೋಷಣೆ ಮಾಡಿದ್ದಾರೆ, ಇದೇ ಸಂಧರ್ಭದಲ್ಲಿ ದೇಶದ ವಿಭಜನೆಯ ನೋವನ್ನು ಮರೆಯಲು ಸಾಧ್ಯವಿಲ್ಲ ಎಂದು ತಿಳಿಸಿದ್ದಾರೆ.
* ಪ್ರಧಾನಿ ಮೋದಿ ಟ್ವೀಟ್ ಮೂಲಕ ನೀಡಿರುವ ಮಾಹಿತಿಯ ಪ್ರಕಾರ, ದೇಶ ವಿಭಜನೆಯ ಸಂಧರ್ಭದಲ್ಲಿ ದ್ವೇಷ ಹಾಗೂ ಹಿಂಸೆಯಿಂದ ಲಕ್ಷಾಂತರ ಜನರು ಬೇರೆ ಬೇರೆ ಸ್ಥಳಗಳಿಗೆ ಪಲಾಯನ ಮಾಡಿದರು ಹಾಗೂ ಪ್ರಾಣವನ್ನು ಕಳೆದುಕೊಂಡಿದ್ದಾರೆ, ಇದರ ಹಿನ್ನಲೆಯಿಂದ ಮತ್ತು ತ್ಯಾಗದ ನೆನಪಿಗಾಗಿ ಆಗಸ್ಟ್. 14 ನ್ನು 'ವಿಭಿಶಿಕಾ ಸ್ಮಾರಕ ದಿನ'ವಾಗಿ ಆಚರಿಸಲು ನಿರ್ಧರಿಸಲಾಗಿದೆ' ಎಂದು ತಿಳಿಸಿದ್ದಾರೆ.

## ಟೋಕಿಯೊ ಒಲಿಂಪಿಕ್ಸ್ ನಲ್ಲಿ ಚಿನ್ನ ಗೆದ್ದ ಉಕ್ರೇನ್ ಕುಸ್ತಿಪಟುಗೆ ಜನಾಂಗೀಯ ನಿಂದನೆ



* ಇತ್ತೀಚಿಗೆ ಟೋಕಿಯೊದಲ್ಲಿ ನಡೆದ ಒಲಿಂಪಿಕ್ಸ್‌ನಲ್ಲಿ ಉಕ್ರೇನ್ ಪರವಾಗಿ ಏಕೈಕ ಚಿನ್ನದ ಪದಕ ಜಯಿಸಿದ ಕುಸ್ತಿಪಟುಗೆ ತವರಿನಲ್ಲಿ ಜನಾಂಗೀಯ ನಿಂದನೆ ಮಾಡಲಾಗಿದೆ, ಹಾಗೂ ನನ್ನ ವಿರುದ್ಧ ಜನಾಂಗೀಯ ನಿಂದನೆಯ ಘೋಷಣೆಗಳನ್ನು ಕೂಗಿದ್ದಾರೆ ಎಂದು ಬೆಲೆನ್ಯುಕ್ ಅವರು ಫೇಸ್‌ಬುಕ್‌ನ ಮೂಲಕ ತಮ್ಮ ನೋವನ್ನು ಹೊರಹಾಕಿದ್ದಾರೆ.
* ಉಕ್ರೇನ್ ಕುಸ್ತಿಪಟು ಝಾನ್ ಬೆಲೆನ್ಯುಕ್ ಅವರು ಟೋಕಿಯೊ ಒಲಿಂಪಿಕ್ಸ್ ಕ್ರೀಡಾಕೂಟದ ಪುರುಷರ ಗ್ರೀಕೋ ರೋಮನ್ 87 ಕೆಜಿ ವಿಭಾಗದ ಕುಸ್ತಿ ಸ್ಪರ್ಧೆಯಲ್ಲಿ ಚಿನ್ನದ ಪದಕವನ್ನು ಜಯಿಸಿದ್ದಾರೆ.
* ಉಕ್ರೇನ್ ಕುಸ್ತಿಪಟು ಝಾನ್ ಬೆಲೆನ್ಯುಕ್ ಅವರು '2' ಬಾರಿಯ ವಿಶ್ವ ಕುಸ್ತಿ ಚಾಂಪಿಯನ್ ಆಗಿದ್ದಾರೆ.
* ಉಕ್ರೇನ್‌ನ ಮೊದಲ ಕಪ್ಪು ವರ್ಣೀಯ ಸಂಸದರಾಗಿ ಇವರು 2019 ರಲ್ಲಿ ಅಧ್ಯಕ್ಷ ವ್ಲಾಡಿಮೀರ್ ಝೆಲೆನ್ಸ್‌ಕೀಸ್ ಅವರ "ಸರ್ವೆಂಟ್ ಆಫ್


ದಿ ಪೀಪಲ್ ಪಾರ್ಟಿ" ಮೂಲಕ ಸಂಸತ್ತಿಗೆ ಪ್ರವೇಶವನ್ನು ಪಡೆದುಕೊಂಡಿದ್ದರು.

## ರಾಷ್ಟ್ರೀಯ ವಾಹನ ಸ್ಕ್ರ್ಯಾಪೇಜ್ (ಗುಜರಿ) ನೀತಿ ಪ್ರಾರಂಭ



* 2021 ರ ಆಗಸ್ಟ್. 13 ರಂದು ಭಾರತೀಯ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ರಾಷ್ಟ್ರೀಯ ವಾಹನ ಸ್ಕ್ರ್ಯಾಪೇಜ್ ನೀತಿಯನ್ನು ಆರಂಭಿಸಿದ್ದಾರೆ.
* ಈ ರಾಷ್ಟ್ರೀಯ ವಾಹನ ಸ್ಕ್ರ್ಯಾಪೇಜ್(ಗುಜರಿ) ನೀತಿಯನ್ನು 'ಸ್ವಯಂಪ್ರೇರಿತ ವಾಹನ ಫ್ಲೀಟ್ ಆಧುನೀಕರಣ ಕಾರ್ಯಕ್ರಮ' ಎಂದು ಕರೆಯುತ್ತಾರೆ, ಈ ನೀತಿಯು ಪರಿಸರ ಸ್ನೇಹಿ ಮತ್ತು ವೈಜ್ಞಾನಿಕ ರೀತಿಯಲ್ಲಿ ರಸ್ತೆಗಳಿಂದ ಅನರ್ಹ ವಾಹನಗಳನ್ನು ತೆಗೆದುಹಾಕಲಿದೆ ಎಂದಿದ್ದಾರೆ.
* ಈ ನೀತಿಯು 21 ನೇ ಶತಮಾನದ ಸ್ವಚ್ಛ, ದಟ್ಟಣೆ ರಹಿತ ಮತ್ತು ಅನುಕೂಲಕರ ಚಲನಶೀಲತೆಯನ್ನು ಸಾಧಿಸುವ ಭಾರತದ ಗುರಿಯಾಗಿದೆ, ಅಲ್ಲದೇ ನೀತಿಯ ಅನುಸಾರವಾಗಿ ಅಂತಿಮವಾಗಿ ವಾಹನಗಳನ್ನು ರದ್ದುಗೊಳಿಸುವಕ್ಕಿಂತ ಮೊದಲು ಅಧಿಕೃತ ಹಾಗೂ ಸ್ವಯಂಚಾಲಿತ ಕೇಂದ್ರಗಳ ಮೂಲಕ ವೈಜ್ಞಾನಿಕವಾಗಿ ಪರೀಕ್ಷೆ ಮಾಡಲಾಗುತ್ತದೆ ಎಂದು ತಿಳಿಸಿದ್ದಾರೆ.
* ಈ ಗುಜರಿ ನೀತಿ ಅಡಿಯಲ್ಲಿ ಹಳೆಯ ಮಾಲಿನ್ಯಕಾರಕ ವಾಹನಗಳನ್ನು ಪರಿಸರ ಸ್ನೇಹಿ ರೀತಿಯಲ್ಲಿ ಆಧುನೀಕರಿಸುವಲ್ಲಿ ಮತ್ತು ಹಂತ ಹಂತವಾಗಿ ತೆಗೆದುಹಾಕುವಲ್ಲಿ ಪ್ರಮುಖ ಪಾತ್ರವನ್ನು ವಹಿಸಲಿದೆ ಎಂದು ತಿಳಿಸಿದ್ದಾರೆ.
* ಸುಮಾರು 15 ವರ್ಷ ವಯಸ್ಸಿನ ವಾಣಿಜ್ಯ ವಾಹನಗಳು ಹಾಗೂ 20 ವರ್ಷದ ವೈಯಕ್ತಿಕ ವಾಹನಗಳು ಡೀಸೆಲ್ ಅಥವಾ ಪೆಟ್ರೋಲ್‌ನಲ್ಲಿ ವಿಧದ ವಾಹನಗಳು ಸ್ವಯಂಚಾಲಿತ ಫಿಟ್‌ನೆಸ್ ಪರೀಕ್ಷೆಯಲ್ಲಿ ವಿಫಲವಾದರೆ ಗುಜುರಿಗೆ ಹಾಕಲಾಗುತ್ತದೆ, ನಂತರ ಈ ವಾಹನಗಳ ನೋಂದಣಿಯನ್ನು ರದ್ದುಗೊಳಿಸಲಾಗುತ್ತದೆ ಎಂದು ತಿಳಿಸಿದ್ದಾರೆ.


## 'ಕ್ಲೀನ್ ಸಿಟಿ' ಆಪ್ ಆರಂಭಿಸಿದ NDMC



* 2021 ರ ಆಗಸ್ಟ್. 13 ರಂದು ಉತ್ತರ ದೆಹಲಿ ಮುನ್ಸಿಪಲ್ ಕಾರ್ಪೊರೇಷನ್ (NDMC) 'ಕ್ಲೀನ್ ಸಿಟಿ' ಆಪ್‌ನ್ನು ಪ್ರಾರಂಭಿಸಿದೆ, ಈ ಆಪ್ ಆ ಪ್ರದೇಶದಲ್ಲಿನ ನಿವಾಸಿಗಳು ಕಸ ಎತ್ತುವ ದೂರುಗಳನ್ನು ದಾಖಲಿಸಲು ಸಹಾಯ ಮಾಡಲಿದೆ ಎಂದು ತಿಳಿಸಿದ್ದಾರೆ.

* ನವದೆಹಲಿ ಮುನ್ಸಿಪಲ್ ಕೌನ್ಸಿಲ್ (NDMC)ಯ ಆಡಳಿತದಲ್ಲಿರುವ ಪ್ರದೇಶವನ್ನು NDMC ಪ್ರದೇಶ ಎನ್ನುವರು, ಇದು ಸುಮಾರು 42.7 ಕಿಮೀ 2 ಪ್ರದೇಶವನ್ನು ಹೊಂದಿದೆ.
* ಪ್ರಸ್ತುತ ದೆಹಲಿಯ ಕೇಂದ್ರಾಡಳಿತ ಪ್ರದೇಶವು '5' ಶಾಸನಬದ್ಧ ನಗರ ಪ್ರದೇಶಗಳನ್ನು ಹೊಂದಿದೆ. ಉತ್ತರ ದೆಹಲಿ ಮುನ್ಸಿಪಲ್ ಕಾರ್ಪೊರೇಷನ್. ದಕ್ಷಿಣ ದೆಹಲಿ ಮುನ್ಸಿಪಲ್ ಕಾರ್ಪೊರೇಷನ್. ಪೂರ್ವ ದೆಹಲಿ ಮುನ್ಸಿಪಲ್ ಕಾರ್ಪೊರೇಷನ್. ನವದೆಹಲಿ ಮುನ್ಸಿಪಲ್ ಕೌನ್ಸಿಲ್ (NDMC). ದೆಹಲಿ ಕಂಟೋನ್ಮೆಂಟ್ ಬೋರ್ಡ್.

## ಅಂತರಾಷ್ಟ್ರೀಯ ಯುವ ದಿನ




* ಪ್ರತಿ ವರ್ಷವು ಆಗಸ್ಟ್. 12 ರಂದು ಅಂತರಾಷ್ಟ್ರೀಯ ಯುವ ದಿನವನ್ನು ಆಚರಿಸಲಾಗುತ್ತದೆ.
* ಪ್ರಸ್ತುತ ಈ ದಿನದಂದು ಸಮಾಜದಲ್ಲಿ ಯುವಕರು ಎದುರಿಸುತ್ತಿರುವ ಸಮಸ್ಯೆಗಳನ್ನು ತೋರಿಸಲು ಆಚರಣೆ ಮಾಡುತ್ತಾರೆ.
* 1999 ರ ಆಗಸ್ಟ್. 12 ರಂದು ಪ್ರತಿ ವರ್ಷ ಅಂತಾರಾಷ್ಟ್ರೀಯ ಯುವ ದಿನವನ್ನು ಆಚರಿಸಲು ವಿಶ್ವಸಂಸ್ಥೆಯು ಘೋಷಿಸಿದೆ.
* 2021 ರ ಅಂತರರಾಷ್ಟ್ರೀಯ ಯುವ ದಿನಾಚರಣೆಯನ್ನು 'ಟ್ರಾನ್ಸ್‌ಫಾರ್ಮಿಂಗ್ ಫುಡ್ ಸಿಸ್ಟಮ್ಸ್ ಯೂತ್ ಇನ್ನೋವೇಶನ್ ಫಾರ್ ಹ್ಯೂಮನ್ ಅಂಡ್ ಪ್ಲಾನೆಟರಿ ಹೆಲ್ತ್' ಎಂಬ ಥೀಮ್ ಅಡಿಯಲ್ಲಿ ಈ ದಿನವನ್ನು ಆಚರಣೆ ಮಾಡಲಾಗಿದೆ.
* 2020 ರಲ್ಲಿ ಅಂತಾರಾಷ್ಟ್ರೀಯ ಯುವ ದಿನಾಚರಣೆಯನ್ನು 'ಜಾಗತಿಕ ಕ್ರಿಯೆಗಾಗಿ ಯುವ ನಿಶ್ಚಿತಾರ್ಥ'. ಥೀಮ್ ಅಡಿಯಲ್ಲಿ ಆಚರಿಸಲಾಗಿತ್ತು.

# 16-08-2021

## ಮೆಟ್ರೊ ನಿಯೊ, ಲೈಟ್ ಯೋಜನೆ ಸಮೀಕ್ಷೆಗೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಅನುಮೋದನೆ ನೀಡಿದೆ



* ಪ್ರಸ್ತುತ ಮೈಸೂರಿನಲ್ಲಿ ಕೇಂದ್ರ ಸರ್ಕಾರದ ಮೆಟ್ರೊ ನಿಯೊ ಹಾಗೂ ಮೆಟ್ರೊ ಲೈಟ್ ಯೋಜನೆಯನ್ನು ಜಾರಿಗೊಳಿಸುವ ವಿಷಯದ ಸಮೀಕ್ಷೆಗೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಅನುಮೋದನೆ ನೀಡಿದೆ.
* ದಕ್ಷಿಣ ಭಾರತದಲ್ಲೇ ಮೊದಲ ನಗರವು ಈ ಯೋಜನೆಗೆ ಸಮೀಕ್ಷೆ ನಡೆಸಲು ಮುಂದಾಗಿದೆ ಎಂದು ಪ್ರಾಧಿಕಾರದ ಅಧ್ಯಕ್ಷ ಎಚ್.ವಿ. ರಾಜೀವ್ ಅವರು ಮಾಹಿತಿ ನೀಡಿದ್ದಾರೆ.

* ಈ ಯೋಜನೆಯಗೆ ಕೇಂದ್ರ ಸರ್ಕಾರವು 18 ಸಾವಿರ ಕೋಟಿ ರೂ. ಮೀಸಲಿಟ್ಟಿದೆ, ಹಾಗೂ ಶೇ 80 ರಷ್ಟು ಹಣ ಕೇಂದ್ರದಿಂದ ಶೇ 10 ರಷ್ಟು ರಾಜ್ಯ ಸರ್ಕಾರ, ಇನ್ನ ಉಳಿದ ಶೇ 10 ರಷ್ಟು ಹಣ ಮಾತ್ರ ನಗರ ಪ್ರಾಧಿಕಾರವು ಭರಿಸಬೇಕಾಗುತ್ತದೆ ಎಂದು ತಿಳಿಸಿದ್ದಾರೆ.

* ಮೆಟ್ರೊ ನಿಯೊ ಯೋಜನೆಯ ಅಡಿಯಲ್ಲಿ 18 ರಿಂದ 25 ಮೀ. ಉದ್ದದ ಬಸ್‌ಗಳು ಮೆಟ್ರೊ ಟೈಯರ್ ಮೂಲಕ ಸೇತುವೆ ಮೇಲೆ ಸಂಚರಿಸಲಿವೆ, ಪ್ರಸ್ತುತ ಮೈಸೂರ್ ನಗರವಲ್ಲದೇ ಗುಜರಾತ್ ಮತ್ತು ನಾಸಿಕ್'ನಲ್ಲಿ ಈ ಯೋಜನೆ ಕುರಿತು ಸಮೀಕ್ಷಾ ವರದಿಯುನ್ನು ಆ ರಾಜ್ಯಗಳು ಸಿದ್ಧಪಡಿಸುತ್ತಿವೆ ಎಂದು ತಿಳಿದು ಬಂದಿದೆ.

## ಅಲಹಾಬಾದ್ ಕೇಂದ್ರೀಯ ವಿಶ್ವವಿದ್ಯಾನಿಲಯವು ಕವಿಗೋಷ್ಠಿ ರದ್ದುಪಡಿಸಿದೆ



* ಪ್ರಸ್ತುತ ಅಲಹಾಬಾದ್ ಕೇಂದ್ರೀಯ ವಿಶ್ವವಿದ್ಯಾನಿಲಯವು ಈ ಬಾರಿ ಆಯೋಜಿಸಿದ್ದ 'ಮುಶೈರಾ' ಎಂಬ ಕವಿಗೋಷ್ಠಿಯಲ್ಲಿ ಈ ಹಿಂದಿನ ವರ್ಷ ಪೌರತ್ವ ತಿದ್ದುಪಡಿ ಕಾಯ್ದೆ (CAA) ವಿರುದ್ಧದ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಹಲವು ಕವಿಗಳಿಗೆ ಆಹ್ವಾನ ನೀಡಿರುವ ಹಿನ್ನಲೆಯಿಂದಾಗಿ ರದ್ದುಗೊಳಿಸಲಾಗಿದೆ.

* ಈ ಕವಿಗೋಷ್ಠಿಯನ್ನು ಉತ್ತರ ಪ್ರದೇಶದ ಉರ್ದು ವಿಶ್ವವಿದ್ಯಾನಿಲಯ ಮತ್ತು ಕೇಂದ್ರ ಸಾಂಸ್ಕೃತಿಕ ಸಮಿತಿಯು ಜಂಟಿಯಾಗಿ ವಿಶ್ವವಿದ್ಯಾನಿಲಯದಲ್ಲಿ ಆಯೋಜಿಸಲಾಗಿತ್ತು.

* ವಿಶ್ವವಿದ್ಯಾಲಯದ ಅಧಿಕಾರಿಗಳು ಈ ಮೊದಲು ಕವಿಗೋಷ್ಠಿಯನ್ನು ಯಾವುದೇ ಕಾರಣ ನೀಡದೆ ಕಾರ್ಯಕ್ರಮ ರದ್ದುಗೊಳಿಸುವುದಾಗಿ ತಿಳಿಸಿದ್ದರು, ಆದರೆ ಕೇಸರಿ ಸಂಘಟನೆಗಳ ಹಾಗೂ ಬಿಜೆಪಿಯ ಕೆಲವು ನಾಯಕರು ದೆಹಲಿಯ ಶಾಹೀನ್ ಬಾಗ್‌ನಲ್ಲಿ ಸಿಎಎ (CAA) ವಿರೋಧಿ ಪ್ರತಿಭಟನೆಯಲ್ಲಿ ಭಾಗವಹಿಸಿದ ಕೆಲವು ಕವಿಗಳ ಈ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದನ್ನು ವಿರೋಧಿಸಿದ್ದಾರೆ ಎಂದು ಮೂಲಗಳಿಂದ ತಿಳಿದು ಬಂದಿದೆ.

* 2019 ರ ಡಿಸೆಂಬರ್ ನಲ್ಲಿ ಈ CAA ಪ್ರತಿಭಟನೆಗಳು ನಾಲ್ಕು ತಿಂಗಳುಗಳ ಕಾಲ ನಡೆದಿದೆ, ಅದರಲ್ಲೂ ಸಿಎಎ ವಿರುದ್ಧ ಹೆಚ್ಚಾಗಿ ಮುಸ್ಲಿಮರು ಪ್ರತಿಭಟನೆಗಳನ್ನು ನಡೆಸಿದ್ದರು.

## ಭಾರತಕ್ಕೆ 75 ನೇ ಸ್ವಾತಂತ್ರ್ಯ ಸಂಭ್ರಮ ಪ್ರಧಾನಿ ಮೋದಿ ಭಾಷಣ



* ಪ್ರಧಾನಿ ನರೇಂದ್ರ ಮೋದಿ ಅವರು 75 ನೇ ಸ್ವಾತಂತ್ರ್ಯ ಸಂಭ್ರಮ ಹಿನ್ನಲೆಯಿಂದಾಗಿ ರಾಷ್ಟ್ರ ರಾಜಧಾನಿ ನವದೆಹಲಿಯ ಕೆಂಪುಕೋಟೆ ಮೇಲೆ ಧ್ವಜಾರೋಹಣ ನೆರವೇರಿಸಿದರು, ಹಾಗೂ ದೇಶದ ಜನತೆಯನ್ನುದ್ದೇಶಿಸಿ ಮಾಡನಾಡಿ, ಅದೇ ಸಂಧರ್ಭದಲ್ಲಿ ವಿವಿಧ ಘೋಷಣೆಗಳನ್ನು ಮಾಡಿದರು.

* ರಾಷ್ಟ್ರೀಯ ಹೈಡ್ರೋಜನ್ ಮಿಷನ್ ಘೋಷಣೆ: ದೇಶವು ಹಸಿರು ಹೈಡ್ರೋಜನ್ ಕ್ಷೇತ್ರದಲ್ಲಿ ಅಗತ್ಯ ಅಭಿವೃದ್ಧಿ ಕಾಣುವುದು ದೊಡ್ಡ ಗುರಿಯಾಗಿದೆ ಎಂದು ಈ ರಾಷ್ಟ್ರೀಯ ಹೈಡ್ರೋಜನ್ ಮಿಷನ್ ಘೋಷಣೆ ಮಾಡಿದರು.

* 2030 ಸಮಯಕ್ಕೆ ಭಾರತೀಯ ರೈಲ್ವೆಯಲ್ಲಿ ಶೂನ್ಯ ಮಾಲಿನ್ಯ ನಿರ್ಮಾಣ ಮಾಡಲು ಪಣ ತೊಡಲಾಗಿದೆ, ಹಾಗೂ ಭಾರತವನ್ನು ಹೈಡ್ರೋಜನ್ ರಫ್ತು ಮಾಡುವ ಹಬ್ ಮಾಡಲಾಗುತ್ತದೆ ಎಂದು ಮೋದಿ ಘೋಷಣೆ ಮಾಡಿದ್ದಾರೆ.

* ಸೈನಿಕ ಶಾಲೆಗಳಲ್ಲಿ ಬಾಲಕಿಯರಿಗೂ ಪ್ರವೇಶ: ಪ್ರಸ್ತುತ ಎಲ್ಲಾ ಸೈನಿಕ ಶಾಲೆಗಳಲ್ಲಿಯೂ ಬಾಲಕಿ/ಯುವತಿಯರಿಗೆ ಪ್ರವೇಶ ಲಭ್ಯವಿರಲಿದೆ ಎಂದು ಘೋಷಣೆ ಮಾಡಿದರು.

* ಇ ಕಾಮರ್ಸ್ ಪ್ಲಾಟ್‌ಫಾರ್ಮ್ ಆರಂಭ: ಭಾರತ ಸರ್ಕಾರವು ಇ ಕಾಮರ್ಸ್ ಪ್ಲಾಟ್‌ಫಾರ್ಮ್ ಶುರು ಮಾಡಲಿದೆ ಇದರಿಂದಾಗಿ ಹಳ್ಳಿಯ ಕರಕುಶಲಗಾರರಿಗೆ ಜಗತ್ತಿನೊಂದಿಗೆ ಸಂಪರ್ಕ ಕಲ್ಪಿಸಲು ಸಹಕಾರಿಯಾಗಲಿದೆ ಎಂದು ತಿಳಿಸಿದ್ದಾರೆ.

* 25 ವರ್ಷಗಳಲ್ಲಿ ನವ ಭಾರತ ನಿರ್ಮಾಣ: ಮುಂಬರುವ 25 ವರ್ಷಗಳಲ್ಲಿ ಭಾರತ ಸ್ವಾತಂತ್ರ್ಯ ಶತಮಾನೋತ್ಸವ ಆಚರಿಸಲಿದೆ ಆ ಸಮಯದಲ್ಲಿ ಭಾರತವು ಯಾವ ರಾಷ್ಟ್ರಕ್ಕೂ ನಾವು ಕಡಿಮೆ ಇಲ್ಲ ಎಂದು ತೋರಿಸಬೇಕು ಇದುವೇ ಭಾರತದ ನಿರ್ಮಾಣದ ಗುರಿ ಆಗಿರಬೇಕು ಎಂದು ತಿಳಿಸಿದರು.

* ಪ್ರಧಾನಿ ಗತಿ ಶಕ್ತಿ ಯೋಜನೆ: ಪ್ರಧಾನಿ ಗತಿ ಶಕ್ತಿ ಯೋಜನೆಯನ್ನು ಆರಂಭಿಸಲಾಗುತ್ತದೆ, ಸುಮಾರು 100 ಲಕ್ಷ ಕೋಟಿ ರಾಷ್ಟ್ರೀಯ ಮೂಲಸೌಕರ್ಯ ಮಾಸ್ಟರ್ ಪ್ಲಾನ್ ಇದಾಗಿದೆ, ಅಲ್ಲದೇ ಈ ಯೋಜನೆಯು ಸಮಗ್ರ ಮೂಲಸೌಕರ್ಯಕ್ಕೆ ಅಡಿಪಾಯವನ್ನು ನೀಡಲಿದೆ ಎಂದು ತಿಳಿಸಿದರು.

* 75 ವಂದೇ ಭಾರತ್ ರೈಲು: ಭಾರತ ದೇಶವು 75 ನೇ ಸ್ವಾತಂತ್ರ್ಯೋತ್ಸವದ 75 ವಾರಗಳ ಆಚರಣೆಗೆ ಪಣತೊಟ್ಟಿದೆ, 2021 ರ ಮಾರ್ಚ್ 12 ರಿಂದ 2023 ರ ಆಗಸ್ಟ 15 ರವರೆಗೂ 'ಅಮೃತ ಮಹೋತ್ಸವ' ನಡೆಯಲಿದೆ.

* ಪ್ರಸ್ತುತ ಭಾರತೀಯ 75 ವಂದೇ ಭಾರತ್ ರೈಲುಗಳು ಸ್ವಾತಂತ್ರ್ಯದ ಅಮೃತ್ ಮಹೋತ್ಸವದ ಹಿನ್ನಲೆಯಿಂದಾಗಿ 75 ವಾರಗಳಲ್ಲಿ ಭಾರತದ ಎಲ್ಲ ಪರದೇಶಗಳಿಗೂ ಸಂಪರ್ಕ ಕಲ್ಪಿಸಲಿದೆ ಎಂದಿದ್ದಾರೆ.

* ನಮ್ಮ ಗುರಿಯನ್ನು ತಲುಪಲು ಸಬ್‌ಕಾ ಸಾತ್ ಸಬ್‌ಕಾ ವಿಕಾಸ್ ಸಬ್‌ಕಾ ವಿಶ್ವಾಸ್ ಸಬ್‌ಕಾ ಪ್ರಯಾಸ್ ಅತ್ಯಗತ್ಯವಾಗಿದೆ ಎಂದು ತಿಳಿಸಿದ್ದಾರೆ.

## ಆಗಸ್ಟ 15 ರಂದು ಸ್ವಾತಂತ್ರ್ಯ ಪಡೆದ ದೇಶಗಳು



* ಪ್ರಸ್ತುತ ಭಾರತ ದೇಶವು 1947 ರ ಆಗಸ್ಟ್ 15 ರಂದು ಬ್ರಿಟೀಷರಿಂದ ಸ್ವಾತಂತ್ರ್ಯ ಪಡೆದು 75 ನೇ ವರ್ಷದ ಸಂಭ್ರಮವನ್ನು ಆಚರಿಸುತ್ತಿದೆ, ಇದೇ ಆಗಸ್ಟ್ 15 ರಂದು ಇನ್ನು ಹಲವು ರಾಷ್ಟ್ರಗಳು ಸ್ವತಂತ್ರ್ಯವನ್ನು ಪಡೆದುಕೊಂಡಿವೆ.

* ಆಗಸ್ಟ್ 15 ರಂದು ಸ್ವಾತಂತ್ರ್ಯ ಪಡೆದ ದೇಶಗಳು: ಭಾರತ, ಬಹ್ರೇನ್, ಉತ್ತರ ಕೊರಿಯಾ, ದಕ್ಷಿಣ ಕೊರಿಯಾ ಮತ್ತು ಲಿಚ್ಟೆನ್‌ಸ್ಟೈನ್, ದಿ ಡೆಮಾಕ್ರಟಿಕ್ ರಿಪಬ್ಲಿಕ್ ಆಫ್ ಕಾಂಗೋ ದೇಶಗಳು 'ರಾಷ್ಟ್ರೀಯ ದಿನ'ವನ್ನು ಆಚರಿಸಿಕೊಳ್ಳುತ್ತವೆ.

* ಬಹ್ರೇನ್ ದೇಶವು: ಬ್ರಿಟೀಷರ ಆಡಳಿತಕ್ಕೆ ಒಳಪಟ್ಟ ದೇಶವಾಗಿದೆ, ಈ ದೇಶವು 1971 ಆಗಸ್ಟ್ 15 ರಂದು ಸಂಪೂರ್ಣ ಸ್ವತಂತ್ರ್ಯ ದೇಶವಾಗಿ ಘೋಷಿಸಿಕೊಂಡಿದೆ, ಆದರೆ ಈ ದೇಶವು ಆಗಸ್ಟ್. 15 ರಂದು ಆಚರಣೆ ಮಾಡುವುದಿಲ್ಲ, ಅದರ ಬದಲಾಗಿ ಡಿಸೆಂಬರ್ 16 ರಂದು ಆಚರಣೆ ಮಾಡಿಕೊಳ್ಳುತ್ತದೆ.

* ಉತ್ತರ ಕೊರಿಯಾ ಮತ್ತು ದಕ್ಷಿಣ ಕೊರಿಯಾ: 2ನೇ ಮಹಾಯುದ್ಧದ ಕೊನೆಯ ಸಂಧರ್ಭದಲ್ಲಿ ಆಗಸ್ಟ್. 15 ರಂದು ಜಪಾನ ದೇಶದಿಂದ ಸ್ವಾತಂತ್ರ್ಯಗೊಂಡ ಈ ದಿನವನ್ನು 'ಕೊರಿಯಾ ರಾಷ್ಟ್ರೀಯ ವಿಮೋಚನಾ ದಿನ' ಎಂದು ಘೋಷಣೆ ಮಾಡಿಕೊಂಡಿವೆ.

* ಲಿಚ್ಟೆನ್‌ಸ್ಟೈನ್: ಈ ದೇಶವು ಆಸ್ಟ್ರಿಯಾ ಹಾಗೂ ಸ್ವಿಜರ್ಲೆಂಡ್ ದೇಶದ ನಡುವೆ ಇದೆ. ಈ ದೇಶ ಕೂಡ ಆಗಸ್ಟ್ 15 ಕ್ಕೆ ರಾಷ್ಟ್ರೀಯ ದಿನ ಘೋಷಿಸಿಕೊಂಡಿದೆ, ಈ ದೇಶದ ಹೆಸರು ಜರ್ಮನ್ ಭಾಷೆಯ ಒಂದು ಪದವಾಗಿದೆ.

* ರಿಪಬ್ಲಿಕ್ ಆಫ್ ಕಾಂಗೋ: ಈ ದೇಶವು ಆಫ್ರಿಕಾ ಖಂಡದ ಮಧ್ಯ ಭಾಗದಲ್ಲಿದೆ, ಈ ಮೊದಲು ದೇಶವು 1880 ರಲ್ಲಿ ಫ್ರೆಂಚರ ಆಳ್ವಿಕೆಗೆ ಒಳಗಾಗಿತ್ತು, ನಂತರ 1960 ಆಗಸ್ಟ್.15 ರಂದು ಫ್ರೆಂಚ್‌ರಿಂದ ಸ್ವಾತಂತ್ರ್ಯ ಪಡೆದ ಕಾಂಗೋ ದೇಶವು ರಿಪಬ್ಲಿಕ್ ಆಫ್ ಕಾಂಗೋವಾಗಿ ಹೊರ ಹೊಮ್ಮಿದೆ.

## ತಮಿಳುನಾಡು ರಾಜ್ಯ ಸರ್ಕಾರವು ವಿವಿಧ ಜಾತಿಗಳ 24 ಅರ್ಚಕರ ನೇಮಕ ಮಾಡಿದೆ



* ಪ್ರಸ್ತುತ ಈ ಹಿಂದೆ ತಮಿಳುನಾಡು ರಾಜ್ಯ ಡಿಎಂಕೆ ಸರ್ಕಾರವು ಚುನಾವಣೆ ಸಮಯದಲ್ಲಿ ವಿವಿಧ ಜಾತಿಗಳ ಅರ್ಚಕರ ನೇಮಕ ಮಾಡುವ ಭರವಸೆಯನ್ನು ನೀಡಿತ್ತು, ಇದೀಗ ಅದರಂತೆ ರಾಜ್ಯದ ದೇವಸ್ಥಾನಗಳಿಗೆ ವಿವಿಧ ಜಾತಿಗಳ 24 ಅರ್ಚಕರನ್ನು ನೇಮಕ ಮಾಡಿದೆ.

* ತಮಿಳನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು 75 ಅರ್ಚಕರಿಗೆ ಹಿಂದೂ ಧಾರ್ಮಿಕ ಮತ್ತು ದತ್ತಿ ಇಲಾಖೆಯ ವತಿಯಿಂದ ನೇಮಕಾತಿ ಆದೇಶಗಳನ್ನು ನೀಡಿದ್ದಾರೆ.

* ಈ 24 ಮಂದಿ ಅರ್ಚಕರು ಹಿಂದೂ ದೇವಾಲಯಗಳಲ್ಲಿ ಅರ್ಚಕರಾಗಲು ಸರ್ಕಾರದ ವತಿಯಿಂದ ನೀಡಲಾದ ತರಬೇತಿ ಪೂರ್ಣಗೊಂಡ ಹಿನ್ನಲೆಯಿಂದ ನೇಮಕವಾಗಿದ್ದರೆ, ಇನ್ನು 34 ಮಂದಿ ಬೇರೆ ಬೇರೆ ಪಾಠಶಾಲೆಗಳಲ್ಲಿ ಅರ್ಚಕ ತರಬೇತಿಯನ್ನು ಪಡೆದಿದ್ದಾರೆ.

* ಪ್ರಸ್ತುತ ತಮಿಳನಾಡು ರಾಜ್ಯದ 208 ನೇಮಕಾತಿಗಳಲ್ಲಿ ಭಟ್ಟಾಚಾರ್ಯರು, ಒಡುವರು, ಪೂಜಾರಿಗಳು, ತಾಂತ್ರಿಕ ಮತ್ತು ಕಚೇರಿ ಸಹಾಯಕರು ಸೂಕ್ತ ತರಬೇತಿಯನ್ನು ಪಡೆದ ನಂತರ ನೇಮಕಗೊಂಡಿದ್ದಾರೆ ಎಂದು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರ ಸರ್ಕಾರ ತಿಳಿಸಿದೆ.

## ಜರ್ಮನಿಯ ಫುಟ್ ಬಾಲ್ ಆಟಗಾರ ಗರ್ಡ್ ಮುಲ್ಲರ್ ನಿಧನ



* ಜರ್ಮನಿ ಮತ್ತು ಬೇಯರ್ನ್ ಮ್ಯೂನಿಚ್ ಕ್ಲಬ್‌ನ ಫುಟ್'ಬಾಲ್ ಲೆಜೆಂಡ್ ಗರ್ಡ್ ಮುಲ್ಲರ್ ಅವರು ತಮ್ಮ 75 ನೇ ವಯಸ್ಸಿನಲ್ಲಿ ವಿಧಿವಶರಾಗಿದ್ದಾರೆ.

* ಗರ್ಡ್ ಮುಲ್ಲರ್ ಅವರು ಫುಟ್'ಬಾಲ್ ಇತಿಹಾಸದಲ್ಲಿ 62 ಅಂತಾರಾಷ್ಟ್ರೀಯ ಪಂದ್ಯಗಳಿಂದ 68 ಗೋಲುಗಳನ್ನೂ ಗಳಿಸಿದ್ದಾರೆ.

* 1974 ರಲ್ಲಿ ಜರ್ಮನಿ ದೇಶವು ಫುಟ್'ಬಾಲ್ ವಿಶ್ವಕಪ್ ಜಯಿಸಿತ್ತು ಆ ಸಮಯದಲ್ಲಿ ಗರ್ಡ್ ಮುಲ್ಲರ್ ಅವರು ವಿಜೇತ ತಂಡದ ಸದಸ್ಯರಾಗಿದ್ದರು.

* ಪ್ರಸ್ತುತ ವಿಶ್ವಕಪ್ ಪಂದ್ಯಾವಳಿಯಲ್ಲಿ ಅತ್ಯಧಿಕ ಗೋಲು ಗಳಿಸಿದವರು: ಮಿರೋಸ್ಲಾವ್ ಕ್ಲೋಸ್ ಅವರು 16 ಗೋಲ್'ಗಳನ್ನೂ ಗಳಿಸಿದ್ದಾರೆ, ಹಾಗೂ ಕ್ರಿಸ್ಟಿಯಾನೊ ರೊನಾಲ್ಡೊ ಅವರು 15 ಗೋಲ್'ಗಳನ್ನೂ ಗಳಿಸಿದ್ದಾರೆ, ಗರ್ಡ್ ಮುಲ್ಲರ್ ಅವರು14) ಗೋಲ್'ಗಳನ್ನೂ ಗಳಿಸಿ 3 ನೇ ಸ್ಥಾನದಲ್ಲಿದ್ದಾರೆ.

* ಜರ್ಮನಿಯ ಗರ್ಡ್ ಮುಲ್ಲರ್ ಅವರು 1964 ರಲ್ಲಿ ಬೇಯರ್ನ್ ತಂಡದ ಪರ 607 ಪಂದ್ಯಗಳನ್ನು ಆಡಿ ಕ್ಲಬ್ ಇತಿಹಾಸದಲ್ಲಿ 566 ಗೋಲುಗಳನ್ನು ದಾಖಲೆ ನಿರ್ಮಿಸಿದ್ದಾರೆ.

## ಬಹುಮತ ಕಳೆದುಕೊಂಡ ಮಲೇಷ್ಯಾ ಪ್ರಧಾನಿ ರಾಜೀನಾಮೆ



* ಪ್ರಸ್ತುತ ಮಲೇಷ್ಯಾದ ಪ್ರಧಾನಿ ಮುಹಿದ್ದೀನ್ ಯಾಸೀನ್ ಅವರು ಬಹುಮತ ಸಾಬೀತು ಪಡಿಸುವಲ್ಲಿ ವಿಫಲವಾಗಿರುವ ಹಿನ್ನಲೆಯಿಂದ ರಾಜೀನಾಮೆ ನೀಡಲು ತೀರ್ಮಾನಿಸಿದ್ದಾರೆ.

* ಮಲೇಷ್ಯಾ ಪ್ರಧಾನಿ ಮುಹಿದ್ದೀನ್ ನೇತೃತ್ವದ ಮೈತ್ರಿ ಸರ್ಕಾರದಲ್ಲಿನ ಯುಎಂಎನ್‌ಓ ಪಕ್ಷವು ತನ್ನ ಬೆಂಬಲವನ್ನು ಹಿಂದಕ್ಕೆ ಪಡೆದಿದೆ, ಅಲ್ಲದೇ ಇಬ್ಬರು ಸದಸ್ಯರು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ, ಈ ಕಾರಣದಿಂದಾಗಿ ಪ್ರಧಾನಿ ಮುಹಿದ್ದೀನ್ ಯಾಸೀನ್ ಅವರು ಬಹುಮತ

ಸಾಬೀತು ಪಡಿಸುವಲ್ಲಿ ವಿಫಲವಾಗಿ ರಾಜೀನಾಮೆ ನೀಡಲು ಸಿದ್ಧವಾಗಿದ್ದಾರೆ.

* ಪ್ರಧಾನಿ ಮುಹಿದ್ದೀನ್ ಯಾಸೀನ್ ಅವರು ಮಲೇಷ್ಯಾ ಅರಮನೆಗೆ ತೆರಳಿ ರಾಜನಿಗೆ ರಾಜೀನಾಮೆ ಪತ್ರ ನೀಡಲಿದ್ದಾರೆ ಎಂದು ಪ್ರಧಾನಮಂತ್ರಿ ಕಚೇರಿಯ ಸಚಿವ ಮೊಹಮ್ಮದ್ ರೆಜುವಾನ್ ಮೊಹಮ್ಮದ್ ಯೂಸುಫ್ ಈ ಮಾಹಿತಿಯನ್ನು ನೀಡಿದ್ದಾರೆ.

## ಭಾರತದಲ್ಲಿಯೇ ಮೊದಲ ಉಪಗ್ರಹ ಫೋನ್‌ಗಳನ್ನು ಹೊಂದಿದ ಉದ್ಯಾನವನ= ಅಸ್ಸಾಂ ರಾಜ್ಯದ ಕಾಜಿರಂಗ




* ಅಸ್ಸಾಂನ ಕಾಜಿರಂಗ ರಾಷ್ಟ್ರೀಯ ಉದ್ಯಾನವನವು ಉಪಗ್ರಹ ಫೋನ್‌ಗಳನ್ನು ಹೊಂದಿದ ಭಾರತದ ಮೊದಲ ರಾಷ್ಟ್ರೀಯ ಉದ್ಯಾನವನವಾಗಿದೆ, ಪ್ರಸ್ತುತ ಅಸ್ಸಾಂ ಮುಖ್ಯ ಕಾರ್ಯದರ್ಶಿ ಜಿಷ್ಣು ಬರುವಾ ಅವರು ಸುಮಾರು 10 ಉಪಗ್ರಹ ಫೋನ್'ಗಳನ್ನು ಕಾಜಿರಂಗ ರಾಷ್ಟ್ರೀಯ ಉದ್ಯಾನದ ಅರಣ್ಯ ಸಿಬ್ಬಂದಿಗಳಿಗೆ ನೀಡಿದ್ದಾರೆ.

* ಉಪಗ್ರಹ ಫೋನ್ ಕ್ರಮವು ಉದ್ಯಾನದಲ್ಲಿ ಬೇಟೆಯಾಡುವುದನ್ನು ತಡೆಯಲು ಸಹಾಯಕಾರಿಯಾಗಲಿವೆ, ಹಾಗೂ ಈ ಉಪಗ್ರಹ ಫೋನ್‌ಗಳನ್ನು ವೈರ್‌ಲೆಸ್ ಅಥವಾ ಕಳಪೆ ಮೊಬೈಲ್ ಸಂಪರ್ಕವಿಲ್ಲದ ಪಾರ್ಕ್‌ನ '6' ಶ್ರೇಣಿಗಳಲ್ಲಿ ಬಳಕೆ ಮಾಡಲಾಗುತ್ತದೆ.

* ಅಸ್ಸಾಂ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರವು ಉದ್ಯಾನವನಕ್ಕಾಗಿ ಈ ಸ್ಯಾಟಲೈಟ್ ಫೋನ್‌ಗಳನ್ನು ಅಂದಾಜು ರೂ 16 ಲಕ್ಷ ವೆಚ್ಚದಲ್ಲಿ ಖರೀದಿಸಿದೆ, ಇವುಗಳಿಗೆ ಬಿಎಸ್‌ಎನ್‌ಎಲ್ (BSNL)ನಿಂದ ನೆಟ್ವರ್ಕ್ ಸೇವೆ ಒದಗಿಸಲಾಗುವುದು, ಇವುಗಳ ಮಾಸಿಕ ವೆಚ್ಚಗಳನ್ನು ಉದ್ಯಾನವನದ ಅಧಿಕಾರಿಗಳು ಪೂರೈಸಲಿದ್ದಾರೆ.

* ಭಾರತದ ಕಾಜಿರಂಗ ರಾಷ್ಟ್ರೀಯ ಉದ್ಯಾನವು ಅಸ್ಸಾಂ ರಾಜ್ಯದ ಗೋಲಘಾಟ್, ಕಾರ್ಬಿ ಆಂಗ್ಲಾಂಗ್ ಮತ್ತು ನಾಗಾಂವ್ ಜಿಲ್ಲೆಯ ವರೆಗೆ ವಿಸ್ತರಿಸಿದೆ, ಈ ಉದ್ಯಾನವನವು 3ನೇ ಒಂದು ಭಾಗದಷ್ಟು ದೊಡ್ಡ ಕೊಂಬಿನ ಖಡ್ಗಮೃಗಗಳನ್ನು ಹೊಂದಿದೆ, ಹಾಗೂ 2006 ರಲ್ಲಿ ಇದನ್ನು ಹುಲಿ ಸಂರಕ್ಷಿತ ಪ್ರದೇಶವೆಂದು ಘೋಷಣೆ ಮಾಡಲಾಯಿತು.

## ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರಿಂದ 15 ಬಾರಿ ಧ್ವಜಾರೋಹಣ



* ಬಿಹಾರ್ ರಾಜ್ಯದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಒಟ್ಟಾರೆ 15 ನೇ ಬಾರಿಗೆ ತ್ರಿವರ್ಣ ಧ್ವಜವನ್ನು ಹಾರಿಸಿದ್ದಾರೆ.

* ಪ್ರಸ್ತುತ ಮಾಹಿತಿ ಮತ್ತು ಸಾರ್ವಜನಿಕ ಸಂಪರ್ಕ ಸಚಿವ ಸಂಜಯ್ ಝಾ ಅವರು ಈ ಮಾಹಿತಿಯನ್ನು ಟ್ವೀಟ್ ಮೂಲಕ ತಿಳಿಸಿದ್ದಾರೆ, ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ತಮ್ಮ ಅಧಿಕಾರವಧಿಯ 5,474 ದಿನಗಳನ್ನು ಪೂರೈಸಿದ್ದಾರೆ ಎಂದು ತಿಳಿಸಿದರು.

* ಈ ಹಿಂದೆ ಬಿಹಾರ ರಾಜ್ಯದಲ್ಲಿ 1961 ರವರೆಗೆ ಮುಖ್ಯಮಂತ್ರಿಯಾಗಿದ್ದ ಶ್ರೀಕೃಷ್ಣ ಸಿನ್ಹಾ ಅವರ ದಾಖಲೆಯನ್ನು ಈಗೀನ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಮೀರಿಸಿದ್ದಾರೆ.

## ಟೀಂ ಇಂಡಿಯಾ 75 ನೇ ಸ್ವಾತಂತ್ರ್ಯೋತ್ಸವದಂದು ಲಾರ್ಡ್ಸ್‌ನಲ್ಲಿ ತ್ರಿವರ್ಣ ಧ್ವಜ ಹಾರಿಸಿದೆ



* ಪ್ರಸ್ತುತ ಟೀಂ ಇಂಡಿಯಾ ಇಂಗ್ಲೆಂಡ್ ತಂಡದ ವಿರುದ್ಧ ಟೆಸ್ಟ್ ಕ್ರಿಕೆಟ್ ಸರಣಿಯನ್ನು ಲಾರ್ಡ್ಸ್‌ನಲ್ಲಿ ಆಡುತ್ತಿದೆ, ಇದೇ ಸಂಧರ್ಭದಲ್ಲಿ ಭಾರತ ತಂಡದ ಆಟಗಾರರು ಭಾರತ ಸ್ವಾತಂತ್ರ್ಯದ 75 ನೇ ವರ್ಷಾಚರಣೆಯ ಸ್ವಾತಂತ್ರ್ಯೋತ್ಸವನ್ನು ತ್ರಿವರ್ಣ ಧ್ವಜ ಹಾರಿಸುವ ಮೂಲಕ ಆಚರಿಸಿದರು.

* ಟೀಂ ಇಂಡಿಯಾ ನಾಯಕ ವಿರಾಟ್ ಕೊಹ್ಲಿ ಪಡೆಯ ಈ ಸಂಗತಿಯ ವಿಡಿಯೊವೊಂದನ್ನು ಟ್ವಿಟರ್‌ನಲ್ಲಿ ಹಂಚಿಕೊಂಡಿದೆ ಎಂದು BCCI ತಿಳಿಸಿದೆ.

## ಪೆಟ್ರೋಲ್ ಬೆಲೆಯನ್ನು ಪ್ರತಿ ಲೀಟರ್ ಗೆ '3' ರೂ. ಕಡಿತಗೊಳಿಸಿದೆ ತಮಿಳುನಾಡು ರಾಜ್ಯ



* ತಮಿಳುನಾಡು ರಾಜ್ಯವು 2021 22 ರ ಆರ್ಥಿಕ ವರ್ಷದಲ್ಲಿ ಪೆಟ್ರೋಲ್ ಬೆಲೆಯನ್ನು ರೂ 3/ಲೀಟರ್ ಕಡಿತಗೊಳಿಸಿದೆ, ಇದರಿಂದಾಗಿ ಗ್ರಾಹಕರಿಗೆ ಪರಿಹಾರವನ್ನು ನೀಡಿದಂತಾಗುತ್ತದೆ ಎಂದು ತಿಳಿಸಿದೆ, ಪೆಟ್ರೋಲ್ ಬೆಲೆ ಕಡಿತಗೊಳಿಸಿದ ಭಾರತದ ಮೊದಲ ರಾಜ್ಯ ಇದಾಗಿದೆ.

* ತಮಿಳನಾಡು ರಾಜ್ಯದ ರಾಜ್ಯ ಹಣಕಾಸು ಸಚಿವ ಪಳನಿವೇಲ್ ತ್ಯಾಗರಾಜನ್ ಅವರು ಆಗಸ್ಟ್ 13 ರಂದು ತಮ್ಮ ಬಜೆಟ್ ಭಾಷಣದಲ್ಲಿ ಬೆಲೆ ಕಡಿತವನ್ನು ಘೋಷಣೆ ಮಾಡಿದ್ದಾರೆ, ಹಾಗೂ ಇದು ಆಗಸ್ಟ್. 14 ರಿಂದ ಜಾರಿಗೆ ಬಂದಿದೆ.

* ತಮಿಳನಾಡು ರಾಜ್ಯದ ಈ ಯೋಜನೆಯಿಂದ ರಾಜ್ಯದ ಬೊಕ್ಕಸಕ್ಕೆ ಅಂದಾಜು 1,160 ಕೋಟಿ ರೂ. ಆದಾಯ ನಷ್ಟವಾಗುವ ನಿರೀಕ್ಷೆಯಿದೆ.
* ಪ್ರಸ್ತುತ ಪೆಟ್ರೋಲ್ ಮತ್ತು ಡೀಸೆಲ್'ನ್ನು ಜಿಎಸ್‌ಟಿ GST ವ್ಯಾಪ್ತಿಯಿಂದ ಹೊರಗಿಡಲಾಗಿದೆ.

# 17-08-2021

## ದೇಶದ ಮೊದಲ ಜಿಲ್ಲೆ ವಯನಾಡ್ ನಲ್ಲಿ ಶೇ. 100 ರಷ್ಟು ಅರ್ಹರಿಗೆ ಲಸಿಕೆ




* ಕೇರಳ ರಾಜ್ಯದ ವಯನಾಡ್ ಜಿಲ್ಲೆಯಲ್ಲಿನ ಶೇ. 100 ರಷ್ಟು ಅರ್ಹರಿಗೆ ಕೋವಿಡ್ 19 ಲಸಿಕೆ ಹಾಕಿದ ದೇಶದ ಮೊದಲ ಜಿಲ್ಲೆಯಾಗಿದೆ.
* ಪ್ರಸ್ತುತ ವಯನಾಡ್ ಜಿಲ್ಲಾಡಳಿತವು ಪತ್ರಿಕಾ ಪ್ರಕಟಣೆಯಲ್ಲಿ ಮಾಹಿತಿ ನೀಡಿದೆ, ಈ ವಯನಾಡಿನಲ್ಲಿ ಒಟ್ಟು 6,51,967 ಜನರು ಲಸಿಕೆ ಪಡೆಯಲು ಅರ್ಹರಾಗಿದ್ದರು, ಇವರಲ್ಲಿ 6,15,729 ಜನರು ಇಲ್ಲಿಯವರೆಗೆ ಕೋವಿಡ್ 19 ಲಸಿಕೆಯ ಮೊದಲ ಡೋಸ್ ಪಡೆದುಕೊಂಡಿದ್ದಾರೆ ಎಂದು ಜಿಲ್ಲಾಧಿಕಾರಿ ಅದೀಲಾ ಅಬ್ದುಲ್ಲಾ ಅವರು ತಿಳಿಸಿದ್ದಾರೆ.

## ಅಪರೂಪದ ಆರ್ಕಿಡ್ ಉತ್ತರಾಖಂಡ ರಾಜ್ಯದಲ್ಲಿ ಪತ್ತೆ

भारतीय वनस्पति सर्वेक्षण
BOTANICAL SURVEY OF INDIA

* ಪ್ರಸ್ತುತ ಅಪರೂಪದ ಆರ್ಕಿಡ್ ಉತ್ತರಾಖಂಡ ರಾಜ್ಯದ ಚಮೋಲಿ ಜಿಲ್ಲೆಯ ಮಂಡಲ್ ಪ್ರದೇಶದ ಬೆಟ್ಟದಲ್ಲಿ ಪತ್ತೆಯಾಗಿದೆ.
* ಈ ಆರ್ಕಿಡ್ ಕ್ಕೆ ಸೆಫ್ಲಾಂಥೆರಾ ಎರೆಕ್ಟಾ ವೆರೈಟಿಯ ಒಬ್ಲಾಂಸಿಒಲಟಾ ಎಂದು ಹೆಸರಿಸಲಾಗಿದೆ, ಇದು ಸುಮಾರು 1870 ಮೀ. ಎತ್ತರದ ಪ್ರದೇಶದಲ್ಲಿ ಪತ್ತೆಯಾಗಿದೆ ಎಂದು ಮುಖ್ಯ ಅರಣ್ಯ ಅಧಿಕಾರಿ ಸಂಜೀವ್ ಚತುರ್ವೇದಿ ಅವರು ಮಾಹಿತಿ ನೀಡಿದ್ದಾರೆ.
* ಪ್ರಸ್ತುತ ಭಾರತದ ಸಸ್ಯ ವರ್ಗದಲ್ಲಿ ಇದು ಹೊಸ ದಾಖಲೆಯಾಗಿದೆ ಎಂದಿದ್ದಾರೆ.
* ಈ ಹೊಸ ತಳಿಯ ಆರ್ಕಿಡ್ ವನ್ನು ಭಾರತೀಯ ಸಸ್ಯ ಶಾಸ್ತ್ರೀಯ ಸಮೀಕ್ಷಾ ತಂಡವು ಈ ವಿಷಯವನ್ನು ಖಚಿತಪಡಿಸಿದೆ, ಅಲ್ಲದೇ ಈ ತಳಿಯನ್ನು ಇದೇ ಮೊದಲ ಬಾರಿಗೆ ದಾಖಲಿಸಲಾಗಿದೆ ಎಂದಿದ್ದಾರೆ.

## ಹೈಟಿ ದೇಶದಲ್ಲಿ ತೀವ್ರ ಭೂಕಂಪನ



* ಇತ್ತೀಚಿಗೆ ಹೈಟಿ ದೇಶದಲ್ಲಿ ತೀವ್ರ ಭೂಕಂಪನ ಸಂಭವಿಸಿದೆ, ಆ ಸಂಧರ್ಭದಲ್ಲಿ ಸುಮಾರು 1,297 ಜನರು ಸಾವನ್ನಪ್ಪಿದ್ದಾರೆ, ಹಾಗೂ 5,700 ಜನರು ಗಾಯಗೊಂಡಿದ್ದಾರೆ ಎಂದು ಹೈಟಿ ತಿಳಿಸಿದೆ.
* ಹೈಟಿ ರಾಜಧಾನಿ ಪೋರ್ಟ್ ಹೌ ಪ್ರಿನ್ಸ್ ಪಶ್ಚಿಮಕ್ಕೆ 125 ಕಿ.ಮೀ ದೂರದಲ್ಲಿ ಭೂಕಂಪನ ಕೇಂದ್ರವಿದೆ.
* ಈ ಭೂಕಂಪನದ ತೀವ್ರತೆಯು ರಿಕ್ಟರ್ ಮಾಪಕದಲ್ಲಿ 7.2 ರಷ್ಟು ದಾಖಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ, ಈ ಮಾಹಿತಿಯ ಪ್ರಕಾರ ಅಂದಾಜು 7000 ಮನೆಗಳು ಕುಸಿದಿವೆ. 5000 ಕ್ಕೂ ಅಧಿಕ ಮನೆಗಳು ಹಾಳಾಗಿವೆ ಎಂದು ತಿಳಿಸಿದ್ದಾರೆ.
* ದ್ವೀಪರಾಷ್ಟ್ರ ಹೈಟಿಯಲ್ಲಿ ಈ ಹಿಂದೆ ಜುಲೈ 7 ರಂದು ಅಧ್ಯಕ್ಷ ಜೊವೆನಿಲ್ ಮೊಯ್ಸ್ ಅವರ ಹತ್ಯೆಯಾಗಿತ್ತು, ಕೋವಿಡ್ 19 ರೋಗದಿಂದ ಈ ದೇಶ ನಲುಗಿಹೋಗಿತ್ತು, ಇದೀಗ ಭೂಕಂಪನ ಇದರಿಂದಾಗಿ ದೇಶದ ಸಮಸ್ಯೆಯ ಇನ್ನು ಹೆಚ್ಚಾಗಿದೆ.
* ಈ ಹಿಂದೆ 2010 ರಲ್ಲಿ ಹೈಟಿ ರಾಷ್ಟ್ರದಲ್ಲಿ ಭೂಕಂಪನ ಸಂಭವಿಸಿ ಆ ಸಮಯದಲ್ಲಿಯೂ ಕೂಡ ಸಾವಿರ ಜನರು ಮೃತಪಟ್ಟಿದ್ದರು.

## ಗೂಗಲ್ ಸುಭದ್ರಾ ಕುಮಾರಿ ಚೌಹಾಣ್ ಜನ್ಮದಿನವನ್ನು ಆಚರಿಸಿದೆ



* ಪ್ರಸ್ತುತ ಗೂಗಲ್ ಸುಭದ್ರಾ ಕುಮಾರಿ ಚೌಹಾಣ್ ಅವರ 117 ನೇ ಜನ್ಮ ದಿನಾಚರಣೆಯ ಅಂಗವಾಗಿ ಇವರಿಗೆ ಸೃಜನಶೀಲ ಡೂಡಲ್ ನ್ನು ಅರ್ಪಿಸಿ ಗೌರವ ಸಲ್ಲಿಸಿದೆ.
* ಸುಭದ್ರಾ ಕುಮಾರಿ ಚೌಹಾಣ್ ಒಬ್ಬ ಭಾರತೀಯ ಹೋರಾಟಗಾರ್ತಿ, ಸ್ವಾತಂತ್ರ್ಯ ಹೋರಾಟಗಾರ್ತಿ ಮತ್ತು ಕವಿಯಾಗಿದ್ದಾರೆ, ಹಾಗೂ ಇವರ ಈ ಗೂಗಲ್ ಡೂಡಲ್ ನ್ನು ನ್ಯೂಜಿಲ್ಯಾಂಡ್ ನ ಅತಿಥಿ ಕಲಾವಿದರಾದ ಪ್ರಭಾ ಮಲ್ಯರಿಂದ ವಿವರಿಸಲಾಗಿದೆ.
* ಸುಭದ್ರಾ ಕುಮಾರಿ ಚೌಹಾಣ್ ಅವರು 1904 ರ ಆಗಸ್ಟ್. 16 ರಂದು ಉತ್ತರ ಪ್ರದೇಶದ ನಿಹಾಲ್ಪುರ್ ಗ್ರಾಮದಲ್ಲಿ ಜನಿಸಿದ್ದಾರೆ, ಇವರು ತಮ್ಮ 9 ನೇ ವರ್ಷ ವಯಸ್ಸಿನಲ್ಲಿ ಮೊದಲ ಕವಿತೆಯನ್ನು ಪ್ರಕಟಿಸಿದ್ದರು, ಹಾಗೂ ಇವರು ಕೂಡ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಭಾರತೀಯ ಕಾರ್ಯಕರ್ತೆಯಾಗಿದ್ದಾರೆ, ಇವರು 1948 ರಲ್ಲಿ ನಿಧನರಾದರು.

## ಒಡಿಶಾ ರಾಜ್ಯವು ಆರೋಗ್ಯ ಸ್ಮಾರ್ಟ್ ಕಾರ್ಡ್‌ಗಳನ್ನು ನೀಡುವುದಾಗಿ ಘೋಷಣೆ




* ಒಡಿಶಾ ರಾಜ್ಯದ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಅವರ ಸರ್ಕಾರವು ಬಿಜು ಸ್ವಾಸ್ಥ್ಯ ಕಲ್ಯಾಣ ಯೋಜನೆ ಅಡಿಯಲ್ಲಿ ಸ್ಮಾರ್ಟ್ ಆರೋಗ್ಯ ಕಾರ್ಡ್‌ಗಳನ್ನು ನೀಡುವುದಾಗಿ ಘೋಷಣೆ ಮಾಡಿದೆ.
* ಈ ಬಿಜು ಸ್ವಾಸ್ಥ್ಯ ಕಲ್ಯಾಣ ಯೋಜನೆ: ರಾಜ್ಯದ 96 ಲಕ್ಷ ಕುಟುಂಬಗಳಲ್ಲಿ 3.5 ಕೋಟಿ ಜನರಿಗೆ ಸ್ಮಾರ್ಟ್ ಹೆಲ್ತ್ ಕಾರ್ಡ್ ಒದಗಿಸಲಾಗುತ್ತದೆ ಎಂದು ತಿಳಿಸಿದ್ದಾರೆ.
* ಈ ಸ್ಮಾರ್ಟ್ ಹೆಲ್ತ್ ಕಾರ್ಡ್‌ಗಳನ್ನು ರಾಷ್ಟ್ರೀಯ ಮತ್ತು ರಾಜ್ಯ ಆಹಾರ ಭದ್ರತೆ ಯೋಜನೆಗಳು ಮತ್ತು ಅನ್ನಪೂರ್ಣ ಹಾಗೂ ಅಂತ್ಯೋದಯ ಉಪಕ್ರಮಗಳ ಫಲಾನುಭವಿಗಳಿಗೆ ನೀಡಲಾಗುತ್ತದೆ.
* ಪ್ರಸ್ತುತ ಈ ಕಾರ್ಡ್ ನ ಅಡಿಯಲ್ಲಿ ಮಹಿಳೆಯರು ವರ್ಷಕ್ಕೆ 10 ಲಕ್ಷದವರೆಗೆ ಚಿಕಿತ್ಸೆಯನ್ನು ಪಡೆಯಬಹುದು, ಹಾಗೂ ಇನ್ನುಳಿದ ಕುಟುಂಬದ ಸದಸ್ಯರು ತಲಾ 5 ಲಕ್ಷ ರೂ. ಗಳ ಲಾಭವನ್ನು ಪಡೆಯಬಹುದಾಗಿದೆ.
* ಪ್ರಸ್ತುತ ಸ್ಮಾರ್ಟ್ ಹೆಲ್ತ್ ಕಾರ್ಡ್‌ಗಳನ್ನು ಒದಗಿಸಿದ ಭಾರತದ ಮೊದಲ ರಾಜ್ಯ ಒಡಿಶಾ ವಾಗಲಿದೆ ಎಂದಿದ್ದಾರೆ.
* ಆರೋಗ್ಯ ಕಾರ್ಡ್ ಪಡೆದವರು ಒಡಿಶಾ ಹಾಗೂ ಭಾರತದ 200 ಆಸ್ಪತ್ರೆಗಳಲ್ಲಿ ಆರೋಗ್ಯ ಸೇವೆಗಳನ್ನು ಪಡೆಯಬಹುದಾಗಿದೆ ಎಂದಿದ್ದಾರೆ.
* ಬಿಜು ಸ್ವಾಸ್ಥ್ಯ ಕಲ್ಯಾಣ ಯೋಜನೆಯು ಸಾರ್ವತ್ರಿಕ ಆರೋಗ್ಯ ರಕ್ಷಣೆಯ ಯೋಜನೆಯಾಗಿದೆ, ಸರಿ ಸುಮಾರು 70 ಲಕ್ಷ ಕುಟುಂಬಗಳು ಈ ಯೋಜನೆ ಅಡಿಯಲ್ಲಿವೆ, ಈ ಯೋಜನೆಯಿಂದ ಪ್ರತಿ ಕುಟುಂಬಕ್ಕೆ ವಾರ್ಷಿಕ 5 ಲಕ್ಷ ಮತ್ತು ಪ್ರತಿ ಕುಟುಂಬದ 7 ಸದಸ್ಯರಿಗೆ 7 ಲಕ್ಷಗಳ ಆರೋಗ್ಯ ರಕ್ಷಣೆಯನ್ನು ನೀಡಲಾಗುತ್ತದೆ ಎಂದು ಒಡಿಶಾ ಮುಖ್ಯಮಂತ್ರಿ ತಿಳಿಸಿದ್ದಾರೆ.

## ಜಾನುವಾರು ಸಂರಕ್ಷಣೆ ಮಸೂದೆಯನ್ನು ಅಂಗೀಕರಿಸಿದ: ಅಸ್ಸಾಂ ರಾಜ್ಯ




* ಅಸ್ಸಾಂ ರಾಜ್ಯ ವಿಧಾನಸಭೆ 2021 ರ ಆಗಸ್ಟ್. 13 ರಂದು 'ಅಸ್ಸಾಂ ಜಾನುವಾರು ಸಂರಕ್ಷಣೆ ಮಸೂದೆ,2021 ಯನ್ನು ಅಂಗೀಕರಿಸಿದೆ.
* ಅಸ್ಸಾಂ ಜಾನುವಾರು ಸಂರಕ್ಷಣಾ ವಿಧೇಯಕ, 2021 ರ ಅನುಸಾರವಾಗಿ ದನದ ಮಾಂಸ ತಿನ್ನುವ ಸಮುದಾಯಗಳು ವಾಸಿಸುವ ಪ್ರದೇಶಗಳಲ್ಲಿ ಗೋಮಾಂಸ ಮಾರಾಟ ಹಾಗೂ ಖರೀದಿಯನ್ನು ನಿಷೇಧಿಸಲಾಗುತ್ತದೆ ಎಂದು ತಿಳಿಸಿದೆ.
* ಪ್ರಸ್ತುತ ದೇವಸ್ಥಾನ ಅಥವಾ ಮಠದ ಸುತ್ತಮುತ್ತ 5 ಕಿಮೀ ವ್ಯಾಪ್ತಿಯಲ್ಲಿ ಗೋಮಾಂಸ ಮಾರಾಟ ಮತ್ತು ಖರೀದಿಯನ್ನು ನಿಷೇಧಿಸಿದೆ.
* ಈ ಮಸೂದೆಯು ಅಸ್ಸಾಂ ಜಾನುವಾರು ಸಂರಕ್ಷಣಾ 1950 ರ ಕಾಯಿದೆಯನ್ನು ರದ್ದುಪಡಿಸಿದೆ, ಇದರಿಂದಾಗಿ ಜಾನುವಾರುಗಳ ವಧೆ, ಬಳಕೆ, ಅಕ್ರಮ ಸಾಗಣೆಯನ್ನು ನಿಯಂತ್ರಿಸುವ ಗುರಿಯನ್ನು ಅಂಗೀಕರಿಸಲಾಗಿದೆ ಎಂದು ತಿಳಿಸಿದ್ದಾರೆ.
* ಪ್ರಸ್ತುತ ಒಡಿಶಾ ರಾಜ್ಯದ ಈ ಹೊಸ ಕಾನೂನನ್ನು ಪಾಲಿಸದಿದ್ದಲ್ಲಿ ಅಥವಾ ಮೀರಿದರೆ ಅಂತವರಿಗೆ ಕನಿಷ್ಠ '3' ರಿಂದ '8' ವರ್ಷಗಳ ಜೈಲು ಶಿಕ್ಷೆಗೆ ಒಳಪಡಿಸಲಾಗುತ್ತದೆ, ಹಾಗೂ '3' ರಿಂದ '5'ಲಕ್ಷ ರೂ. ದಂಡ ವಿಧಿಸಲಾಗುವದು ಎಂದು ತಿಳಿಸಿದ್ದಾರೆ.
* ಆದರೆ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಈ ಕಾನೂನನ್ನು ಅನ್ವಯಿಸಲಾಗುವುದಿಲ್ಲ, ಆ ಸಂದರ್ಭಗಳಲ್ಲಿ, ಹಸು ಮತ್ತು ಕರು ಹೊರತುಪಡಿಸಿ ಉಳಿದ ಜಾನುವಾರುಗಳ ವಧೆಗೆ ಅನುಮತಿ ನೀಡಲಾಗಿದೆ.

# 18-08-2021

## ಅಮರುಲ್ಲಾ ಸಲೇಹ್ ಪ್ರಸ್ತುತ ಅಫ್ಘಾನಿಸ್ತಾನದ ಉಸ್ತುವಾರಿ ಅಧ್ಯಕ್ಷ



* ಇತ್ತೀಚಿಗೆ ಅಫ್ಘಾನಿಸ್ತಾನದ ಕಾಬೂಲ್ ನಗರಕ್ಕೆ ತಾಲಿಬಾನ್ ಉಗ್ರರು ಕಾಲ ಇಡುತ್ತಿದ್ದಂತೆ ಅಧ್ಯಕ್ಷ ಅಶ್ರಫ್ ಘನಿ ವರೌ ಬೇರೆ ದೇಶಕ್ಕೆ ಪಲಾಯನ ಮಾಡಿದ್ದಾರೆ, ಆದರೆ ಇದೀಗ ನಾನು ದೇಶದ ಕಾನೂನುಬದ್ಧ ಉಸ್ತುವಾರಿ ಅಧ್ಯಕ್ಷ ಎಂದು ಆಫ್ಘಾನ್ ಉಪಾಧ್ಯಕ್ಷರು ಘೋಷಿಸಿ ಕೊಂಡಿದ್ದಾರೆ, ಹಾಗೂ ಇದಕ್ಕೆ ಆಫ್ಘಾನ್ ಸಂವಿಧಾನವು ಅಧಿಕಾರ ನೀಡಲು ಒಪ್ಪಿದೆ ಎಂದು ಉಲ್ಲೇಖಿಸಿದ್ದಾರೆ.
* ಪ್ರಸ್ತುತ ಅಫ್ಘಾನಿಸ್ತಾನದ ಮಾಜಿ ಅಧ್ಯಕ್ಷ ಹಮೀದ್ ಕರ್ಜೈ ಹಾಗೂ ಶಾಂತಿ ಮಂಡಳಿ ಮುಖ್ಯಸ್ಥ ಅಬ್ದುಲ್ಲಾ ಹೀಗೆ ಹಲವಾರು ನಾಯಕರು ತಾಲಿಬಾನ್ ಉಗ್ರರ ಜೊತೆ ಮಾತುಕತೆ ನಡೆಸುತ್ತಿದ್ದಾರೆ.

## 2024ಕ್ಕೆ 'ಭಾರತ್ ನೆಟ್' ಯೋಜನೆಯಡಿ 6 ಲಕ್ಷ ಹಳ್ಳಿಗಳಿಗೆ ಡಿಜಿಟಲ್ ಸಂಪರ್ಕ



* ಪ್ರಸ್ತುತ ಕೇಂದ್ರ ಸರ್ಕಾರವು ದೇಶಾದ್ಯಂತ ಇರುವ ನೆಟ್‌ವರ್ಕ್ ಸಮಸ್ಯೆ ಬಗೆಹರಿಸಲು ಬದ್ಧವಾಗಿದೆ, ಹಾಗೂ 2024 ರ ಹೊತ್ತಿಗೆ 'ಭಾರತ್

ನೆಟ್' ಯೋಜನೆಯ ಅಡಿಯಲ್ಲಿ ದೇಶದ 6 ಲಕ್ಷ ಹಳ್ಳಿಗಳಿಗೆ ಡಿಜಿಟಲ್ ಸಂವಹನ ಸಂಪರ್ಕ ವ್ಯವಸ್ಥೆಯನ್ನು ಕಲ್ಪಿಸಲಾಗುವುದು ಎಂದು ತಿಳಿಸಿದೆ.

* ಕೇಂದ್ರ ಮಾಹಿತಿ ತಂತ್ರಜ್ಞಾನ ಮತ್ತು ಕೌಶಲ್ಯಾಭಿವೃದ್ಧಿ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ಅವರು ನೀಡಿರುವ ಮಾಹಿತಿಯ ಪ್ರಕಾರ ರಾಜ್ಯದ ಪ್ರತಿ ಜಿಲ್ಲೆಯ ಒಂದು ಹಳ್ಳಿಯಲ್ಲಿ ಪ್ರಾಯೋಗಿಕವಾಗಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು ಎಂದಿದ್ದಾರೆ, ಇದರಿಂದಾಗಿ ಗ್ರಾಮೀಣ ಭಾಗದಲ್ಲಿರುವ ನೆಟ್‌ವರ್ಕ್ ಸಮಸ್ಯೆ ಬಗೆಹರಿಸಲಾಗುತ್ತದೆ ಎಂದು ತಿಳಿಸಿದ್ದಾರೆ.

## ಒಲಿಂಪಿಕ್ಸ್ ಪದಕ ವಿಜೇತ ರವಿ ದಹಿಯಾ ಹೆಸರು ದೆಹಲಿ ಸರ್ಕಾರಿ ಶಾಲೆಗೆ




* ಪ್ರಸ್ತುತ ಟೋಕಿಯೋ ಒಲಿಂಪಿಕ್ಸ್ ನ ಕುಸ್ತಿ ವಿಭಾಗದಲ್ಲಿ ಬೆಳ್ಳಿ ಗೆದ್ದ ಭಾರತದ ರವಿ ದಹಿಯಾ ಅವರ ಹೆಸರನ್ನು ಇದೀಗ ರಾಷ್ಟ್ರ ರಾಜಧಾನಿ ದೆಹಲಿಯ ಆದರ್ಶ ನಗರ ಪ್ರದೇಶದ ಸರ್ಕಾರಿ ಶಾಲೆಗೆ ಇಡಲಾಗುವದು ಎಂದು ದೆಹಲಿ ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಘೋಷಣೆ ಮಾಡಿದ್ದಾರೆ.

* ದೆಹಲಿಯ ಈ ಶಾಲೆಗೆ 'ರವಿ ದಹಿಯಾ ಬಾಲ ವಿದ್ಯಾಲಯ' ಎಂದು ಹೆಸರಿಸಲು ಸರ್ಕಾರವು ತೀರ್ಮಾನಿಸಿದೆ ದೆಹಲಿ ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಅವರು ಟ್ವೀಟ್ ಮೂಲಕ ಮಾಹಿತಿ ತಿಳಿಸಿದ್ದಾರೆ.

## ಮತ್ತೆ 10 ವರ್ಷಗಳ ಕಾಲ ಭಾರತ ಹಾಕಿ ತಂಡಕ್ಕೆ ಒಡಿಶಾ ಸರ್ಕಾರದ ಪ್ರಾಯೋಜಕತ್ವ




* ಇತ್ತೀಚಿಗೆ ಟೋಕಿಯೊ ಒಲಂಪಿಕ್ಸ್ ಕ್ರೀಡಾಕೂಟದಲ್ಲಿ ಭಾರತ ಪುರುಷರ ಹಾಗೂ ಮಹಿಳಾ ಹಾಕಿ ತಂಡಗಳು ಉತ್ತಮ ಯಶಸ್ಸನ್ನು ಸಾಧಿಸಿವೆ, ಈ ಹಿನ್ನಲೆಯಿಂದಾಗಿ ಒಡಿಶಾ ಸರ್ಕಾರ ಇನ್ನು ಮುಂದಿನ 10 ವರ್ಷಗಳ ಕಾಲ ಪ್ರಾಯೋಜಕತ್ವ ವಿಸ್ತರಿಸಲಿದೆ ಎಂದು ಒಡಿಶಾ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಘೋಷಣೆ ಮಾಡಿದ್ದಾರೆ.

* ಸದ್ಯ ಒಡಿಶಾ ಸರ್ಕಾರಕ್ಕೆ ಹಾಕಿ ತಂಡಗಳ ಪ್ರಾಯೋಜಕತ್ವದ ಅವಧಿ 2023 ರವರೆಗೂ ಇದೆ, ತನದನಂತರ, ಅಂದರೆ ಅಲ್ಲಿಂದ ಮುಂದಿನ 10 ವರ್ಷಗಳ ಕಾಲ ಪ್ರಾಯೋಜಕತ್ವ ಮುಂದುವರಿಯಲಿದೆ ಎಂದು ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಅವರು ತಿಳಿಸಿದ್ದಾರೆ.

* ಪ್ರಸ್ತುತ ಒಡಿಶಾ ಸರ್ಕಾರವು ಈ ಹಿಂದೆ 2018 ರ ಫೆಬ್ರವರಿ ತಿಂಗಳಿಂದ ಪುರುಷ ಮತ್ತು ಮಹಿಳಾ '2' ತಂಡಗಳಿಗೆ ಪ್ರಾಯೋಜಕತ್ವ ವಹಿಸಿಕೊಂಡಿದೆ.

* ಈ ಬಾರಿಯ ಟೋಕಿಯೋ ಒಲಿಂಪಿಕ್ಸ್ ನಲ್ಲಿ ಭಾರತ ಪುರುಷರ ಹಾಕಿ ತಂಡ ಕಂಚಿನ ಪದಕ ಜಯಿಸಿ (ಅಂದರೆ ಸುಮಾರು 41 ವರ್ಷಗಳ ಬಳಿಕ) ಐತಿಹಾಸಿಕ ಸಾಧನೆ ಮಾಡಿದೆ, ಹಾಗೂ ಭಾರತೀಯ ಮಹಿಳಾ ತಂಡ 4 ನೇ ಸ್ಥಾನ ಪಡೆದುಕೊಂಡಿದೆ.

* ಒಡಿಶಾ ರಾಜ್ಯದ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಅವರು ಎರಡು ತಂಡಗಳ ಆಟಗಾರರಿಗೆ ತಲಾ 10 ಲಕ್ಷ ರೂಪಾಯಿ ನಗದು ಬಹುಮಾನ ನೀಡಿದ್ದಾರೆ, ಹಾಗೂ ತಂಡದ ಸಹಾಯಕ ಸಿಬ್ಬಂದಿಗೆ ತಲಾ 5 ಲಕ್ಷ ರೂ. ನೀಡಿದ್ದಾರೆ, ಇಅದರ ಜೊತೆಗೆ ಹಾಕಿ ಇಂಡಿಯಾಗೆ 50 ಲಕ್ಷ ರೂಪಾಯಿ ಸಹಾಯಧನ ಘೋಷಣೆ ಮಾಡಿದ್ದಾರೆ.

## HAL ನಿಂದ ಹಿಂದೂಸ್ತಾನ್ 228 ವಿಮಾನ ಟ್ಯಾಕ್ಸಿ ಟ್ರಯಲ್ಸ್ ಯಶಸ್ವಿ



* ಬೆಂಗಳೂರು ಹಿಂದೂಸ್ತಾನ್ ಏರೋನಾಟಿಕ್ ಲಿಮಿಟೆಡ್ (HAL) ಇದೀಗ ಹಿಂದೂಸ್ತಾನ್ 228 ಕಡಿಮೆ ವೇಗದ ಟ್ಯಾಕ್ಸಿ ಟ್ರಯಲ್ಸ್'ಅನ್ನು ಯಶಸ್ವಿಯಾಗಿ ನಡೆಸಿದೆ.

* ಈ ಈ ಟ್ರಯಲ್ ನ್ನು ಡಿಜಿಸಿಎ ಮಾದರಿಯ ಪ್ರಮಾಣಪತ್ರಕ್ಕಾಗಿ ನಡೆಸಲಾಗಿದೆ, ಹಾಗೂ ಇದು '75' ವರ್ಷದ ಸ್ವಾತಂತ್ರ್ಯ ದಿನಾಚರಣೆಯ ಭಾಗವಾಗಿದೆ, ಹಾಗೂ ಮೇಡ್ ಇನ್ ಇಂಡಿಯಾ ನಾಗರಿಕ ವಿಮಾನದ ಮಹತ್ವದ ಮೈಲಿಗಲ್ಲಾಗಿದೆ ಎಂದು HAL ನ ಅಧಿಕಾರಿ ಸಜಲ್ ಪ್ರಕಾಶ್ ತಿಳಿಸಿದ್ದಾರೆ.

* ಪ್ರಸ್ತುತ ರಾಜ್ಯ ಹಾಗೂ ಅಂತಾರಾಜ್ಯಗಳ ಸಂಚಾರಕ್ಕಾಗಿ ಸರ್ಕಾರಗಳು ಮತ್ತು ಸಿವಿಲ್ ಆಪರೇಟರ್'ಗಳಿಗೆ ಈ ಟಾಕ್ಸಿ ವಿಮಾನ ಉಪಯೋಗವಾಗಲಿದೆ ಎಂದು HAL ತಿಳಿಸಿದೆ.

* HAL ನ ಹಿಂದೂಸ್ತಾನ್ 228 ಟಾಕ್ಸಿ ವಿಮಾನವು 19 ಸೀಟ್ ಒಳಗೊಂಡ ಬಹು ಉಪಯೋಗಿ VIP ಸಾರಿಗೆಯಾಗಿದೆ, ಏರ್ ಆಂಬುಲೆನ್ಸ್, ವೈಮಾನಿಕ ಸಮೀಕ್ಷೆ, ಮೋಡ ಬಿತ್ತನೆ ಹೀಗೆ ಹಲವು ಚಟುವಟಿಕೆಗಳಿಗೆ ಈ ಟಾಕ್ಸಿ ವಿಮಾನ ಬಳಸಬಹುದಾಗಿದೆ ಎಂದು HAL ತಿಳಿಸಿದೆ.

## ಭಾರತವು ಅಫ್ಘಾನಿಸ್ತಾನದ ಕಾಬೂಲ್‌ನಲ್ಲಿರುವ ರಾಯಭಾರ ಕಚೇರಿ ಸ್ಥಳಾಂತರಿಸಿದೆ



* ಭಾರತ ದೇಶವು ಅಫ್ಘಾನಿಸ್ತಾನದ ಕಾಬೂಲ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯನ್ನು ಸ್ಥಳಾಂತರಿಸಿ ಕಚೇರಿಯ ಸಿಬ್ಬಂದಿಗಳನ್ನೂ ಭಾರತೀಯ ಸೇನಾ ವಿಮಾನದಲ್ಲಿ ದೇಶಕ್ಕೆ ಕರೆತಂದಿದೆ.
* ಪ್ರಸ್ತುತ ಅಫ್ಘಾನಿಸ್ತಾನದಲ್ಲಿ ತಾಲಿಬಾನ್ ಉಗ್ರರ ಹಿಂಸಾಚಾರ ಹೆಚ್ಚಾಗುತ್ತಿರುವ ಹಿನ್ನಲೆಯಿಂದಾಗಿ ಭಾರತವು ಕಾಬೂಲ್‌ನಲ್ಲಿರುವ ತನ್ನ ರಾಯಭಾರ ಕಚೇರಿಯನ್ನು ಸ್ಥಳಾಂತರಿಸಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ಅವರು ಟ್ವೀಟ್ ಮೂಲಕ ಮಾಹಿತಿ ನೀಡಿದ್ದಾರೆ.

## 'E janma portal' ಮೂಲಕ ಆನ್ ಲೈನ್ ನಲ್ಲಿಯೇ ಜನನ ಮರಣ ಪ್ರಮಾಣಪತ್ರ




* ಕರ್ನಾಟಕ ರಾಜ್ಯ ಸರ್ಕಾರವು ಇತ್ತೀಚಿಗೆ ಸುಧಾರಣೆಯೊಂದನ್ನು ಜಾರಿಗೆ ತರಲು ಮುಂದಾಗಿದೆ, ಅದುವೇ ಆನ್ ಲೈನ್ ವ್ಯವಸ್ಥೆ ಮೂಲಕ ಜನನ ಮತ್ತು ಮರಣ ಪ್ರಮಾಣಪತ್ರ ಪಡೆಯುವ ವ್ಯವಸ್ಥೆ, ಈ ಪೋರ್ಟಲ್ ನಿಂದಾಗಿ ಜನರು ಜನನ ಮರಣ ಪ್ರಮಾಣ ಪತ್ರಗಳಿಗಾಗಿ ಕಚೇರಿಗಳಿಗೆ ಅಳೆಯುವದು ತಪ್ಪಲಿದೆ ಎಂದಿದ್ದಾರೆ.
* ಈ ಆನ್ ಲೈನ್ ಜನನ ಮರಣ ವ್ಯವಸ್ಥೆಯು ಮುಂಬರುವ ಸೆಪ್ಟೆಂಬರ್ ತಿಂಗಳಿನಿಂದ ನಿಂದ ಸಾರ್ವಜನಿಕರಿಗೆ ಲಭ್ಯವಾಗಲಿದೆ, ಹಾಗೂ ಇ ಜನ್ಮ ಪೋರ್ಟಲ್ ಆನ್ ಲೈನ್ ನಲ್ಲಿ ಜನರೇಟ್ ಆದ ನಂಬರ್ ಬಳ್ಸಿಕೊಂಡು ಎಲ್ಲಿಯಾದರೂ ಸರ್ಟೀಫಿಕೇಟ್ ಪಡೆಯಬಹುದಾಗಿದೆ ಎಂದು ತಿಳಿಸಿದ್ದಾರೆ.
* ಪ್ರಸ್ತುತ ಆಸ್ಪತ್ರೆಗಳಲ್ಲಿ ಮಗು ಹುಟ್ಟಿದ ನಂತರ ನೀಡಲಾಗುವ ದಾಖಲಾತಿಯನ್ನು ಸ್ಥಳೀಯ ಸಂಸ್ಥೆಗಳಲ್ಲಿ ನೀಡಬೇಕಾಗುತ್ತದೆ ಆಗ ಅಲ್ಲಿನ ಅಧಿಕಾರಿಗಳ ಇ ಜನ್ಮಪೋರ್ಟಲ್ ನಲ್ಲಿ ತಂದೆ ತಾಯಿ ಆಧಾರ್, ಪಾನ್ ಕಾರ್ಡ್ ಸೇರಿ ಯಾವುದಾದರೊಂದು ದಾಖಲಾತಿ ಜೊತೆಗೆ ಅಪ್ಲೋಡ್ ಮಾಡುತ್ತಾರೆ ನಂತರ ಸರ್ಟೀಫಿಕೇಟ್ ಹಾಗೂ ನೊಂದಿಗೆ ನಂಬರ್ ನ್ನು ನೀಡುತ್ತಾರೆ, ಇದೇ ರೀತಿಯಲ್ಲಿಯೂ ಮರಣದ ಮಾಹಿತಿ ಈ ಪೋರ್ಟಲ್ ನಲ್ಲಿಯೇ ಅಪ್ಲೋಡ್ ಮಾಡಲಾಗುತ್ತದೆ ಎಂದು ತಿಳಿದು ಬಂದಿದೆ.

## ಸುಡೋಕು ಪಿತಾಮಹ ನಿಧನ



* ಸುಡೋಕು ಪಿತಾಮಹ ಮಕಿ ಕಾಜಿ ಅವರು ತಮ್ಮ 69 ನೇ ವಯಸ್ಸಿನಲ್ಲಿ ಕ್ಯಾನ್ಸರ್ ರೋಗದಿಂದ 2021 ರ ಆಗಸ್ಟ್.17 ರಂದು ವಿಧಿವಶರಾಗಿದ್ದಾರೆ.
* ಮಾಕಿ ಕಾಜಿ ನಿಕೋಲಿ ಕಂ ಲಿಮಿಟೆಡ್‌ನ ಅಧ್ಯಕ್ಷರಾಗಿದ್ದರು, ಹಾಗೂ ಜನಪ್ರಿಯ ಸಂಖ್ಯೆಗಳ ಒಗಟು ಸುಡೋಕು ಸೃಷ್ಟಿಕರ್ತರಾಗಿದ್ದರು, ಮತ್ತು 'ಸುಡೋಕು ಪಿತಾಮಹ' ಎಂದು ಜನಪ್ರಿಯವಾಗಿ ಇವರನ್ನು ಕರೆಯುತ್ತಿದ್ದರು.
* ಮಾಕಿ ಕಾಜಿ ಅವರು 1951 ರ ಅಕ್ಟೋಬರ್. 8 ರಂದು ಹೊಕ್ಕೈಡೊದ ಸಪ್ಪೊರೊದಲ್ಲಿ ಜನಿಸಿದ್ದಾರೆ, ಹಾಗೂ ಇವರ ತಂದೆ ಟೆಲಿಕಾಂ ಕಂಪನಿಯಲ್ಲಿ ಇಂಜಿನಿಯರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದರು.
* ಮಾಕಿ ಕಾಜಿ ಅವರು ಕೊನೆಯದಾಗಿ ಪ್ರಕಾಶನ ಉದ್ಯಮವನ್ನು ಆರಂಭಿಸಿದರು.
* ಸುಡೋಕು ಎನ್ನುವದು ಒಂದು ತರ್ಕ ಆಧಾರಿತ, ಸಂಯೋಜಿತ, ಸಂಖ್ಯೆ ನಿಯೋಜನೆ ಒಗಟಾಗಿದೆ.

## ಛತ್ತೀಸಗಢ ಸರ್ಕಾರವು ಭೂರಹಿತ ಕಾರ್ಮಿಕರಿಗೆ 6,000 ರೂ. ನೀಡಲಿದೆ



* ಛತ್ತೀಸಗಢ ಸರ್ಕಾರವು 'ರಾಜೀವ್ ಗಾಂಧಿ ಗ್ರಾಮೀಣ ಭೂಮಿನ್ ಮಜ್ದೂರ್ ನ್ಯಾಯ ಯೋಜನೆ' ಯನ್ನು ಆರಂಭಿಸಿದೆ ಇದರ ಅಡಿಯಲ್ಲಿ 12 ಲಕ್ಷ ಭೂರಹಿತ ಕಾರ್ಮಿಕರಿಗೆ 6000 ರೂ. ನೀಡಲಿದೆ ಎಂದು ತಿಳಿಸಿದೆ.
* ಈ ಯೋಜನೆಯನ್ನು ಛತ್ತೀಸಗಢ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಅವರು ಈ ಹಿಂದೆ ಜುಲೈ. 28 ರಂದು ರಾಜ್ಯ ವಿಧಾನಸಭೆಯಲ್ಲಿ ಘೋಷಣೆ ಮಾಡಿದ್ದರು, ಹಾಗೂ 2021 2022 ಹಣಕಾಸು ವರ್ಷದ ಪೂರಕ ಬಜೆಟ್ ನಲ್ಲಿ ಈ ಯೋಜನೆಗೆ ಮಂಜೂರಾದ ಮೊತ್ತವನ್ನು ಸೇರಿಸಿದ್ದಾರೆ.
* ಪ್ರಸ್ತುತ ಛತ್ತೀಸಗಢ ಸರ್ಕಾರವು 200 ಕೋಟಿ ರೂ. ಒದಗಿಸುವ ಮೂಲಕ ಈ ಯೋಜನೆಯನ್ನು ಪ್ರಾರಂಭಿಸಿದೆ, ಇದರಿಂದಾಗಿ 12 ಲಕ್ಷ ಭೂರಹಿತ ಕುಟುಂಬಗಳಿಗೆ ಸಹಾಯವಾಗಲಿದೆ ಎಂದಿದೆ.
* ಈ ಯೋಜನೆಯು ಗ್ರಾಮೀಣ ಭೂರಹಿತ ಕಾರ್ಮಿಕರಿಗೆ ಕನಿಷ್ಠ ವೇತನದ ಬೆಂಬಲ ನೀಡಲಿದೆ ಎಂದು ತಿಳಿಸಿದ್ದಾರೆ, 2022 ರ ಮಾರ್ಚ್. 31 ರ ಮೊದಲು ಫಲಾನುಭವಿಗಳು ತಮ್ಮ ಪ್ರಯೋಜನಗಳನ್ನು ಪಡೆಯಲಿದ್ದಾರೆ ಎಂದಿದ್ದಾರೆ.
* ಛತ್ತೀಸಗಢ ಸರ್ಕಾರದ ಈ ಯೋಜನೆಯ ರಾಜ್ಯದಲ್ಲಿನ ಕ್ಷೌರಿಕರು, ಕಮ್ಮಾರರು, ಬಟ್ಟೆ ತೊಳೆಯುವವರು ಹಾಗೂ ಬಟ್ಟೆ ತೊಳೆಯುವ ಮಹಿಳೆಯರು, ಹಾಗೂ ಪುರೋಹಿತರಂತಹ ಫಲಾನುಭವಿಗಳಿಗೆ ನೆರವಾಗಲಿದೆ ಎಂದು ತಿಳಿಸಿದ್ದಾರೆ.

## ಫೇಸ್ಬುಕ್ ತಾಲಿಬಾನ್ ಬೆಂಬಲಿತ ವಿಷಯವನ್ನು ನಿಷೇಧಿಸಿದೆ



* ಸಾಮಾಜಿಕ ಜಾಲತಾಣವಾಗಿರುವ ಫೇಸ್ಬುಕ್ ಇದೀಗ ತಾಲಿಬಾನ್ ನ್ನು ಭಯೋತ್ಪಾದಕ ಸಂಘಟನೆ ಎಂದು ಘೋಷಣೆ ಮಾಡಿ ತದನಂತರ ತಾಲಿಬಾನ್ ಬೆಂಬಲಿಸುವ ಎಲ್ಲಾ ವಿಷಯಗಳನ್ನು ಅದರ ವೇದಿಕೆಗಳಿಂದ ನಿಷೇಧಿಸಿದೆ.

* ಪ್ರಸ್ತುತ ಇಸ್ಲಾಮಿಕ್ ದಂಗೆಕೋರ ಗುಂಪಿಗೆ ಸಂಬಂಧಿಸಿದ ವಿಷಯವನ್ನು ಮೇಲ್ವಿಚಾರಣೆ ಮತ್ತು ತೆಗೆದುಹಾಕುವ ಅಫಘಾನ್ ತಜ್ಞರ ಸಮರ್ಪಿತ ತಂಡವನ್ನು ಫೇಸ್ಬುಕ್ ಹೊಂದಿದೆ.

* ಫೇಸ್ಬುಕ್ ತನ್ನ ಸೇವೆಯನ್ನು ಡೇಂಜರಸ್ ಆರ್ಗನೈಸೇಶನ್ ಪಾಲಿಸಿಗಳ ಅಡಿಯಲ್ಲಿ ತಾಲಿಬಾನ್ ಬೆಂಬಲಿಸುವ ಎಲ್ಲಾ ವಿಷಯಗಳನ್ನು ನಿಷೇಧಿಸಿದೆ, ಹಾಗೂ ಈ ನೀತಿಯ ಅಡಿಯಲ್ಲಿ ತಾಲಿಬಾನಿಗಳ ಪರವಾಗಿ ಬೆಂಬಲ ಮತ್ತು ಅವರನ್ನು ಪ್ರತಿನಿಧಿಸುವ ಖಾತೆಯನ್ನು ತೆಗೆದುಹಾಕಲಾಗುತ್ತದೆ ಎಂದು ತಿಳಿಸಿದೆ.

* ಈ ನೀತಿಯನ್ನು ಫೇಸ್‌ಬುಕ್, ಇನ್ಸ್ಟಾಗ್ರಾಮ್ ಮತ್ತು ವಾಟ್ಸ್ ಆಪ್ ನಂತಹ ಎಲ್ಲಾ ಪ್ಲಾಟ್‌ಫಾರ್ಮ್‌ಗಳಿಗೆ ಅನ್ವಯಿಸಲಾಗುತ್ತದೆ.

* 2021 ರಲ್ಲಿ ಫೇಸ್‌ಬುಕ್‌ನ ಉನ್ನತ ಮಟ್ಟದ ನಿರ್ಧಾರಗಳು ತಗೆದುಕೊಂಡಿದೆ, ಉದಾಹರಣೆಗೆ: ಹಿಂಸಾಚಾರವನ್ನು ಪ್ರಚೋದಿಸಿದ್ದಕ್ಕಾಗಿ ಅಮೇರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ನಿರ್ಬಂಧಿಸಿತ್ತು, ಹಾಗೂ ದೇಶದಲ್ಲಿ ದಂಗೆಯ ನಂತರ ಮ್ಯಾನ್ಮಾರ್ ಮಿಲಿಟರಿಯನ್ನು ನಿಷೇಧಿಸಿತ್ತು.

* ಸಾಮಾಜಿಕ ಜಾಲತಾಣ ಫೇಸ್ಬುಕ್ ಅಮೇರಿಕದ ಬಹುರಾಷ್ಟ್ರೀಯ ತಂತ್ರಜ್ಞಾನ ಕಂಪನಿಯಾಗಿದೆ, ಇದು ತನ್ನ ಪ್ರಧಾನ ಕಚೇರಿಯನ್ನು ಕ್ಯಾಲಿಫೋರ್ನಿಯಾದ ಮೆನ್ಲೊ ಪಾರ್ಕ್ ನಲ್ಲಿ ಹೊಂದಿದೆ.

* ಸಾಮಾಜಿಕ ಜಾಲತಾಣ ಫೇಸ್ಬುಕ್ ನ್ನು 2004 ರಲ್ಲಿ 'ದಿ ಫೇಸ್ಬುಕ್' ಎಂದು ಸ್ಥಾಪನೆ ಮಾಡಲಾಗಿದೆ, ಹಾಗೂ ಇದು 2021 ರ ಹೊತ್ತಿಗೆ 2.9 ಬಿಲಿಯನ್ ಮಾಸಿಕ ಬಳಕೆದಾರರನ್ನು ಹೊಂದಿದೆ.

* ಈ ಫೇಸ್ಬುಕ್ 2012 ರಲ್ಲಿ ಇನ್ಸ್ಟಾಗ್ರಾಮ್ ಹಾಗೂ 2014ರಲ್ಲಿ ವಾಟ್ಸಾಪ್ ಮತ್ತು ಆಕ್ಯುಲಸ್ ಅನ್ನು ಸ್ವಾಧೀನಪಡಿಸಿಕೊಂಡಿದೆ.

# 19-08-2021

## ಅಮೆರಿಕನ್ನರಿಗೆ ಕೋವಿಡ್ 19 ಬೂಸ್ಟರ್ ಡೋಸ್, ಯು.ಎಸ್ ಸರ್ಕಾರ ಸಮ್ಮತಿ



* ಕೊರೊನಾ ವೈರಸ್‌ನ ಡೆಲ್ಟಾ ರೂಪಾಂತರದಿಂದ ಸೋಂಕುಗಳು ಹೆಚ್ಚುತ್ತಿರುವ ಕಾರಣದಿಂದಾಗಿ ಮುಂದಿನ ಸೆಪ್ಟಂಬರ್ 20 ರಿಂದ ಎಲ್ಲಾ ಅಮೆರಿಕನ್ ಪ್ರಜೆಗಳಿಗೆ ಕೋವಿಡ್ 19 ಲಸಿಕೆ ಬೂಸ್ಟರ್ ಶಾಟ್ ಗಳನ್ನು ಎಲ್ಲೆಡೇ ಲಭ್ಯವಾಗುವಂತೆ ಮಾಡಲು ಅಮೆರಿಕ ಸರ್ಕಾರವು ಯೋಜಿಸಿದೆ.

* ಸುಮಾರು ಎಂಟು ತಿಂಗಳ ಹಿಂದೆ ತಮ್ಮ ಮೊದಲನೇ ಚುಚ್ಚುಮದ್ದು ಸ್ವೀಕರಿಸಿದ ಎಲ್ಲಾ ಅಮೆರಿಕನ್ ಪ್ರಜೆಗಳಿಗೆ ಸೆಪ್ಟಂಬರ್ 20ರಿಂದ 3 ನೇ ಬೂಸ್ಟರ್ ಶಾಟ್'ನ್ನು ನೀಡಲು ಅಮೇರಿಕದ ಅಮೆರಿಕದ ಆರೋಗ್ಯ ಮತ್ತು ಮಾನವ ಸೇವೆಗಳ ಇಲಾಖೆ ಸಿದ್ಧವಾಗಿದೆ ಎಂದು ಶ್ವೇತಭವನ ತಿಳಿಸಿದೆ.

* ಆರಂಭದಲ್ಲಿ ಈ ಬೂಸ್ಟರ್ ಶಾಟ್ ಗಳನ್ನು ಮೊದಲು ಆರೋಗ್ಯ ಕಾರ್ಯಕರ್ತರು, ನರ್ಸಿಂಗ್ ಹೋಂ ನಿವಾಸಿಗಳು ಮತ್ತು ವೃದ್ಧರಿಗೆ ನೀಡಲಾಗುತ್ತದೆ ಎಂದು ಶ್ವೇತಭವನ ತಿಳಿಸಿದೆ.

## ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ '13' ವರ್ಷ ಪೂರೈಸಿದ ವಿರಾಟ್ ಕೊಹ್ಲಿ



* ಭಾರತದ ಕ್ರಿಕೆಟ್ ತಂಡದ ನಾಯಕ ವಿರಾಟ್ ಕೊಹ್ಲಿ ಅವರು ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ '13' ವರ್ಷಗಳನ್ನೂ ಪೂರೈಸಿದ್ದಾರೆ, ಈ ಮೊದಲು ನಾಯಕ ವಿರಾಟ್ ಕೊಹ್ಲಿ ಅವರು 19 ನೇ ವರ್ಷ ವಯಸ್ಸಿನಲ್ಲಿ ಅಂದರೆ 2008 ರ ಆಗಸ್ಟ್. 18 ರಂದು ಶ್ರೀಲಂಕಾ ವಿರುದ್ಧ ಡಂಬುಲಾದಲ್ಲಿ ಏಕದಿನ ಪಂದ್ಯ ಆಡುವ ಮೂಲಕ ಭಾರತ ತಂಡದಕ್ಕೆ ಪದಾರ್ಪಣೆ ಮಾಡಿದ್ದರು.

* ಪ್ರಸ್ತುತ ನಾಯಕ ವಿರಾಟ್ ಕೊಹ್ಲಿ ಅವರು ಇದೀಗ ವಿಶ್ವದ ಸ್ಟಾರ್ ಬ್ಯಾಟ್ಸ್‌ಮನ್ ಆಗಿದ್ದಾರೆ, '13' ವರ್ಷಗಳಲ್ಲಿ 438 ಅಂತಾರಾಷ್ಟ್ರೀಯ ಪಂದ್ಯಗಳಲ್ಲಿ ಆಟವಾಡಿ 22,937 ರನ್ ಕಲೆಹಾಕಿದ್ದಾರೆ, ಈ ಸಾಧನೆಗೆ BCCI ಟ್ವಿಟರ್ ಮೂಲಕ ಅಭಿನಂದನೆಯನ್ನು ತಿಳಿಸಿದೆ.

* ನಾಯಕ ವಿರಾಟ್ ಕೊಹ್ಲಿ ಅವರು 2008 ರ ಅಂಡರ್ 19 ತಂಡದ ನಾಯಕರಾಗಿ ಭಾರತಕ್ಕೆ ವಿಶ್ವಕಪ್ ಗೆದ್ದುಕೊಟ್ಟಿದ್ದರು, ಮತ್ತೇ 2011 ರ ಏಕದಿನ ವಿಶ್ವಕಪ್ ವಿಜೇತ ತಂಡದ ಆಟಗಾರರಾಗಿದ್ದರು.

* ವಿರಾಟ್ ಕೊಹ್ಲಿ ಸತತ 7 ವರ್ಷಗಳಿಂದ ಭಾರತ ತಂಡದ ನಾಯಕರಾಗಿದ್ದಾರೆ.

* ನಾಯಕ ವಿರಾಟ್ ಕೊಹ್ಲಿ ಅವರು ಇಲ್ಲಿಯವರೆಗೆ ಒಟ್ಟಾರೆ 94 ಟೆಸ್ಟ್, 254 ಏಕದಿನ ಹಾಗೂ 90 ಟಿ20 ಪಂದ್ಯಗಳನ್ನು ಆಡಿದ ಹಿರಿಮೇ ಇವರಿಗಿದೆ.

## ವಿಶ್ವ ಅಥ್ಲೆಟಿಕ್ಸ್ ಅಂಡರ್ 20 ಚಾಂಪಿಯನ್‌ಶಿಪ್ ಭಾರತಕ್ಕೆ ಕಂಚು




* ಪ್ರಸ್ತುತ ನೈರೋಬಿಯಲ್ಲಿ ನಡೆದ ವಿಶ್ವ ಅಥ್ಲೆಟಿಕ್ಸ್ ಅಂಡರ್ 20 ಚಾಂಪಿಯನ್ ಶಿಪ್ ನಲ್ಲಿ ಭಾರತದ 4x400 ಮೀ. ಮಿಶ್ರ ರಿಲೇ ತಂಡವು ಕಂಚಿನ ಪದಕವನ್ನು ಜಯಿಸಿದೆ.

* m ಪ್ರಸ್ತುತ ಭಾರತವು ವಿಶ್ವ ಅಂಡರ್ 20 ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನ ಇತಿಹಾಸದಲ್ಲಿ 5 ನೇ ಪದಕವನ್ನು ಜಯಿಸಿದಂತಾಗಿದೆ.

* ನೈಜೀರಿಯಾ ತಂಡವು ಚಿನ್ನದ ಪದಕವನ್ನು ಜಯಿಸಿದೆ.

* ಪೋಲ್ಯಾಂಡ್ ತಂಡವು ಬೆಳ್ಳಿ ಪದಕವನ್ನು ಜಯಿಸಿದೆ.
* ಈ ಮೊದಲು ಭಾರತವು ವಿಶ್ವ ಅಂಡರ್ 20 ಕ್ರೀಡಾಕೂಟದಲ್ಲಿ ಸೀಮಾ ಆಂಟಿಲ್ ಡಿಸ್ಕಸ್ ಥ್ರೋ,2002 ರಲ್ಲಿ ಕಂಚು, ನವಜೀತ್ ಕೌರ್ ಧಿಲ್ಲೋನ್ 2014 ರಲ್ಲಿ ಡಿಸ್ಕಸ್ ಥ್ರೋನಲ್ಲಿ ಕಂಚು, ಒಲಿಂಪಿಕ್ಸ್ ಚಾಂಪಿಯನ್ ನೀರಜ್ ಚೋಪ್ರಾ 2016'ರ ಜಾವೆಲಿನ್ ಥ್ರೋನಲ್ಲಿ ಚಿನ್ನ, ಹಾಗೂ ಹಿಮಾ ದಾಸ್ 2018 ರಲ್ಲಿ 400 ಮೀ, ಓಟದಲ್ಲಿ ಚಿನ್ನದ ಪದಕಗಳನ್ನು ಗೆದ್ದುಕೊಂಡಿದ್ದಾರೆ.

## ರಾಜ್ಯ ಸರ್ಕಾರವು ಅಫ್ಘಾನಿಸ್ತಾನದಲ್ಲಿ ಸಿಲುಕಿರುವ ಕನ್ನಡಿಗರನ್ನು ಕರೆತರಲು ನೋಡೆಲ್ ಅಧಿಕಾರಿ ನೇಮಕ ಮಾಡಿದೆ



* ಇದೀಗ ಅಫ್ಘಾನಿಸ್ತಾನ ರಾಷ್ಟ್ರವು ತಾಲಿಬಾನ್ ಉಗ್ರರ ವಶದಲ್ಲಿದೆ, ಇದೀಗ ಅಲ್ಲಿನ ಕರ್ನಾಟಕ ರಾಜ್ಯದ ಪ್ರಜೆಗಳು ಸಂಕಷ್ಟಕ್ಕೆ ಸಿಲುಕಿದ್ದಾರೆ ಅವರನ್ನು ರಾಜ್ಯಕ್ಕೆ ಮರಳಿ ಕರೆತರಲು ಕರ್ನಾಟಕ ರಾಜ್ಯ ಸರ್ಕಾರ ವಿಶೇಷ ನೋಡಲ್ ಅಧಿಕಾರಿಯನ್ನು ನೇಮಕ ಮಾಡಿದೆ.
* ಪ್ರಸ್ತುತ ಕೇಂದ್ರ ಸರ್ಕಾರ ಆಫ್ಘಾನಿಸ್ತಾನದಲ್ಲಿರುವ ಭಾರತೀಯರನ್ನು ಮರಳಿ ಕರೆತರಲು ವಿದೇಶಾಂಗ ಸಚಿವಾಲಯದಿಂದ ಸಹಾಯವಾಣಿ ಮತ್ತು ಇ ಮೇಲ್ ಸೇವೆಯನ್ನು ಪ್ರಾರಂಭಿಸಿದೆ, ಇದೀಗ ಕರ್ನಾಟಕ ರಾಜ್ಯ ಸರ್ಕಾರವು ರಾಜ್ಯದ ಪ್ರಜೆಗಳನ್ನು ಕರೆತರಲು ಕೇಂದ್ರ ಸರ್ಕಾರದ ಜೊತೆ ಸಮನ್ವಯತೆಗಾಗಿ IPS ಅಧಿಕಾರಿ ಉಮೇಶ್ ಕುಮಾರ್ ಅವರನ್ನು ನೋಡೆಲ್ ಅಧಿಕಾರಿಯನ್ನಾಗಿ ನೇಮಕ ಮಾಡಲಾಗಿದೆ.

## ಭಾರತದ ಫುಟ್ಬಾಲ್ ಆಟಗಾರ ಸಂದೇಶ್ ಜಿಂಗಾನ್ ಕ್ರೊಯೇಶಿಯದ ಪ್ರಮುಖ ಫುಟ್ಬಾಲ್ ಕ್ಲಬ್ ಗೆ ಸೇರ್ಪಡೆ



* ಭಾರತದ ಫುಟ್ಬಾಲ್ ಆಟಗಾರ ಸಂದೇಶ್ ಜಿಂಗಾನ್ ಅವರು ಎಟಿಕೆ ಮೋಹನ್ ಬಗಾನ್ ಎಫ್ ಸಿ ತೊರೆದು ಕ್ರೊಯೇಶಿಯದ ಫುಟ್ಬಾಲ್ ಕ್ಲಬ್ ಎಚ್ ಎನ್ ಕೆ ಸಿಬೆನಿಕ್'ಗೆ ಸೇರ್ಪಡೆಯಾಗಲಿದ್ದಾರೆ, ಇದಲ್ಲದೇ ಭಾರತದ ಮೊದಲ ಅಂತರ್ ರಾಷ್ಟ್ರೀಯ ಫುಟ್ಬಾಲ್ ಆಟಗಾರನೆಂಬ ಕೀರ್ತಿಗೆ ಇವರು ಪಾತ್ರರಾಗಿದ್ದಾರೆ.
* ಭಾರತದ ಫುಟ್ಬಾಲ್ ಆಟಗಾರ ಸಂದೇಶ್ ಜಿಂಗಾನ್ ಅವರು ತಮ್ಮ 21 ನೇ ವಯಸ್ಸಿನಲ್ಲಿ ಮೊದಲ ಆವೃತ್ತಿಯ ಇಂಡಿಯನ್ ಸೂಪರ್ ಲೀಗ್ ನಲ್ಲಿ ಉತ್ತಮ ಪ್ರದರ್ಶನ ನೀಡಿ ಎಲ್ಲರ ಗಮನವನ್ನು ಸೆಳೆದಿದ್ದರು, ಹಾಗೂ 2014 ರಲ್ಲಿ ಇಂಡಿಯನ್ ಸೂಪರ್ ಲೀಗ್ ನ ಉದಯೋನ್ಮುಖ ಆಟಗಾರ ಪ್ರಶಸ್ತಿಗೆ ಭಾಜನರಾಗಿದ್ದರು.

## NDA ಪರೀಕ್ಷೆಗೆ ಮಹಿಳಾ ಅಭ್ಯರ್ಥಿಗಳಿಗೆ ಅವಕಾಶ ನೀಡಿದ ಸುಪ್ರೀಂ ಕೋರ್ಟ್



* ಪ್ರಸ್ತುತ ಸೆಪ್ಟೆಂಬರ್ 5 ರಂದು ನಡೆಯಲಿರುವ ನ್ಯಾಷನಲ್ ಡಿಫೆನ್ಸ್ ಅಕಾಡೆಮಿ (NDA) ಪರೀಕ್ಷೆ ಬರೆಯಲು ಮಹಿಳಾ ಅಭ್ಯರ್ಥಿಗಳಿಗೆ ಅವಕಾಶ ನೀಡಬೇಕೆಂದು ಸುಪ್ರೀಂ ಕೋರ್ಟ್ ಆದೇಶ ಹೊರಡಿಸಿದೆ.
* ನ್ಯಾಷನಲ್ ಡಿಫೆನ್ಸ್ ಅಕಾಡೆಮಿ (NDA) ಸೇರಲು ಇಲ್ಲಿಯವರೆಗೆ ಕೇವಲ ಪುರುಷರಿಗೆ ಮಾತ್ರ ಅವಕಾಶವಿತ್ತು, ಆದರೆ ಇದೀಗ ಸುಪ್ರೀಂ ಕೋರ್ಟ್ ಅರ್ಹ ಮಹಿಳಾ ಅಭ್ಯರ್ಥಿಗಳಿಗೆ NDA ಸೇರಲು ಅವಕಾಶ ನೀಡಬೇಕೆಂದು ಆದೇಶಿಸಿದೆ.
* ಸುಪ್ರೀಂ ಕೋರ್ಟ್ ಈ ವಿಷಯದ ಬಗ್ಗೆ ವಿಚಾರಣೆ ನಡೆಸಿ ಪುರುಷರಿಗೆ ಮಾತ್ರ ಅವಕಾಶ ನೀಡುತ್ತಿರುವ ಈ ನಿಯಮ ಬದಲಾಗಬೇಕಿದೆ ಎಂದು ಆದೇಶ ಹೊರಡಿಸಿ, ಮುಂದಿನ ಸೆಪ್ಟೆಂಬರ್ 5'ಕ್ಕೆ ನಡೆಯಲಿರುವ NDA ಪರೀಕ್ಷೆಗೆ ಮಹಿಳಾ ಅಭ್ಯರ್ಥಿಗಳಿಗೆ ಅವಕಾಶ ನೀಡಬೇಕೆಂದು ಭಾರತೀಯ ಸೇನೆಗೆ ಸುಪ್ರೀಂ ಕೋರ್ಟ್ ಸೂಚಿಸಿದೆ.

## 13 ಲಕ್ಷ ಕೋಟಿ ರೂ. ಮಾರುಕಟ್ಟೆ ಮೌಲ್ಯ ದಾಟಿದ ಭಾರತೀಯ 2 ನೇ ಕಂಪನಿ TCS




* 2021 ರ ಆಗಸ್ಟ್. 17 ರಂದು 13 ಲಕ್ಷ ಕೋಟಿ ರೂ. ಮಾರುಕಟ್ಟೆ ಮೌಲ್ಯವನ್ನು ದಾಟಿದ ಭಾರತೀಯ 2 ನೇ ಕಂಪನಿ TCS.
* TCS ಕಂಪನಿಯು ಈ ಮಾರುಕಟ್ಟೆ ಮೌಲ್ಯವನ್ನು 17 ವರ್ಷಗಳ ನಂತರ ಸಾಧಿಸಿದೆ, TCS ಭಾರತದಲ್ಲಿ ರಿಲಯನ್ಸ್ ನಂತರ 2 ನೇ ಕಂಪನಿಯಾಗಿದೆ.
* ಪ್ರಸ್ತುತ TCS ಕಂಪನಿ ವಹಿವಾಟಿನ ಅಂತ್ಯದ ವೇಳೆಗೆ ಮಾರುಕಟ್ಟೆ ಬಂಡವಾಳೀಕರಣ (ಎಂ ಕ್ಯಾಪ್) ರೂ 13.14 ಲಕ್ಷ ಕೋಟಿಯಾಗಿತ್ತು.
* ರಿಲಯನ್ಸ್ ಇಂಡಸ್ಟ್ರೀಸ್ ಪ್ರಸ್ತುತ 13.7 ಲಕ್ಷ ಕೋಟಿ ರೂ. ಆಗಿದೆ.
* ಟಾಟಾ ಕನ್ಸಲ್ಟೆನ್ಸಿ ಸೇವೆಗಳ (TCS): ಇದು ಭಾರತದ ಬಹುರಾಷ್ಟ್ರೀಯ ಮಾಹಿತಿ ತಂತ್ರಜ್ಞಾನ (IT) ಸೇವೆಗಳು ಮತ್ತು ಸಲಹಾ ಕಂಪನಿಯಾಗಿದೆ, ಹಾಗೂ ಇದು ತನ್ನ ಪ್ರಧಾನ ಕಛೇರಿ ಮುಂಬೈನಲ್ಲಿ ಹೊಂದಿದೆ.
* ಈ TCS ಕಂಪನಿಯು 46 ದೇಶಗಳ 149 ಸ್ಥಳಗಳಲ್ಲಿ ಕಾರ್ಯನಿರ್ವಹಿಸುತ್ತಿದೆ.

## 2021 ರ ಅಂತ್ಯದೊಳಗೆ ಯುಕೆ ಭಾರತದೊಂದಿಗೆ ವ್ಯಾಪಾರ ಒಪ್ಪಂದಕ್ಕಾಗಿ ಮಾತುಕತೆ ಆರಂಭಿಸಲಿದೆ



* ಪ್ರಸ್ತುತ 2021 ರ ಅಂತ್ಯದ ವೇಳೆಗೆ ಯುನೈಟೆಡ್ ಕಿಂಗ್‌ಡಮ್ (UK) ಭಾರತದೊಂದಿಗೆ ವ್ಯಾಪಾರ ಒಪ್ಪಂದಕ್ಕೆ ಮಾತುಕತೆಯನ್ನು ಪ್ರಾರಂಭಿಸಲಿದೆ.
* ಭಾರತ ಮತ್ತು ಯುಕೆ ಮುಕ್ತ ವ್ಯಾಪಾರ ಒಪ್ಪಂದದ ಸಂಧಾನ ಪೂರ್ವ ಸ್ಕೋಪಿಂಗ್ ಹಂತದಲ್ಲಿದೆ, ಹಾಗೂ 2021 ರ ಅಂತ್ಯದ ವೇಳೆಗೆ ಮಾತುಕತೆಗಳು ಆರಂಭವಾಗುತ್ತವೆ.
* ಭಾರತ ಮತ್ತು ಯುಕೆ 2019 ರ ವೇಳೆಗೆ ದ್ವಿಪಕ್ಷೀಯ ವ್ಯಾಪಾರವು 23 ಬಿಲಿಯನ್ ಪೌಂಡ್‌ಗಳ ಮೌಲ್ಯವನ್ನು ಹೊಂದಿತ್ತು.
* ಬ್ರಿಟನ್ ರಾಷ್ಟ್ರವು 2020 ರಲ್ಲಿ ಯುರೋಪಿಯನ್ ಒಕ್ಕೂಟದಿಂದ ನಿರ್ಗಮಿಸಿದೆ, ಇದೀಗ ರಾಷ್ಟ್ರವು ವ್ಯಾಪಾರ ಒಪ್ಪಂದಗಳನ್ನು ಭದ್ರಪಡಿಸಿಕೊಳ್ಳಲು ಹಾಗೂ ಇಂಡೋ ಪೆಸಿಫಿಕ್ ಪ್ರದೇಶದಲ್ಲಿ ರಾಷ್ಟ್ರಗಳೊಂದಿಗಿನ ತನ್ನ ಸಂಬಂಧವನ್ನು ಉತ್ತಮಗೊಳಿಸುವ ಗುರಿಯನ್ನು ಹೊಂದಿದೆ.
* ಭಾರತ ಯುಕೆ ಮಧ್ಯಂತರ ವ್ಯಾಪಾರ ಒಪ್ಪಂದದಿಂದ ಸ್ಕಾಚ್ ಹಾಗೂ ವಿಸ್ಕಿಯಂತಹ ಉತ್ಪನ್ನಗಳ ಮೇಲಿನ ಸುಂಕವನ್ನು ಕಡಿತಗೊಳಿಸುತ್ತದೆ, ಹಾಗೂ ಭಾರತೀಯ ಉತ್ಪಾದಕರು ಅಕ್ಕಿಯಂತೆ ಯುಕೆ ಮಾರುಕಟ್ಟೆಗೆ ಹೆಚ್ಚಿನ ಪ್ರವೇಶವನ್ನು ಪಡೆಯಲಿದ್ದಾರೆ ಎಂದು ತಿಳಿಸಿದ್ದಾರೆ.
* 2020 ರಲ್ಲಿ ಭಾರತ ಯುಕೆ ದ್ವಿಪಕ್ಷೀಯ ವ್ಯಾಪಾರವು 18.3 ಬಿಲಿಯನ್ ಆಗಿತ್ತು, ಪ್ರಸ್ತುತ ಯುಕೆಯಲ್ಲಿ ಸುಮಾರು 842 ಭಾರತೀಯ ಕಂಪನಿಗಳಿವೆ 110,000 ಕ್ಕಿಂತ ಹೆಚ್ಚು ಜನರಿಗೆ ಉದ್ಯೋಗ ನೀಡುತ್ತಿದೆ.

## ಚೀನಾ ಅಂತರ್ಜಾಲ ಕಂಪನಿಗಳಿಂದ ಸ್ಪರ್ಧಾತ್ಮಕ ಅಭ್ಯಾಸಗಳ ಕುರಿತು ಹೊಸ ನಿಯಮ ಹೊರಡಿಸಿದೆ



* ಪ್ರಸ್ತುತ ಚೀನಾ ದೇಶವು ಅಂತರ್ಜಾಲ ಕಂಪನಿಗಳ ಸ್ಪರ್ಧಾತ್ಮಕ ಅಭ್ಯಾಸಗಳ ಬಗೆಗಿನ ಹೊಸ ಕರಡು ನಿಯಮಗಳನ್ನು ಹೊರಡಿಸಿದೆ.
* ಚೀನಾ ದೇಶದ ಈ ಹೊಸ ಮಾರ್ಗಸೂಚಿ ಅಂತರ್ಜಾಲ ಕಂಪನಿಗಳು ಪ್ರತಿಸ್ಪರ್ಧಿ ಪ್ಲಾಟ್‌ಫಾರ್ಮ್‌ಗಳನ್ನು ಅನ್ಯಾಯದ ಅಭ್ಯಾಸದಲ್ಲಿ ಸೇರದಂತೆ ತಡೆಯಲು ಪ್ರಯತ್ನಿಸುತ್ತದೆ, ಹಾಗೂ ತಂತ್ರಜ್ಞಾನ ಕ್ಷೇತ್ರದಲ್ಲಿ ಹಿಡಿತ ಸಾಧಿಸಲು ಚೀನಾ ಪ್ರಯತ್ನಿಸುತ್ತಿದೆ.
* ಚೀನಾ ದೇಶದ ಈ ಹೊಸ ಮಾರ್ಗಸೂಚಿಗಳು: ಈ ಹಿಂದೆ 2021 ರ ಆಗಸ್ಟ್. 17 ರಂದು ಟೆಕ್ ಕಂಪನಿಗಳ ಷೇರುಗಳು ಕುಸಿತ ಕಂಡವು ಅಲ್ಲದೇ ಒಂದು ತಿಂಗಳ ಅವಧಿಯ ಕುಸಿತವನ್ನು ವಿಸ್ತರಿಸಿದವು, ಪ್ರಸ್ತುತ ಅಲಿಬಾಬಾ ಗ್ರೂಪ್ ಹೋಲ್ಡಿಂಗ್ ಲಿಮಿಟೆಡ್ ನ ಪಾಲು 4.8% ರಷ್ಟು ಕುಸಿತವನ್ನು ಕಂಡಿದೆ, ಹಾಗೂ ಟೆನ್ಸೆಂಟ್ ಹೋಲ್ಡಿಂಗ್ಸ್ ಲಿಮಿಟೆಡ್ ನ ಪಾಲು 4% ರಷ್ಟು ಕುಸಿತವನ್ನು ಕಂಡಿದೆ.
* ಪ್ರಸ್ತುತ ಮಾರುಕಟ್ಟೆ ನಿಯಂತ್ರಕದ ಪ್ರಕಾರ, ಅಂತರ್ಜಾಲ ಕಂಪನಿಗಳನ್ನು ಗುರಿಯಾಗಿಸಿಕೊಂಡು ಅನ್ಯಾದ ವಿರುದ್ಧ ಹೋರಾಡಲು ಈ ಹೊಸ ನಿಯಮಗಳು ಕಾನೂನನ್ನು ತರಲು ಚೀನಾ ಪ್ರಯತ್ನಪಡುತ್ತಿದೆ.

## ದಕ್ಷಿಣ ಚೀನಾ ಸಮುದ್ರದಲ್ಲಿ ದ್ವಿಪಕ್ಷೀಯ ಕಡಲ ಜಂಟಿ ಸಮರಾಭ್ಯಾಸ ನಡೆಸಿದ ಭಾರತ ವಿಯೆಟ್ನಾಂ



* ಭಾರತೀಯ ನೌಕಾಪಡೆ ಮತ್ತು ವಿಯೆಟ್ನಾಂ ಪೀಪಲ್ಸ್ ನೌಕಾಪಡೆಯ ಈ ಎರಡು ಉಭಯ ದೇಶಗಳು ದಕ್ಷಿಣ ಚೀನಾ ಸಮುದ್ರದಲ್ಲಿ ಜಂಟಿ ಸಮರಾಭ್ಯಾಸವನ್ನು ನಡೆಸಿವೆ.
* ಭಾರತೀಯ ನೌಕಾಪಡೆಯ INS ರಣವಿಜಯ್ ಮತ್ತು INS ಕೋರಾ ದ್ವಿಪಕ್ಷೀಯ ಕಡಲ ಜಂಟಿ ಸಮರಾಭ್ಯಾಸವನ್ನು ನಡೆಸಿವೆ.
* ವಿಯೆಟ್ನಾಂ ದೇಶದ ಫ್ರಿಗೇಟ್ VPNS ಲೈ ಥಾಯ್ ಟು (HQ 012) ಈ ಸಮರಾಭ್ಯಾಸದಲ್ಲಿ ಭಾಗಿಯಾಗಿತ್ತು.
* ಈ ದ್ವಿಪಕ್ಷೀಯ ಮಿಲಿಟರಿ ವ್ಯಾಯಾಮವು ಎರಡು ದೇಶಗಳ ನೌಕಾಪಡೆಗಳ ರಕ್ಷಣಾ ಸಂಬಂಧಗಳನ್ನು ಬಲಪಡಿಸುವ ಮಹತ್ವದ ಹೆಜ್ಜೆಯಾಗಿದೆ.
* ಭಾರತ ಮತ್ತು ವಿಯೆಟ್ನಾಂ ದೇಶಗಳು ಜಂಟಿ ಸಮರಾಭ್ಯಾಸದಲ್ಲಿ ಹೆಲಿಕಾಪ್ಟರ್ ಕಾರ್ಯಾಚರಣೆಗಳು ಮತ್ತು ಶಸ್ತ್ರಾಸ್ತ್ರಗಳ ಫೈರಿಂಗ್ ಡ್ರಿಲ್‌ಗಳನ್ನು ಬಳಸಿಕೊಂಡು ವ್ಯಾಯಾಮ ನಡೆಸಿದ್ದವು.
* INS ರಣವಿಜಯ್ ಇದು ಮಾರ್ಗದರ್ಶಿ ಕ್ಷಿಪಣಿ ವಿಧ್ವಂಸಕವಾಗಿದೆ, ಇದನ್ನು 1987 ರ ಡಿಸೆಂಬರ್. 21 ರಂದು ಭಾರತೀಯ ನೌಕಾಪಡೆಗೆ ನಿಯೋಜನೇ ಮಾಡಲಾಗಿದೆ.
* INS ಕೋರಾ: ಕೋರಾ ವರ್ಗದ ಕ್ಷಿಪಣಿ ಕಾರ್ವೆಟ್'ನ ಮುಖ್ಯವಾದ ಹಡಗಾಗಿದೆ, ಹಾಗೂ ಇದು ಮೇಲ್ಮೈಯಿಂದ ಮೇಲ್ಮೈಗೆ ಕ್ಷಿಪಣಿಗಳು ಮತ್ತು ವಾಯು ವಿರೋಧಿ ಬಂದೂಕುಗಳನ್ನು ಒಳಗೊಂಡಿರುತ್ತದೆ.

## 20-08-2021

### ಒಲಿಂಪಿಕ್ ಪದಕ ಹರಾಜಿಗಿಟ್ಟ ಪೋಲೆಂಡ್ ಅಥ್ಲೀಟ್



* ಪೋಲೆಂಡ್ ದೇಶದ ಮಾರಿಯಾ ಆಯಂಡ್ರೆಜೆಕ್ ಅವರು ಟೋಕಿಯೊ ಒಲಿಂಪಿಕ್ಸ್‌ನ ಅಥ್ಲೆಟಿಕ್ಸ್ ವಿಭಾಗದಲ್ಲಿ ಬೆಳ್ಳಿ ಪದಕ ಜಯಿಸಿದ್ದಾರೆ.
* ಆದರೆ ಇದೀಗ ಅವರು ಆ ಪದಕವನ್ನು ತಮ್ಮ ದೇಶದ 8 ತಿಂಗಳ ಮಗುವಿನ ಹೃದಯದ ಶಸ್ತ್ರಚಿಕಿತ್ಸೆಯ ವೆಚ್ಚ ಭರಿಸುವ ಸಲುವಾಗಿ ಒಲಿಂಪಿಕ್ಸ್ ನಲ್ಲಿ ಗೆದ್ದಿರುವ ಪದಕವನ್ನು ಹರಾಜಿಗೆ ಇಟ್ಟಿದ್ದಾರೆ.
* ಟೋಕಿಯೋ ಒಲಿಂಪಿಕ್ಸ್ ನ ಜಾವೆಲಿನ್ ಥ್ರೋ ವಿಭಾಗದಲ್ಲಿ ಮಾರಿಯಾ ಆಯಂಡ್ರೆಜೆಕ್ ಅವರು ಬೆಳ್ಳಿ ಪದಕವನ್ನು ಜಯಿಸಿದ್ದರು.
* ಮಾರಿಯಾ ಆಯಂಡ್ರೆಜೆಕ್ ಅವರು ಮಗುವಿನ ಶಸ್ತ್ರಚಿಕಿತ್ಸೆಗಾಗಿ ಪದಕವನ್ನು ಹರಾಜಿಗೆ ಇಡಲಾಗಿದೆ ಎಂದು ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಪೋಸ್ಟ್ ಹಾಕಿ ಕೊಂಡಿದ್ದಾರೆ.

### ಬುರ್ಕಿನ ಫಾಸೊ ರಾಷ್ಟ್ರದಲ್ಲಿ ಜಿಹಾದಿಗಳ ದಾಳಿ



* ಪ್ರಸ್ತುತ ಪಶ್ಚಿಮ ಆಫ್ರಿಕಾದ ರಾಷ್ಟ್ರವಾದ ಬುರ್ಕಿನೊ ಫಾಸೊದಲ್ಲಿ ಶಂಕಿತ ಜಿಹಾದಿಗಳ ಗುಂಪೊಂದು ಗುಂಡಿನ ದಾಳಿಯನ್ನು ನಡೆಸಿದೆ, ಈ ದಾಳಿಯಲ್ಲಿ 30 ನಾಗರಿಕರೂ ಸೇರಿದಂತೆ ಒಟ್ಟಾರೆ 47 ಜನರು ಸಾವನ್ನಪಿದ್ದಾರೆ, ಈ ಕಾರಣದಿಂದಾಗಿ ಅಲ್ಲಿನ ಅಧ್ಯಕ್ಷರು ಮೂರು ದಿನಗಳ ಕಾಲ ರಾಷ್ಟ್ರೀಯ ಶೋಕವನ್ನು ಘೋಷಣೆ ಮಾಡಿದ್ದಾರೆ.
* ಶಂಕಿತ ಜಿಹಾದಿಗಳು ನಡೆಸಿರುವ ದಾಳಿಯಲ್ಲಿ 14 ಜನ ಸೈನಿಕರಿದ್ದಾರೆ ಎಂದು ಸರ್ಕಾರ ಹೇಳಿದೆ, ಅಲ್ಲದೆ ಅವರ ವಿರುದ್ಧ ಭದ್ರತಾ ಸೇನಾ ಪಡೆಗಳು ನಡೆಸಿರುವ ಗುಂಡಿನ ಚಕಮಕಿಯಲ್ಲಿ 58 ಉಗ್ರರು ಹತರಾಗಿದ್ದಾರೆ, ಇನ್ನು ರಕ್ಷಣಾ ಚಟುವಟಿಕೆಗಳು ನಡೆದಿವೆ ಎಂದು ಸರ್ಕಾರ ಮಾಹಿತಿ ನೀಡಿದೆ.
* ಈ ರಾಷ್ಟ್ರದಲ್ಲಿ ಇದು 3 ನೇ ದಾಳಿ ಪ್ರಕರಣವಾಗಿದೆ, ಈ ಮೊದಲು ಆಗಸ್ಟ್ 4 ರಂದು ನದೆಡೆದಿತ್ತು, ಅದಕ್ಕೂ ಮುಂಚಿತವಾಗಿ ಅಂದರೆ ಜೂನ್ 4 5 ರಂದು ಸೊಲ್ಹಾನ್ ಗ್ರಾಮದಲ್ಲಿ ಗುಂಡಿನ ದಾಳಿ ನಡೆದಿತ್ತು ಎಂದು ಮಾಹಿತಿ ತಿಳಿದು ಬಂದಿದೆ.

### ಯುಪಿ ಕೋರ್ಟ್ ನಿಂದ ವಯಸ್ಕ ಯುವತಿಯರ 'ಲಿವ್ ಇನ್ ರಿಲೇಶನ್‌ಶಿಪ್' ಗೆ ಅವಕಾಶ



* ಪ್ರಸ್ತುತ 'ಲಿವ್ ಇನ್' ರಿಲೇಶನ್‌ಶಿಪ್‌ನಲ್ಲಿದ್ದ ಇಬ್ಬರು ಯುವತಿಯರು ಒಟ್ಟಿಗೆ ವಾಸಿಸಲು ಉತ್ತರ ಪ್ರದೇಶದ ರಾಂಪುರದ ನ್ಯಾಯಾಲಯವು ಅನುಮತಿ ನೀಡಿದೆ.
* ಶಹಬಾದ್ ಪೊಲೀಸರು ಮಾಹಿತಿ ನೀಡಿರುವ ಪ್ರಕಾರ, ಒಂದು ತಿಂಗಳ ಹಿಂದೆ ಕಾಣೆಯಾಗಿದ್ದ ಅಂದಾಜು 20 ವರ್ಷ ವಯಸ್ಸಿನ ಯುವತಿಯು ರಾಂಪುರದ ಶಹಬಾದ್ ಪ್ರದೇಶದಲ್ಲಿ ತನ್ನ 'ಗೆಳತಿ' ಮನೆಯಲ್ಲಿ ವಾಸವಾಗಿದ್ದಳು, ಆದರೆ ಆ ಯುವತಿಯ ಕುಟುಂಬವು ಜುಲೈ ತಿಂಗಳಿನಲ್ಲಿ ಮಗಳು ಕಾಣೆಯಾಗಿದ್ದಾಳೆ ಎಂದು ದೂರು ದಾಖಲಿಸಿದ್ದರು ಎಂದು ತಿಳಿಸಿದ್ದಾರೆ.
* ಶಹಬಾದ್‌ನ ತನ್ನ ಗೆಳತಿಯ ಮನೆಯಲ್ಲಿ ಪತ್ತೆಯಾಗಿರುವ ಯುವತಿಯು ತನ್ನ ಸ್ವಇಚ್ಛೆಯಿಂದ ಸ್ನೇಹಿತೆಯೊಂದಿಗೆ ಸಂಬಂಧ ಹೊಂದಿದ್ದಾನೆ, ಹಾಗೂ ಈ ಕಾರಣಕ್ಕಾಗಿ ಮನೆ ತೊರೆದಿದ್ದೇನೆ ಎಂದು ತಿಳಿಸಿದ್ದಾಳೆ.
* ಇವರಿಬ್ಬರನ್ನು ರಾಂಪುರದ ನ್ಯಾಯಾಲಯದ ಬಳಿಕ ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸಲಾಗಿತ್ತು, ಇವರಿಬ್ಬರು 18 ವರ್ಷಕ್ಕಿಂತ ಮೇಲ್ಪಟ್ಟಿದ್ದಾರೆ, ಹಾಗೂ ಸ್ವಇಚ್ಛೆಯಿಂದ ಜೊತೆಗಿರಲು ನಿರ್ಧರಿಸಿದ್ದಾರೆ ಈ ಕಾರಣದಿಂದ ನ್ಯಾಯಾಲಯವು ಇವರಿಬ್ಬರು ಒಟ್ಟಿಗೆ ಇರಲು ಅನುಮತಿ ನೀಡಲಾಗುತ್ತಿದೆ ಎಂದು ನ್ಯಾಯಾಧೀಶರು ತೀರ್ಪು ನೀಡಿದ್ದಾರೆ ಎಂದು ತಿಳಿದು ಬಂದಿದೆ.

### ಎನ್.ಕೆ. ಸಿಂಗ್ ಆರ್ಥಿಕ ಬೆಳವಣಿಗೆ ಸಂಸ್ಥೆಯ ಅಧ್ಯಕ್ಷರಾಗಿ ಆಯ್ಕೆ



* 15 ನೇ ಹಣಕಾಸು ಆಯೋಗದ ಮುಖ್ಯಸ್ಥರಾಗಿರುವ ಎನ್.ಕೆ.ಸಿಂಗ್ ಅವರು ಆರ್ಥಿಕ ಬೆಳವಣಿಗೆ ಸಂಸ್ಥೆಯ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.
* ಪ್ರಸ್ತುತ ಎನ್.ಕೆ.ಸಿಂಗ್ ಅವರ ಹೆಸರನ್ನು ಈ ಸಂಸ್ಥೆಯ ಅಧ್ಯಕ್ಷರಾಗಿದ್ದ ಡಾ. ಮನಮೋಹನ್ ಸಿಂಗ್ ಅವರು ಸಾಮಾನ್ಯ ಮಂಡಳಿ ಸಭೆಯಲ್ಲಿ ಶಿಫಾರಸು ಮಾಡಿದ್ದಾರೆ, ಎನ್.ಕೆ.ಸಿಂಗ್ ಅವರು ದೇಶದ ಮಾಜಿ ಪ್ರಧಾನಿಯೂ ಆಗಿರುವ ಮನಮೋಹನ್ ಸಿಂಗ್ ಅವರು ಆಳ್ವಿಕೆಯಲ್ಲಿ ಅಂದರೆ 1992 ರಿಂದ ಐಇಜಿ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದಾರೆ.

# Current affairs of August 2021 from KPSC Vaani

## ಅಫ್ಘಾನಿಸ್ತಾನದಲ್ಲಿ ಸ್ವಾತಂತ್ರ್ಯ ದಿನ ಆಚರಣೆ




* ಪ್ರಸ್ತುತ ಅಫ್ಘಾನಿಸ್ತಾನಿನ ಕಾಬೂಲ್ ನಲ್ಲಿ ತಾಲಿಬಾನ್‌ಗಳು ವಿಶ್ವದ ಅಹಂಕಾರಿ ಶಕ್ತಿಯ ರಾಷ್ಟ್ರವಾದ ಅಮೇರಿಕದ ವಿರುದ್ಧ ಜಯಸಾಧಿಸಿದ್ದೇವೆ ಎಂದು ತಾವೇ ಘೋಷಣೆ ಮಾಡಿಕೊಂಡಿದ್ದಾರೆ, ಅಲ್ಲದೇ ಈ ಗೆಲುವನ್ನು ಅವರು ಅಫ್ಘಾನಿಸ್ತಾನದ ಸ್ವಾತಂತ್ರ್ಯ ದಿನವನ್ನಾಗಿ ಆಚರಣೆ ಮಾಡಿದ್ದಾರೆ.
* ಪ್ರಸ್ತುತ 1919 ರ ಆಗಸ್ಟ್. 19 ಅಫ್ಘಾನಿಸ್ತಾನ ರಾಷ್ಟ್ರವು ಸ್ವಾತಂತ್ರ್ಯ ಪಡೆದ ದಿನವಾಗಿದೆ, ಇದರಿಂದಾಗಿ ಕಾಬೂಲ್ ಮತ್ತು ವಿವಿಧ ಪ್ರದೇಶದಲ್ಲಿ ನಾಗರಿಕರು ರಾಷ್ಟ್ರಧ್ವಜ ಪ್ರದರ್ಶಿಸಿ ಸ್ವಾತಂತ್ರ್ಯೋತ್ಸವ ದಿನವನ್ನು ಆಚರಣೆ ಮಾಡಿದ್ದಾರೆ.
* ತಾಲಿಬಾನಿಗಳು ಇತ್ತೀಚಿಗೆ ಅಫ್ಘಾನಿಸ್ತಾನವನ್ನು ವಶಪಡಿಸಿಕೊಂಡ ನಂತರ 'ತಾವು ಶರಿಯತ್ ಅಥವಾ ಇಸ್ಲಾಮಿಕ್ ಕಾನೂನಿನ ಚೌಕಟ್ಟಿನಲ್ಲಿ ಸರ್ಕಾರ ನಡೆಸುತ್ತೇವೆ' ಎಂದು ತಿಳಿಸಿದ್ದಾರೆ.

## DRDO ದಿಂದ ಯುದ್ಧ ವಿಮಾನಗಳ ರಕ್ಷಣೆಗೆ ಸುಧಾರಿತ ತಂತ್ರಜ್ಞಾನ ಅಭಿವೃದ್ಧಿ




* ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (DRDO)ಯು ಭಾರತೀಯ ಯುದ್ಧ ವಿಮಾನಗಳನ್ನು ರೆಡಾರ್ ಅಪಾಯದಿಂದ ರಕ್ಷಿಸಲು ಸುಧಾರಿತ ಚಾಫ್ ಟೆಕ್ನಾಲಜಿಯನ್ನು ಅಭಿವೃದ್ಧಿಪಡಿಸಿದೆ.
* ರಾಜಸ್ಥಾನ್ ರಾಜ್ಯದ ಜೋಧ್‌ಪುರ ನಗರದ ರಕ್ಷಣಾ ಪ್ರಯೋಗಾಲಯ, DRDO ನ ಹೈ ಎನರ್ಜಿ ಮೆಟೀರಿಯಲ್ಸ್ ರಿಸರ್ಚ್ ಲ್ಯಾಬೊರೇಟರಿ ಸಹಯೋಗದಿಂದ ಸುಧಾರಿತ ಚಾಫ್ ಮೆಟೀರಿಯಲ್ ಮತ್ತು ಚಾಫ್ ಕಾರ್ಟ್ರಿಡ್ಜ್ 118/ಐ ಅಭಿವೃದ್ಧಿಪಡಿಸಿದೆ ಎಂದು ತಿಳಿದು ಬಂದಿದೆ.
* ಪ್ರಸ್ತುತ ಭಾರತೀಯ ವಾಯುಪಡೆಯು ಯಶಸ್ವಿ ಬಳಕೆಯ ಪ್ರಯೋಗಗಳನ್ನು ಪೂರ್ಣಗೊಂಡ ಬಳಿಕ ಈ ತಂತ್ರಜ್ಞಾನವನ್ನು ಪರಿಚಯಿಸುವದಾಗಿ ಅಧಿಕೃತ ಪತ್ರಿಕಾ ಪ್ರಕಟಣೆಯಲ್ಲಿ DRDO ತಿಳಿಸಿದೆ.
* ಈ ಸುಧಾರಿತ ತಂತ್ರಜ್ಞಾನವು ರೆಡಾರ್ ಬೆದರಿಕೆಯಿಂದ ವಿಮಾನಗಳನ್ನು ರಕ್ಷಣೆ ಮಾಡುತ್ತದೆ, ಹಾಗೂ ಇನ್ಫ್ರಾ ರೆಡ್ ಮತ್ತು ರೇಡಾರ್ ಬೆದರಿಕೆಗಳ ವಿರುದ್ಧ ನಿಷ್ಕ್ರಿಯ ಜ್ಯಾಮಿಂಗ್'ನ್ನು ಒದಗಿಸಲಿದೆ, ಹಾಗೂ ಇದು ಚಾಫ್ ಯುದ್ಧ ವಿಮಾನವನ್ನು ಪ್ರತಿಕೂಲ ರೆಡಾರ್ ಬೆದರಿಕೆಗಳಿಂದ ರಕ್ಷಣೆ ಮಾಡಿಕೊಳ್ಳಲು ಬಳಸುವ ರಕ್ಷಣಾ ತಂತ್ರಜ್ಞಾನವಾಗಿದೆ ಎಂದು DRDO ಪ್ರಕಟಣೆಯಲ್ಲಿ ಮಾಹಿತಿ ನೀಡಿದೆ.

## ಬ್ರಿಕ್ಸ್ ರಾಷ್ಟ್ರಗಳು ಸಹಕಾರ ಒಪ್ಪಂದಕ್ಕೆ ಸಹಿ ಹಾಕಿವೆ



* ಪ್ರಸ್ತುತ ಬ್ರಿಕ್ಸ್ (ಬ್ರೆಜಿಲ್, ರಷ್ಯಾ, ಭಾರತ, ಚೀನಾ ಮತ್ತು ದಕ್ಷಿಣ ಆಫ್ರಿಕಾ) ರಾಷ್ಟ್ರಗಳು ದೂರ ಸಂವೇದಿ ಉಪಗ್ರಹ ಅಂಕಿಅಂಶ ಹಂಚಿಕೆಯ ಸಹಕಾರ ಒಪ್ಪಂದಕ್ಕೆ ಬ್ರಿಕ್ಸ್ ರಾಷ್ಟ್ರಗಳ ಅಧಿಕಾರಿಗಳ ಸಮ್ಮುಖದಲ್ಲಿ ಸಹಿ ಹಾಕಲಾಗಿದೆ ಎಂದು ಇಸ್ರೊ ತಿಳಿಸಿದೆ.
* ಬ್ರಿಕ್ಸ್ ಬಾಹ್ಯಾಕಾಶ ಏಜೆನ್ಸಿಗಳ ನಿರ್ದಿಷ್ಟ ದೂರದ ಸಂವೇದಕ ಉಪಗ್ರಹಗಳ ವಾಸ್ತವ ನಕ್ಷತ್ರಪುಂಜವನ್ನು ನಿರ್ಮಾಣ ಮಾಡುವದು ಹಾಗೂ ಅವುಗಳಿಗೆ ಸಂಬಂಧಪಟ್ಟ ಭೂ ಕೇಂದ್ರಗಳ ಅಂಕಿಅಂಶಗಳನ್ನು ಸಂಗ್ರಹಿಸಲು ನೆರವಾಗುತ್ತೆ ಎಂದು ಇಸ್ರೊ (ISRO) ತಿಳಿಸಿದೆ.
* ಬ್ರಿಕ್ಸ್ ಸಹಕಾರ ಒಪ್ಪಂದದ ಸಮಯದಲ್ಲಿ ಭಾರತೀಯ ಇಸ್ರೋ ಅಧ್ಯಕ್ಷ ಕೆ. ಶಿವನ್, ಚೀನಾ ರಾಷ್ಟ್ರೀಯ ಬಾಹ್ಯಾಕಾಶ ಆಡಳಿತಾಧಿಕಾರಿ, ಜಾಂಗ್ ಕೆಜಿಯಾನ್, ದಕ್ಷಿಣ ಆಫ್ರಿಕಾದ ರಾಷ್ಟ್ರೀಯ ಬಾಹ್ಯಾಕಾಶ ಏಜೆನ್ಸಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಬ್ರೆಜಿಲಿಯನ್ ಬಾಹ್ಯಾಕಾಶ ಸಂಸ್ಥೆಯ ಅಧ್ಯಕ್ಷ ವಲನಾಥನ್ ಮುನ್ಸಾಮಿ, ಕಾರ್ಲೋಸ್ ಅಗಸ್ಟೊ ಟೀಕ್ಸೀರಾ ಡಿ ಮೌರಾ ಹಾಗೂ ನಿರ್ದೇಶಕ ಜನರಲ್ ಆಫ್ ಸ್ಟೇಟ್ ಸ್ಪೇಸ್ ಕಾರ್ಪೊರೇಶನ್ ರೋಸ್ಕೋಸ್ಮೋಸ್, ಡಿಮಿಟ್ರಿ ರೋಗೋಜಿನ್ ಈ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ.

## ಜೂನಿಯರ್ ವಿಶ್ವ ಕುಸ್ತಿ ಚಾಂಪಿಯನ್ ಶಿಪ್ ನಲ್ಲಿ ಕುಸ್ತಿಪಟುಗಳಿಗೆ ಬೆಳ್ಳಿ, ಕಂಚು




* ಪ್ರಸ್ತುತ ರಷ್ಯಾದಲಿ ನಡೆದ ಜೂನಿಯರ್ ವಿಶ್ವ ಕುಸ್ತಿ ಚಾಂಪಿಯನ್ ಶಿಪ್ ನಲ್ಲಿ ರವೀಂದರ್ ಅವರು ಬೆಳ್ಳಿ ಪದಕವನ್ನು ಪಡೆದುಕೊಂಡಿದ್ದಾರೆ.
* ಇದೇ ಜೂನಿಯರ್ ವಿಶ್ವ ಕುಸ್ತಿ ಚಾಂಪಿಯನ್ ಶಿಪ್ ನಲ್ಲಿ 74 ಕೆಜಿ ವಿಭಾಗದಲ್ಲಿ ಯಶ್, 92 ಕೆಜಿ ವಿಭಾಗದಲ್ಲಿ ಪೃಥ್ವಿ ಬಬಸೆಹ್ಸ್ ಪಾಟೀಲ್, ಹಾಗೂ 125 ಕೆಜಿ ವಿಭಾಗದಲ್ಲಿ ಅನಿರುದ್ಧ್, 79 ಕೆಜಿ ವಿಯಾಗದಲ್ಲಿ ಗೌರವ್ ಬಲಿಯಾನ್ ಮತ್ತು 97 ಕೆಜಿ ವಿಭಾಗದಲ್ಲಿ ದೀಪಕ್ ಎಂಬ ಕುಸ್ತಿ ಪಟುಗಳು ಕಂಚಿನ ಪದಕಗಳನ್ನು ಪಡೆದುಕೊಂಡಿದ್ದಾರೆ.
* ಭಾರತವು ಈ ಜೂನಿಯರ್ ವಿಶ್ವ ಕುಸ್ತಿ ಚಾಂಪಿಯನ್ ಶಿಪ್ ನಲ್ಲಿ ಒಟ್ಟಾರೆ '6' ಪದಕಗಳನ್ನು ಜಯಿಸಿದೆ.

## ವಿಶ್ವ ಮಾನವೀಯ ದಿನ




* ಪ್ರತಿ ವರ್ಷವು 2021 ರ ಆಗಸ್ಟ್. 19 ರಂದು ವಿಶ್ವ ಮಾನವೀಯ ದಿನವನ್ನು ಆಚರಣೆ ಮಾಡುತ್ತಾರೆ, ಹಾಗೂ 2021 ನೇ ವರ್ಷದ ಧ್ಯೇಯವ್ಯಾಕ 'ಮಾನವ ಜನಾಂಗ'.
* ಹವಾಮಾನ ಬದಲಾವಣೆಯ ಸವಾಲುಗಳನ್ನು ಎದುರಿಸಲು ಹಾಗೂ ದುರ್ಬಲ ಜನಸಂಖ್ಯೆಗೆ ಒಗ್ಗಟ್ಟಾಗಿ ನಿಲ್ಲಲು ಈ ದಿನವು ಜಾಗೃತಿ ಮೂಡಿಸುತ್ತದೆ.
* ವಿಶ್ವ ಮಾನವೀಯ ದಿನವು ಮಾನವೀಯ ಕಾರಣಗಳಿಗಾಗಿ ಕೆಲಸ ಮಾಡುವಾಗ ಜೀವ ಕಳೆದುಕೊಂಡವರನ್ನು ಮಾನವೀಯತೆ ಹೊಂದಿರುವ ವ್ಯಕ್ತಿಗಳನ್ನು ಗುರುತಿಸಲು ಈ ಅಂತರಾಷ್ಟ್ರೀಯ ದಿನವನ್ನು ಆಚರಣೆ ಮಾಡಲಾಗುತ್ತದೆ.
* ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ಈ ದಿನವನ್ನು ಸ್ವೀಡಿಷ್ ಪ್ರಾಯೋಜಿತ GA ರೆಸಲ್ಯೂಶನ್ A/63/L.49 ನ ಭಾಗವಾಗಿ ಈ ದಿನವನ್ನು ಆಚರಿಸಲು ಗೊತ್ತುಪಡಿಸಿದೆ.
* ಈ ದಿನದಂದು ವಿಶ್ವಾದ್ಯಂತ ಕಷ್ಟದ ಸನ್ನಿವೇಶದಲ್ಲಿ ಸಿಕ್ಕಿಬಿದ್ದಿರುವ, ಇದರ ನಡುವೆ ಸೇವೆ ಮಾಡಲು ಕಷ್ಟಕರವಾದ ಜೀವನವನ್ನು ಆರಿಸಿಕೊಂಡ ಎಲ್ಲರಿಗೂ ಗೌರವ ತಿಳಿಸಲು ಈ ದಿನವನ್ನು ಆಚರಿಸಲಾಗುತ್ತದೆ, ಹಾಗೂ ಇದೇ ದಿನದಂದು ಕೊಲ್ಲಲ್ಪಟ್ಟ ಮತ್ತು ಗಾಯಗೊಂಡ ಮಾನವೀಯ ಕಾರ್ಯಕರ್ತರಿಗೆ ಗೌರವ ವಂದನೆಗಳನ್ನು ಅರ್ಪಿಸಲಾಗುತ್ತದೆ ಹಾಗೂ ಆರೋಗ್ಯ ಕಾರ್ಯಕರ್ತರಿಗೆ ಗೌರವ ಸಲ್ಲಿಸಲಾಗುತ್ತದೆ.

## ಮೂರು ಮಕ್ಕಳ ನೀತಿಯನ್ನು ಅನುಮೋದಿಸಿದ ಚೀನಾ ರಾಷ್ಟ್ರ



* ಪ್ರಸ್ತುತ ಚೀನಾ ದೇಶದ ರಾಷ್ಟ್ರೀಯ ಶಾಸಕಾಂಗವು ಆಡಳಿತಾತ್ಮಕ ಕಮ್ಯುನಿಸ್ಟ್ ಪಕ್ಷವು ಇದೀಗ '3' ಮಕ್ಕಳ ನೀತಿಯನ್ನು ಅಧಿಕೃತವಾಗಿ ಅನುಮೋದಿಸಿದೆ.
* ಚೀನಾ ದೇಶವು ಮೂರು ದಶಕಗಳಿಂದ ಜಾರಿಗೆ ತಂದಿರುವ ಒಂದು ಮಗುವಿನ ನೀತಿಯು ಇದೀಗ ಸರಿ ಸುಮಾರು 400 ಮಿಲಿಯನ್ ದಂಪತಿಗಳನ್ನು ತಡೆಹಿಡಿದಂತಾಗಿದೆ ಎಂದಿದ್ದಾರೆ.
* ವಿಶ್ವದ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ಚೀನಾ ರಾಷ್ಟ್ರದ ಈ ಮೂರನೇ ಮಗುವಿನ ಪಾಲಿಸಿಯು ಚೀನಾದಲ್ಲಿ ಜನನ ಪ್ರಮಾಣ ದರದಲ್ಲಿ ತೀವ್ರ ಕುಸಿತವನ್ನು ತಡೆಯುವ ಗುರಿಯನ್ನು ಹೊಂದಿದೆ ಎಂದು ತಿಳಿಸಿದ್ದಾರೆ.
* ಪ್ರಸ್ತುತ ಚೀನಾ ದೇಶದ ಜನಸಂಖ್ಯೆ ಹಾಗೂ ಕುಟುಂಬ ಯೋಜನೆ ಕಾನೂನು ಇದೀಗ ಚೀನಾ ರಾಷ್ಟ್ರದ ದಂಪತಿಗಳಿಗೆ ಮೂರು (3) ಮಕ್ಕಳನ್ನು ಹೊಂದಲು ಅವಕಾಶ ಮಾಡಿಕೊಡಲಿದೆ, ಹಾಗೂ ಇದನ್ನು ರಾಷ್ಟ್ರೀಯ ಪೀಪಲ್ಸ್ ಕಾಂಗ್ರೆಸ್ ಸ್ಥಾಯಿ ಸಮಿತಿ ಅಂಗೀಕರಿಸಿದೆ.
* ಚೀನಾ ದೇಶದ ಕಮ್ಯುನಿಸ್ಟ್ ಪಾರ್ಟಿ ಆಫ್ ಚೀನಾ 2021 ರ ಮೇ ತಿಂಗಳಿನಲ್ಲಿ ಕಟ್ಟುನಿಟ್ಟಾದ ಎರಡು ಮಕ್ಕಳ ನೀತಿಯನ್ನು ಸಡಿಲಿಸಲು ದೇಶದ ಎಲ್ಲಾ ದಂಪತಿಗಳು ಮೂರು ಮಕ್ಕಳನ್ನು ಪಡೆಯಲು ಅವಕಾಶವನ್ನು ಮಾಡಿಕೊಟ್ಟಿದೆ.
* ಈ ಹಿಂದೆ 2016 ರಲ್ಲಿ ಚೀನಾದಲ್ಲಿ ಒಂದು ಮಗುವಿನ ಪಾಲಿಸಿಯನ್ನು ರದ್ದುಗೊಳಿಸಿ ರಾಷ್ಟ್ರದ ಎಲ್ಲ ದಂಪತಿಗಳಿಗೂ ಎರಡು ಮಕ್ಕಳನ್ನು ಹೊಂದಲು ಚೀನಾ ಅನುಮತಿ ನೀಡಿತ್ತು, ಆದರೆ ಇದೀಗ 2021 ರಲ್ಲಿ ಮೂರು ಮಕ್ಕಳನ್ನು ಹೊಂದಲು ಅವಕಾಶ ನೀಡಿದೆ.


# 21-08-2021

## ಉಪರಾಷ್ಟ್ರಪತಿ ಎಂ. ವೆಂಕಯ್ಯ ನಾಯ್ಡು ಹೊಸಪೇಟೆಗೆ ಆಗಮನ



* ಉಪರಾಷ್ಟ್ರಪತಿ ಎಂ. ವೆಂಕಯ್ಯ ನಾಯ್ಡು ಅವರು ಬಿಗಿ ಭದ್ರತೆಯಲ್ಲಿ ವಿಜಯನಗರ ಜಿಲ್ಲೆಯ ಹೊಸಪೇಟೆ ನಗರಕ್ಕೆ ಆಗಮಿಸಿದರು.
* ಭಾರತೀಯ ವಾಯುಸೇನೆಯ ವಿಶೇಷ ಹೆಲಿಕ್ಯಾಪ್ಟರ್‌ನ ಮೂಲಕ ಹೊಸಪೇಟೆ ನಗರದ ತಾಲ್ಲೂಕು ಕ್ರೀಡಾಂಗಣದ ಹೆಲಿಪ್ಯಾಡ್‌ಗೆ ವೆಂಕಯ್ಯ ನಾಯ್ಡು ಅವರು ಆಗಮಿಸಿದರು, ಹಾಗೂ ಇವರನ್ನು ಸಚಿವ ಆನಂದ್ ಸಿಂಗ್ ಸ್ವಾಗತ ಮಾಡಿಕೊಂಡರು.
* ಉಪರಾಷ್ಟ್ರಪತಿ ಎಂ. ವೆಂಕಯ್ಯ ನಾಯ್ಡು ಅವರು ಹೊಸಪೇಟೆಯ ತುಂಗಭದ್ರಾ ಜಲಾಶಯಕ್ಕೆ ಭೇಟಿ ನೀಡಿದರು.
* ಆಗಸ್ಟ್. 21 ರಂದು ಹಂಪಿಗೆ ಭೇಟಿ ನೀಡಿ ಅಲ್ಲಿನ ಸ್ಮಾರಕಗಳನ್ನು ವೀಕ್ಷಣೆ ಮಾಡಿ ತಡ ರಾತ್ರಿ ಅಲ್ಲಿಯೇ ಉಳಿದುಕೊಂಡು, ಆಗಸ್ಟ್. 22 ರಂದು ಬೆಳಗಿನಜಾವಾ ಹೆಲಿಕ್ಯಾಪ್ಟರ್‌ನ ಮೂಲಕ ಹುಬ್ಬಳ್ಳಿ ವಿಮಾನ ನಿಲ್ದಾಣಕ್ಕೆ ಪಯಣ ಬೆಳಸಲಿದ್ದಾರೆ ಎಂದು ತಿಳಿದು ಬಂದಿದೆ.

## ಪಿಂಚಣಿ ಯೋಜನೆ' ಹೆಸರು ಇನ್ಮುಂದೆ 'ರಾಷ್ಟ್ರೀಯ ಪಿಂಚಣಿ ಯೋಜನೆ'ಯಾಗಿ ಬದಲಾವಣೆ



* ಪ್ರಸ್ತುತ ನೂತನ ಪಿಂಚಣಿ ಯೋಜನೆಯನ್ನು ರಾಷ್ಟ್ರೀಯ ಪಿಂಚಣಿ ಯೋಜನೆ ಎಂದು ಹೆಸರು ಬದಲಾವಣೆ ಮಾಡಿ ಕರ್ನಾಟಕ ರಾಜ್ಯ ಸರ್ಕಾರ ಆದೇಶಿಸಿದೆ.
* ರಾಜ್ಯ ಆರ್ಥಿಕ ಇಲಾಖೆ ಸರ್ಕಾರದ ಅಧೀನ ಕಾರ್ಯದರ್ಶಿ ಕುಮಟಾ ಪ್ರಕಾಶ್ ನಡವಳಿಗಳನ್ನು ಹೊರಡಿಸಿದ್ದಾರೆ, ಈ ಹೊಸ ವ್ಯಾಖ್ಯಾನಿಸಿದ ಅಂಶದಾಯಿ ಪಿಂಚಣಿ ಯೋಜನೆಯನ್ನು 2006 ರಲ್ಲಿ ಜಾರಿಗೆ ತರಲಾಗಿತ್ತು, ಸದ್ಯ ಈ ಯೋಜನೆಯನ್ನು ನೂತನ ಪಿಂಚಣಿ ಯೋಜನೆ ಎಂದು ಎಲ್ಲಾ ರಾಜ್ಯ ಪತ್ರಗಳಲ್ಲಿ ವ್ಯವಹಾರ ಮಾಡಲಾಗುತ್ತಿತ್ತು.
* ಈ ನೂತನ ಪಿಂಚಣಿ ಯೋಜನೆಯನ್ನು ಪಿಂಚಣಿ ನಿಧಿ ನಿಯಂತ್ರಣಾ ಮತ್ತು ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ 2013 ರ ಸೆಕ್ಷನ್ 20(1) ರೊಂದಿಗೆ ಒದಲಾದ ಸೆಕ್ಷನ್ 12(4)ರ ಅಡಿಯಲ್ಲಿನ ಅಧಿಕಾರವನ್ನು ಚಲಾವಣೆ ಮಾಡಿ ಇದನ್ನು ಇನ್ನು ಮುಂದೆ ರಾಷ್ಟ್ರೀಯ ಪಿಂಚಣಿ ಯೋಜನೆ ಎಂದು ಬದಲಾಯಿಸಿ, ಆದೇಶ ಹೊರಡಿಸಿದೆ.

## ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರು ಒಬಿಸಿ ಮಸೂದೆಯನ್ನು ಅಂಗೀಕರಿಸಿದ್ದಾರೆ



* ಪ್ರಸ್ತುತ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರು ಕೇಂದ್ರ ಸರ್ಕಾರವು ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳನ್ನು ಗುರುತಿಸುವ ಅಧಿಕಾರಗಳನ್ನು ರಾಜ್ಯಗಳಿಗೆ ಹಿಂತಿರುಗಿಸುವ ಮಸೂದೆಗೆ ಸಹಿ ಹಾಕಿದ್ದಾರೆ.
* ಸಂವಿಧಾನದ 105 ನೇ ತಿದ್ದುಪಡಿಯ ಈ ಮಸೂದೆಯನ್ನು ಒಬಿಸಿ ಮಸೂದೆಯೆಂದೇ ಕರೆಯಲಾಗುತ್ತಿದೆ, ಹಾಗೂ ಇದೇ ಆಗಸ್ಟ್.11 ರಂದು ಈ ಮಸೂದೆಯನ್ನು ಸಂಸತ್ ನಲ್ಲಿ ಅಂಗೀಕರಿಸಲಾಗಿದೆ ಎಂದು ತಿಳಿದು ಬಂದಿದೆ.
* ಈ ಮಸೂದೆಯ ತಿದ್ದುಪಡೆಯಿಂದಾಗಿ ಪ್ರತಿ ರಾಜ್ಯ ಹಾಗೂ ಕೇಂದ್ರಾಡಳಿತ ಕಾನೂನುಗಳು ಸಾಮಾಜಿಕ ಮತ್ತು ಶೈಕ್ಷಣಿಕ ಹಿಂದುಳಿದ ವರ್ಗಗಳನ್ನು ಗುರುತಿಸಿ ಪಟ್ಟಿ ಸಿದ್ಧಪಡಿಸುವ ಅಧಿಕಾರವನ್ನು ಪಡೆದುಕೊಳ್ಳಲಿವೆ ಎಂದು ತಿಳಿಸಿದ್ದಾರೆ.

## ಅಮೇಜಾನ್ ತನ್ನ ಅಲೆಕ್ಸಾಗಾಗಿ ಅಮಿತಾಭ್ ಧ್ವನಿಯನ್ನು ಖರೀದಿಸಿದೆ




* ಪ್ರಸ್ತುತ ಅಮೇಜಾನ್ ಸಂಸ್ಥೆಯ ವಾಯ್ಸ್ ಅಸಿಸ್ಟೆಂಟ್ ಆಗಿರುವ ವಿದ್ಯುನ್ಮಾನ ಉಪಕರಣ 'ಅಲೆಕ್ಸಾ'ಗೆ ಇನ್ನು ಮುಂದೆ ಸ್ಟಾರ್ ಅಮಿತಾಭ್ ಬಚ್ಚನ್ ಧ್ವನಿಯನ್ನು ಬಳಸಲಾಗುತ್ತದೆ, ಹಾಗೂ ಇದು ಇವರ ಧ್ವನಿಯಲ್ಲಿ ಮಾತನಾಡಲಿದೆ ಎಂದು ಅಮೇಜಾನ್ ಸಂಸ್ಥೆ ತಿಳಿಸಿದೆ.
* ಈ ಹಿಂದೆ ಅಮಿತಾಭ್ ಬಚ್ಚನ್ ಅವರು ತಮ್ಮ ಧ್ವನಿಗೆ ಕಾಪಿ ರೈಟ್ ಪಡೆಯಲು ಮುಂದಾಗಿದ್ದರು, ಕಾರಣ ಹಲವಾರು ಮಿಮಿಕ್ರಿ ಕಲಾವಿದರು ಅಮಿತಾಭ್ ಬಚ್ಚನ್ ಅವರ ಅನುಮತಿ ಪಡೆಯದೇ ಅವರ ಧ್ವನಿಯನ್ನು ಬಳಸಿಕೊಂಡು ಜಾಹೀರಾತುಗಳನ್ನು ನೀಡುತಿದ್ದರು, ಇದರಿಂದಾಗಿ ಇವರು ತಮ್ಮ ಧ್ವನಿಗೆ ಕಾಪಿ ರೈಟ್ ಪಡೆಯಲು ಮುಂದಾಗಿದ್ದಾರೆ ಎಂದು ತಿಳಿದು ಬಂದಿದೆ.
* ಇದೀಗ ಅಮೇಜಾನ್ ಸಂಸ್ಥೆಯ ಅಮಿತಾಭ್ ಬಚ್ಚನ್ ಅವರು ಧ್ವನಿಯನ್ನು ಅಲೆಕ್ಸಾ ಉಪಕರಣಕ್ಕಾಗಿ ಬಳಸಲು ಖರೀದಿಸಿದೆ.
* ಈ ಮೊದಲು ಈ ಅಲೆಕ್ಸಾ ಉಪಕರಣವು ಚಾಲೂ ಮಾಡಬೇಕಾದರೆ ಬಳಕೆದಾರರು 'ಅಲೆಕ್ಸಾ' ಎಂದು ಕರೆಯಬೇಕಾಗಿತ್ತು, ಆದರೆ ಇನ್ನುಮುಂದೆ 'ಅಮಿತ್ ಜೀ' ಎಂದು ಕರೆಯಬೇಕಾಗುತ್ತದೆ ಎಂದು ಅಮೆಜಾನ್ ಸಂಸ್ಥೆ ತಿಳಿಸಿದೆ.

## ಭಾರತೀಯ ಔಷಧ ನಿಯಂತ್ರಣ ಮಂಡಳಿಯು ವಿಶ್ವದ ಮೊದಲ ಪ್ಲಾಸ್ಮಿಡ್ DNA ಲಸಿಕೆಯನ್ನು ತುರ್ತು ಬಳಕೆಗೆ ಶಿಫಾರಸ್ಸು ನೀಡಿದೆ




* ಪ್ರಸ್ತುತ ದೇಶದಲ್ಲಿ ತುರ್ತು ಬಳಕೆ ಅನುಮೋದನೆಗಾಗಿ ಭಾರತೀಯ ಔಷಧ ನಿಯಂತ್ರಕರ ವಿಷಯ ತಜ್ಞರ ಸಮಿತಿಯು ಅಹ್ಮದಾಬಾದ್ ನಗರದ ಔಷಧೀಯ ಸಂಸ್ಥೆ ಕ್ಯಾಡಿಲಾ ಹೆಲ್ತ್‌ಕೇರ್ ಮೂರು ಡೋಸ್ ಕೋವಿಡ್ 19 ಲಸಿಕೆ ZyCoV D ಯನ್ನು ಶಿಫಾರಸ್ಸು ಮಾಡಿದೆ.
* ಈ ಹಿಂದೆ ಹೈದರಾಬಾದ್ ಮೂಲದ ಭಾರತ್ ಬಯೋಟೆಕ್‌ನ ಕೊವಾಕ್ಸಿನ್‌ನ ಲಸಿಕೆಯ ನಂತರ ಭಾರತದಲ್ಲಿ ತುರ್ತುಸ್ಥಿತಿ ಅಧಿಕಾರವನ್ನು ಪಡೆದ 2 ನೇ ದೇಶಿಯ ಜಬ್ ಝೈಡಸ್ ಕ್ಯಾಡಿಲಾ ಲಸಿಕೆ ಇದಾಗಿದೆ.
* ಪ್ರಸ್ತುತ ಝೈಡಸ್ ಕ್ಯಾಡಿಲಾ ಮೂರು ಡೋಸ್ ಪ್ಲಾಸ್ಮಿಡ್ DNA ಕೋವಿಡ್ 19 ಲಸಿಕೆಯನ್ನು ಬಳಕೆ ಮಾಡಲು ಅನುಮೋದನೆ ಪಡೆದುಕೊಂಡ SARS CoV 2 ಸೋಂಕಿನ ವಿರುದ್ಧ ಮಾನವ ಬಳಕೆಗಾಗಿ ZyCov D ವಿಶ್ವದ ಮೊದಲ ಪ್ಲಾಸ್ಮಿಡ್ DNA ಲಸಿಕೆ ಇದಾಗಿದೆ.
* ZyCov D ವಿಶ್ವದ ಮೊದಲ ಪ್ಲಾಸ್ಮಿಡ್ DNA ಲಸಿಕೆಯು 12 ರಿಂದ 18 ವರ್ಷ ವಯಸ್ಸಿನ ಮಕ್ಕಳಿಗೆ ಸುರಕ್ಷಿತವಾಗಿದೆ ಎಂದು ತಿಳಿಸಿದೆ.
* ಈ ZyCoV D ಭಾರತದ ಮೊದಲ DNA ಪ್ಲಾಸ್ಮಿಡ್ ಲಸಿಕೆಯಾಗಿದೆ, ಇದನ್ನು ಅಹಮದಾಬಾದ್‌ನ ಲಸಿಕೆ ತಂತ್ರಜ್ಞಾನ ಕೇಂದ್ರದಲ್ಲಿ ತಯಾರಿಸಲಾಗಿದೆ.
* 2020 ರ ಡಿಸೆಂಬರ್ ತಿಂಗಳಿನಲ್ಲಿ ಜೈಡಸ್ ಗ್ರೂಪ್ ಅಧ್ಯಕ್ಷ ಪಂಕಜ್ ಆರ್ ಪಟೇಲ್ ಅವರು ಈ ಲಸಿಕೆಯ ಪ್ರಯೋಗದ ಮೊದಲ ಎರಡು ಹಂತಗಳು 'ಸುರಕ್ಷಿತ ಮತ್ತು ಇಮ್ಯುನೊಜೆನಿಕ್' ವಾಗಿದೆ ತಿಳಿಸಿದ್ದರು.

## ಅಫ್ಘಾನಿಸ್ತಾನದಿಂದ 100 ಸಿಬ್ಬಂದಿ ಕಜಕಸ್ತಾನಕ್ಕೆ ಸ್ಥಳಾಂತರ



* ವಿಶ್ವಸಂಸ್ಥೆಯ ಮಹಾಪ್ರಧಾನ ಕಾರ್ಯದರ್ಶಿ ಆಂಟೊನಿಯೊ ಗುಟೆರಸ್ ಅವರ ವಕ್ತಾರರಾಗಿರುವ ಸ್ಟೀಫನ್ ದುಜಾರಿಕ್ ಅವರು ನೀಡಿರುವ ಮಾಹಿತಿಯ ಪ್ರಕಾರ ಪ್ರಸ್ತುತ ಅಫ್ಘಾನಿಸ್ತಾನ ರಾಷ್ಟ್ರದಲ್ಲಿರುವ ಈಗಿನ ಪರಿಸ್ಥಿತಿ ಹಾಗೂ ಭದ್ರತೆಯ ದೃಷ್ಟಿಯಿಂದ 100 ಸಿಬ್ಬಂದಿಯನ್ನು ಕಜಕಸ್ತಾನಕ್ಕೆ ಸ್ಥಳಾಂತರಿಸಲಾಗಿದೆ ಎಂದು ತಿಳಿಸಿದ್ದಾರೆ.
* ಪ್ರಸ್ತುತ ಕಜಕಸ್ತಾನದ ಅಲ್ಮಾಟಿ ನಗರದಲ್ಲಿ ಅಫ್ಘಾನಿಸ್ತಾನದ ವಿಶ್ವಸಂಸ್ಥೆಯ ತಾತ್ಕಾಲಿಕ ಕಚೇರಿಯನ್ನು ಸ್ಥಾಪಿಸಲು ಅವಕಾಶವನ್ನು ನೀಡಲಾಗಿದೆ, ಸದ್ಯದ ಪರಿಸ್ಥಿತಿಯಲ್ಲಿ ಅಧಿಕಾರಿಗಳು ಈ ನಗರದಿಂದಲೇ ಕಾರ್ಯನಿರ್ವಹಿಸಲಿದ್ದಾರೆ ಎಂದು ತಿಳಿಸಿದ್ದಾರೆ.

## ತಾಳೆ ಬೆಳೆಯ 11,040 ಕೋಟಿ ರೂ. ಮೊತ್ತದ ಯೋಜನೆಗೆ ಸಂಪುಟ ಅನುಮೋದನೆ



* ಕೇಂದ್ರ ಸಚಿವ ಸಂಪುಟವು ತಾಳೆ ಮರದ ಕೃಷಿಗೆ ಪ್ರೋತ್ಸಾಹ ನೀಡಲು, ಹಾಗೂ ದೇಶೀಯ ಖಾದ್ಯ ಪಾಮ್ ಆಯಿಲ್ (ತಾಳೆ ಎಣ್ಣೆ) ಉತ್ಪಾದನೆ ಹೆಚ್ಚಿಸುವ ಉದ್ದೇಶದಿಂದ 11,040 ಕೋಟಿ ರೂ. ಮೊತ್ತದ ರಾಷ್ಟ್ರೀಯ ಯೋಜನೆಗೆ ಅನುಮೋದನೆ ನೀಡಿದೆ.
* ಕೇಂದ್ರ ಸಂಪುಟವು 'ದಿ ನ್ಯಾಷನಲ್ ಮಿಷನ್ ಆನ್ ಎಡಿಬಲ್ ಆಯಿಲ್ಸ್ ಆಯಿಲ್ ಪಾಮ್'ಗೆ ಅನುಮೋದನೆಯನ್ನು ನೀಡಿದೆ. ಈ ಹಿಂದೆ ಪ್ರಧಾನಿ ಮೋದಿ ಅವರು ಆಗಸ್ಟ್. 15 ರ ಸ್ವಾತಂತ್ರ್ಯೋತ್ಸವ ದಿನದ ಭಾಷಣದಲ್ಲಿ ಈ ಯೋಜನೆಯ ಬಗ್ಗೆ ಪ್ರಸ್ತಾಪವನ್ನು ನೀಡಿದ್ದರು.
* ಪ್ರಸ್ತುತ ಈ ಯೋಜನೆಯನ್ನು ಈಶಾನ್ಯ ಪ್ರದೇಶ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಸಮೂಹಗಳಿಗಾಗಿ ರೂಪಿಸಲಾಗಿದೆ, ಇದರಿಂದಾಗಿ ತಾಳೆ ಬೆಳೆ ಬೆಳೆಯುವ ಪ್ರದೇಶವನ್ನು ಹೆಚ್ಚಿಸುವ ಉದ್ದೇಶವಿದೆ ಎಂದು ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅನುರಾಗ್ ಠಾಕೂರ್ ತಿಳಿಸಿದ್ದಾರೆ.
* ಈ ಯೋಜನೆಯಡಿ ತಾಳೆ ಬೆಳೆಯನ್ನು ಬೆಳೆಯಲು ಇಚ್ಚಿಸುವ ರೈತರಿಗೆ ಸಹಾಯಧನವನ್ನು ಹಾಗೂ ತಾಳೆ ಬೆಳೆ ಕೃಷಿಗೆ ಅಗತ್ಯವಿರುವ ಸಾಧನಗಳ ಖರೀದಿಗೆ ಸಾಲ ನೀಡಲಾಗುವುದು ಎಂದು ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ತಿಳಿಸಿದ್ದಾರೆ.

## ಸೋಮನಾಥದಲ್ಲಿ ಬಹು ಯೋಜನೆಗಳನ್ನು ಉದ್ಘಾಟಿಸಿದ ಪ್ರಧಾನಿ ಮೋದಿ



* ಆಗಸ್ಟ್. 20 ರಂದು ಸೋಮನಾಥದಲ್ಲಿ ಬಹು ಯೋಜನೆಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆಯನ್ನು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ನೆರವೇರಿಸಿದರು.
* ಪ್ರಸ್ತುತ ಗುಜರಾತ್ ರಾಜ್ಯದ ವೆರಾವಲ್ ನಗರವನ್ನು ಸೋಮನಾಥ ನಗರ ಎಂದು ಹೆಸರು ಬಲಾಯಿಸಲಾಗಿದೆ.
* ಈ ನಗರದಲ್ಲಿ ಪ್ರಧಾನಿ ಮೋದಿ ಅವರು ಸೋಮನಾಥ ವಾಯುವಿಹಾರ, ಸೋಮನಾಥ ಪ್ರದರ್ಶನ ಕೇಂದ್ರದ ಪುನರ್ನಿರ್ಮಾಣಗೊಂಡ ದೇವಾಲಯದ ಆವರಣವನ್ನು ಉದ್ಘಾಟಿಸಿದರು, ಹಾಗೂ ಅಲ್ಲಿಯೇ ಶ್ರೀ ಪಾರ್ವತಿ ದೇವಸ್ಥಾನಕ್ಕೆ ಅಡಿಗಲ್ಲು ಹಾಕಿದರು.
* ಸೋಮನಾಥ ದೇವಸ್ಥಾನವು ಗುಜರಾತಿನ ಪಶ್ಚಿಮ ಕರಾವಳಿಯ ಸೌರಾಷ್ಟ್ರದ ಆಗಿನ ವೆರಾವಲ್ ನಗರ (ಈಗಿನ ಸೋಮನಾಥ ನಗರ) ದಲ್ಲಿದೆ, ಈ ದೇವಸ್ಥಾನದಲ್ಲಿ ಶಿವನ ಹನ್ನೆರಡು ಜ್ಯೋತಿರ್ಲಿಂಗ ದೇಗುಲಗಳಲ್ಲಿ ಮೊದಲನೇ ಜ್ಯೋತಿರ್ಲಿಂಗ ಎಂದು ನಂಬಲಾಗಿದೆ, ಹಾಗೂ ಈ ಪ್ರದೇಶವು ಗುಜರಾತ್ ನ ಮುಖ್ಯವಾದ ಯಾತ್ರಾ ಸ್ಥಳವಾಗಿದೆ.

## ಆರೋಗ್ಯ ಧಾರ 2.0 ಆರಂಭ




* 2021 ರ ಆಗಸ್ಟ್. 18 ರಂದು ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವಿಯಾ ಅವರು ಆಯುಷ್ಮಾನ್ ಭಾರತ ಯೋಜನೆ ಅಡಿಯಲ್ಲಿ ಜನ ಆರೋಗ್ಯ ಯೋಜನೆಗಳ ವ್ಯಾಪ್ತಿಯನ್ನು ಹೆಚ್ಚಿಸಲು ಆರೋಗ್ಯ ಧಾರಾ 2.0 ನ್ನು ಪ್ರಾರಂಭಿಸಿದ್ದಾರೆ.
* ಈ ಆರೋಗ್ಯ ಧಾರ 2.0 ಆಯುಷ್ಮಾನ್ ಭಾರತ್ ಯೋಜನೆಗೆ ಸಂಬಂಧಿಸಿದೆ, ಹಾಗೂ ಆರೋಗ್ಯ ಸಚಿವ ಮನ್ಸುಖ್ ಮಾಂಡವಿಯಾ '3' ಉಪಕ್ರಮಗಳನ್ನು ಆರಂಭಿಸಿದ್ದಾರೆ, ಅವುಗಳು ಅಧಿಕಾರ ಪತ್ರ, ಆಯುಷ್ಮಾನ್ ಮಿತ್ರ ಮತ್ತು ಅಭಿನಂದನ್ ಪಾತ್ರ.
* ಅಧಿಕಾರ ಪತ್ರ: PM JAY ಯೋಜನೆಯಡಿ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾದಾಗ ಫಲಾನುಭವಿಗಳಿಗೆ ಅಧಿಕಾರ ಪತ್ರವನ್ನು ನೀಡಲಾಗುತ್ತದೆ.
* ಅಭಿನಂದನ್ ಪಾತ್ರ: ಇದು 'ಧನ್ಯವಾದ ಸೂಚನೆ' ಹಾಗೂ ಇದನ್ನು ಚಿಕಿತ್ಸೆ ಪಡೆದ ನಂತರ ಬಿಡುಗಡೆಯಾದ ಫಲಾನುಭವಿಗಳಿಗೆ ನೀಡಲಾಗುತ್ತದೆ.
* ಆಯುಷ್ಮಾನ್ ಮಿತ್ರ: PM JAY ಯೋಜನೆಯಡಿಯಲ್ಲಿ

ಆಯುಷ್ಮಾನ್ ಕಾರ್ಡ್‌ಗಳನ್ನು ಪಡೆಯಲು ಫಲಾನುಭವಿಗಳಿಗೆ ಸಹಾಯ ಮಾಡುತ್ತದೆ.
* ಪ್ರಸ್ತುತ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ ಆಯುಷ್ಮಾನ್ ಭಾರತ್ (AB PM JAY) ಇತ್ತೀಚೆಗೆ 2 ಕೋಟಿ ಆಸ್ಪತ್ರೆಗಳ ಮೈಲಿಗಲ್ಲು ಸಾಧಿಸಿದೆ.

## ಭಾರತ ಚೀನಾ ಗಡಿಯ ಬಳಿ ಭಾರತದ ಅತಿ ಎತ್ತರದ ಗಿಡಮೂಲಿಕೆ ಉದ್ಯಾನವನ್ನು ಉದ್ಘಾಟಿಸಲಾಗಿದ



* ಪ್ರಸ್ತುತ ಭಾರತ ಚೀನಾ ಗಡಿಯ ಬಳಿ ಅಂದರೆ ಉತ್ತರಾಖಂಡದ ಚಮೋಲಿ ಜಿಲ್ಲೆಯ ಮನ ಗ್ರಾಮದಲ್ಲಿ 11,000 ಅಡಿ ಎತ್ತರದ ಭಾರತದ ಅತ್ಯುನ್ನತ ಗಿಡಮೂಲಿಕೆ ಉದ್ಯಾನವನ್ನು ಉದ್ಘಾಟಿಸಲಾಗಿದೆ.
* ಭಾರತದ ಈ ಎತ್ತರದ ಗಿಡಮೂಲಿಕೆ ಉದ್ಯಾನವು ವಿವಿಧ ಔಷಧೀಯ ಮತ್ತು ಸಾಂಸ್ಕೃತಿಕವಾಗಿ ಪ್ರಮುಖ ಆಲ್ಪೈನ್ ಜಾತಿಗಳನ್ನು ಸಂರಕ್ಷಿಸುವ ಉದ್ದೇಶದಿಂದ ಪರಿಸರ ವಿಜ್ಞಾನದ ಕುರಿತು ಸಂಶೋಧನೆ ನಡೆಸುವ ಹಿನ್ನಲೆಯಿಂದಾಗಿ ಉದ್ಘಾಟಿಸಲಾಗಿದೆ.
* ಉತ್ತರಾಖಂಡದ ಚಮೋಲಿ ಜಿಲ್ಲೆಯ ಮನ ಗ್ರಾಮದಲ್ಲಿ ಮೂರು (3) ಎಕರೆ ಪ್ರದೇಶದಲ್ಲಿ ಉದ್ಯಾನವನ್ನು ಅಭಿವೃದ್ಧಿಪಡಿಸಲಾಗಿದೆ.
* ಈ ಉದ್ಯಾನವನ್ನು ಕೇಂದ್ರ ಸರ್ಕಾರದ ಪರಿಹಾರ ಅರಣ್ಯೀಕರಣ ನಿಧಿ ನಿರ್ವಹಣೆ ಹಾಗೂ ಯೋಜನಾ ಪ್ರಾಧಿಕಾರದ ಯೋಜನೆ ಅಡಿಯಲ್ಲಿ ಮೂರು ವರ್ಷಗಳಲ್ಲಿ ನಿರ್ಮಿಸಲಾಗಿದೆ.
* ಈ ಹರ್ಬಲ್ ಪಾರ್ಕ್ ನಲ್ಲಿ 40 ಜಾತಿಗಳನ್ನು ಒಳಗೊಂಡಿದೆ, ಹಾಗೂ ಇವು ಭಾರತೀಯ ಹಿಮಾಲಯ ಪ್ರದೇಶದ ಎತ್ತರದ ಆಲ್ಪೈನ್ ಪ್ರದೇಶಗಳಲ್ಲಿ ಕಾಣಸಿಗುತ್ತವೆ, ಈ ಪಾರ್ಕ್ ಹಲವಾರು ಪ್ರಮುಖ ಔಷಧೀಯ ಗಿಡಮೂಲಿಕೆಗಳನ್ನು ಒಳಗೊಂಡಿದೆ.
* ಉದ್ಯಾನವನ್ನು ನಾಲ್ಕು ವಿಭಾಗಗಳಾಗಿ ವಿಂಗಡಿಸಲಾಗಿದೆ: ಮೊದಲ ವಿಭಾಗ ಇದು ಬದರಿನಾಥಗೆ ಸಂಬಂಧಿಸಿದ ಬದ್ರಿ ತುಳಸಿ, ಬದರಿ ಮರ, ಬದರಿ ಬೆರ್ ಮತ್ತು ಭೋಜಪತ್ರದ ಪವಿತ್ರ ಮರವನ್ನು ಒಳಗೊಂಡಿದೆ. ಎರಡನೇ ವಿಭಾಗ ಈ ವಿಭಾಗವನ್ನು ಅಷ್ಟವರ್ಗ (8) ಜಾತಿಗಳಿಗೆ ಸಮರ್ಪಿಸಲಾಗಿದೆ, ಇದು ಹಿಮಾಲಯ ಪ್ರದೇಶದಲ್ಲಿ ಕಂಡುಬರುತ್ತದೆ. ಮೂರನೇ ವಿಭಾಗ ಈ ವಿಭಾಗವು ಸೌಸುರಿಯಾ ಜಾತಿ, ಹಾಗೂ ಉತ್ತರಾಖಂಡದ ರಾಜ್ಯ ಹೂವಾದ ಬ್ರಹ್ಮಕಮಲವನ್ನು ಒಳಗೊಂಡಿದೆ. ನಾಲ್ಕನೇ ವಿಭಾಗ ಈ ವಿಭಾಗವು ಅತೀಶ್, ಮೀಥಾವಿಶ್, ಚೋರು ಮತ್ತು ವಂಕಕ್ಕಿಯಂತಹ ಬಗೆಬಗೆಯ ಆಲ್ಪೈನ್ ಜಾತಿಗಳನ್ನು ಒಳಗೊಂಡಿದೆ.

# 23-08-2021

## ಭಾರತದ ಮಾಜಿ ಫುಟ್ಬಾಲ್ ಆಟಗಾರ ಹಕೀಮ್‌ಸಾಬ್ ವಿಧಿವಶ



* ಭಾರತದ ಮಾಜಿ ಫುಟ್ಬಾಲ್ ಆಟಗಾರ ಸೈಯದ್ ಶಾಹಿದ್ ಹಕೀಮ್ ಅವರು ಕಲಬುರಗಿ(ಗುಲ್ಬರ್ಗ) ಆಸ್ಪತ್ರೆಯಲ್ಲಿ ವಿಧಿವಶರಾಗಿದ್ದಾರೆ.
* ಮಾಜಿ ಫುಟ್ಬಾಲ್ ಆಟಗಾರ ಸೈಯದ್ ಶಾಹಿದ್ ಹಕೀಮ್ ಅವರು 1960 ರ ರೋಮ್ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿದ ಭಾರತ ತಂಡದ ಸದಸ್ಯರಾಗಿದ್ದರು, ಹಾಗೂ 1982 ರ ಏಷ್ಯನ್ ಗೇಮ್ಸ್‌ನಲ್ಲಿ ಪಿ.ಕೆ.ಬ್ಯಾನರ್ಜಿ ಅವರ ಜೊತೆ ಸಹಾಯಕ ತರಬೇತುದಾರರಾಗಿ ಮತ್ತು ನಂತರ ಮೆರ್ಡೆಕಾ ಕಪ್ ನಲ್ಲಿ ರಾಷ್ಟ್ರೀಯ ತಂಡದ ಮುಖ್ಯ ತರಬೇತುದಾರರಾಗಿ ಕಾರ್ಯ ನಿರ್ವಹಿಸಿದ್ದಾರೆ.
* ಮಾಜಿ ಫುಟ್ಬಾಲ್ ಆಟಗಾರ ಸೈಯದ್ ಶಾಹಿದ್ ಹಕೀಮ್ ಅವರು ಫಿಫಾದ ಅಂತಾರಾಷ್ಟ್ರೀಯ ತೀರ್ಪುಗಾರರಾಗಿ ಸೇವೆ ಸಲ್ಲಿಸಿದ್ದಾರೆ, ಹಾಗೂ ಇವರಿಗೆ ಪ್ರತಿಷ್ಠಿತ ಧ್ಯಾನ್ ಚಂದ್ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

## ಪಂಜಾಬಿನ ಸರ್ಕಾರಿ ಶಾಲೆಗಳಿಗೆ ಹಾಕಿ ಆಟಗಾರರ ಹೆಸರು



* ಪಂಜಾಬ್ ರಾಜ್ಯದ ಹತ್ತು ಸರ್ಕಾರಿ ಶಾಲೆಗಳಿಗೆ ಈ ಬಾರಿಯ ಟೋಕಿಯೋ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕವನ್ನು ಜಯಿಸಿರುವ ಹಾಕಿ ತಂಡದ ಆಟಗಾರರ ಹೆಸರನ್ನು ಇಡಲಾಗುವದು, ಹಾಗೂ ಅದೇ ಹೆಸರುಗಳಿಂದ ಆ ಶಾಲೆಗಳನ್ನು ಕರೆಯಲಾಗುವುದು, ಎಂದು ಪಂಜಾಬ್ ರಾಜ್ಯದ ಶಾಲಾ ಶಿಕ್ಷಣ ಸಚಿವ ವಿಜಯ್ ಇಂದರ್ ಸಿಂಗ್ಲಾ ಅವರು ತಿಳಿಸಿದ್ದಾರೆ, ಹಾಗೂ ಇದಕ್ಕೆ ಮುಖ್ಯಮಂತ್ರಿ ಅಮರಿಂದರ್ ಸಿಂಗ್ ಒಪ್ಪಿಗೆಯನ್ನು ನೀಡಿದ್ದಾರೆ ಎನ್ನಲಾಗಿದೆ.
* ಪ್ರಸ್ತುತ ಭಾರತದ ಪುರುಷರ ಹಾಕಿ ತಂಡವು '4' ದಶಕಗಳ ಬಳಿಕ ಟೋಕಿಯೋ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದು ಇತಿಹಾಸವನ್ನು ಸೃಷ್ಟಿಸಿದೆ, ಈ ಹಿನ್ನಲೆಯಿಂದಾಗಿ ಪಂಜಾಬ್'ನ ಶಾಲೆಗಳಿಗೆ ಫುಟ್ಬಾಲ್ ತಂಡದ ನಾಯಕ ಮನ್‌ಪ್ರೀತ್ ಸಿಂಗ್, ಉಪನಾಯಕ ಹರ್ಮನ್‌ಪ್ರೀತ್ ಸಿಂಗ್, ಮನದೀಪ್ ಸಿಂಗ್, ಶಂಷೇರ್ ಸಿಂಗ್, ರೂಪಿಂದರ್ ಪಾಲ್ ಸಿಂಗ್, ಹಾರ್ದಿಕ್ ಸಿಂಗ್, ಗುರ್ಜಂತ್ ಸಿಂಗ್ ಮತ್ತು ಸಿಮ್ರನ್ ಜೀತ್ ಸಿಂಗ್ ಅವರ ಹೆಸರುಗಳನ್ನು ಇಡಲಾಗುತ್ತಿದೆ ಎಂದು ತಿಳಿಸಿದ್ದಾರೆ

## ಬಿಹಾರ ಮುಖ್ಯಮಂತ್ರಿ ವೃಕ್ಷಗಳಿಗೆ ರಾಖಿ ಕಟ್ಟಿ ಪರಿಸರ ಸಂರಕ್ಷಣೆ ಜಾಗೃತಿ ಮೂಡಿಸಿದ್ದಾರೆ



* ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ರಕ್ಷಾಬಂಧನ ದಿನದ ಅಂಗವಾಗಿ ವೃಕ್ಷಗಳಿಗೆ(ಮರ) ರಾಖಿ ಕಟ್ಟಿ ಪರಿಸರ ಸಂರಕ್ಷಣೆ ಕುರಿತು ಜಾಗೃತಿಯನ್ನು ಮೂಡಿಸಿದ್ದಾರೆ.
* ಪ್ರಸ್ತುತ ಬಿಹಾರ ರಾಜ್ಯದ ಎನ್‌ಡಿಎ ಸರ್ಕಾರವು 2012 ರಿಂದ ಈ ರಕ್ಷಾಬಂಧನ ದಿನವನ್ನು 'ವೃಕ್ಷ(ಮರ) ರಕ್ಷಾ ದಿನ' ಎಂದು ಆಚರಣೆ ಮಾಡುತ್ತಿದೆ.
* ಬಿಹಾರ್ ರಾಜ್ಯದಲ್ಲಿ 'ಜಲ ಜೀವನ್ ಮಿಷನ್' ಯೋಜನೆ ಅಡಿಯಲ್ಲಿ ಸಸಿಗಳನ್ನು ನೆಡಲು ಸರ್ಕಾರವು ಮುಂದಾಗಿದೆ, ಮುಂದಿನ ಪೀಳಿಗೆಗೆ ನಾವುಗಳು ಸಸಿಗಳನ್ನು ನೆಟ್ಟು ಪರಿಸರವನ್ನು ರಕ್ಷಿಸುವ ಕೆಲಸ ಮಾಡಬೇಕಿದೆ ಎಂದು ರಾಜ್ಯದ ಜನರಿಗೆ ತಿಳಿ ಹೇಳಿದರು

## ಬಿಜೆಪಿ ನಾಯಕ ಗಣೇಶನ್ ಮಣಿಪುರದ ರಾಜ್ಯಪಾಲರಾಗಿ ನೇಮಕ



* ತಮಿಳುನಾಡು ರಾಜ್ಯದ ಹಿರಿಯ ಬಿಜೆಪಿ ನಾಯಕ ಎಲ್.ಗಣೇಶನ್ ಅವರನ್ನು ಮಣಿಪುರದ ರಾಜ್ಯಪಾಲರನ್ನಾಗಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರು ನೇಮಕ ಮಾಡಿದ್ದಾರೆ.
* ಬಿಜೆಪಿ ನಾಯಕ ಎಲ್. ಗಣೇಶನ್ ಅವರು ಮಣಿಪುರ ರಾಜ್ಯದ 17 ನೇ ರಾಜ್ಯಪಾಲರಾಗಿ ನೇಮಕಗೊಂಡಿದ್ದಾರೆ
* ಈ ಮೊದಲು ನಜಾ ಹೆಫ್ತುಲ್ಲಾ ಅವರು ಮಣಿಪುರದ ರಾಜ್ಯಪಾಲರಾಗಿದ್ದರು, ಇದೀಗ ಅವರ ಸ್ಥಾನಕ್ಕೆ ಹಿರಿಯ ಬಿಜೆಪಿ ನಾಯಕ ಎಲ್.ಗಣೇಶನ್ ನೇಮಕವಾಗಿದ್ದಾರೆ.
* ಎಲ್.ಗಣೇಶನ್ ಅವರು 1945 ರ ಫೆಬ್ರವರಿ. 16 ರಂದು ಜನಿಸಿದ್ದಾರೆ, ಹಾಗೂ ಇವರು ಒಬ್ಬ ಭಾರತೀಯ ರಾಜಕಾರಣಿ ಮತ್ತು ಬಿಜೆಪಿ ಪಕ್ಷದ ಹಿರಿಯ ನಾಯಕರಾಗಿದ್ದಾರೆ, ಪ್ರಸ್ತುತ ಪಕ್ಷದ ರಾಷ್ಟ್ರೀಯ ಕೌನ್ಸಿಲ್ ಸದಸ್ಯರಾಗಿದ್ದಾರೆ

## ಉತ್ತರ ಪ್ರದೇಶ ಮಾಜಿ ಮುಖ್ಯಮಂತ್ರಿ ಕಲ್ಯಾಣ್ ಸಿಂಗ್ ನಿಧನ



* ಬಿಜೆಪಿಯ ಹಿರಿಯ ನಾಯಕ ಹಾಗೂ ಉತ್ತರ ಪ್ರದೇಶ ಮಾಜಿ ಮುಖ್ಯಮಂತ್ರಿಯಾಗಿದ್ದ ಕಲ್ಯಾಣ್ ಸಿಂಗ್ ಅವರು ಅನಾರೋಗ್ಯದ ಹಿನ್ನಲೆಯಿಂದಾಗಿ ವಿಧಿವಶರಾಗಿದ್ದಾರೆ, ಇವರ ಈ ನಿಧನಕ್ಕೆ ಈಗಿನ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಕಂಬನಿ ಮಿಡಿದಿದ್ದಾರೆ.
* ಕಲ್ಯಾಣ್ ಸಿಂಗ್ ಅವರು 1992 ರ ಡಿಸೆಂಬರ್ 6 ರಂದು ಅಯೋಧ್ಯೆಯಲ್ಲಿ ಬಾಬರಿ ಮಸೀದಿಯನ್ನು ಧ್ವಂಸಗೊಳಿಸಿದ ಸಂದರ್ಭದಲ್ಲಿ ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗಿದ್ದರು.
* ಕಲ್ಯಾಣ್ ಸಿಂಗ್ ಅವರು ಉತ್ತರಪ್ರದೇಶದ ಮಾಜಿ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ್ದಾರೆ, ಹಾಗೂ ರಾಜಸ್ಥಾನ ಮತ್ತು ಹಿಮಾಚಲ ಪ್ರದೇಶದ ರಾಜ್ಯಪಾಲರಾಗಿ ಸೇವೆ ಸಲ್ಲಿಸಿದ್ದಾರೆ.
* ಪ್ರಸ್ತುತ ಕಲ್ಯಾಣ್ ಸಿಂಗ್ ಅವರು ಮುಂದಾಳತ್ವದಿಂದ ಇದೀಗ ಅಯೋಧ್ಯೆಯಲ್ಲಿ ಭವ್ಯ ರಾಮ ಮಂದಿರ ನಿರ್ಮಾಣವಾಗುತ್ತಿದೆ ಎಂದು ಈಗಿನ ಮುಖ್ಯಮಂತ್ರಿ ಯೋಗಿ ಅವರು ತಿಳಿಸಿದರು.
* ಕಲ್ಯಾಣ್ ಸಿಂಗ್ ಅವರು 1992 ರ ಡಿಸೆಂಬರ್ 6 ರ ಘಟನೆ ಬಳಿಕ ನೈತಿಕ ಹೊಣೆ ಹೊತ್ತು ಉತ್ತರ ಪ್ರದೇಶದ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು

## ವಿಯೆಟ್ನಾಂನ ರಾಯಭಾರಿ ಕಚೇರಿ ಬೆಂಗಳೂರಿನಲ್ಲಿ




* ವಿಯೆಟ್ನಾಂ ನ ಸಮಾಜವಾದಿ ಗಣರಾಜ್ಯದ ರಾಯಭಾರಿಯಾದ ಮಿ. ಫಾಮ್ಸನ್ಹಾವ್ ಕರ್ನಾಟಕದ ಬೆಂಗಳೂರಿನಲ್ಲಿ ತನ್ನ ಪ್ರಪ್ರಥಮ ರಾಯಭಾರಿ ಕಚೇರಿ ತೆರೆದಿರುವದಾಗಿ ಘೋಷಣೆ ಮಾಡಿದ್ದಾರೆ.
* ವಿಯೆಟ್ನಾಂನ ಗೌರವಾನ್ವಿತ ರಾಯಭಾರಿಯಾಗಿ ಮಿ. ಎನ್ ಎ ಶ್ರೀನಿವಾಸಮೂರ್ತಿಯವರನ್ನು ನೇಮಿಸಲಾಗಿತ್ತು, ಇದೀಗ ಮೂರ್ತಿ ಅವರು ಭಾರತದ ಯಾವುದೇ ರಾಜ್ಯದಲ್ಲಿ ಮೊದಲನೇ ಹಾಗೂ ವಿಶ್ವದಲ್ಲಿ 19 ನೇ ಯವರಾಗಿ ಪ್ರಪ್ರಥಮ ಗೌರವಾನ್ವಿತ ರಾಯಭಾರಿಯಾಗಿದ್ದಾರೆ.
* ಭಾರತ ವಿಯೆಟ್ನಾಂನ 26 ನೇ ಹೂಡಿಕೆ ಪಾಲುದಾರನಾಗಿ, ಸುಮಾರು 2 ಬಿಲಿಯನ್ ಡಾಲರ್ಸ್ ಹೂಡಿಕೆ ಮಾಡುತ್ತಿದೆ, ಪ್ರಸ್ತುತ ವಿಯೆಟ್ನಾಂನಲ್ಲಿ ಗೇಮಿಂಗ್, ಆಟೋಮೊಬೈಲ್ ಬಿಡಿಭಾಗಗಳ ತಯಾರಿಕೆ ಮತ್ತು ತಂತ್ರಜ್ಞಾನವಲಯಗಳಿವೆ, ಇದೀಗ ಈ ದೇಶವು ಬೆಂಗಳೂರುನಲ್ಲಿ ಹೂಡಿಕೆ ಮಾಡಲು ಸಹಕಾರ ನೀಡಲಿದೆ ಎಂದು ತಿಳಿದು ಬಂದಿದೆ.
* ವಿಯೆಟ್ನಾಂ ನ ರಾಯಭಾರಿ ಪ್ರಸ್ತುತ ಕರ್ನಾಟಕದ ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿ ಹಾಗೂ ಹೆಚ್ಚುವರಿ ಮುಖ್ಯಕಾರ್ಯದರ್ಶಿಯಾದ, ಡಾ. ರಜನೀಶ್ ಗೋಯಲ್ ಅವರನ್ನು ಭೇಟಿಯಾಗಿ ಬೆಂಗಳೂರಿನ ತಂತ್ರಜ್ಞಾನ ಸಮ್ಮೇಳನಕ್ಕೆ ಬೆಂಬಲ ನೀಡುವಂತೆ ಮನವಿ ಮಾಡಿದ್ದಾರೆ.
* ವಿಯೆಟ್ನಾಂ ವಿಶ್ವದಲ್ಲಿ ಅತ್ಯಂತ ವೇಗವಾಗಿ ಹಾಗೂ ಆರ್ಥಿಕವಾಗಿ ಬೆಳೆಯುತ್ತಿರುವ ದೇಶವಾಗಿದೆ ಎಂದು ಮಿ. ಮೂರ್ತಿ ಅವರು ತಿಳಿಸಿದ್ದಾರೆ

## ಇಸ್ಮಾಯಿಲ್ ಯಾಕೂಬ್ ಮಲೇಶ್ಯಾದ ನೂತನ ಪ್ರಧಾನಿಯಾಗಿ ಪ್ರಮಾಣಚನ ಸ್ವೀಕಾರ



* ಇಸ್ಮಾಯಿಲ್ ಸಬ್ರಿ ಯಾಕೂಬ್ ಅವರು ಇದೀಗ ಮಲೇಶ್ಯಾದ ನೂತನ ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದಾರೆ, ಈ ಮೊದಲು ಇವರು ಮಾಜಿ ಉಪಪ್ರಧಾನಿ, ಯುನೈಟೆಡ್ ಮಲಯಾಸ್ ನ್ಯಾಷನಲ್ ಆರ್ಗನೈಸೇಷನ್ ಮುಖಂಡರಾಗಿದ್ದರು ಎಂದು ತಿಳಿದು ಬಂದಿದೆ.
* ನೂತನ ಪ್ರಧಾನಿಯಾಗಿ ಇಸ್ಮಾಯಿಲ್ ಯಾಕೂಬ್ ಪ್ರಮಾಣಚನ ಸ್ವೀಕಾರ ಸಂಧರ್ಭದಲ್ಲಿ ಮಲೇಶ್ಯಾದ ದೊರೆ ಸುಲ್ತಾನ್ ಅಬ್ದುಲ್ಲಾ ಸುಲ್ತಾನ್ ಅಹ್ಮ ಶಾ ಅವರು ಉಪಸ್ಥಿತರಿದ್ದರು.
* ಮಲೇಶ್ಯಾ ದೇಶವು 1957 ರಲ್ಲಿ ಬ್ರಿಟನ್ನಿಂದ ಸ್ವತಂತ್ರಗೊಂಡಿದೆ

## ಅಂಡರ್ 20 ವಿಶ್ವ ಅಥ್ಲೆಟಿಕ್ಸ್ ನಲ್ಲಿ ಭಾರತದ ಅಮಿತ್ ಖತ್ರಿಗೆ ರೇಸ್ ವಾಕ್ ನಲ್ಲಿ ಬೆಳ್ಳಿ ಪದಕ



* ಪ್ರಸ್ತುತ ಕೀನ್ಯಾದ ನೈರೋಬಿಯಲ್ಲಿ ನಡೆಯುತ್ತಿರುವ 20 ವರ್ಷದ ಒಳಗಿನವರ ವಿಶ್ವ ಅಥ್ಲೆಟಿಕ್ಸ್'ನಲ್ಲಿ 10 ಕೀ. ಮೀ. ರೇಸ್ ವಾಕ್'ನಲ್ಲಿ ಭಾರತದ ಅಮಿತ್ ಖತ್ರಿ ಅವರು ಬೆಳ್ಳಿ ಪದಕ ಜಯಿಸಿದ್ದಾರೆ.
* ಇದೆ ಕ್ರೀಡಾಕೂಟದಲ್ಲಿ ಇತ್ತೀಚಿಗೆ ಭಾರತೀಯ 4x400m ಮಿಶ್ರ ರಿಲೇ ತಂಡವು ಕಂಚಿನ ಪದಕವನ್ನು ಜಯಿಸಿದೆ.
* ಕೀನ್ಯಾದ ಹೆರಿಸ್ಟೋನ್ ವನ್ಯೋನಿ ಅವರು 10 ಕಿ.ಮೀ. ರೇಸ್ ವಾಕ್ ನಲ್ಲಿ ಚಿನ್ನದ ಪದಕವನ್ನು ಜಯಿಸಿದ್ದಾರೆ.
* ಸ್ಪೇನ್ ನ ಪೌಲ್ ಮೆಕ್ ಗ್ರಾಥ್ ಅವರು ಕಂಚಿನ ಪದಕವನ್ನು ಜಯಿಸಿದ್ದಾರೆ

## ಮಣಿಕಾ ಸತ್ಯನ್'ಗೆ ವಿಶ್ವ ಟೇಬಲ್ ಟೂರ್ನಿಯ ಮಿಶ್ರ ಡಬಲ್ಸ್ ಪ್ರಶಸ್ತಿ



* ಪ್ರಸ್ತುತ ವಿಶ್ವ ಟೇಬಲ್ ಟೂರ್ನಿಯ ಮಿಶ್ರ ಡಬಲ್ಸ್ ವಿಭಾಗದಲ್ಲಿ ಭಾರತದ ಮಣಿಕಾ ಬಾತ್ರಾ ಮತ್ತು ಜಿ.ಸತ್ಯನ್ ಅವರು ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ, ಭಾರತೀಯ ಈ ಜೋಡಿಯು ಫೈನಲ್'ನಲ್ಲಿ ಹಂಗರಿಯ ಜೋಡಿಯನ್ನು ಸೋಲಿಸಿ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ.
* ಈ ಫೈನಲ್ ಪಂದ್ಯದಲ್ಲಿ ಭಾರತದ ಜೋಡಿಯು 11 9, 9 11, 12 10, 11 6ರಿಂದ ಹಂಗರಿಯ ಡೋರಾ ಮ್ಯಾಡರಾಸ್ ಹಾಗೂ ನ್ಯಾಂದೊರ್ ಎಸೆಕಿ ಅವರನ್ನು ಸೋಲಿಸಿದೆ.
* ಈ ಮೊದಲು ಏಷ್ಯನ್ ಗೇಮ್ಸ್‌ನಲ್ಲಿ ಮಣಿಕಾ ಅವರು ಶರತ್ ಕಮಲ್ ಜೋಡಿಯು ಕಂಚಿನ ಪದಕ ಜಯಿಸಿತ್ತು.

## ವಿಶ್ವ ಸೊಳ್ಳೆ ದಿನ




* ಪ್ರತಿ ವರ್ಷವು ಆಗಸ್ಟ 20 ರಂದು ವಿಶ್ವ ಸೊಳ್ಳೆ ದಿನವನ್ನು ಸೊಳ್ಳೆಗಳಿಂದ ಉಂಟಾಗುವ ರೋಗಗಳ ಬಗ್ಗೆ ಜಾಗೃತಿ ಮತ್ತು ಜಾಗೃತಿ ಮೂಡಿಸಲು ಆಚರಣೆ ಮಾಡಲಾಗುತ್ತದೆ.
* ಹೆಣ್ಣು ಸೊಳ್ಳೆಗಳು ಮತ್ತು ಮಲೇರಿಯಾಗಳ ನಡುವಿನ ಸಂಬಂಧವನ್ನು ಪತ್ತೆಹಚ್ಚಿದಕ್ಕಾಗಿ ಈ ದಿನದಂದು ಸರ್ ರೊನಾಲ್ಡ್ ರಾಸ್ ಅವರನ್ನು ನೆನಪಿಸಲಾಗುತ್ತದೆ.
* ಇತಿಹಾಸದಲ್ಲಿಯೇ ಶತಮಾನಗಳಿಂದ ಜೀವಿಸಿದ ಏಕೈಕ ಪರಭಕ್ಷಕ ಸೊಳ್ಳೆಗಳು, ಇವುಗಳಿಂದ ಮಲೇರಿಯಾದಂತಹ ರೋಗಗಳನ್ನು ಹರಡುವ ಮೂಲಕ ಮನುಷ್ಯನ ಸಾವಿಗೆ ಕಾರಣವಾಗಿವೆ.
* ಸೊಳ್ಳೆಗಳು ಪ್ರತಿ ವರ್ಷ ಸುಮಾರು 7 ಲಕ್ಷ ಜನರನ್ನು ಕೊಲ್ಲಲು ಕಾರಣವಾಗಿವೆ.
* 2021 ರ ವಿಶ್ವ ಸೊಳ್ಳೆ ದಿನವನ್ನು 'ಶೂನ್ಯ ಮಲೇರಿಯಾ ಗುರಿಯನ್ನು ತಲುಪುವುದು' ಎಂಬ ವಿಷಯದ ಅಡಿಯಲ್ಲಿ ಆಚರಣೆ ಮಾಡಲಾಗಿದೆ.
* ಸರ್ ರೊನಾಲ್ಡ್ ರಾಸ್ ಅವರ ಮಲೇರಿಯಾ ರೋಗವನ್ನು ಪತ್ತೆ ಮಾಡಿರುವದಕ್ಕಾಗಿ ಈ ದಿನವನ್ನು ಆಚರಿಸಲಾಗುತ್ತದೆ.
* ಬ್ರಿಟಿಷ್ ವೈದ್ಯ ಸರ್ ರೊನಾಲ್ಡ್ ರಾಸ್ ಅವರು ಈ ಹಿಂದೆ 1897 ರಲ್ಲಿ ಅನಾಫಿಲಿಸ್ ಎಂಬ ಹೆಣ್ಣು ಸೊಳ್ಳೆಗಳು ಮನುಷ್ಯರಲ್ಲಿ ಮಲೇರಿಯಾ ರೋಗ ಹರಡಲು ಕಾರಣವಾಗಿವೆ ಎಂದು ಪತ್ತೆ ಹಚ್ಚಿದ್ದಾರೆ.
* ಪ್ರಸ್ತುತ 1930 ರ ಆಗಸ್ಟ 20 ರಿಂದ ಸೊಳ್ಳೆಗಳ ದಿನವನ್ನು ಆಚರಣೆ ಮಾಡಲಾಗುತ್ತಿದೆ.

# 24-08-2021

## ತಾಲಿಬಾನ್ ಅಫ್ಘಾನಿಸ್ತಾನದ ಹೆರಾತ್ ಪ್ರಾಂತ್ಯದಲ್ಲಿ ಸಹ ಶಿಕ್ಷಣ ನಿಷೇಧಿಸಿದೆ



* ಇತ್ತೀಚಿಗೆ ತಾಲಿಬಾನ್ ಉಗ್ರರು ಅಫ್ಘಾನಿಸ್ತಾನವನ್ನು ವಶಪಡಿಸಿಕೊಂಡಿದ್ದಾರೆ, ಆದರೆ ತಾಲಿಬಾನ್ ಉಗ್ರರು ಮಹಿಳಾ ಹಕ್ಕುಗಳನ್ನು ಗೌರವಿಸುವುದಾಗಿ ಪ್ರತಿಜ್ಞೆ ಮಾಡಿತ್ತು, ಇದಾದ ಕೆಲವೇ ದಿನಗಳಲ್ಲಿ ಅಫ್ಘಾನಿಸ್ತಾನದ ಹೆರಾತ್ ಪ್ರಾಂತ್ಯದ ತಾಲಿಬಾನ್ ಅಧಿಕಾರಿಗಳು ಸರ್ಕಾರಿ ಮತ್ತು ಖಾಸಗಿ ವಿಶ್ವವಿದ್ಯಾನಿಲಯಗಳಲ್ಲಿ ಸಹ ಶಿಕ್ಷಣವನ್ನು ನಿಷೇಧಿಸಿದ್ದಾರೆ, ಎಂದು ಅಫ್ಘಾನಿಸ್ತಾನ ಉನ್ನತ ಶಿಕ್ಷಣದ ಮುಖ್ಯಸ್ಥ ಮುಲ್ಲಾ ಫರೀದ್ ಅವರು ಹೇಳಿದ್ದಾರೆ.

* ಪ್ರಸ್ತುತ ಸಹ ಶಿಕ್ಷಣವನ್ನು ನಿಷೇಧಿಸುವ ಈ ನಿರ್ಧಾರವನ್ನು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರು, ಹಾಗೂ ಖಾಸಗಿ ಸಂಸ್ಥೆಗಳ ಮಾಲೀಕರು ಮತ್ತು ತಾಲಿಬಾನ್ ಅಧಿಕಾರಿಗಳ ನಡುವಿನ ಸಭೆಯಲ್ಲಿ ಕೈಗೊಳ್ಳಲಾಗಿದೆ ಎಂದು ಅಲ್ಲಿನ ಸುದ್ದಿವಾಹಿನಿ ಖಾಮಾ ಪ್ರೆಸ್ ನ್ಯೂಸ್ ಮಾಹಿತಿ ನೀಡಿದೆ.

* ತಾಲಿಬಾನಿಗಳು ಅಫ್ಘಾನಿಸ್ತಾನ ವಶಪಡಿಸಿಕೊಂಡ ನಂತರ ಹೊರಡಿಸಿದ ಮೊದಲ 'ಫತ್ವಾ' ಇದಾಗಿದೆ.

* ಪ್ರಸ್ತುತ ಈ ಸಹ ಶಿಕ್ಷಣವು ಸಮಾಜದಲ್ಲಿನ ಎಲ್ಲಾ ಅನಿಷ್ಟಗಳ ಮೂಲವಾಗಿದೆಎಂದುಫರೀದ್ಅವರುತಿಳಿಸಿದ್ದಾರೆ.

## ಫೇಸ್‌ಬುಕ್ ನಿಂದ ಸಣ್ಣ ಉದ್ಯಮಗಳಿಗೆ ಸಾಲ ನೀಡಲು ಒಪ್ಪಂದ




* ಪ್ರಸ್ತುತ ಫೇಸ್‌ಬುಕ್ ಇಂಡಿಯಾ ಜಾಹೀರಾತುಗಳನ್ನು ಉತ್ತೇಜಿಸುವ ನಿಟ್ಟಿನಲ್ಲಿ ಭಾರತದ ಉದ್ಯಮ ವೇದಿಕೆ ಇಂಡಿಫೈ ಜೊತೆ ಒಪ್ಪಂದವನ್ನು ಮಾಡಿಕೊಂಡಿದೆ, ಈ ಒಪ್ಪಂದವು ಸಣ್ಣ ಉದ್ಯಮಗಳಿಗೆ ಸಾಲ ಪಡೆಯಲು ಸಹಾಯವಾಗಲಿದೆ.

* ಪ್ರಸ್ತುತ ಫೇಸ್‌ಬುಕ್ ಅಥವಾ ಅದರ ಗ್ರೂಪ್ ಆಯಪ್‌ಗಳಲ್ಲಿ ಕನಿಷ್ಠ 180 ದಿನಗಳವರೆಗೆ ಜಾಹೀರಾತು ನೀಡುವ ಸಣ್ಣ ಉದ್ಯಮಗಳಿಗೆ ವಾರ್ಷಿಕ ಶೇ. 20 ರ ಬಡ್ಡಿದರದಲ್ಲಿ 50,00,00 ರಿಂದ ರೂ. 50,00,000 ರೂ. ವರೆಗೆ ಸಾಲ ನೀಡಲಾಗುತ್ತದೆ ಎಂದು ಫೇಸ್‌ಬುಕ್‌ನ ಉಪಾಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಅಜಿತ್ ಮೋಹನ್ ಅವರು ವರ್ಚ್ಯುವಲ್ ಸಭೆಯಲ್ಲಿ ತಿಳಿಸಿದ್ದಾರೆ.

* ಫೇಸ್ಬುಕ್ ಹಾಗೂ ಈ ಇಂಡಿಫೈ ಜೊತೆ ಒಪ್ಪಂದವು ಮಹಿಳಾ ನೇತೃತ್ವದ ವ್ಯಾಪಾರಗಳಿಗೆ ಸಾಲಗಳನ್ನು ಶೇ. 0.2 ಬಡ್ಡಿದರದಲ್ಲಿ ಕಡಿಮೆಗೊಳಿಸುತ್ತದೆ, ಹಾಗೂ ಸಣ್ಣ ಉದ್ಯಮಗಳಿಗೆ ಜಾಗತಿಕ ಮತ್ತು ರಾಷ್ಟ್ರೀಯ ವ್ಯವಹಾರಗಳಾಗಲು ಸಹಾಯ ಮಾಡುತ್ತದೆ.

## '3' ವರ್ಷ ವಯಸ್ಸಿನ ಮಕ್ಕಳಿಗೆ ಕೋವಿಡ್ ಪ್ರತಿಕಾಯ ಪರೀಕ್ಷೆಗಳನ್ನು ಆರಂಭಿಸಿದ ಇಸ್ರೇಲ್



* ಕೋವಿಡ್ 19 ಸಾಂಕ್ರಾಮಿಕ ರೋಗದ ವಿರುದ್ಧ ಪ್ರತಿಕಾಯವನ್ನು ಅಭಿವೃದ್ಧಿಪಡಿಸಿದೆ, ಇಸ್ರೇಲ್ ಇದೀಗ ಮೂರು ವರ್ಷ ವಯಸ್ಸಿನ ಮಕ್ಕಳಿಗೆ ಪ್ರತಿಕಾಯ ಪರೀಕ್ಷೆಯನ್ನು ಆರಂಭಿಸಿದೆ.

* ಇಸ್ರೇಲ್ ನಲ್ಲಿ ಶಾಲೆಗಳನ್ನು ಆರಂಭಿಸುವ ಹಿನ್ನೆಲೆಯಲ್ಲಿ ಈ ಪರೀಕ್ಷೆಗಳನ್ನು ಪ್ರಾರಂಭಿಸಲಾಗಿದೆ.

* ಪ್ರಸ್ತುತ ಇಸ್ರೇಲ್ ನಲ್ಲಿ 12 ಮತ್ತು ಅದಕ್ಕೂ ಮೇಲ್ಪಟ್ಟ ವಯಸ್ಸಿನ ಮಕ್ಕಳಿಗೆ ಲಸಿಕೆ ಹಾಕಲು ಪಾರಾರಂಭಿಸಿದೆ.

* ಈ ಪರೀಕ್ಷೆಯಿಂದ ಕೋವಿಡ್ 19 ವೈರಸ್ ವಿರುದ್ಧ ಎಷ್ಟು ಮಕ್ಕಳು ಬಲವಾದ ಆಂಟಿಬಾಡಿ ರಕ್ಷಣೆಯನ್ನು ಹೊಂದಿದ್ದಾರೆ ಎಂಬುದನ್ನು ಕಂಡುಹಿಡಿಯುವ ಉದ್ದೇಶದಿಂದ ಸಾಮೂಹಿಕ ಕೋವಿಡ್ 19 ಪ್ರತಿಕಾಯ ಪರೀಕ್ಷೆಗಳನ್ನು ನಡೆಸಲಾಗುತ್ತದೆ.

* ಪ್ರಸ್ತುತ ಆರೋಗ್ಯ ಸಚಿವಾಲಯ, ಶಿಕ್ಷಣ ಸಚಿವಾಲಯ ಮತ್ತು ಸೇನೆಯ ಹೋಮ್ ಫ್ರಂಟ್ ಆಜ್ಞೆಯ ಈ ಸಮೀಕ್ಷೆಯನ್ನು ನಡೆಸುತ್ತವೆ.

## ಈಜಿಪ್ಟ ಗಾಜಾ ಗಡಿಯನ್ನು ಮುಚ್ಚಿದೆ



* ಈಜಿಪ್ಟ ರಾಷ್ಟ್ರವು ಹಮಾಸ್ ಆಡಳಿತಗಾರರೊಂದಿಗಿನ ಉದ್ವಿಗ್ನತೆ ಕಾರಣದಿಂದಾಗಿ ತನ್ನ ಮುಖ್ಯ ಗಡಿ ದಾಟುವ ಸ್ಥಳವನ್ನು ಗಾಜಾ ಪಟ್ಟಿಯೊಂದಿಗೆ ಮುಚ್ಚಿದೆ.

* ಮೊದಲ ಬಾರಿಗೆ 2021 ರಲ್ಲಿ ಈ ರಫಾ ಕ್ರಾಸಿಂಗ್ ನ್ನು ಕೆಲಸದ ದಿನದಂದು ಮುಚ್ಚಲಾಯಿತ್ತು, ಮತ್ತೇ 2021 ರ ಮೇ ನಲ್ಲಿ ಇಸ್ರೇಲ್ ಮತ್ತು ಹಮಾಸ್ ನಡುವಿನ 11 ದಿನಗಳ ಯುದ್ಧದ ಸಮಯದಲ್ಲಿ ಈ ದಾಟುವಿಕೆಯನ್ನು ಪುನಃ ತೆರೆಯಲಾಯಿತು.

* ಈಜಿಪ್ಟ ಅಧಿಕಾರಿಗಳ ನೀಡಿರುವ ಮಾಹಿತಿಯ ಪ್ರಕಾರ, ಪ್ರಸ್ತುತ ಇಸ್ರೇಲ್ ಮತ್ತು ಹಮಾಸ್ ನಡುವೆ ದೀರ್ಘಾವಧಿಯ ಕದನ ವಿರಾಮಕ್ಕೆ ಬ್ರೇಕ್ ನೀಡಲು ಗಡಿಯನ್ನು ಮುಚ್ಚಲಾಗಿದೆ ಎಂದು ತಿಳಿಸಿದ್ದಾರೆ.

* ಗಾಜಾ ಪಟ್ಟಿಯು ಮೆಡಿಟರೇನಿಯನ್ ಸಮುದ್ರದ ಪೂರ್ವ ಕರಾವಳಿಯಲ್ಲಿನ ಸ್ವಯಂ ಆಡಳಿತದ ಪ್ಯಾಲೇಸ್ಟಿನಿಯನ್ ಪ್ರದೇಶವಾಗಿದೆ, ಈ ಪ್ರದೇಶವು ಈಜಿಪ್ಟ ಹಾಗೂ ಇಸ್ರೇಲ್ ರಾಷ್ಟ್ರಗಳೊಂದಿಗೆ ತನ್ನ ಗಡಿಯನ್ನು ಹಂಚಿಕೊಂಡಿದೆ.

* ಪ್ರಸ್ತುತ ಗಾಜಾ ಪಟ್ಟಿಯು ಪ್ಯಾಲೇಸ್ಟಿನಿಯನ್ ಉಗ್ರಗಾಮಿ ಇಸ್ಲಾಮಿಕ್ ಸಂಘಟನೆಯಾಗಿದೆ, ಹಾಗೂ ಇದು 2006 ರ ಚುನಾವಣೆಯ ನಂತರ ಅಧಿಕಾರವನ್ನು ಪಡೆದುಕೊಂಡುಆಡಳಿತನಡೆಸುತ್ತಿದೆ.

## ಯುಕೆ ನಲ್ಲಿ ಕ್ರಿಪ್ಟೋ ಖರೀದಿ ಮತ್ತು ಮಾರಾಟವನ್ನು ಆರಂಭಿಸಿದ 'ಪೇಪಾಲ್'




* ಪ್ರಸ್ತುತ ಪೇಪಾಲ್ (PayPal) ಹೋಲ್ಡಿಂಗ್ಸ್ ಇಂಕ್ ಯುಕೆನಲ್ಲಿ ಕ್ರಿಪ್ಟೋ ಖರೀದಿ ಮತ್ತು ಮಾರಾಟವನ್ನು ಆರಂಭಿಸಿದೆ, ಹಾಗೂ ಯುಕೆಯಲ್ಲಿ ಗ್ರಾಹಕರಿಗೆ ಈಗ ಬಿಟ್ ಕಾಯಿನ್ ಮತ್ತು ಇತರ ಕ್ರಿಪ್ಟೋಕರೆನ್ಸಿಗಳನ್ನು ಖರೀದಿಸಲು, ಮಾರಾಟ ಮಾಡಲು ಮತ್ತು ಹಿಡಿದಿಡಲು ಅವಕಾಶ ನೀಡಿದೆ.
* ಪ್ರಸ್ತುತ ಪೇಪಾಲ್ ಕ್ರಿಪ್ಟೋಕರೆನ್ಸಿಗಳಿಗೆ ಗ್ರಾಹಕರಿಗೆ ಪ್ರವೇಶವನ್ನು ಒದಗಿಸುವ ಅತಿದೊಡ್ಡ ಮುಖ್ಯವಾಹಿನಿಯ ಹಣಕಾಸು ಕಂಪನಿಯಾಗಿದೆ, ಹಾಗೂ ಇದು ವಿಶ್ವಾದ್ಯಂತ 403 ದಶಲಕ್ಷಕ್ಕೂ ಹೆಚ್ಚು ಸಕ್ರಿಯ ಖಾತೆಗಳನ್ನು ಹೊಂದಿದೆ.
* ಪೇಪಾಲ್ ಹೋಲ್ಡಿಂಗ್ಸ್, ಇಂಕ್: ಇದು ಒಂದು ಅಮೇರಿಕದ ಬಹುರಾಷ್ಟ್ರೀಯ ಹಣಕಾಸು ತಂತ್ರಜ್ಞಾನ ಕಂಪನಿಯಾಗಿದೆ, ಈ ಕಂಪನಿಯು ಆನ್‌ಲೈನ್ ಹಣ ವರ್ಗಾವಣೆಯನ್ನು ಬೆಂಬಲಿಸುತ್ತದೆ ಹಾಗೂ ಆನ್‌ಲೈನ್ ಪಾವತಿ ವ್ಯವಸ್ಥೆಯನ್ನು ನಿರ್ವಹಿಸುತ್ತದೆ.
* ಪ್ರಸ್ತುತ ಇದು ಚೆಕ್‌ಗಳು ಮತ್ತು ಮನಿ ಆರ್ಡರ್‌ಗಳಂತಹ ಪೇಪರ್ ಗಳಿಗೆ ಪರ್ಯಾಯ ಎಲೆಕ್ಟ್ರಾನಿಕ್ ವಿಧಾನವಾಗಿ ಕಾರ್ಯನಿರ್ವಹಿಸುತ್ತದೆ.

## ಭಾರತೀಯ ಸೇನೆಯಿಂದ ಮಹಿಳಾ ಅಧಿಕಾರಿಗಳಿಗೆ ಕರ್ನಲ್ ಶ್ರೇಣಿಗೆ ಬಡ್ತಿ



* ಇದೀಗ ಭಾರತೀಯ ಸೇನೆಯ ಆಯ್ಕೆ ಮಂಡಳಿಯು 26 ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದ ಐದು (5) ಮಹಿಳಾ ಅಧಿಕಾರಿಗಳಿಗೆ ಕರ್ನಲ್ ಶ್ರೇಣಿಗೆ ಬಡ್ತಿ ನೀಡಲಾಗುತ್ತಿದೆ.
* ಪ್ರಸ್ತುತ 'ಕಾರ್ಪ್ಸ್ ಆಫ್ ಸಿಗ್ನಲ್ಸ್', 'ಕಾರ್ಪ್ಸ್ ಆಫ್ ಎಲೆಕ್ಟ್ರಾನಿಕ್' ಮತ್ತು 'ಮೆಕ್ಯಾನಿಕಲ್ ಎಂಜಿನಿಯರ್ಸ್' ಹಾಗೂ 'ಕಾರ್ಪ್ಸ್ ಆಫ್ ಎಂಜಿನಿಯರ್ಸ್' ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿರುವ ಮಹಿಳಾ ಅಧಿಕಾರಿಗಳಿಗೆ ಕರ್ನಲ್ ಶ್ರೇಣಿಗೆ ಬಡ್ತಿ ನೀಡಲು ಇದೇ ಮೊದಲು ಬಾರಿ ಭಾರತೀಯ ಸೇನೆ ಮುಂದಾಗಿದೆ.
* ಇದಕ್ಕೂ ಮೊದಲು 'ಸೇನಾ ವೈದ್ಯಕೀಯ ಪಡೆ' ಮತ್ತು 'ನ್ಯಾಯಾಧೀಶ ಅಡ್ವೊಕೇಟ್ ಜನರಲ್' ಹಾಗೂ 'ಸೇನಾ ಶಿಕ್ಷಣ ಪಡೆ' ಪಡೆದಿರುವ ಮಹಿಳಾ ಅಧಿಕಾರಿಗಳಿಗೆ ಮಾತ್ರ ಕರ್ನಲ್ ಹುದ್ದೆಗೆ ಬಡ್ತಿ ನೀಡಲಾಗುತ್ತಿತ್ತು.
* ಪ್ರಸ್ತುತ ಕರ್ನಲ್ ಶ್ರೇಣಿಗೆ ಆಯ್ಕೆಯಾದ '5' ಮಹಿಳಾ ಅಧಿಕಾರಿಗಳು: ಲೆಫ್ಟಿನೆಂಟ್ ಕರ್ನಲ್ ಸಂಗೀತಾ ಸರ್ದಾನ, ಲೆಫ್ಟಿನೆಂಟ್ ಕರ್ನಲ್ ಸೋನಿಯಾ ಆನಂದ್, ಲೆಫ್ಟಿನೆಂಟ್ ಕರ್ನಲ್ ನವನೀತ್ ದುಗ್ಗಲ್ ಹಾಗೂ ಲೆಫ್ಟಿನೆಂಟ್ ಕರ್ನಲ್ ರೀನು ಖನ್ನಾ, ಮತ್ತು ಲೆಫ್ಟಿನೆಂಟ್ ಕರ್ನಲ್ ರಿಚಾ ಸಾಗರ್.

## ಅತ್ಯುತ್ತಮ ಸಿಬ್ಬಂದಿ ಸೇವೆಗೆ ಪ್ರಶಸ್ತಿ ಪಡೆದ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ



* ಪ್ರಸ್ತುತ ಕರ್ನಾಟಕ ರಾಜ್ಯದ ಬೆಂಗಳೂರು ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣವು ಇದೀಗ ಮತ್ತೊಂದು ಪ್ರಶಸ್ತಿಯನ್ನು ಪಡೆದುಕೊಂಡಿದೆ, ಅದುವೇ 'ಸ್ಕೈಟ್ರಾಕ್ಸ್ ವರ್ಲ್ಡ್ ಏರ್‌ಪೋರ್ಟ್ ಅವಾರ್ಡ್ಸ್' ನೀಡುವ 'ಭಾರತ ಮತ್ತು ಮಧ್ಯ ಏಷ್ಯಾದಲಿಯ್ಲೇ ಅತ್ಯುತ್ತಮ ವಿಮಾನ ನಿಲ್ದಾಣ ಸಿಬ್ಬಂದಿ' (ಬೆಸ್ಟ್ ಏರ್‌ಪೋರ್ಟ್ ಸ್ಟಾಫ್ ಇನ್ ಇಂಡಿಯಾ ಆಯಂಡ್ ಸೆಂಟ್ರಲ್ ಏಷ್ಯಾ) ಪ್ರಶಸ್ತಿಯನ್ನು ಪಡೆದುಕೊಂಡಿದೆ.
* ಈ ಮಾಹಿತಿಯನ್ನು ಬೆಂಗಳೂರು ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಲಿಮಿಟೆಡ್ ಸಿಇಓ (CEO) ಹರಿ ಮರಾರ್ ಅವರು ತಿಳಿಸಿದ್ದಾರೆ.
* ಬೆಂಗಳೂರು ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣವು ಇದೇ ವರ್ಷದಲ್ಲಿ '3' ಪ್ರಶಸ್ತಿಗಳನ್ನೂ ಪಡೆದುಕೊಂಡಿದೆ, ಏರ್‌ಪೋರ್ಟ್ಸ್ ಕೌನ್ಸಿಲ್ ಇಂಟರ್‌ನ್ಯಾಷನಲ್'ನೀಡುವ ವಿಶ್ವದ 'ವಾಯ್ಸ್ ಆಫ್ ದಿ ಕಸ್ಟಮರ್' ಮಾನ್ಯತೆ, ಹಾಗೂ ಎಸಿಐ ಏರ್‌ಪೋರ್ಟ್ ಸರ್ವಿಸ್ ಕ್ವಾಲಿಟಿ ಅವಾರ್ಡ್ ಪಡೆದಿದೆ, ಹಾಗೂ ಮತ್ತೊಂದು ರೋಲ್ ಆಫ್ ಎಕ್ಸಲೆನ್ಸ್ ಫಾರ್ ದಿ ಇಯರ್ ಪ್ರಶಸ್ತಿಯನ್ನೂ ಕೂಡ ಪಡೆದಿದೆ.

## ಗೋವಾ ರಾಜ್ಯದಲ್ಲಿ ಇದೀಗ ಆಲ್ಕೋಹಾಲ್ ಮ್ಯೂಸಿಯಂ




* ಪ್ರಸ್ತುತ ಪ್ರವಾಸಿ ರಾಜ್ಯವಾದ ಗೋವಾದಲ್ಲಿ ಮೊದಲ ಆಲ್ಕೋಹಾಲ್ ಮ್ಯೂಸಿಯಂ ಆರಂಭಿಸಲಾಗಿದೆ, ಪ್ರಸ್ತುತ ಸ್ಥಳೀಯ ವಿಶೇಷ ಮದ್ಯ ಫೆನ್ನಿಯ ಪ್ರಸಿದ್ಧತೆಯನ್ನು ದೇಶ ವಿದೇಶಕ್ಕೆ ತಲುಪುವಂತೆ ಮಾಡಲು ಈ ಮ್ಯೂಸಿಯಂ ತೆರೆಯಲಾಗಿದೆ ಎಂದು ತಿಳಿದು ಬಂದಿದೆ.
* ಇದೀಗ ಗೋವಾ ರಾಜ್ಯದಲ್ಲಿ ಉದ್ಯಮಿ ನಂದನ್ ಕುಡಡ್ಕರ್ ಅವರು 'ಆಲ್ ಎಬೌಟ್ ಆಲ್ಕೋಹಾಲ್' (All About Alcohol) ಹೆಸರಿನ ಮ್ಯೂಸಿಯಂ ಪ್ರಾರಂಭಿಸಿದ್ದಾರೆ.
* ಪ್ರಸ್ತುತ ಗೋವಾದ ಪರಂಪರೆ ಹಾಗೂ ಪೆನ್ನಿಯ ಮೂಲ, ಇದು ಬ್ರೆಜಿಲ್‌ನಿಂದ ಗೋವಾಕ್ಕೆ ಬಂದಿದೆ, ಇದರ ಮಾಹಿತಿಯನ್ನೂ ಜನರಿಗೆ ತಿಳಿಸಲು ಈ ಮ್ಯೂಸಿಯಂ ಆರಂಭಿಸಲಾಗಿದೆ ಎಂದಿದ್ದಾರೆ.

* ಪೆನ್ನಿ ಎಂಬುವುದು ಗೋವಾ ರಾಜ್ಯದಲ್ಲಿ ಸಿದ್ಧವಾಗುತ್ತಿರುವ ಮದ್ಯ(ಆಲ್ಕೋಹಾಲ್), ಈ ಆಲ್ಕೋಹಾಲ್ ವನ್ನು 2016 ರಲ್ಲಿ ಗೋವಾ ರಾಜ್ಯದ ಪಾರಂಪರಿಕ ಮದ್ಯ ಎಂದು ಸರ್ಕಾರ ಗುರುತಿಸಿದೆ.
* ಈ ಹಿಂದೆ ಪೋರ್ಚುಗೀಸರು 1700 ರಲ್ಲಿ ಬ್ರೆಜಿಲ್‌ನಿಂದ ಗೇರು ಬೀಜಗಳನ್ನೂ ತಂದು ಗೋವಾದಲ್ಲಿ ಬೆಳೆಯಲು ಆರಂಭಿಸಿದರು, ನಂತರದ ದಿನಗಳಲ್ಲಿ ಗೇರು ಹಣ್ಣುಗಳಿಂದ ಪೆನ್ನಿ ಮದ್ಯ ತಯಾರಿಸಲು ಆರಂಭಿಸಿದ್ದರು.

## ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್ ನಲ್ಲಿ ಬೆಳ್ಳಿ ಪದಕ ಪಡೆದ ಶೈಲಿ ಸಿಂಗ್



* 20 ವರ್ಷ ಒಳಗಿನವರ ವಿಶ್ವ ಅಥ್ಲೆಟಿಕ್ಸ್ ಕೂಟದ ಮಹಿಳೆಯರ ಲಾಂಗ್ ಜಂಪ್ ವಿಭಾಗದಲ್ಲಿ ಭಾರತದ ಅಥ್ಲೀಟ್ ಶೈಲಿ ಸಿಂಗ್ ಅವರು 6.59 ಮೀ. ದೂರ ಜಿಗಿದು ಬೆಳ್ಳಿ ಪದಕವನ್ನು ಜಯಿಸಿದ್ದಾರೆ.
* ಸ್ವೀಡನ್ ದೇಶದ ಮಾಜಾ ಆಸ್ಕಾಗ್ ಅವರು ಈ ಮಹಿಳೆಯರ ಲಾಂಗ್‌ಜಂಪ್ ವಿಭಾಗದಲ್ಲಿ 6.60 ಮೀ. ದೂರ ಜಿಗಿದು ಚಿನ್ನದ ಪದಕವನ್ನು ಪಡೆದುಕೊಂಡಿದ್ದಾರೆ.
* ಉಕ್ರೇನ್ ನ ಮರಿಯಾ ಹಾರಿಲೊವಾ ಅವರು 6.50 ಮೀ. ದೂರ ಜಿಗಿದು ಕಂಚಿನ ಪದಕವನ್ನು ಜಯಿಸಿದರು.
* ಇದಕ್ಕೂ ಮೊದಲು ಇದೇ ಕ್ರೀಡಾಕೂಟದಲ್ಲಿ ಭಾರತದ 4X400 ಮೀಟರ್ಸ್ ಮಿಶ್ರ ರಿಲೆ ತಂಡವು ಕಂಚಿನ ಪದಕ ಪಡೆದಿದೆ, ಹಾಗೂ ಪುರುಷರ 10 ಕಿ. ಮೀ ನಡಿಗೆಯಲ್ಲಿ ಅಮಿತ್ ಖತ್ರಿ ಬೆಳ್ಳಿ ಪದಕವನ್ನು ಪಡೆದುಕೊಂಡಿದ್ದಾರೆ.
* 2016 ರ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್ ನಲ್ಲಿ ನೀರಜ್ ಚೋಪ್ರಾ ಜಾವೆಲಿನ್ ಥ್ರೋ ಪಟು, ಹಾಗೂ 2018 ರಲ್ಲಿ ಹಿಮಾ ದಾಸ್ ಅವರು ಓಟದಲ್ಲಿ ಚಿನ್ನದ ಪದಕವನ್ನು ಪಡೆದುಕೊಂಡಿದ್ದರು.

## ಅಯೋಧ್ಯೆಯ ರಾಮಮಂದಿರ ರಸ್ತೆಗೆ ಮಾಜಿ ಮುಖ್ಯಮಂತ್ರಿ ಕಲ್ಯಾಣ್ ಸಿಂಗ್ ಹೆಸರು



* ಇತ್ತೀಚಿಗೆ ಅನಾರೋಗ್ಯದ ಕಾರಣದಿಂದಾಗಿ ನಿಧನರಾದ ಉತ್ತರ ಪ್ರದೇಶದ ಮಾಜಿ ಮುಖ್ಯ ಮಂತ್ರಿ ಹಾಗೂ ಬಿಜೆಪಿ ಹಿರಿಯ ನಾಯಕ ಕಲ್ಯಾಣ್ ಸಿಂಗ್ ಅವರ ಹೆಸರನ್ನು ಉತ್ತರ ಪ್ರದೇಶದ ಅಯೋಧ್ಯೆ, ಲಕ್ನೋ ಸೇರಿ ಒಟ್ಟು 6 ಜಿಲ್ಲೆಗಳ ಪ್ರಮುಖ ರಸ್ತೆಗಳಿಗೆ ಹೆಸರಿಡಲು ಉತ್ತರ ಪ್ರದೇಶ ಸರ್ಕಾರ ನಿರ್ಧರಿಸಿದೆ.
* ಈ ವಿಷಯದ ಮಾಹಿತಿಯನ್ನು ಉತ್ತರ ಪ್ರದೇಶದ ಉಪ ಮುಖ್ಯಮಂತ್ರಿ ಕೇಶವ ಪ್ರಸಾದ್ ಮೌರ್ಯ ಅವರು ಘೋಷಣೆ ಮಾಡಿದ್ದಾರೆ, ಇದರಿಂದಾಗಿ ಕಲ್ಯಾಣ್ ಸಿಂಗ್ ಅವರಿಗೆ ಗೌರವ ಸಲ್ಲಿಸಿದಂತಾಗುತ್ತದೆ ಎಂದು ತಿಳಿಸಿದ್ದಾರೆ.
* ಈ ಹಿಂದೆ ಕಲ್ಯಾಣ್ ಸಿಂಗ್ ಅವರು ಉತ್ತರ ಪ್ರದೇಶದ ಮುಖ್ಯಮಂತ್ರಿ ಯಾಗಿದ್ದ ಸಂಧರ್ಭದಲ್ಲಿ ಅಯೋಧ್ಯೆಯಲ್ಲಿನ ಬಾಬ್ರಿ ಮಸೀದಿಯನ್ನು ಧ್ವಂಸಗೊಳಿಸಲಾಗಿತ್ತು, ಇದೀಗ ಅದೇ ಸ್ಥಳದಲ್ಲಿ ರಾಮ ಮಂದಿರ ನಿರ್ಮಾಣವಾಗುತ್ತಿದೆ.

# 25-08-2021

## ಅಫಘಾನಿಸ್ತಾನದಲ್ಲಿ ಹಣಕಾಸಿನ ಕೊರತೆ ತಾಲಿಬಾನ್ ನಿಂದ 100 ಬಿಲಿಯನ್ ನೋಟು ಮುದ್ರಣ




* ತಾಲಿಬಾನ್ ಉಗ್ರರು ಅಫ್ಘಾನಿಸ್ತಾನವನ್ನು ವಶಪಡಿಸಿಕೊಂಡಿದ್ದಾರೆ ಇದೀಗ ಅಫ್ಘಾನಿಸ್ತಾನದಲ್ಲಿ ಹಣಕಾಸಿನ ಕೊರತೆ ಉಂಟಾಗಿದೆ, ದಿನ ಬಳಕೆಯ ಎಲ್ಲಾ ವಸ್ತುಗಳ ಬೆಲೆಯೂ ಹೆಚ್ಚಾಗಿದೆ, ಈ ಕಾರಣದಿಂದಾಗಿ ಅಫ್ಘಾನಿಸ್ತಾನ ಬ್ಯಾಂಕ್ (ಸೆಂಟ್ರಲ್ ಬ್ಯಾಂಕ್ ಆಫ್ ಅಫ್ಘಾನಿಸ್ತಾನ) ಹೊಸ ನೋಟುಗಳನ್ನು ಮುದ್ರಿಸಲು ಮುಂದಾಗಿದೆ.
* ಅಫ್ಘಾನ್ ಸಂಸತ್ತು 100 ಬಿಲಿಯನ್ ಅಫ್ಘಾನಿಸ್ ನೋಟು ಮುದ್ರಿಸಲು ಕೇಂದ್ರೀಯ ಬ್ಯಾಂಕ್ ಅಧಿಕಾರಿಗಳಿಗೆ ಅನುಮತಿ ನೀಡಿದೆ ಎಂದಿದ್ದಾರೆ.
* ಸೆಂಟ್ರಲ್ ಬ್ಯಾಂಕ ಮುದ್ರಿಸುವ ಈ ಹೊಸ ನೋಟುಗಳು ಹೆಚ್ಚಿನ ಭದ್ರತಾ ಚಿನ್ಹೆಗಳನ್ನೂ ಹೊಂದಿರಲಿವೆ, ಇದು ನಕಲಿ ನೋಟುಗಳ ಚಲಾವಣೆಗೆ ತಡೆ ಹಾಕಲು ಸಹಾಯವಾಗುವ ಕ್ರಮವಾಗಲಿದೆ ಎಂದಿದ್ದಾರೆ.
* ಪ್ರತಿ 5 ವರ್ಷಗಳಿಗೊಮ್ಮೆ ಅಫ್ಘಾನಿಸ್ತಾನ ಬ್ಯಾಂಕ್ ನೋಟುಗಳನ್ನು ಮುದ್ರಿಸುತ್ತದೆ.

## ಪ್ರಧಾನಿ ಮೋದಿ ಮತ್ತು ಜರ್ಮನಿ ಚಾನ್ಸಲರ್ ಅಂಗೆಲಾ ಮೆರ್ಕೆಲ್ ಅಫ್ಘಾನ್ ಬಿಕ್ಕಟ್ಟಿನ ಬಗ್ಗೆ ಚರ್ಚೆ



* ಭಾರತೀಯ ಪ್ರಧಾನಿ ನರೇಂದ್ರ ಮೋದಿ ಮತ್ತು ಜರ್ಮನಿಯ ಚಾನ್ಸಲರ್ ಅಂಗೆಲಾ ಮೆರ್ಕೆಲ್ ಅವರು ಅಫ್ಘಾನಿಸ್ತಾನದಲ್ಲಿರುವ ಸದ್ಯದ ಪರಿಸ್ಥಿತಿಯು ನೆರೆಯ ರಾಷ್ಟ್ರಗಳು ಹಾಗೂ ವಿಶ್ವದ ಮೇಲೆ ಬೀಳುವ ಪರಿಣಾಮಗಳ ಬಗ್ಗೆ ಚರ್ಚೆ ನಡೆಸಿದ್ದಾರೆ.
* ಅಫ್ಘಾನಿಸ್ತಾನದಲ್ಲಿನ ಸಿಲುಕಿರುವ ತಮ್ಮ ತಮ್ಮ ರಾಷ್ಟ್ರಗಳ ಜನರನ್ನು ಕರೆಸಿಕೊಳ್ಳುವುದು ಇದೀಗ ಮುಖ್ಯವಾಗಿದೆ ಈ ನಾಯಕರು ಹೇಳಿದ್ದಾರೆ

ಎಂದು ಪ್ರಧಾನಿ ಕಾರ್ಯಾಲಯ ಪ್ರಕಟಿಸಿದೆ.

* ಪ್ರಧಾನಿ ನರೇಂದ್ರ ಮೋದಿ ಮತ್ತು ಚಾನ್ಸಲರ್ ಅಂಗೆಲಾ ಮರ್ಕೆಲ್ ದ್ವಿಪಕ್ಷೀಯ ವಿಚಾರಗಳಾಗಿರುವ ಕೋವಿಡ್ ಲಸಿಕೆ, ಹವಾಮಾನ ಹಾಗೂ ಇಂಧನ ವಿಚಾರಗಳಲ್ಲಿ ಸಹಕಾರ, ವಹಿವಾಟು ಅಭಿವೃದ್ಧಿಸುವುದು ಮತ್ತು ಆರ್ಥಿಕ ಬಾಂಧವ್ಯದ ಬಗ್ಗೆ ಮಾತುಕತೆ ನಡೆಸಿದ್ದಾರೆ.

### ಬ್ರಿಟನ್ ಪ್ರಧಾನಿ ಬೋರಿಸ್ ಅಫ್ಘಾನ್ ಬೆಳವಣಿಗೆ ಬಗ್ಗೆ ಚರ್ಚಿಸಲು ಜಿ7 ಸಭೆ ಕರೆದಿದ್ದಾರೆ



* ಇಂಗ್ಲೆಂಡ್ ಪ್ರಧಾನಿ ಬೋರಿಸ್ ಜಾನ್ಸನ್ ಅವರು ಸದ್ಯದ ಪರಿಸ್ಥಿತಿಯಲ್ಲಿ ಅಫ್ಘಾನಿಸ್ತಾನದಲ್ಲಿನ ಬೆಳವಣಿಗೆಗಳನ್ನು ಗಮನಿಸಲು ಹಾಗೂ ಅಲ್ಲಿನ ಸಾಮಾನ್ಯ ಜನರಿಗೆ ನೆರವು ನೀಡುವ ಬಗ್ಗೆ ಚರ್ಚೆ ಮಾಡುವುದಕ್ಕಾಗಿ ಜಿ7 ರಾಷ್ಟ್ರಗಳ ನಾಯಕರ ಸಭೆಯನ್ನು ಕರೆದಿದ್ದಾರೆ.

* ಈ ಜಿ7 ರಾಷ್ಟ್ರಗಳ ನಾಯಕರ ಸಭೆಯು (ವರ್ಚುವಲ್) ವಿಡಿಯೊ ಕಾನ್ಫರೆನ್ಸ್ ಮೂಲಕ ನಡೆಯಲಿದೆ, ಸುಮಾರು 20 ಸಾವಿರ ಅಫ್ಘಾನ್ ನಿರ್ಗತಿಕರನ್ನು ಬೇರೆ ಕಡೆಗೆ ಸ್ಥಳಾಂತರಿಸುವುದು ಹಾಗೂ ಸಂಕಷ್ಟದಲ್ಲಿರುವವರ ಸಲುವಾಗಿ ಅಂದಾಜು 392 ಮಿಲಿಯನ್ ಡಾಲರ್ ಮಾನವೀಯ ನೆರವು ನೀಡುವ ಬಗ್ಗೆ ಚರ್ಚಿಸುವ ಸಾಧ್ಯತೆಗಳಿವೆ ಎಂದು ತಿಳಿದು ಬಂದಿದೆ.

* ಸಭೆಯ ಅಧ್ಯಕ್ಷತೆ ಬ್ರಿಟನ್ ಪ್ರಧಾನಿ ವಹಿಸಿಕೊಳ್ಳಲಿದ್ದಾರೆ, ಕೆನಡಾ, ಫ್ರಾನ್ಸ್, ಜರ್ಮನಿ, ಇಟಲಿ, ಜಪಾನ್ ಮತ್ತು ಅಮೆರಿಕ ನಾಯಕರು ಈ ಸಭೆಯಲ್ಲಿ ಭಾಗಿಯಾಗಲಿದ್ದಾರೆ.

### ವೈಟ್ ಹೌಸ್ ಸೈಬರ್ ಸೆಕ್ಯುರಿಟಿ ಸಭೆಯಲ್ಲಿ ಅಮೆಜಾನ್ CEO ಭಾಗವಹಿಸಲಿದ್ದಾರೆ



* ಆಪಲ್ ಇಂಕ್ ಸಿಇಒ, ಟಿಮ್ ಕುಕ್ ಮತ್ತು ಮೈಕ್ರೋಸಾಫ್ಟ್ ಕಾರ್ಪ್ ಮುಖ್ಯ ಕಾರ್ಯನಿರ್ವಾಹಕ, ಸತ್ಯ ನಾದೆಲ್ಲಾ ವೈಟ್ ಹೌಸ್ ಸೈಬರ್ ಸೆಕ್ಯುರಿಟಿ ಸಭೆಯಲ್ಲಿ ಭಾಗವಹಿಸಲಿದ್ದಾರೆ.

* ಅಮೆಜಾನ್ ಇಂಕ್ ಮುಖ್ಯ ಕಾರ್ಯನಿರ್ವಾಹಕ, ಆಂಡಿ ಜಸ್ಸಿ ಅವರು ಶ್ವೇತಭವನದ ಸಭೆಯಲ್ಲಿ ಅಧ್ಯಕ್ಷ ಜೋ ಬಿಡೆನ್ ಜೊತೆ ಟೆಕ್ ಕಾರ್ಯನಿರ್ವಾಹಕರನ್ನು ಸೇರಲಿದ್ದಾರೆ.

* ಪ್ರಸ್ತುತ ಈ ವೈಟ್ ಹೌಸ್ ಸೈಬರ್ ಸೆಕ್ಯುರಿಟಿ ಸಭೆಯಲ್ಲಿ ಖಾಸಗಿ ಕಂಪನಿಗಳ ಸೈಬರ್ ಸುರಕ್ಷತೆಯನ್ನು ಸುಧಾರಿಸುವ ಪ್ರಯತ್ನಗಳ ಬಗ್ಗೆ ಚರ್ಚಿಸಲಿದ್ದಾರೆ.

* 2021 ರ ಜುಲೈ ನಲ್ಲಿ ಅಮೇರಿಕ ಅಧ್ಯಕ್ಷ ಜೋ ಬಿಡೆನ್ ಅವರು ರಾಷ್ಟ್ರೀಯ ಭದ್ರತಾ ಜ್ಞಾಪನಾ ಪತ್ರಕ್ಕೆ ಸಹಿ ಹಾಕಿದ್ದಾರೆ, ಸೈಬರ್ ಸುರಕ್ಷತೆಗಾಗಿ ಕಾರ್ಯಕ್ಷಮತೆ ನಿಯಂತ್ರಣಗಳನ್ನು ರಚಿಸಲು ಈ ಹೊಸ ಸಾರ್ವಜನಿಕ ಖಾಸಗಿ ಉಪಕ್ರಮವನ್ನು ಆರಂಭಿಸಿದ್ದಾರೆ.

* ಈ ಸೈಬರ್ ಭದ್ರತೆಯ ಜವಾಬ್ದಾರಿಯನ್ನು ಹೋಮ್ ಲ್ಯಾಂಡ್ ಸೆಕ್ಯುರಿಟಿ, ಫೆಡರಲ್ ಬ್ಯೂರೋ ಆಫ್ ಇನ್ವೆಸ್ಟಿಗೇಷನ್ ಹಾಗೂ ಡಿಫೆನ್ಸ್ ಆಫ್ ಡಿಫೆನ್ಸ್ ಸಂಸ್ಥೆಗಳ ನಡುವೆ ಹಂಚಿಕೊಳ್ಳಲಾಗಿದೆ.

### 'ವ್ಯಾಕ್ಸಿನೇಟ್ ಇಂಡಿಯಾ ಕಾರ್ಯಕ್ರಮ' ಆರಂಭಿಸಿದ ಉಪರಾಷ್ಟ್ರಪತಿ ವೆಂಕಯ್ಯ ನಾಯ್ಡು



* 2021 ರ ಆಗಸ್ಟ್. 24 ರಂದು ಭಾರತದ ಉಪರಾಷ್ಟ್ರಪತಿ ಎಂ. ವೆಂಕಯ್ಯ ನಾಯ್ಡು ಅವರು 'ವ್ಯಾಕ್ಸಿನೇಟ್ ಇಂಡಿಯಾ ಪ್ರೋಗ್ರಾಂ'ನ್ನು ಆರಂಭಿಸಿದರು, ಹಾಗೂ ಇದೇ ಸಂದರ್ಭದಲ್ಲಿ ಕೋವಿಡ್ 19 ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಜನರಲ್ಲಿ ಮನವಿ ಮಾಡಿದ್ದಾರೆ.

* 'ವ್ಯಾಕ್ಸಿನೇಟ್ ಇಂಡಿಯಾ ಪ್ರೋಗ್ರಾಂ' ಈ ಕಾರ್ಯಕ್ರಮವನ್ನು ಬೆಂಗಳೂರಿನಲ್ಲಿ ಗಿವ್ ಇಂಡಿಯಾ ಫೌಂಡೇಶನ್ ಮತ್ತು ಸುಸ್ಥಿರ ಗುರಿಗಳ ಸಮನ್ವಯ ಕೇಂದ್ರ ಆಯೋಜಿಸಿದೆ, ಹಾಗೂ ಇದನ್ನು ಕರ್ನಾಟಕ ಸರ್ಕಾರದ ಯೋಜನಾ ಇಲಾಖೆಯ ಸಹಾಯದೊಂದಿಗೆ ಸಿಎಸ್‌ಆರ್ ಅಡಿಯಲ್ಲಿ ಆರಂಭಿಸಿದ್ದಾರೆ.

* 2021 ರ ಜನವರಿ. 16 ರಂದು ಭಾರತ ಸರ್ಕಾರವು ಕೋವಿಡ್ 19 ಲಸಿಕೆ ಕಾರ್ಯಕ್ರಮವನ್ನು ಪ್ರಾರಂಭಿಸಿದೆ.

### KSRTC ಹಾಸನದ ಸಾರಿಗೆ ವಿಭಾಗದಲ್ಲಿ ಕನ್ನಡ ಗ್ರಂಥಾಲಯ ಸ್ಥಾಪನೆ

* ಪ್ರಸ್ತುತ KSRTC ಸಾರಿಗೆ ಕ್ಷೇತ್ರವು ನೂರಕ್ಕೆ ನೂರರಷ್ಟು ಕನ್ನಡ ಭಾಷೆಯನ್ನು ಬಳಕೆಯನ್ನು ಮಾಡುತ್ತಿದ್ದು, ಎಂದು ಕೆಎಸ್‌ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿ ರಾಜೇಶ ಶೆಟ್ಟಿ ತಿಳಿಸಿದ್ದಾರೆ.

* ಇತ್ತೀಚಿಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಸಾರಿಗೆ ವಲಯದಲ್ಲಿ ಕನ್ನಡ ಅನುಷ್ಠಾನ ಅಭಿಯಾನ ಕಾರ್ಯಕ್ರಮವನ್ನು ಆಯೋಜಿಸಿತ್ತು.

* ಪ್ರಸ್ತುತ ಕರ್ನಾಟಕ ರಾಜ್ಯದ ಎಲ್ಲ ಸಾರಿಗೆ ವಿಭಾಗದ ಶಾಖೆಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಕನ್ನಡ ಬಳಕೆ ಮಾಡಲಾಗುತ್ತಿದೆ, ಹಾಗೂ ಇದೀಗ ನೌಕರರಿಗೆ ಕನ್ನಡ ಸಾಹಿತ್ಯ ಓದುವ ಅಭಿರುಚಿ ಮೂಡಿಸಲು ಹಾಸನದ ಸಾರಿಗೆ ವಿಭಾಗದಲ್ಲಿ ಕನ್ನಡ ಗ್ರಂಥಾಲಯವನ್ನು ಆರಂಭಿಸಲಾಗಿದೆ.

* ಟಿ. ಎಸ್. ನಾಗಾಭರಣ ಅವರು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದಾರೆ.

# Current affairs of August 2021 from KPSC Vaani

## ಅಫ್ಘಾನಿಸ್ತಾನದಿಂದ ಭಾರತೀಯ ಪ್ರಜೆಗಳ ಸ್ಥಳಾಂತರ ಕಾರ್ಯಾಚರಣೆಗೆ 'ಆಪರೇಷನ್ ದೇವಿ ಶಕ್ತಿ' ಘೋಷಣೆ



* ಇತ್ತೀಚಿಗೆ ತಾಲಿಬಾನ್ ಉಗ್ರರು ಅಫ್ಘಾನಿಸ್ತಾನ ರಾಷ್ಟ್ರವನ್ನು ವಶಪಡಿಸಿಕೊಂಡಿದೆ, ಇದೀಗ ಅಫ್ಘಾನಿಸ್ತಾನದ ಕಾಬೂಲ್ ಪ್ರದೇಶದಿಂದ ಭಾರತೀಯ ನಾಗರಿಕರು ಹಾಗೂ ಅಫ್ಘನ್ ಸಿಖ್ಖರನ್ನು ಮತ್ತು ಹಿಂದೂಗಳನ್ನು ಸ್ಥಳಾಂತರಿಸುವ ಕಾರ್ಯಾಚರಣೆಗೆ ಭಾರತವು 'ಆಪರೇಷನ್ ದೇವಿ ಶಕ್ತಿ' ಎಂದು ಹೆಸರಿಸಿದೆ.
* ಭಾರತ ದೇಶವು ಒಟ್ಟು 78 ಅಫ್ಘನ್‌ನ ಸಿಖ್ಖರು ಹಾಗೂ ಹಿಂದೂ ಪ್ರಜೆಗಳನ್ನು ತಜಕಿಸ್ತಾನದ ರಾಜಧಾನಿ ದುಶಾಂಬೆಯಿಂದ ಭಾರತಕ್ಕೆ ಕರೆತಂದಿದೆ, ಈ ವಿಷಯದ ಮಾಹಿತಿಯನ್ನು ಕೇಂದ್ರ ವಿದೇಶಾಂಗ ವ್ಯವಹಾರಗಳ ಸಚಿವ ಎಸ್ ಜೈಶಂಕರ್ ಟ್ವೀಟರ್ ಮೂಲಕ ತಿಳಿಸಿದ್ದಾರೆ.
* ಪ್ರಸ್ತುತ ಭಾರತ ಸರ್ಕಾರವು ಅಫ್ಘಾನಿಸ್ತಾನ ರಾಷ್ಟ್ರದಿಂದ 800 ಕ್ಕೂ ಹೆಚ್ಚು ಜನರನ್ನು ಭಾರತಕ್ಕೆ ಕರೆತಂದಿದೆ.

## ತಮಿಳುನಾಡಿನಲ್ಲಿ ದಿವಂಗತ ಎಂ. ಕರುಣಾನಿಧಿ ಸ್ಮಾರಕ ನಿರ್ಮಾಣ ಘೋಷಣೆ



* ಪ್ರಸ್ತುತ ತಮಿಳುನಾಡು ರಾಜ್ಯದಲ್ಲಿ ಆಡಳಿತದಲ್ಲಿರುವ ಡಿಎಂಕೆ ಪಕ್ಷವು, ಇದೀಗ ಡಿಎಂಕೆ ನಾಯಕ ಹಾಗೂ ಮಾಜಿ ಮುಖ್ಯಮಂತ್ರಿ ದಿವಂಗತ ಎಂ. ಕರುಣಾನಿಧಿ ಸ್ಮರಣಾರ್ಥ ಚೆನ್ನೈನ ಮರಿನಾದಲ್ಲಿನ ಕಾಮರಾಜರ್ ಸಲೈನಲ್ಲಿ ಸುಮಾರು 39 ಕೋಟಿ ರೂ. ವೆಚ್ಚದಲ್ಲಿ ಸ್ಮಾರಕ ನಿರ್ಮಾಣ ಮಾಡುವುದಾಗಿ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಘೋಷಣೆ ಮಾಡಿದ್ದಾರೆ.
* ಪ್ರಸ್ತುತ ತಮಿಳುನಾಡಿನ ಮರೀನಾ ಕಡಲ ತೀರದಲ್ಲಿ 2 ಎಕರೆ 23 ಗುಂಟೆ ಪ್ರದೇಶದಲ್ಲಿ ಈ ಸ್ಮಾರಕ ನಿರ್ಮಾಣ ಮಾಡಲಾಗುವುದು ಎಂದು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ರಾಜ್ಯ ವಿಧಾನಸಭೆಗೆ ಮಾಹಿತಿ ನೀಡಿದ್ದಾರೆ.
* ಮಾಜಿ ಮುಖ್ಯ ಮಂತ್ರಿ ಎಂ. ಕರುಣಾನಿಧಿ ಅವರು 2018 ರ ಆಗಸ್ಟ್. 7ರಂದು ನಿಧನರಾಗಿದ್ದಾರೆ.
* ಕರುಣಾನಿಧಿಯವರು ತಮ್ಮ 80 ವರ್ಷದ ರಾಜಕೀಯ ಜೀವನದಲ್ಲಿ 60 ವರ್ಷ ವಿಧಾನಸಭಾ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.

## ರಾಷ್ಟ್ರೀಯ ನಗದೀಕರಣ ಯೋಜನೆ ಘೋಷಣೆ ಮಾಡಿದ ಕೇಂದ್ರ ಸರ್ಕಾರ



* ಪ್ರಸ್ತುತ 6 ಲಕ್ಷ ಕೋಟಿ ರೂ. ಮೌಲ್ಯದ 'ರಾಷ್ಟ್ರೀಯ ನಗದೀಕರಣ ಯೋಜನೆ'ನ್ನು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಘೋಷಣೆ ಮಾಡಿದ್ದಾರೆ.
* ಈ ಯೋಜನೆಯು ಮುಖ್ಯವಾಗಿ ರಸ್ತೆಗಳು, ರೈಲ್ವೆ ಹಾಗೂ ವಿದ್ಯುತ್ ಗ್ರಿಡ್‌ಗಳನ್ನೂ ಒಳಗೊಂಡಿದೆ, ಆದರೆ ಭೂಮಿ ಮಾರಾಟ ಈ ಪಟ್ಟಿಯಲ್ಲಿ ಸೇರಿಲ್ಲ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ತಿಳಿಸಿದ್ದಾರೆ.
* ಈ ರಾಷ್ಟ್ರೀಯ ನಗದೀಕರಣ ಯೋಜನೆಯನ್ನು 2022 ರ ಹಣಕಾಸು ವರ್ಷದಿಂದ 2025 ರ ಹಣಕಾಸು ವರ್ಷವರೆಗೆ, ಅಂದರೆ ಮುಂದಿನ ನಾಲ್ಕು ವರ್ಷಗಳಲ್ಲಿ ಮೂಲಸೌಕರ್ಯ ಆಸ್ತಿಗಳನ್ನು ಮಾರಾಟ ಮಾಡಲಿದೆ ಎಂದು ತಿಳಿಸಲಾಗಿದೆ.
* ಈ ರಾಷ್ಟ್ರೀಯ ನಗದೀಕರಣ ಪೈಪ್‌ಲೈನ್ ನ್ನು ಯಶಸ್ವಿಗೊಳಿಸಲು ಸಂಪೂರ್ಣವಾಗಿ ಬದ್ಧರಾಗಿದ್ದೇವೆ, ಅಲ್ಲದೇ ನಾವುಗಳು ಕಷ್ಟಪಟ್ಟು ಕೆಲಸ ಮಾಡಲು ಸಿದ್ಧರಾಗಿದ್ದೇವೆ ಎಂದು ನೀತಿ ಆಯೋಗದ ಸಿಇಒ (CEO) ಅಮಿತಾಭ್ ಕಾಂತ್ ತಿಳಿಸಿದ್ದಾರೆ.
* ಈ ರಾಷ್ಟ್ರೀಯ ನಗದೀಕರಣ ಯೋಜನೆಯಲ್ಲಿ ಉತ್ತಮವಾಗಿ ಕಾರ್ಯಾಚರಣೆ ಹಾಗೂ ನಿರ್ವಹಣೆಗಾಗಿ ಖಾಸಗಿ ವಲಯಕ್ಕೆ ಪ್ರವೇಶಿಸುವುದು ಮುಖ್ಯ ಎಂದು ನೀತಿ ಆಯೋಗದ ಸಿಇಒ (CEO) ಅಮಿತಾಭ್ ಕಾಂತ್ ಅವರು ಅಭಿಪ್ರಾಯ ಪಟ್ಟಿದ್ದಾರೆ.

## ಭಾರತ ಬ್ಯಾಸ್ಕೆಟ್‌ಬಾಲ್ ತಂಡವು ಸತತ 10 ನೇ ಬಾರಿ ಏಷ್ಯಾಕಪ್ ಅರ್ಹತೆ ಪಡೆದಿದೆ



* ಭಾರತ ಬ್ಯಾಸ್ಕೆಟ್‌ಬಾಲ್ ತಂಡವು ಸತತ 10 ನೇ ಬಾರಿ ಫಿಬಾ ಏಷ್ಯಾಕಪ್ ಟೂರ್ನಿಗೆ ಅರ್ಹತೆಯನ್ನು ಪಡೆದುಕೊಂಡಿದೆ, ಹಾಗೂ 2023 ರ ವಿಶ್ವಕಪ್ ಟೂರ್ನಿಯ ಕ್ವಾಲಿಫೈಯರ್ಸ್‌ನಲ್ಲಿ ಭಾಗವಹಿಸಲು ಅರ್ಹತೆ ಪಡೆದಿದೆ.
* ಇತ್ತೀಚಿಗೆ ಸೌದಿ ಅರೇಬಿಯಾದ ಜೆಡ್ಡಾದಲ್ಲಿ ನಡೆದಿರುವ ಅರ್ಹತಾ ಟೂರ್ನಿಯಲ್ಲಿ ಭಾರತ ಮೊದಲ ಪಂದ್ಯದಲ್ಲಿ 61 80 ರಿಂದ ಆಸ್ಟ್ರೇಲಿಯಾ (ಆತಿಥೇಯ) ತಂಡಕ್ಕೆ ಸೋಲ ಒಪ್ಪಿಕೊಂಡಿದೆ, ಆದರೆ ಭಾರತ ತಂಡವು 2 ನೇ ಪಂದ್ಯದಲ್ಲಿ 79 77 ರಿಂದ ಪ್ಯಾಲೆಸ್ಟೈನ್ ತಂಡವನ್ನು ಸೋಲಿಸಿ 'ಎಚ್' ಗುಂಪಿನಲ್ಲಿ 2 ನೇ ಸ್ಥಾನವನ್ನು ಪಡೆದುಕೊಂಡಿದೆ.

* ಪ್ರಸ್ತುತ 2022 ರ ಜುಲೈನಲ್ಲಿ ಇಂಡೋನೇಷ್ಯಾದ ಜಕಾರ್ತ ಎಂಬಲ್ಲಿ ಏಷ್ಯಾಕಪ್ ಟೂರ್ನಿಯು ನಿಗದಿಯಾಗಿದೆ.
* ಏಷ್ಯಾಕಪ್ ಟೂರ್ನಿಗೆ ಅರ್ಹತೆ ಪಡೆದ ತಂಡಗಳು: ಇಂಡೋನೇಷ್ಯಾ, ಲೆಬನಾನ್, ಬಹರೇನ್, ಫಿಲಿಪ್ಪೀನ್ಸ್, ಕೊರಿಯಾ, ಚೀನಾ, ಜಪಾನ್, ಆಸ್ಟ್ರೇಲಿಯಾ, ನ್ಯೂಜಿಲೆಂಡ್, ಇರಾನ್, ಸಿರಿಯಾ, ಜೋರ್ಡಾನ್, ಕಜಕಸ್ತಾನ ಹಾಗೂ ಸೌದಿ ಅರೇಬಿಯಾ ತಂಡಗಳು.

# 26-08-2021

## ಖ್ಯಾತ ಸಂಶೋಧಕಿ ಡಾ. ಗೇಲ್ ಒಂವೆಡ್ತ್ ನಿಧನ



* ಡಾ.ಗೇಲ್ ಒಂವೆಡ್ತ್ ಅವರು ತಮ್ಮ 81 ನೇ ವರ್ಷ ವಯಸ್ಸಿನಲ್ಲಿ ಅನಾರೋಗ್ಯದ ಕಾರಣದಿಂದಾಗಿ ಮಹಾರಾಷ್ಟ್ರದಲ್ಲಿ ವಿಧಿವಶರಾಗಿದ್ದಾರೆ.
* ಡಾ.ಗೇಲ್ ಒಂವೆಡ್ತ್ ಅವರು ಖ್ಯಾತ ಸಂಶೋಧಕಿ ಮತ್ತು ಶ್ರಮಿಕ್ ಮುಕ್ತಿ ದಳದ ಸಹ ಸಂಸ್ಥಾಪಕಿ ಯಾಗಿದ್ದರು.
* ಡಾ.ಗೇಲ್ ಒಂವೆಡ್ತ್ ಮೂಲತಃ ಅಮೇರಿಕದವರು, ಇವರು ತಮ್ಮ ಸಂಶೋಧನೆಯ ಸಮಯದಲ್ಲಿ ಪಶ್ಚಿಮ ಭಾರತದಲ್ಲಿನ ಬ್ರಾಹ್ಮಣೇತರ ಚಳವಳಿ ಬಗ್ಗೆ ಪ್ರಬಂಧ ರಚನೆ ಮಾಡಿದ್ದರು, ಹಾಗೂ 25 ಕ್ಕೂ ಅಧಿಕ ಪುಸ್ತಕಗಳನ್ನು ರಚಿಸಿದ್ದಾರೆ, ಶ್ರಮಿಕ ಮುಕ್ತಿ ದಳದ ಸಹ ಸಂಸ್ಥಾಪಕರು ಕೂಡ ಆಗಿದ್ದರು, ಹಾಗೂ ಇವರು ತಮ್ಮ ಬದುಕನ್ನು ದಮನಿತ ಸಮುದಾಯಗಳ ಅಧ್ಯಯನ ಸಲುವಾಗಿ ಮೀಸಲಿಟ್ಟದ್ದರು.
* 1983 ರಲ್ಲಿ ಡಾ.ಗೇಲ್ ಒಂವೆಡ್ತ್ ಭಾರತದ ಪೌರತ್ವವನ್ನು ಪಡೆದುಕೊಂಡಿದ್ದಾರೆ.
* ಡಾ.ಗೇಲ್ ಒಂವೆಡ್ತ್ ನಿಧನಕ್ಕೆ ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಕಂಬನಿ ಮಿಡಿದಿದ್ದಾರೆ.

## ಮೇಘಾಲಯ ಮಾಜಿ ಶಾಸಕನಿಗೆ 25 ವರ್ಷ ಜೈಲು ಶಿಕ್ಷೆ



* ಪ್ರಸ್ತುತ ಮೇಘಾಲಯದ ಮಾಜಿ ಶಾಸಕ ಜೂಲಿಯಸ್ ಡೋರ್ಫಾಂಗ್ ಅವರು ಸುಮಾರು '5' ವರ್ಷಗಳ ಹಿಂದೆ ಅಪ್ರಾಪ್ತ ಬಾಲಕಿಯ ಮೇಲೆ ಅತ್ಯಾಚಾರ ಎಸಗಿದ್ದಾರೆ ಎಂದು ಸ್ಥಳೀಯ ನ್ಯಾಯಾಲಯ ಪೋಕ್ಸೋ ಕಾಯ್ದೆಯಡಿ 25 ವರ್ಷ ಜೈಲು ಶಿಕ್ಷೆ ಹಾಗೂ 15 ಲಕ್ಷ ದಂಡ ವಿಧಿಸಿದೆ.
* ಪ್ರಸ್ತುತ ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಅಥವಾ ಪೋಕ್ಸೊ ಕಾಯಿದೆ ಅಡಿಯಲ್ಲಿ ನ್ಯಾಯಾಧೀಶರು ಈ ತೀರ್ಪನ್ನು ನೀಡಿದ್ದಾರೆ, ಅಲ್ಲದೇ ಈ ಪ್ರಕರಣದಲ್ಲಿ ಭಾಗಿಯಾಗಿರುವ ಇತರ '3' ಜನರಿಗೆ ಜೀವಾವಧಿ ಶಿಕ್ಷೆ ವಿಧಿಸಿದೆ.
* ಶಾಸಕ ಜೂಲಿಯಸ್ ಡೋರ್ಫಾಂಗ್ ಅವರು 2017 ರಲ್ಲಿ ಶಾಸಕರಾಗಿದ್ದರು, ಆ ಸಂಧರ್ಭದಲ್ಲಿ 14 ವರ್ಷದ ಬಾಲಕಿಯ ಅತ್ಯಾಚಾರ ಎಸಗಿರುವ ಆರೋಪವಾಗಿತ್ತು ನಂತರ ಇವರು ತಲೆ ಮರಿಸಿಕೊಂಡಿದ್ದರು ಕೆಲ ದಿನಗಳ ನಂತರ ಇವರನ್ನು ಗುವಾಹಟಿಯಲ್ಲಿ ಪತ್ತೆ ಮಾಡಿ ಬಂಧಿಸಲಾಗಿತ್ತು.

## ಯುಎಸ್ ಓಪನ್ ನಿಂದ ಹಿಂದೆ ಸರಿದ ಟೆನಿಸ್ ಆಟಗಾರ್ತಿ 'ಸೆರೆನಾ ವಿಲಿಯಮ್ಸ್'



* ಪ್ರಸ್ತುತ ಮಹಿಳಾ ಟೆನಿಸ್ ಆಟಗಾರ್ತಿ ಸೆರೆನಾ ವಿಲಿಯಮ್ಸ್ ಅವರು ಗಾಯದ ಸಮಸ್ಯೆಯಿಂದಾಗಿ ಯುಎಸ್ ಓಪನ್ (US Open 2021) ನಿಂದ ಹಿಂದೆ ಸರಿದಿದ್ದಾರೆ.
* ಇದೇ ಪಂದ್ಯಾವಳಿಗಳ ಪುರುಷರ ವಿಭಾಗದಲ್ಲಿ ರೋಜರ್ ಫೆಡರರ್, ರಾಫೆಲ್ ನಡಾಲ್ ಮತ್ತು ಡೊಮಿನಿಕ್ ಥೀಮ್ ಕೂಡ ಹಿಂದೆ ಸರಿದಿದ್ದಾರೆ.
* US Open 2021 ಪಂದ್ಯಾವಳಿಗಳು ಇದೇ ಆಗಸ್ಟ್. 30 ರಿಂದ ಪ್ರಾರಂಭವಾಗಲಿವೆ.
* ಟೆನಿಸ್ ಆಟಗಾರ್ತಿ ಸೆರೆನಾ ವಿಲಿಯಮ್ಸ್ ಅವರು '6 ಬಾರಿ' ಯುಎಸ್ ಓಪನ್ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ, ಅವುಗಳು: 1999, 2002, 2008, 2012, 2013 ಹಾಗೂ 2014 ರಲ್ಲಿ ಪ್ರಶಸ್ತಿ ಜಯಿಸಿ ಚಾಂಪಿಯನ್ ಆಗಿದ್ದಾರೆ.

## ಭಾರತೀಯ ವಾಯುಸೇನೆಯ ಮಿಗ್ 21 ಬೈಸನ್ ಯುದ್ಧ ವಿಮಾನ ಪತನ



* ಪ್ರಸ್ತುತ ಭಾರತೀಯ ವಾಯುಪಡೆಯ ಮಿಗ್ 21 ಬೈಸನ್ ಯುದ್ಧ ವಿಮಾನವು ತಾಂತ್ರಿಕ ದೋಷದಿಂದ ಹಾರಾಟದ ಸಂಧರ್ಭದಲ್ಲಿ ರಾಜಸ್ಥಾನ ರಾಜ್ಯದ ಬಾರ್ಮೆರ್ ನಲ್ಲಿ ಪತನವಾಗಿದೆ, ಆದರೆ ತರಬೇತಿಯಲ್ಲಿನ ಪೈಲಟ್ ಗೆ ಯಾವುದೇ ಅಪಾಯ ಸಂಭವಿಸಿಲ್ಲ ಎಂದು ತಿಳಿದು ಬಂದಿದೆ.

## ಅಫ್ಘಾನಿಸ್ತಾನದ ಪ್ರಜೆಗಳು ಭಾರತಕ್ಕೆ ಬರಲು 'ಇ ವೀಸಾ' ಕಡ್ಡಾಯ



* ಪ್ರಸ್ತುತ ಅಫ್ಘಾನಿಸ್ತಾನದ ಯಾವುದೇ ಪ್ರಜೆ ಭಾರತಕ್ಕೆ ಬರಲು ಕಡ್ಡಾಯವಾಗಿ ಇ ವೀಸಾ ಪಡೆದಿರಬೇಕು ಎಂದು ಕೇಂದ್ರ ಗೃಹ ಸಚಿವಾಲಯ ಪ್ರಕಟಣೆ ಹೊರಡಿಸಿದೆ, ಪ್ರಸ್ತುತ ಭಾರತ ಸರ್ಕಾರವು ಅಫ್ಘಾನಿಸ್ತಾನದಲ್ಲಿನ ಸದ್ಯದ ಪರಿಸ್ಥಿತಿಯನ್ನು ಪರಿಗಣಿಸಿ ಈ ನಿರ್ಧಾರವನ್ನು ಕೈಗೊಂಡಿದೆ.
* ಕೇಂದ್ರ ಸರ್ಕಾರವು ಇತ್ತೀಚಿಗೆ 'ಇ ತುರ್ತು ಎಕ್ಸ್ ಮಿಸ್ಕ್, ವೀಸಾ'ವನ್ನು ಪರಿಚಯಿಸಿದೆ.
* ಅಫ್ಘಾನಿಸ್ತಾನ ಪ್ರಜೆಗಳ ವೀಸಾ ಅರ್ಜಿಗಳನ್ನು ನವದೆಹಲಿಯಲ್ಲಿ ಪರಿಶೀಲಿಸಲಾಗುವದು ಎಂದು ಅಧಿಕಾರಿಗಳು ಹೇಳಿದ್ದಾರೆ.
* ಪ್ರಸ್ತುತ ಭಾರತ ಸರ್ಕಾರವು ನೀಡುವ ಈ 'ಇ ತುರ್ತು ಎಕ್ಸ್ ಮಿಸ್ಕ್, ವೀಸಾ' ಆರು (6) ತಿಂಗಳವರೆಗೆ ಮಾನ್ಯವಾಗಿರುತ್ತದೆ ಎಂದು ತಿಳಿಸಿದ್ದಾರೆ, ಹಾಗೂ ಅಫ್ಘಾನಿಸ್ತಾನ ದೇಶದ ಯಾವುದೇ ಧರ್ಮದವರು ಇ ವೀಸಾಗಾಗಿ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ಇಂಡಿಯನ್ ಐಡಲ್ ವಿಜೇತ ಪವನ್‌ದೀಪ್ ಉತ್ತರಾಖಂಡದ ಪ್ರವಾಸೋದ್ಯಮ ಮತ್ತು ಸಂಸ್ಕೃತಿಯ ಬ್ರ್ಯಾಂಡ್ ರಾಯಭಾರಿ



* ಪ್ರಸ್ತುತ ಉತ್ತರಾಖಂಡದ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರು ಇಂಡಿಯನ್ ಐಡಲ್ ವಿಜೇತ ಪವನ್‌ದೀಪ್ ರಾಜನ್ ಅವರನ್ನು ಉತ್ತರಾಖಂಡದ ಕಲೆ, ಪ್ರವಾಸೋದ್ಯಮ ಮತ್ತು ಸಂಸ್ಕೃತಿಯ ಬ್ರ್ಯಾಂಡ್ ನ ರಾಯಭಾರಿಯಾಗಿ ಘೋಷಣೆ ಮಾಡಿದ್ದಾರೆ.
* ಪವನ್‌ದೀಪ್ ಅವರು ಸಂಗೀತ ಲೋಕದಲ್ಲಿ ತಮ್ಮದೇ ಆದ ಛಾಪು ಮೂಡಿಸಿ ಉತ್ತರಾಖಂಡ ರಾಜ್ಯವನ್ನು ವಿಶ್ವದಲ್ಲಿ ಪ್ರಖ್ಯಾತಿಗೊಳಿಸಿದ್ದಾರೆ.
* ಪವನ್‌ದೀಪ್ ರಾಜನ್ ಅವರು ಇಂಡಿಯನ್ ಐಡಲ್ ರಿಯಾಲಿಟಿ ಶೋ ಸ್ಪರ್ಧೆಯ 12 ನೇ ಆವೃತ್ತಿಯ ವಿಜೇತರಾಗಿದ್ದಾರೆ, ಈ ಕಾರ್ಯಕ್ರಮವು ಇದೇ ಆಗಸ್ಟ್ 15 ರಂದು ಮುಕ್ತಾಯವಾಗಿದೆ.

## ತಯಾರಿಕಾ ವಲಯದಲ್ಲಿ ಭಾರತಕ್ಕೆ 2 ನೇ ಸ್ಥಾನ



* ಪ್ರಸ್ತುತ ವಿಶ್ವದಲ್ಲೇ ತಯಾರಿಕಾ ವಲಯದಲ್ಲಿ ಭಾರತಕ್ಕೆ 2 ನೇ ಸ್ಥಾನವನ್ನು ಪಡೆದುಕೊಂಡಿದೆ, ವಿಶ್ವದ ದೊಡ್ಡಣ್ಣವಾಗಿರುವ ಅಮೇರಿಕ ದೇಶವನ್ನು ಇದೀಗ ಭಾರತ ದೇಶವು ಹಿಂದಿಕ್ಕಿದೆ.
* ಅಮೇರಿಕ ದೇಶವು 3 ನೇ ಸ್ಥಾನವನ್ನು ಪಡೆದಿದೆ.
* ಪ್ರಸ್ತುತ ಚೀನಾ ದೇಶವು ಅಗ್ರಸ್ಥಾನವನ್ನು ಉಳಿಸಿಕೊಂಡಿದೆ.
* ಈ ವರದಿಯನ್ನು ರಿಯಲ್ ಎಸ್ಟೇಟ್ ಕನ್ಸಲ್ಟೆಂಟ್ ಸಂಸ್ಥೆ 'ಕುಶ್‌ಮನ್ ಆಯಂಡ್ ವೇಕ್‌ಫೀಲ್ಡ್' ಸಿದ್ಧಪಡಿಸಿದೆ.
* ಈ ಸಂಸ್ಥೆಯು ಯೂರೋಪ್, ಉತ್ತರ ಮತ್ತು ದಕ್ಷಿಣ ಅಮೆರಿಕಾ, ಏಷ್ಯಾ ಫೆಸಿಫಿಕ್ ಪ್ರದೇಶದ 47 ದೇಶಗಳನ್ನು ಈ ಸಮೀಕ್ಷೆಯಲ್ಲಿ ಪರಿಗಣಿಸಿದೆ, ಅದರಲ್ಲಿ ಭಾರತವು 2 ನೇ ಸ್ಥಾನವನ್ನು ಪಡೆದುಕೊಂಡಿದೆ.
* ಪ್ರಸ್ತುತ ತಯಾರಿಕಾ ವಲಯದ ಉದ್ದಿಮೆಗಳು ಭಾರತದ ಕಡೆಗೆ ಹೆಚ್ಚು ಆಸಕ್ತಿ ನೀಡುತ್ತಿದ್ದಾರೆ ಎಂದು ಸಂಸ್ಥೆ ತಿಳಿಸಿದೆ.

## ಕಬ್ಬಿಗೆ ಎಫ್‌ಆರ್‌ಪಿ (FRP)ಯನ್ನು ಅನುಮೋದಿಸಿದ ಕ್ಯಾಬಿನೆಟ್



* 2021 ರ ಆಗಸ್ಟ್ .25 ರಂದು ಕಬ್ಬಿನ ರೈತರಿಗೆ ಕೇಂದ್ರ ಸಚಿವ ಸಂಪುಟವು (ಕ್ಯಾಬಿನೆಟ್) ಅತಿ ಹೆಚ್ಚು ನ್ಯಾಯಯುತ ಮತ್ತು ಸಂಭಾವನೆ ಬೆಲೆ (fair & remunerative price FRP) ಯನ್ನು ಅನುಮೋದಿಸಿದೆ.
* 2021 22 ಕ್ಕೆ ಕಬ್ಬಿನ FRP ಯನ್ನು ಪ್ರತಿ ಕ್ವಿಂಟಾಲ್‌ಗೆ 275 ರೂ. ಗಳಿಂದ 290 ರೂ. ಗೆ ಹೆಚ್ಚಿಸಲಾಗಿದೆ.
* ಈ FRP ಯನ್ನು 5 ಕೋಟಿ ಕಬ್ಬು ಬೆಳೆಗಾರರು ಪ್ರಯೋಜನವನ್ನು ಪಡೆಯಲಿದ್ದಾರೆ, ಹಾಗೂ ಸಕ್ಕರೆ ಕಾರ್ಖಾನೆಗಳಲ್ಲಿ ಉದ್ಯೋಗದ ಮಾಡುತ್ತಿರುವ 5 ಲಕ್ಷ ಕಾರ್ಮಿಕರು ಪ್ರಯೋಜನವನ್ನು ಪಡೆಯಲಿದ್ದಾರೆ.
* ಎಫ್‌ಆರ್‌ಪಿ (FRP) ಎಂದರೆ ಸಕ್ಕರೆ ಕಾರ್ಖಾನೆಗಳು ರೈತರಿಂದ ಕಬ್ಬು ಖರೀದಿಸುವ ಕನಿಷ್ಠ ಬೆಲೆಯಾಗಿದೆ, ಕೇಂದ್ರ ಸರ್ಕಾರವು ಕೃಷಿ ಬೆಲೆ ಮತ್ತು ಬೆಲೆಗಳ ಆಯೋಗದ ಮೇರೆಗೆ ಈ ಬೆಲೆಯನ್ನು ನಿಗದಿಪಡಿಸಿದೆ.

## ಯುಎಇಯಲ್ಲಿ ವಿಶ್ವದ ಅತಿದೊಡ್ಡ ಮತ್ತು ಅತಿ ಎತ್ತರದ ವೀಕ್ಷಣಾ ಚಕ್ರ



* 2021 ರ ಅಕ್ಟೋಬರ್. 21 ರಂದು ಯುಎಇಯಲ್ಲಿ ವಿಶ್ವದ ಅತಿದೊಡ್ಡ ಹಾಗೂ ಅತಿ ಎತ್ತರದ ವೀಕ್ಷಣಾ ಚಕ್ರವನ್ನು ತೆರೆಯಲಾಗುವುದು ಎಂದು ತಿಳಿದು ಬಂದಿದೆ, ಇದಕ್ಕೆ ಐನ್ ದುಬೈ ಎಂದು ಕರೆಯುತ್ತಾರೆ.
* ಈ ವೀಕ್ಷಣಾ ಚಕ್ರವು ದುಬೈನಲ್ಲಿ ದಾಖಲೆಯನ್ನು ನಿರ್ಮಿಸಲಿದೆ, ಐನ್ ದುಬೈ ಲಂಡನ್ ಐಗಿಂತ ಸುಮಾರು 42.5 ಮೀ ಎತ್ತರವಾಗಿರಲಿದೆ, ಈ ವೀಕ್ಷಣಾ ಚಕ್ರವು ಪ್ರವಾಸಿಗರನ್ನು 250 ಮೀಟರ್ ಎತ್ತರಕ್ಕೆ ಕರೆದೊಯ್ಯಲಿದೆ ಇದರಿಂದಾಗಿ ಆಕಾಶದಿಂದ ದುಬೈನ ಸುಂದರವಾದ ಭವ್ಯ ನೋಟವನ್ನು ನೋಡಬಹುದಾಗಿದೆ.
* ಇದು ದುಬೈ ಮರೀನಾ ಬಳಿಯ ಬ್ಲೂವಾಟರ್ಸ್ ದ್ವೀಪದಲ್ಲಿದೆ, ಇದು ಮನರಂಜನಾ ವಲಯವಾಗಿ ಕಾರ್ಯನಿರ್ವಹಿಸಲಿದೆ ಎಂದಿದ್ದಾರೆ.
* ಈ ಹಿಂದೆ 2013 ರ ಫೆಬ್ರವರಿಯಲ್ಲಿ ಬ್ಲೂವಾಟರ್ಸ್ ದ್ವೀಪದಲ್ಲಿ 250 ಮೀ ಎತ್ತರದ ವೀಕ್ಷಣಾ ಚಕ್ರವನ್ನು ನಿರ್ಮಿಸಲು ಘೋಷಣೆ ಮಾಡಲಾಗಿದೆ, ಇದರ ನಿರ್ಮಾಣದ ಕಾರ್ಯವು 2015 ರ ಮೇ ತಿಂಗಳಿಂದ ಆರಂಭವಾಗಿದೆ.

## ಪಾಕಿಸ್ತಾನ ಫತಾಹ್1ನ್ನು ಯಶಸ್ವಿಯಾಗಿ ಪರೀಕ್ಷಿಸಿದೆ



* 2021 ರ ಆಗಸ್ಟ್. 24 ರಂದು ಪಾಕಿಸ್ತಾನ ರಾಷ್ಟ್ರವು ಫತಾಹ್ 1 ಪರೀಕ್ಷಾರ್ಥ ಹಾರಾಟವನ್ನು ಯಶಸ್ವಿಯಾಗಿ ನಡೆಸಿದೆ.
* ಪಾಕಿಸ್ತಾನ ನಿರ್ಮಿತ ಈ ಫತಾಹ್ 1 ಬಹು ಉಡಾವಣೆಯ ರಾಕೆಟ್ ವ್ಯವಸ್ಥೆಯಾಗಿದೆ, ಇದು ಸುಮಾರು 140 ಕಿ. ಮೀ. ದೂರದವರೆಗೆ ಸಿಡಿತಲೆಗಳನ್ನು ಹೊತ್ತು ಸಾಗುವ ಸಾಮರ್ಥ್ಯ ಹೊಂದಿದೆ.
* ಪಾಕಿಸ್ತಾನ ಸ್ಥಳೀಯವಾಗಿ ನಿರ್ಮಿಸಿರುವ ಈ ಫತಾಹ್ 1 ಪರೀಕ್ಷಾ ಹಾರಾಟವನ್ನು ಈ ಮೊದಲು 2021 ರ ಜನೇವರಿಯಲ್ಲಿ ನಡೆಸಲಾಗಿತ್ತು, ಇದೀಗ ಮತ್ತೆ ಆಗಸ್ಟ್. 24 ರಂದು 2 ನೇ ಪರೀಕ್ಷೆ ನಡೆಸಿದೆ.
* ಪಾಕಿಸ್ತಾನದ ಸೇನೆಯು 2021 ರಲ್ಲಿ ಶಾಹೀನ್ 1 ಎ, ಶಾಹೀನ್ 3, ಘಜ್ನವಿ, ಬಾಬರ್ ಕ್ರೂಸ್ ಕ್ಷಿಪಣಿಯನ್ನು ಉಡಾವಣೆ ಮಾಡಿದೆ.

# 27-08-2021

## ಇ ಶ್ರಮ (e SHRAM) ಪೋರ್ಟಲ್ ಆರಂಭಿಸಲಿರುವ ಕೇಂದ್ರ ಸರ್ಕಾರ



* ಪ್ರಸ್ತುತ ಕೇಂದ್ರ ಸರ್ಕಾರವು ಅಸಂಘಟಿತ ವಲಯದ ಕಾರ್ಮಿಕರ ಡೇಟಾಬೇಸ್ ನಿರ್ವಹಿಸಲು ಇ ಶ್ರಮ (e SHRAM) ಪೋರ್ಟಲ್ ನ್ನು ಆರಂಭಿಸಲಿದೆ.
* ಕೇಂದ್ರ ಸರ್ಕಾರದ ಕಾರ್ಮಿಕ ಮತ್ತು ಉದ್ಯೋಗ ಸಚಿವ ಭೂಪೇಂದರ್ ಯಾದವ್ ಅವರು ಆಗಸ್ಟ 24 ರಂದು ಇ ಶ್ರಮಪೋರ್ಟಲ್ ನ ಲಾಂಛನವನ್ನು ಬಿಡುಗಡೆ ಮಾಡಿದ್ದಾರೆ.
* ಇ ಶ್ರಮ (e SHRAM) ಪೋರ್ಟಲ್ ಅಸಂಘಟಿತ ಕಾರ್ಮಿಕರನ್ನು ಪರಿಗಣಿಸುವದು ಉತ್ತಮವಾದ ಹೆಜ್ಜೆಯಾಗಿದೆ ಹಾಗೂ ನಮ್ಮ ರಾಷ್ಟ್ರ ನಿರ್ಮಾಣಕ್ಕಾಗಿ ಶ್ರಮಿಸುವ ಶ್ರಮ ಜೀವಿಗಳ ರಾಷ್ಟ್ರೀಯ ಡೇಟಾಬೇಸ್ ಪೋರ್ಟಲ್ ಇದಾಗಿದೆ.
* ಭಾರತದ ಇತಿಹಾಸದಲ್ಲಿಯೇ ಮೊದಲ ಬಾರಿಗೆ ಸುಮಾರು 38 ಕೋಟಿ ಅಸಂಘಟಿತ ಕಾರ್ಮಿಕರನ್ನು ನೋಂದಾಯಿಸುವ ವ್ಯವಸ್ಥೆಯನ್ನು ಮಾಡಲಾಗುತ್ತಿದೆ ಎಂದು ತಿಳಿಸಿದ್ದಾರೆ, ಹಾಗೂ ಇದರಿಂದಾಗಿ ಲಕ್ಷಾಂತರ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತೆಗೆ ಇದು ಒಂದು ಉತ್ತಮ ವೇದಿಕೆ ಯಾಗಲಿದೆ ಎಂದು ಕೇಂದ್ರ ಕಾರ್ಮಿಕ ಸಚಿವ ಭೂಪೇಂದರ್ ಯಾದವ್ ತಿಳಿಸಿದ್ದಾರೆ.

## ವಿಧವೆಯರಿಗಾಗಿ ವಿಶೇಷ ಕಾರ್ಯಕ್ರಮವನ್ನು ಆರಂಭಿಸಿದ ಮಹಾರಾಷ್ಟ್ರ ಸರ್ಕಾರ



* ಮಹಾರಾಷ್ಟ್ರ ಸರ್ಕಾರವು ವಿಧವೆಯರಿಗಾಗಿ 'ಮಿಷನ್ ವಾತ್ಸಲ್ಯ' ಎಂಬ ವಿಶೇಷ ಕಾರ್ಯಾಚರಣೆಯನ್ನು ಆರಂಭಿಸಿದೆ.
* ಈ ಮಿಷನ್ ವಾತ್ಸಲ್ಯವನ್ನು ವಿಧವೆಯರಿಗಾಗಿ ಅಭಿವೃದ್ಧಿ ಪಡಿಸಲಾಗಿದೆ, ಇದರಿಂದಾಗಿ ಗ್ರಾಮೀಣ ಪ್ರದೇಶಗಳ ಬಡ ಹಿನ್ನೆಲೆ ಹಾಗೂ ವಂಚಿತ ವರ್ಗಗಳಲ್ಲಿರುವ ವಿಧವೆಯರಿಗೆ ಸಹಾಯವಾಗಲಿದೆ ಎಂದಿದ್ದಾರೆ.
* ವಿಧವೆಯರು ಈ ಮಿಷನ್ ವಾತ್ಸಲ್ಯ ಯೋಜನೆಯ ಅಡಿಯಲ್ಲಿ ಸಂಜಯ್ ಗಾಂಧಿ ನಿರಧರ್ ಯೋಜನೆ ಹಾಗೂ ಘರ್ಕುಲ್ ಯೋಜನೆಗಳಿಂದ ಪ್ರಯೋಜನವನ್ನು ಪಡೆಯಲಿದ್ದಾರೆ.
* ಈ ಹಿಂದಿನ 18 ತಿಂಗಳಲ್ಲಿ ಕೋವಿಡ್ 19 ಸಾಂಕ್ರಾಮಿಕದ ಮಧ್ಯೆ ಸುಮಾರು 15,095 ಮಹಿಳೆಯರು ವಿಧವೆಯರಾಗಿದ್ದಾರೆ, ಇದೀಗ ಈ

ಮಿಷನ್ ವಾತ್ಸಲ್ಯ ಯೋಜನೆಯ ಅಡಿಯಲ್ಲಿ 14,661 ಮಹಿಳೆಯರಿಗೆ ಪ್ರಯೋಜನಗಳು ಲಭ್ಯವಾಗಲಿವೆ ಎಂದು ತಿಳಿಸಿದ್ದಾರೆ.

* ಸಂಜಯ್ ಗಾಂಧಿ ನಿರಧರ್ ಯೋಜನೆ: ಈ ಯೋಜನೆ ಅಡಿಯಲ್ಲಿ ಫಲಾನುಭವಿಗಳಿಗೆ ಪ್ರತಿ ತಿಂಗಳು 900 ರೂ. ನೀಡಲಾಗುತ್ತದೆ, ಫಲಾನುಭವಿಗಳ ಮಕ್ಕಳು 25 ವರ್ಷ ಪೂರೈಸುವ ತನಕ ಅಥವಾ ಅವರಿಗೆ ಉದ್ಯೋಗ ಸಿಗುವವರೆಗೆ ನೀಡಲಾಗುತ್ತದೆ ಎಂದು ಮಹಾರಾಷ್ಟ್ರ ಸರ್ಕಾರ ತಿಳಿಸಿದೆ.

* ಸಂಜಯ್ ಗಾಂಧಿ ನಿರಧರ್ ಯೋಜನೆಯು ವಿಧವೆಯರ ಅಷ್ಟೇ ಅಲ್ಲದೇ ನಿರ್ಗತಿಕರು, ಅಂಗವಿಕಲರು, ಅಂಧರು, ವಿಚ್ಛೇದಿತ ಮಹಿಳೆಯರು, ವೇಶ್ಯಾವಾಟಿಕೆಯಿಂದ ಮುಕ್ತರಾದ ಮಹಿಳೆಯರು, ಅನಾಥ ಮಕ್ಕಳು, ಈ ಎಲ್ಲರಿಗೂ ಈ ಯೋಜನೆಯಿಂದ ಸಹಾಯವಾಗಲಿದೆ ಎಂದು ಮಹಾರಾಷ್ಟ್ರ ಸರ್ಕಾರ ತಿಳಿಸಿದೆ.

## ಏಜೆಂಟರಿಗಾಗಿ ಮೊಬೈಲ್ ಆಪ್ ಬಿಡುಗಡೆ ಮಾಡಿದ 'LIC'



* ಭಾರತೀಯ ಜೀವ ವಿಮಾ ನಿಗಮವು (LIC) ಏಜೆಂಟರಿ(ಮಧ್ಯವರ್ತಿ)ಗಾಗಿ "ಆನಂದ ಮೊಬೈಲ್ ಅಪ್ಲಿಕೇಶನ್" ಎಂಬ ಮೊಬೈಲ್ ಆಪ್ ನ್ನು ಬಿಡುಗಡೆ ಮಾಡಿದೆ.

* ಈ ಆನಂದ ಮೊಬೈಲ್ ಅಪ್ಲಿಕೇಶನ್ ನಿಂದ ಏಜೆಂಟ್ ಅಥವಾ ಮಧ್ಯವರ್ತಿಯ ಸಹಾಯದಿಂದ ಕಾಗದ ರಹಿತ (ಪೇಪರ್ ಲೆಸ್) ಮಾಡ್ಯೂಲ್ ಮೂಲಕ ವಿಮಾ ಪಾಲಿಸಿಯನ್ನು ಪಡೆಯಲು ಅಪ್ಲಿಕೇಶನ್ ಸಹಾಯ ಮಾಡಲಿದೆ.

* ಈ ಆನಂದ ಅಪ್ಲಿಕೇಶನ್ ನ್ನು ಎಲ್ಐಸಿ (LIC) ಏಜೆಂಟ್‌ಗಾಗಿ ಮಾತ್ರ ಪ್ರಾರಂಭಿಸಲಾಗಿದೆ.

* ಭಾರತೀಯ ಜೀವ ವಿಮಾ ನಿಗಮ (LIC): LIC ಭಾರತದ ಹಣಕಾಸು ಸಚಿವಾಲಯದ ಅಡಿಯಲ್ಲಿ ಶಾಸನಬದ್ಧ ವಿಮೆ ಮತ್ತು ಹೂಡಿಕೆ ನಿಗಮವಾಗಿದೆ. ಇದನ್ನು1956 ರ ಸೆಪ್ಟೆಂಬರ್. 1 ರಂದು ಸ್ಥಾಪನೆ ಮಾಡಲಾಗಿದೆ, ಹಾಗೂ ಈ ಸಂಸ್ಥೆಯು 2019 ರ ವೇಳೆಗೆ 28.3 ಲಕ್ಷ ಕೋಟಿ ರೂಪಾಯಿಗಳ ಒಟ್ಟು ಜೀವವಿಮೆ ಯನ್ನು ಹೊಂದಿದೆ ಎಂದು ತಿಳಿದುಬಂದಿದೆ.

* ಪ್ರಸ್ತುತ LIC 290 ಮಿಲಿಯನ್ ಪಾಲಿಸಿದಾರರನ್ನು ಹೊಂದಿದೆ.

## ಆಫ್ಘಾನಿಸ್ತಾನದಲ್ಲಿನ ಯೋಜನೆಗಳಿಗೆ ಧನ ಸಹಾಯವನ್ನು ನಿಲ್ಲಿಸಿದ ವಿಶ್ವ ಬ್ಯಾಂಕ್

THE WORLD BANK

* ಪ್ರಸ್ತುತ ವಿಶ್ವ ಬ್ಯಾಂಕ್ ಅಫ್ಘಾನಿಸ್ತಾನದಲ್ಲಿನ ಯೋಜನೆಗಳಿಗೆ ನಿಧಿಯನ್ನು ನಿಲ್ಲಿಸಿದೆ.

* ಇತ್ತೀಚಿಗೆ ತಾಲಿಬಾನಿಗಳು ಅಫ್ಘಾನಿಸ್ತಾನವನ್ನು ವಶಪಡಿಸಿ ಕೊಂಡ ನಂತರ ವಿಶ್ವ ಬ್ಯಾಂಕ್ ಈ ಕ್ರಮವನ್ನು ಕೈಗೊಂಡಿದೆ.

* ಪ್ರಸ್ತುತ ವಿಶ್ವಬ್ಯಾಂಕ್ ಅಫಘಾನಿಸ್ತಾನದಲ್ಲಿನ ಯೋಜನೆಗಳ ಪುನರ್ನಿರ್ಮಾಣ ಮತ್ತು ಅಭಿವೃದ್ಧಿಪಡಿಸಲು 2002 ರಿಂದ 5.3 ಬಿಲಿಯನ್ ಯುಎಸ್ ಡಾಲರ್ ನೀಡಲು ಬದ್ಧವಾಗಿತ್ತು.

* ಪ್ರಸ್ತುತ ಆಗಸ್ಟ್.15 ರಂದು ಅಫ್ಘಾನಿಸ್ತಾನದ ಇಸ್ಲಾಮಿಕ್ ಗಣರಾಜ್ಯ ಸರ್ಕಾರವು ಪತನಗೊಂಡಿತು, ನಂತರ ಆ ದೇಶದ ಪ್ರಧಾನಿ ಅಶ್ರಫ್ ಘನಿ ಪಲಾಯನ ಮಾಡಿದರು ಆ ಸಮಯದಲ್ಲಿ ತಾಲಿಬಾನಿಗಳು ಅಫಘಾನಿಸ್ತಾನದ ರಾಜ್ಯಧಾನಿ ಕಾಬೂಲ್ ನ್ನು ವಶಪಡಿಸಿಕೊಂಡರು.

## ಜಲ ಶಕ್ತಿ ಸಚಿವಾಲಯವು ಸುಜಲಂ ಅಭಿಯಾನವನ್ನು ಆರಂಭಿಸಿದೆ




* 2021 ರ ಆಗಸ್ಟ್. 25 ರಂದು ಜಲಶಕ್ತಿ ಸಚಿವಾಲಯವು ಆಜಾದಿ ಕಾ ಅಮೃತ್ ಮಹೋತ್ಸವ ಆಚರಣೆಯ ಅಂಗವಾಗಿ ಸುಜಲಂ ಎಂಬ 100 ದಿನಗಳ ಅಭಿಯಾನವನ್ನು ಪ್ರಾರಂಭಿಸಿದೆ.

* ಸುಜಲಂ ಎಂದರೆ ಭಾರತದ ಹಳ್ಳಿಗಳಾದ್ಯಂತ ತ್ಯಾಜ್ಯ ನೀರಿನ ನಿರ್ವಹಣೆಯನ್ನು ಕೈಗೊಳ್ಳುವ ಮೂಲಕ ಹೆಚ್ಚು ಒಡಿಎಫ್ ಪ್ಲಸ್ ಗ್ರಾಮಗಳನ್ನು ರಚಿಸುವ ಯೋಜನೆಯಾಗಿದೆ.

* ಜಲ ಸಚಿವಾಲಯ ನೀಡಿರುವ ಮಾಹಿತಿಯ ಪ್ರಕಾರ ಈ ಅಭಿಯಾನವು ತ್ಯಾಜ್ಯ ನೀರಿನ ನಿರ್ವಹಣೆಯಲ್ಲಿ ಮಹತ್ವದ ಪಾತ್ರವನ್ನು ವಹಿಸಲಿದೆ, ಹಾಗೂ ಸ್ವಚ್ಛ ಭಾರತ್ ಮಿಷನ್ ಗ್ರಾಮೀಣ ಹಂತ 2 ಚಟುವಟಿಕೆಗಳಿಗೆ ಉತ್ತೇಜನ ನೀಡುತ್ತದೆ.

## ಸೆರಮ್ ಇನ್ಸ್ಟಿಟ್ಯೂಟ್ ನಿಂದ ಸೆಪ್ಟೆಂಬರ್ ನಲ್ಲಿ ಸುಮಾರು 20 ಕೋಟಿ ಡೋಸ್ ಕೋವಿಶೀಲ್ಡ್ ಲಸಿಕೆ ಕೇಂದ್ರಕ್ಕೆ



* ಸೆರಮ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಮುಂಬರುವ ಸೆಪ್ಟೆಂಬರ್‌ನಲ್ಲಿ ಸರಿ ಸುಮಾರು 20 ಕೋಟಿ ಡೋಸ್ ಕೋವಿಡ್ 19 ಕೊವಿಶೀಲ್ಡ್ ಲಸಿಕೆಯನ್ನು ಕೇಂದ್ರ ಸರ್ಕಾರಕ್ಕೆ ಹಾಗೂ ಖಾಸಗಿ ಆಸ್ಪತ್ರೆಗಳಿಗೆ ಪೂರೈಕೆಮಾಡುವದಾಗಿ ಅಧಿಕೃತವಾಗಿ ತಿಳಿಸಿದೆ.

* ಮಹಾರಾಷ್ಟ್ರದ ಪುಣೆಯ ಮೂಲದ ಸೆರಮ್ ಇನ್‌ಸ್ಟಿಟ್ಯೂಟ್ ಆಫ್

ಇಂಡಿಯಾ ಇಲ್ಲಿಯವರೆಗೆ ಅಂದರೆ ಆಗಸ್ಟ್ ತಿಂಗಳಿನವರೆಗೆ 12 ಕೋಟಿ ಡೋಸ್ ಕೋವಿಡ್ 19 ಲಸಿಕೆ ಪೂರೈಸಿದೆ ಎಂದು ತಿಳಿಸಿದೆ.

* ಈ ಲಸಿಕೆ ಪೂರೈಕೆಯ ಮಾಹಿತಿಯ ಬಗ್ಗೆ ಸೆರಮ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಸರ್ಕಾರಿ ಮತ್ತು ನಿಯಂತ್ರಕ ವ್ಯವಹಾರಗಳ ನಿರ್ದೇಶಕ ಪ್ರಕಾಶ್ ಕುಮಾರ್ ಸಿಂಗ್ ಅವರು ಕೇಂದ್ರ ಆರೋಗ್ಯ ಸಚಿವಾಲಯಕ್ಕೆ ಮಾಹಿತಿ ನೀಡಿದ್ದಾರೆ.

## CCTV ಅಳವಡಿಕೆಯಲ್ಲಿ ನ್ಯೂಯಾರ್ಕ್, ಲಂಡನ್ ಹಿಂದಿಕ್ಕಿದ ದೆಹಲಿ



* ಪ್ರಸ್ತುತ ಭಾರತದ ರಾಜಧಾನಿ ದೆಹಲಿಯ ನಗರಗಳಲ್ಲಿ ಅತೀ ಹೆಚ್ಚು CCTV ಅಳವಡಿಕೆ ಮಾಡಿದೆ.

* ಇದೀಗ ದೆಹಲಿ ನಗರವು CCTV ಅಳವಡಿಕೆಯಲ್ಲಿ ಲಂಡನ್, ಶಾಂಘೈ, ನ್ಯೂಯಾರ್ಕ್ ಮತ್ತು ಸಿಂಗಾಪುರ ನಗರಗಳನ್ನು ಹಿಂದಿಕ್ಕಿ ವಿಶ್ವದಲ್ಲಿಯೇ ಪ್ರಥಮ ಸ್ಥಾನದಲ್ಲಿದೆ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ತಿಳಿಸಿದ್ದಾರೆ.

* ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಪ್ರತಿ ಚದರ ಮೈಲಿಗೆ ಸಿಸಿಟಿವಿಗಳನ್ನು ಅಳವಡಿಸಲಾಗಿದೆ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಅಂತಾರಾಷ್ಟ್ರೀಯ ನಿಯತಕಾಲಿಕದಲ್ಲಿ ಪ್ರಕಟವಾದ ಮಾಹಿತಿಯನ್ನು ತಿಳಿಸಿದ್ದಾರೆ.

* ವಿಶ್ವದಾದ್ಯಂತದ 150 ನಗರಗಳ ಪೈಕಿ ದೆಹಲಿ ನಗರವು ಜಾಗತಿಕವಾಗಿ ಅತೀ ಹೆಚ್ಚು CCTV ಹೊಂದಿದೆ, ಪ್ರಸ್ತುತ ದೆಹಲಿಯ ಪ್ರತಿ ಚದರ ಮೈಲಿಗೆ 1,826 ಕ್ಯಾಮೆರಾಗಳನ್ನು ಅಳವಡಿಸಲಾಗಿದೆ.

## ಯಾಹೂ ಭಾರತದಲ್ಲಿನ ತನ್ನ ಸುದ್ದಿ ತಾಣಗಳನ್ನು ಮುಚ್ಚಿದೆ

YAHOO!

* ಇಂಟರ್ನೆಟ್ ಸಂಸ್ಥೆಯಾಗಿರುವ ಯಾಹೂ ಇದೀಗ ಭಾರತದಲ್ಲಿನ ತನ್ನ ಎಲ್ಲ ಸುದ್ದಿ ತಾಣವನ್ನು ಮುಚ್ಚಿದೆ.

* ಪ್ರಸ್ತುತ ಭಾರತ ಸರ್ಕಾರದ ನೂತನ ನೇರ ವಿದೇಶಿ ಹೂಡಿಕೆಯ ನಿಯಮಗಳಿಂದ ಇದೀಗ ಸಂಸ್ಥೆಯ ಮೇಲೆ ವಿದೇಶಿ ಮಾಲಕತ್ವಕ್ಕೆ ನಿರ್ಬಂಧವನ್ನು ಹೇರಲಾಗಿದೆ ಇದರಿಂದಾಗಿ ಸಂಸ್ಥೆಯನ್ನು ನಡೆಸುವುದು ಕಷ್ಟವಾಗಿದೆ ಎಂದು ಯಾಹೂ ಮಾಹಿತಿಯನ್ನು ನೀಡಿದೆ.

* ಪ್ರಸ್ತುತ ಭಾರತದಲ್ಲಿನ ಯಾಹೂ ಅಂಗಸಂಸ್ಥೆಗಳಾಗಿರುವ ಯಾಹೂ ನ್ಯೂಸ್, ಯಾಹೂ ಕ್ರಿಕೆಟ್, ಫೈನಾನ್ಸ್, ಎಂಟರ್ಟೈನ್ಮೆಂಟ್'ಗಳನ್ನೂ ಮುಚ್ಚಲಾಗಿದೆ, ಆದರೆ ಯಾಹೂ ಇ ಮೇಲ್ ಹಾಗೂ ಯಾಹೂ ಸರ್ಚ್ ಎಂಜಿನ್ನು ಮುಚ್ಚಲಾಗುವುದಿಲ್ಲ ಎಂದು ಯಾಹೂ ಸಂಸ್ಥೆ ತಿಳಿಸಿದೆ.

* 2017 ರಲ್ಲಿ ಯಾಹೂ ಸಂಸ್ಥೆಯನ್ನು ಅಮೇರಿಕದ ವೆರಿಜಾನ್ ಸಂಸ್ಥೆಯು ಖರೀದಿ ಮಾಡಿದೆ.

* ಯಾಹೂ ಸಂಸ್ಥೆಯು ಒಂದು ಅಮೇರಿಕನ್ ವೆಬ್ ಸೇವೆ ಒದಗಿಸುವ ಸಂಸ್ಥೆಯಾಗಿದೆ, ಹಾಗೂ ಇದು ತನ್ನ ಪ್ರಧಾನ ಕಚೇರಿಯನ್ನು ಕ್ಯಾಲಿಫೋರ್ನಿಯಾದ ಸನ್ನಿವೇಲ್‌ನಲ್ಲಿ ಹೊಂದಿದೆ

* ಯಾಹೂ ಸಂಸ್ಥೆಯನ್ನು 1994 ರ ಜನೇವರಿಯಲ್ಲಿ ಸ್ಥಾಪನೆ ಮಾಡಲಾಗಿದೆ.

* ಈ ಸಂಸ್ಥೆಯ ಸ್ಥಾಪಕರು: ಜೆರ್ರಿ ಯಾಂಗ್, ಡೇವಿಡ್ ಫಿಲೋ.

## 'ಅಜಯ್ ಕುಮಾರ್' RBI ಕಾರ್ಯನಿರ್ವಾಹಕ ನಿರ್ದೇಶಕರಾಗಿ ನೇಮಕ




* ಭಾರತೀಯ ರಿಸರ್ವ್ ಬ್ಯಾಂಕ್ (RBI) 2021 ರ ಆಗಸ್ಟ್. 20 ರಿಂದ ಅಜಯ್ ಕುಮಾರ್ ಅವರನ್ನು RBI ನ ಕಾರ್ಯನಿರ್ವಾಹಕ ನಿರ್ದೇಶಕರಾಗಿ ನೇಮಕ ಮಾಡಲಾಗಿದೆ ಎಂದು ಕೇಂದ್ರ ಬ್ಯಾಂಕ್ ತಿಳಿಸಿದೆ.

* ಈ ಮೊದಲು ಅಜಯ್ ಕುಮಾರ್ ಅವರು ನವದೆಹಲಿ ಪ್ರಾದೇಶಿಕ ಕಚೇರಿಯ ಮುಖ್ಯಸ್ಥರಾಗಿದ್ದರು, ಹಾಗೂ ಇವರು ವಿದೇಶಿ ವಿನಿಮಯ, ಬ್ಯಾಂಕಿಂಗ್ ಮೇಲ್ವಿಚಾರಣೆ, ಹಣಕಾಸು ಸೇರ್ಪಡೆ, ಕರೆನ್ಸಿ ನಿರ್ವಹಣೆ ಹೀಗೆ ಹಲವು RBI ನ ವಿವಿಧ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸಿದ್ದಾರೆ.

## ಸುಪ್ರೀಂಕೋರ್ಟ್ ಗೆ ನೂತನ '9' ನ್ಯಾಯಾಧೀಶರ ನೇಮಕ



* ಸುಪ್ರೀಂಕೋರ್ಟ್ ಗೆ ನೂತನ '9' ನ್ಯಾಯಾಧೀಶರ ನೇಮಕಕ್ಕೆ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರು ಸಹಿ ಹಾಕಿದ್ದಾರೆ, ಇದರಲ್ಲಿ '3' ಮಹಿಳಾ ನ್ಯಾಯಾಧೀಶರಿದ್ದಾರೆ.

* ಕರ್ನಾಟಕ ಹೈಕೋರ್ಟ್‌ನ ನ್ಯಾಯಮೂರ್ತಿ ಬಿ.ವಿ. ನಾಗರತ್ನಾ ಅವರು ಭಾರತದ ಮೊದಲ ಮಹಿಳಾ ಮುಖ್ಯ ನ್ಯಾಯಮೂರ್ತಿಯಾಗಲಿದ್ದಾರೆ, ಅಂದರೆ ಇವರು 2027 ರ ಸೆಪ್ಟೆಂಬರ್ ನಲ್ಲಿ ಮುಖ್ಯ ನ್ಯಾಯಮೂರ್ತಿಯಾಗಿ ಅಧಿಕಾರ ಸ್ವೀಕಾರ ಮಾಡಲಿದ್ದಾರೆ.

* ನೂತನ '9' ನ್ಯಾಯಾಧೀಶರು: ನ್ಯಾಯಮೂರ್ತಿ ಬಿ.ವಿ. ನಾಗರತ್ನ, ನ್ಯಾಯಮೂರ್ತಿ ಬೇಲಾ ಎಂ ತ್ರಿವೇದಿ, ನ್ಯಾಯಮೂರ್ತಿ ಸಿ.ಟಿ.

ರವಿಕುಮಾರ್, ನ್ಯಾಯಮೂರ್ತಿ ಎಂ.ಎಂ. ಸುಂದರೇಶ್, ಪಿ.ಎಸ್. ನರಸಿಂಹ ಅವರನ್ನು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳಾಗಿ ನೇಮಕ ಮಾಡಲಾಗಿದೆ.

* ಪ್ರಸ್ತುತ ಹೈಕೋರ್ಟ್‌ನ ಮುಖ್ಯನ್ಯಾಯಮೂರ್ತಿಗಳಾಗಿ ಅಭಯ್ ಶ್ರೀನಿವಾಸ್ ಓಕಾ, ವಿಕ್ರಮ್ ನಾಥ್, ಜಿತೇಂದ್ರ ಕುಮಾರ್ ಮಹೇಶ್ವರಿ, ಹಿಮಾ ಕೊಹ್ಲಿ ಇವರನ್ನು ಸುಪ್ರೀಂ ಕೋರ್ಟ್ ನ ನೂತನ ನ್ಯಾಯಮೂರ್ತಿಗಳಾಗಿ ನೇಮಕ ಮಾಡಲಾಗಿದೆ.

# 28-08-2021

## ಬಾರ್ಸಿಲೋನಾ ಓಪನ್ ಚೆಸ್ ಟೂರ್ನಿಯ ಪ್ರಶಸ್ತಿ ಗೆದ್ದ ಎಸ್.ಪಿ.ಸೇತುರಾಮನ್



* ಬಾರ್ಸಿಲೋನಾ ಓಪನ್ ಚೆಸ್ ಟೂರ್ನಿಯ ಪ್ರಶಸ್ತಿಯನ್ನು ಭಾರತದ ಗ್ರ್ಯಾಂಡ್‌ಮಾಸ್ಟರ್ ಎಸ್.ಪಿ. ಸೇತುರಾಮನ್ ಅವರು ಗೆದ್ದುಕೊಂಡಿದ್ದಾರೆ.

* ರಷ್ಯಾದ ಡ್ಯಾನಿಯಲ್ ಯೂಫ ಅವರು 2 ನೇ ಸ್ಥಾನವನ್ನು ಪಡೆದುಕೊಂಡಿದ್ದಾರೆ.

* ಇದೇ ಬಾರ್ಸಿಲೋನಾ ಓಪನ್ ಚೆಸ್ ಟೂರ್ನಿಯಲ್ಲಿ ಕಾರ್ತಿಕೇಯನ್ ಮುರಳಿ ಅವರು 3 ನೇ ಸ್ಥಾನವನ್ನು ಪಡೆದುಕೊಂಡಿದ್ದಾರೆ.

* ಈ ಓಪನ್ ಚೆಸ್ ಟೂರ್ನಿಯಲ್ಲಿ ಗೆದ್ದಿರುವ ಸೇತುರಾಮನ್ ಅವರು 8.5 ಎಲೊ ಪಾಯಿಂಟ್ಸ್ ಗಳನ್ನೂ ಪಡೆದುಕೊಂಡಿದ್ದಾರೆ, ಹಾಗೂ ಮುರಳಿ ಅವರು 6.4 ಪಾಯಿಂಟ್‌ಗಳನ್ನೂ ಪಡೆದುಕೊಂಡಿದ್ದಾರೆ.

## ನಟ ಸೋನು ಸೂದ್ ದೆಹಲಿ ಸರ್ಕಾರದ ಯೋಜನೆಗಳಿಗೆ ರಾಯಭಾರಿ 'ದೇಶ್ ಕಾ ಮೆಂಟರ್ಸ್'



* ಬಾಲಿವುಡ್ ನಟ ಸೋನುಸೂದ್ ಅವರು ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ನೇತೃತ್ವದ ಸರ್ಕಾರದ ಯೋಜನೆಗಳಿಗೆ ರಾಯಭಾರಿಯಾಗಿ ನೇಮಕವಾಗಿದ್ದಾರೆ.

* ನಟ ಸೋನು ಸೂದ್ ಅವರು ದೆಹಲಿ ಆಡಳಿತ ಪಕ್ಷ AAP ಸರ್ಕಾರದ 'ದೇಶ್ ಕಾ ಮೆಂಟರ್ಸ್' ಕಾರ್ಯಕ್ರಮದ ಬ್ರಾಂಡ್ ಅಂಬಾಸಿಡರ್ ಆಗಿ ನೇಮಕವಾಗಿದ್ದಾರೆ.

* ಈ ಮಾಹಿತಿಯನ್ನು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ತಿಳಿಸಿದ್ದಾರೆ, ಪ್ರಸ್ತುತ ದೆಹಲಿಯ ಸರ್ಕಾರದ ಈ ಯೋಜನೆಯ ಅಡಿಯಲ್ಲಿ ವಿದ್ಯಾರ್ಥಿಗಳು ತಮ್ಮ ವೃತ್ತಿಜೀವನದ ಆಯ್ಕೆಗಳನ್ನು ಮಾಡಲು ಮಾರ್ಗದರ್ಶನವನ್ನು ನೀಡಲಾಗುತ್ತದೆ ಎಂದು ತಿಳಿಸಿದ್ದಾರೆ.

## ಪ್ಯಾರಾಲಿಂಪಿಕ್ಸ್ ನ ಪವರ್‌ಲಿಫ್ಟಿಂಗ್‌ನಲ್ಲಿ ದಾಖಲೆ ಬರೆದ ಗುವೊ ಲಿಂಗ್ಲಿಂಗ್



* ಪ್ರಸ್ತುತ ಟೋಕಿಯೊ ಪ್ಯಾರಾಲಿಂಪಿಕ್ಸ್'ನ ಪವರ್‌ಲಿಫ್ಟಿಂಗ್‌ನ 41 ಕೆಜಿ ಮಹಿಳಾ ವಿಭಾಗದಲ್ಲಿ ಚೀನಾ ದೇಶದ ಗುವೊ ಲಿಂಗ್ಲಿಂಗ್ ಅವರು ತಮ್ಮ ಚೊಚ್ಚಲ ಪ್ಯಾರಾಲಿಂಪಿಕ್ಸ್‌ನಲ್ಲಿಯೇ 108 ಕೆಜಿ ಭಾರ ಎತ್ತುವ ಮೂಲಕ ವಿಶ್ವ ಚಿನ್ನದ ಪದಕವನ್ನು ಜಯಿಸಿಕೊಂಡಿದ್ದಾರೆ, ಹಾಗೂ ಇದರೊಂದಿಗೆ ವಿಶ್ವ ದಾಖಲೆಯನ್ನೂ ಸಹ ಬರೆದಿದ್ದಾರೆ.

* ಇದೇ ಪವರ್‌ಲಿಫ್ಟಿಂಗ್‌ನಲ್ಲಿ ಇಂಡೊನೇಷ್ಯಾದ ವಿಡಿಯಾಶಿನ್ ನೀ ನಿಂಗಾ ಅವರು 98 ಕೆಜಿ ಭಾರ ಎತ್ತುವ ಮೂಲಕ ಬೆಳ್ಳಿ ಪದಕವನ್ನು ಜಯಿಸಿಕೊಂಡಿದ್ದಾರೆ.

* ವೆನೆಜುವೆಲಾದ ಫಾಂಟಿಸ್ ಮೊನಸ್ಟೆರಿಯೊ ಅವರು 97 ಕೆಜಿ ಭಾರ ಎತ್ತುವ ಮೂಲಕ 3 ನೇ ಸ್ಥಾನ ಅಂದರೆ ಕಂಚಿನ ಪದಕವನ್ನು ಜಯಿಸಿದ್ದಾರೆ.

## ಕೇಂದ್ರದಿಂದ ನವೋದ್ಯಮಗಳಿಗಾಗಿ 'ಸಮೃದ್ಧ್' ಯೋಜನೆ




* ಕೇಂದ್ರ ಸರ್ಕಾರವು ಮಾಹಿತಿ ತಂತ್ರಜ್ಞಾನ (IT) 300 ನವೋದ್ಯಮಗಳಿಗೆ ನೆರವಾಗುವ ನಿಟ್ಟಿನಲ್ಲಿ ಸಮೃದ್ಧ್ (ಸ್ಟಾರ್ಟ್‌ಅಪ್ ಆಕ್ಸಲರೇಟರ್ ಆಫ್ ಎಂಇಐಟಿವೈ ಫಾರ್ ಪ್ರಾಡಕ್ಟ್ ಇನೊವೇಷನ್, ಡೆವಲಪ್‌ಮೆಂಟ್ ಆಯಂಡ್ ಗ್ರೋತ್) ಯೋಜನೆಯನ್ನು ಆರಂಭಿಸಿದೆ ಎಂದು ಕೇಂದ್ರ ಮಾಹಿತಿ ಹಾಗೂ ತಂತ್ರಜ್ಞಾನ ಮತ್ತು ದೂರ ಸಂಪರ್ಕ ಸಚಿವ ಅಶ್ವಿನಿ ವೈಷ್ಣವ್ ಅವರು ತಿಳಿಸಿದ್ದಾರೆ.

* ಮಾಹಿತಿ ಹಾಗೂ ತಂತ್ರಜ್ಞಾನ (IT) ಇಲಾಖೆ ಈ ಸಮೃದ್ಧ್ ಯೋಜನೆ ಅಡಿಯಲ್ಲಿ ಆಯ್ದ ನವೋದ್ಯಮಗಳಲ್ಲಿ 100 ಯೂನಿಕಾರ್ನ್‌ಗಳನ್ನು ಸಿದ್ಧಪಡಿಸುವ ಯೋಜನೆಯಿಂದ ಆರಂಭಿಕ ಬಂಡವಾಳ, ಮಾರ್ಗದರ್ಶನ ಇದಲ್ಲದೇ ಮಾರುಕಟ್ಟೆ ಪ್ರವೇಶದ ಅವಕಾಶವನ್ನು ನೀಡಲಾಗುತ್ತದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

* ಕೇಂದ್ರ ಸರ್ಕಾರದ ಈ ಸಮೃದ್ಧ್ ಯೋಜನೆಯ ಅಡಿಯಲ್ಲಿ ಆಯ್ಕೆ ಆಗುವ ಹೊಸ ಉದ್ಯಮಗಳಿಗೆ ಮಾಹಿತಿ ಹಾಗೂ ತಂತ್ರಜ್ಞಾನ ಸಚಿವಾಲಯವು ಅಂದಾಜು 40 ಲಕ್ಷ ಆರಂಭಿಕ ಬಂಡವಾಳ ನೀಡಲಿದೆ ಮತ್ತು ಆರು ತಿಂಗಳುಗಳ ಕಾಲ ಮಾರ್ಗದರ್ಶನ (ಟ್ರೇನಿಂಗ್)ವನ್ನು ನೀಡಲಿದೆ ಎಂದು

ತಿಳಿಸಿದ್ದಾರೆ.

## ಬೆಂಗಳೂರು ಜಾಮ್ ನಗರಕ್ಕೆ ಉಡಾನ್ ಯೋಜನೆಯಡಿ ನೇರ ವಿಮಾನ



* ಉಡಾನ್ ಯೋಜನೆ ಅಡಿಯಲ್ಲಿ ಕರ್ನಾಟಕ ರಾಜ್ಯದ ಬೆಂಗಳೂರು ಮತ್ತು ಗುಜರಾತ್ ರಾಜ್ಯದ ಜಾಮ್ ನಗರ ಮಧ್ಯೆ ನೇರ ವಿಮಾನ ಸೌಕರ್ಯ ಪ್ರಾರಂಭವಾಗಿದೆ, ಈ ವಿಮಾನ ಸೌಕರ್ಯವೂ ವಾರದಲ್ಲಿ 3 ದಿನಗಳ ಈ ಎರಡು ನಗರಗಳ ನಡುವೆ ವಿಮಾನ ಸಂಚರಿಸಲಿದೆ.
* ಈ ಕೇಂದ್ರ ಸರ್ಕಾರದ ಈ ಯೋಜನೆಗೆ ಕೇಂದ್ರ ನಾಗರಿಕ ವಿಮಾನಯಾನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಹಾಗೂ ವಿಮಾನಯಾನ ಖಾತೆ ರಾಜ್ಯ ಸಚಿವರು ಜನರಲ್ ಡಾ. ವಿ. ಕೆ. ಸಿಂಗ್ ಅವರು ವರ್ಚುವಲ್ ಸಭೆಯ ಮೂಲಕ ಈ ವಿಮಾನ ಸೇವೆಗೆ ಚಾಲನೆ ನೀಡಿದ್ದಾರೆ.
* ಈ ಉಡಾನ್ ಯೋಜನೆ ಅಡಿಯಲ್ಲಿ ಕರ್ನಾಟಕ ರಾಜ್ಯದ ಬೆಂಗಳೂರು, ಹಾಗೂ ಗುಜರಾತ್ ರಾಜ್ಯದ ಜಾಮ್ ನಗರ, ಮತ್ತು ತೆಲಂಗಾಣ ರಾಜ್ಯದ ಹೈದರಾಬಾದ್ ನಗರಗಳ ಮಧ್ಯೆ ಆರಂಭವಾದ ಮೊದಲ ನೇರ ವಿಮಾನ ಸೇವೆಗೆ ಇದಾಗಿದೆ ಹಾಗೂ ಇದಕ್ಕೆ ಚಾಲನೆ ನೀಡಿದ್ದಾರೆ.
* ಗುಜರಾತ್ ರಾಜ್ಯದ ಜಾಮ್ ನಗರವನ್ನು "ಛೋಟಿ ಕಾಶಿ" ಎಂದು ಕರೆಯುತ್ತಾರೆ, ಹಾಗೂ ಈ ಜಾಮ್ ನಗರವನ್ನು ಚಾರ್ ಧಾಮಗಳಲ್ಲಿ ಒಂದಾಗಿರುವ ಮೋಕ್ಷಪುರಿ ನಗರ ದ್ವಾರಕಾದ ಗೇಟ್‌ವೇ ನಗರ ಎನ್ನುವರು, ಪ್ರಸ್ತುತ ಈ ನಗರವು 100 ಕ್ಕೂ ಅಧಿಕ ದೇವಾಲಯಗಳನ್ನೂ ಹೊಂದಿದೆ.
* ಒಟ್ಟಾರೆ 369 ಮಾರ್ಗಗಳು ಹಾಗೂ 60 ವಿಮಾನ ನಿಲ್ದಾಣಗಳು ಈ ಉಡಾನ್ ಯೋಜನೆ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿವೆ.

## NEP 2020 ನ್ನು ಜಾರಿಗೆ ತಂದ ಮಧ್ಯಪ್ರದೇಶ ರಾಜ್ಯ



* 2021 ರ ಆಗಸ್ಟ್. 26 ರಂದು ರಾಷ್ಟ್ರೀಯ ಶಿಕ್ಷಣ ನೀತಿ 2020 (NEP 2020) ಯನ್ನು ಮಧ್ಯಪ್ರದೇಶ ರಾಜ್ಯ ಸರ್ಕಾರವು ಜಾರಿಗೊಳಿಸಿದೆ.
* NEP 2020 ಯನ್ನು ಜಾರಿಗೆ ತಂದ ಭಾರತದ 2 ನೇ ರಾಜ್ಯ ಮಧ್ಯೆ ಪ್ರದೇಶ, ಈ ಹೊಸ ಶಿಕ್ಷಣ ನೀತಿಯಿಂದಾಗಿ ವಿದ್ಯಾರ್ಥಿಗಳು ತಮ್ಮ ತಮ್ಮ ಗಡಿಯ ಹೊರಗೆ ಅನ್ವೇಷಿಸಲು ಸಹಾಯ ಮಾಡಲಿದೆ.
* ಈ ಹೊಸ ಶಿಕ್ಷಣ ನೀತಿಯು NSS, NCC, ಹಾಗೂ ಕೌಶಲ್ಯ ಆಧಾರಿತ ವಿಷಯಗಳ ಮೇಲೆ ಹೆಚ್ಚು ನಿಗಾವಹಿಸಲಿದೆ ಎಂದು ತಿಳಿದು ಬಂದಿದೆ.
* ಭಾರತವನ್ನು ಜಾಗತಿಕ ಜ್ಞಾನದ ಸೂಪರ್ ಪವರ್ ಮಾಡುವ ನಿಟ್ಟಿನಲ್ಲಿ ಈ ರಾಷ್ಟ್ರೀಯ ಶಿಕ್ಷಣ ನೀತಿ 2020 ನ್ನು ಆರಂಭಿಸಲಾಗಿದೆ.
* ಈ NEP ಯು ಮೊದಲು ಸಾಕ್ಷರತೆ ಮತ್ತು ಸಂಖ್ಯಾಶಾಸ್ತ್ರಕ್ಕೆ ಒತ್ತು ನೀಡಲಿದೆ, ಹಾಗೂ ವೃತ್ತಿಪರ ಶಿಕ್ಷಣವು ತರಗತಿಯ ಪ್ರಕಾರ 6 ನೇ ತರಗತಿಯಿಂದ ಇಂಟರ್ನ್‌ಶಿಪ್‌ನೊಂದಿಗೆ ಆರಂಭಿಸಲಿದೆ, ಅಲ್ಲದೇ ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆಯಲ್ಲಿ ಕನಿಷ್ಠ 5 ನೇ ತರಗತಿಯವರೆಗೆ ಕಲಿಸಲು ಸಹಾಯ ನೀಡುತ್ತದೆ, ಹಾಗೂ ಯಾವುದೇ ಭಾಷೆಯನ್ನು ವಿದ್ಯಾರ್ಥಿಯ ಮೇಲೆ ಹೇರುವುದಿಲ್ಲ ಎಂದು ತಿಳಿಸಿದೆ.

## 'Shared Destiny 2021' ರಕ್ಷಣಾ ವ್ಯಾಯಾಮ



* ಪ್ರಸ್ತುತ ಚೀನಾ, ಮಂಗೋಲಿಯಾ, ಥೈಲ್ಯಾಂಡ್ ಮತ್ತು ಪಾಕಿಸ್ತಾನದ ಮಿಲಿಟರಿಗಳು 'ಹಂಚಿದ ಡೆಸ್ಟಿನಿ 2021 (Shared Destiny 2021) ಎಂಬ ಬಹುರಾಷ್ಟ್ರೀಯ ಶಾಂತಿಪಾಲನಾ ವ್ಯಾಯಾಮದಲ್ಲಿ ಭಾಗವಹಿಸಲಿವೆ.
* ಈ ರಕ್ಷಣಾ ವ್ಯಾಯಾಮವನ್ನು 2021 ರ ಸೆಪ್ಟೆಂಬರ್. 6 ರಿಂದ 15 ರ ವರೆಗೆ ಚೀನಾದ ಹೆನಾನ್ ಪ್ರಾಂತ್ಯದ ಸಂಯೋಜಿತ ಶಸ್ತ್ರಾಸ್ತ್ರಗಳ ತರಬೇತಿ ಕೇಂದ್ರದಲ್ಲಿ ಪೀಪಲ್ಸ್ ಲಿಬರೇಶನ್ ಆರ್ಮಿಯು ಆಯೋಜಿಸಲಿದೆ, ಹಾಗೂ ಇದು 4'ರಾಷ್ಟ್ರಗಳನ್ನು ಒಳಗೊಂಡಿರುವ ಮೊದಲ ಬಹುರಾಷ್ಟ್ರೀಯ ಶಾಂತಿಪಾಲನಾ ನೇರ ವ್ಯಾಯಾಮವಾಗಿದೆ.
* ಈ ವ್ಯಾಯಾಮದಲ್ಲಿ ಭಾಗವಹಿಸುವ ಎಲ್ಲ ದೇಶಗಳು ಸುಮಾರು 1,000 ಸೈನಿಕರನ್ನು ಡ್ರಿಲ್‌ಗಳ ಭಾಗವಾಗಿ ಕಳುಹಿಸುತ್ತವೆ, ಈ ಎಲ್ಲ ಪಡೆಗಳು ಹಂಚಿದ ಡೆಸ್ಟಿನಿ ಅಡಿಯಲ್ಲಿ ವ್ಯಾಯಾಮವನ್ನು ನಡೆಸುತ್ತವೆ.
* ಹೆನಾನ್ ಪ್ರಾಂತ್ಯವು ಚೀನಾ ನಾಗರೀಕತೆಯ ಜನ್ಮಸ್ಥಳವಾಗಿದೆ, ಹಾಗೂ ಹೆನಾನ್ ಪ್ರಾಂತ್ಯವು ಚೀನಾದ ಭೂಕುಸಿತ ಪ್ರಾಂತ್ಯವಾಗಿದೆ, ಅಲ್ಲದೇ ಈ ಪ್ರಾಂತ್ಯವು ಸುಮಾರು 3,000 ವರ್ಷಗಳ ಇತಿಹಾಸವನ್ನು ಹೊಂದಿದೆ.
* ಈ ಚೀನಾದ ಹೆನಾನ್ ಪ್ರಾಂತ್ಯವು ಈ ಹಿಂದೆ ಸುಮಾರು 1,000 ವರ್ಷಗಳವರೆಗೆ ಚೀನಾದ ಸಾಂಸ್ಕೃತಿಕ, ಆರ್ಥಿಕ ಮತ್ತು ರಾಜಕೀಯ ಕೇಂದ್ರವಾಗಿತ್ತು, ಅಲ್ಲದೇ ಚೀನಾದಲ್ಲಿನ 5 ನೇ ಅತಿದೊಡ್ಡ ಪ್ರಾಂತೀಯ ಆರ್ಥಿಕತೆ ಪ್ರಾಂತ್ಯವಾಗಿದೆ ಎಂದು ತಿಳಿಸಿದ್ದಾರೆ.

## ಭಾರತದ ಗಾತ್ರದ ಸಮೀಕ್ಷೆಯನ್ನು ಆರಂಭಿಸಿದ ಜವಳಿ ಸಚಿವಾಲಯ



* ಪ್ರಸ್ತುತ ಭಾರತದ ಗಾತ್ರದ ಗೊಂದಲವನ್ನು ಹೋಗಲಾಡಿಸಲು ಜವಳಿ ಮತ್ತು ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಫ್ಯಾಶನ್ ಟೆಕ್ನಾಲಜಿ (NIFT) ಗಾತ್ರದ ಸಮೀಕ್ಷೆಯನ್ನು ಆರಂಭಿಸಿದೆ.
* ಈ ಸಮೀಕ್ಷೆಯನ್ನು ಭಾರತದ ಗಾತ್ರ ಎಂದು ಹೆಸರಿಸಲಾಗಿದೆ.
* ಪ್ರಸ್ತುತ ಭಾರತದಲ್ಲಿ ಸಿದ್ಧವಾಗುವ ಉಡುಪುಗಳ ಉಡುಪು ವಲಯದಲ್ಲಿ ಹೊಸ ಪ್ರಮಾಣಿತ ಗಾತ್ರದ ಚಾರ್ಟ್'ನ್ನು ಪರಿಚಯಿಸುವ ನಿಟ್ಟಿನಲ್ಲಿ ಈ ಉಪಕ್ರಮವನ್ನು ಆರಂಭಿಸಿದ್ದಾರೆ.
* ಈ ಮೊದಲು 2019 ರ ಫೆಬ್ರವರಿಯಲ್ಲಿ ಈ ಯೋಜನೆಯನ್ನು ಘೋಷಣೆ ಮಾಡಲಾಗಿತ್ತು, ಆದರೆ ಕೋವಿಡ್ 19 ಸಾಂಕ್ರಾಮಿಕ ರೋಗದ ಕಾರಣದಿಂದ ವಿಳಂಬವಾಗಿದೆ.
* ಭಾರತದ ಹೊಸ ಗಾತ್ರದ ಚಾರ್ಟ್ ಗುರುತಿನ ಸಂಖ್ಯೆಯನ್ನು ಹೊಂದಿರುತ್ತದೆ, ದೇಹದ ಗಾತ್ರ ಹಾಗೂ ಮ್ಯಾಪಿಂಗ್, ವರ್ಗೀಕರಿಸುವುದು ಮತ್ತು ವ್ಯಾಖ್ಯಾನಿಸುವ ಮೂಲಕ ಈ ಕ್ರಮವನ್ನು ರಚಿಸಲಾಗುತ್ತದೆ ಎಂದು ತಿಳಿದು ಬಂದಿದೆ.
* ಪ್ರಸ್ತುತ 18 ದೇಶಗಳು ತಮ್ಮದೇ ಗಾತ್ರದ ಪಟ್ಟಿಯನ್ನು ಹೊಂದಿವೆ.
* ಭಾರತದ ಗಾತ್ರದ ಸಮೀಕ್ಷೆಯನ್ನು ದೆಹಲಿ, ಚೆನ್ನೈ, ಹೈದರಾಬಾದ್, ಮುಂಬೈ, ಶಿಲ್ಲಾಂಗ್ ಮತ್ತು ಕೋಲ್ಕತ್ತಾ ಈ '6' ರಾಜ್ಯಗಳಲ್ಲಿ ನಡೆಸಲಾಗುತ್ತಿದೆ ಎಂದು ತಿಳಿದು ಬಂದಿದೆ.
* ಭಾರತದ ಗಾತ್ರ ಸಮೀಕ್ಷೆಯು ಜವಳಿ ಸಚಿವಾಲಯದ "ಫೈಬರ್ ಟು ಫ್ಯಾಶನ್" ಉಪಕ್ರಮದ ಒಂದು ಭಾಗವಾಗಿದೆ.

## ಗಲ್ಫ್ ಆಫ್ ಏಡನ್ ಕೊಲ್ಲಿಯಲ್ಲಿ ಭಾರತ ಜರ್ಮನಿ ಜಂಟಿ ವ್ಯಾಯಾಮ



* 2021 ರ ಆಗಸ್ಟ್. 26 ರಂದು ಗಲ್ಫ್ ಆಫ್ ಏಡನ್ ನಲ್ಲಿ ಭಾರತ ಮತ್ತು ಜರ್ಮನಿಯ ನೌಕಾಪಡೆಗಳು ಜಂಟಿ ವ್ಯಾಯಾಮವನ್ನು ನಡೆಸಿವೆ.
* ಈ ಜಂಟಿ ವ್ಯಾಯಾಮದಲ್ಲಿ ಹೆಲಿಕಾಪ್ಟರ್ ಇಳಿಯುವಿಕೆಗಳು, ಶೋಧ ಮತ್ತು ವಶಪಡಿಸಿಕೊಳ್ಳುವ ಕಾರ್ಯಾಚರಣೆಗಳಿದ್ದವು.
* ಭಾರತೀಯ ನೌಕಾಪಡೆಯ ಯುದ್ಧನೌಕೆಯು ಫ್ರಿಕೇಟ್ 'ತ್ರಿಕಾಂಡ್' ಜರ್ಮನ್ ಯುದ್ಧನೌಕೆ 'ಬೇಯರ್ನ್' ನೊಂದಿಗೆ ವ್ಯಾಯಾಮ ನಡೆಸಿದೆ.
* ಪ್ರಸ್ತುತ ಈ INS ತ್ರಿಕಾಂಡ್ ಯುದ್ಧನೌಕೆಯನ್ನು ಗಲ್ಫ್ ಆಫ್ ಏಡನ್ ಪ್ರದೇಶದಲ್ಲಿ ಪೈರಸಿ ವಿರೋಧಿ ಗಸ್ತುಗಾಗಿ ನಿಯೋಜನೆ ಮಾಡಲಾಗಿದೆ.
* ಈ ಹಿಂದೆ 2008 ರಲ್ಲಿ ಭಾರತ ಮತ್ತು ಜರ್ಮನ್ ರಾಷ್ಟ್ರಗಳ ನೌಕಾಪಡೆಗಳು ಮೊದಲ ಜಂಟಿ ಸಮರಾಭ್ಯಾಸವನ್ನು ಕೈಗೊಂಡಿದ್ದವು ನಡೆಸಿದವು, ಅದಕ್ಕೂ ಮುಂಚಿತವಾಗಿ ಅಂದರೆ 2006 ರಲ್ಲಿ ಉಭಯ ರಾಷ್ಟ್ರಗಳು 'ಕಡಲ್ಗಳ್ಳತನ ವಿರೋಧಿ ಸಹಕಾರ ಒಪ್ಪಂದ'ಕ್ಕೆ ಪರಸ್ಪರ ಒಪ್ಪಿಕೊಂಡು ಸಹಿ ಹಾಕಿದ್ದವು.
* ಪ್ರಸ್ತುತ ಜರ್ಮನಿ ಭಾರತದ ಅತಿದೊಡ್ಡ ವ್ಯಾಪಾರ ಪಾಲುದಾರ ರಾಷ್ಟ್ರವಾಗಿದೆ, ಭಾರತವು ಹೆಚ್ಚಾಗಿ ಜವಳಿ ವಲಯ, ರಾಸಾಯನಿಕ ಉತ್ಪನ್ನಗಳು, ಲೋಹ ಮತ್ತು ಚರ್ಮದ ಸರಕುಗಳು, ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ಉತ್ಪನ್ನಗಳು ಮತ್ತು ಆಹಾರ ಪದಾರ್ಥಗಳನ್ನು ಜರ್ಮನಿಗೆ ರಫ್ತು ಮಾಡುತ್ತಿತ್ತು.
* ಭಾರತದ ಮೇಕ್ ಇನ್ ಇಂಡಿಯಾ ಕಾರ್ಯಕ್ರಮದಲ್ಲಿ ಜರ್ಮನಿಯ ಕಂಪನಿಗಳು ಹೂಡಿಕೆ ಮಾಡಲು ಆಸಕ್ತಿ ತೋರಿಸಿವೆ ಎಂದು ತಿಳಿದು ಬಂದಿದೆ.

## ಮಹಿಳಾ ಸಬಲೀಕರಣದ ಬಗ್ಗೆ ಮೊದಲ G20 ಮಂತ್ರಿ ಸಮ್ಮೇಳನ



* ಮಹಿಳಾ ಸಬಲೀಕರಣದ ಬಗೆಗಿನ ಮೊದಲ ಜಿ 20 ಸಚಿವರ ಸಮ್ಮೇಳನವನ್ನು ಉದ್ದೇಶಿಸಿ ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಸ್ಮೃತಿ ಇರಾನಿ ಅವರು ಮಾತನಾಡಿದರು.
* ಪ್ರಸ್ತುತ ಇಟಲಿಯ ಸಾಂತಾ ಮಾರ್ಗರಿಟಾ ಲಿಗುರ್‌ನಲ್ಲಿ ಸಮ್ಮೇಳನವನ್ನು ವರ್ಚುಲ್ ರೂಪದಲ್ಲಿ ನಡೆಸಲಾಗಿದೆ, ಭಾರತೀಯ ಪ್ರಧಾನ ಮಂತ್ರಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಲಿಂಗ ಸಮಾನತೆಗಾಗಿ, ಮಹಿಳೆಯರ ಸುರಕ್ಷತೆ ಮತ್ತು ಭದ್ರತೆಯನ್ನು ಬಲಪಡಿಸುವ ಹಾಗೂ ಉತ್ತಮ ಆರೋಗ್ಯ ರಕ್ಷಣೆಯನ್ನು ನೀಡುವ ನಿಟ್ಟಿನಲ್ಲಿ ಹಲವಾರು ಉಪಕ್ರಮಗಳನ್ನು ತಂದಿದೆ.
* ಈ ಸಮ್ಮೇಳನದಲ್ಲಿ ಲಿಂಗ ಸಮಾನತೆ ಮತ್ತು ಮಹಿಳಾ ಸಬಲೀಕರಣಕ್ಕಾಗಿ ಇರುವ ಭಾರತದ ಬಗ್ಗಟ್ಟನ್ನು ಜಿ 20 ಮಂತ್ರಿ ಸಮ್ಮೇಳನದಲ್ಲಿ ತಿಳಿಸಿದ್ದಾರೆ.
* ಪ್ರಸ್ತುತ 19 ದೇಶ ಹಾಗೂ ಯುರೋಪಿಯನ್ ಒಕ್ಕೂಟವು ಅಂತರಾಷ್ಟ್ರೀಯ ಹಣಕಾಸು ನಿಧಿ ಹಾಗೂ ವಿಶ್ವಬ್ಯಾಂಕ್‌ನ ಪ್ರತಿನಿಧಿಗಳನ್ನು ಈ ಜಿ 20 ಹೊಂದಿದೆ.
* ಪ್ರಸ್ತುತ 1997 1999 ರ ಏಶಿಯಾನ್ ಆರ್ಥಿಕ ಬಿಕ್ಕಟ್ಟಿನ ಸಂದರ್ಭದಲ್ಲಿ G 7 ಅಭಿವೃದ್ಧಿ ಹಾಗೂ ಅಭಿವೃದ್ಧಿ ಹೊಂದುತ್ತಿರುವ ದೇಶಗಳನ್ನು ಆಹ್ವಾನಿಸಿದ ನಂತರ ಈ G 20 ಮಂತ್ರಿ ಮಟ್ಟದ ವೇದಿಕೆಯು ಸೃಷ್ಟಿಯಾಗಿದೆ.
* ವಾರ್ಷಿಕವಾಗಿ G 20 ನಾಯಕರು ಭೇಟಿಯಾಗಲು ನಿರ್ಧರಿಸಿದ್ದಾರೆ.

# 30-08-2021

## ಭಾರತದ ಭವೀನಾ ಪಟೇಲ್‌ಗೆ ಪ್ಯಾರಾಲಂಪಿಕ್ಸ್ ನಲ್ಲಿ ಬೆಳ್ಳಿ ಪದಕ



* ಪ್ರಸ್ತುತ ಟೋಕಿಯೊದಲ್ಲಿ ನಡೆಯುತ್ತಿರುವ ಪ್ಯಾರಾಲಿಂಪಿಕ್ಸ್‌ನ ಕ್ರೀಡಾಕೂಟದಲ್ಲಿ ಟೇಬಲ್ ಟೆನಿಸ್ ಆಟಗಾರ್ತಿ ಭವೀನಾ ಬೇನ್ ಪಟೇಲ್

ಅವರು ಬೆಳ್ಳಿ ಪದಕವನ್ನು ಜಯಿಸಿದ್ದಾರೆ.

* ಗುಜರಾತ್ ಮುಖ್ಯಮಂತ್ರಿ ವಿಜಯ್ ರೂಪಾನಿ ಅವರು ಗುಜರಾತ್ ರಾಜ್ಯ ಸರ್ಕಾರದ ದಿವ್ಯಾಂಗ್ ಖೇಲ್ ಪ್ರತಿಭಾ ಪ್ರೊತ್ಸಾಹನ್ ಪುರಸ್ಕಾರ್ ಯೋಜನೆ ಅಡಿಯಲ್ಲಿ ಭವೀನಾ ಪಟೇಲ್ ಅವರಿಗೆ '3' ಕೋಟಿ ರೂ. ರೂಪಾಯಿ ನಗದು ಬಹುಮಾನ ಘೋಷಣೆ ಮಾಡಿದ್ದಾರೆ, ಹಾಗೂ ಅವರನ್ನು ಅಭಿನಂದಿಸಿದ್ದಾರೆ.

* ಭವೀನಾ ಪಟೇಲ್ ಅವರು ಅಂತಾರಾಷ್ಟ್ರೀಯ ಪಂದ್ಯಾವಳಿಗಳಲ್ಲಿ ಒಟ್ಟಾರೆ '5' ಚಿನ್ನದ ಪದಕ ಮತ್ತು 13 ಬೆಳ್ಳಿ ಪದಕಗಳನ್ನು ಜಯಿಸಿದ್ದಾರೆ.

## ಭಾರತ್ ಬಯೋಟೆಕ್‌ನ ನೂತನ ಘಟಕ ಗುಜರಾತ್‌ನ ಅಂಕ್ಲೇಶ್ವರದಲ್ಲಿ ತಯಾರಾದ ಕೋವ್ಯಾಕ್ಸಿನ್ ಲಸಿಕೆ ಬಿಡುಗಡೆ



* ಪ್ರಸ್ತುತ ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ಅವರು ಗುಜರಾತ್ ರಾಜ್ಯದ ಭರೂಚ್ ಜಿಲ್ಲೆಯ ಅಂಕ್ಲೇಶ್ವರದಲ್ಲಿರುವ ಭಾರತ್ ಬಯೋಟೆಕ್‌ನ ನೂತನ ಘಟಕದಿಂದ ಉತ್ಪಾದಣೆಯಾದ ಕೋವ್ಯಾಕ್ಸಿನ್ ಲಸಿಕೆಯ ಮೊದಲ ಬ್ಯಾಚ್‌ಅನ್ನ ಬಿಡುಗಡೆಗೊಳಿಸಿದರು.

* ಗುಜರಾತ್ ರಾಜ್ಯದ ಈ ಘಟಕದಲ್ಲಿ ಕೋವ್ಯಾಕ್ಸಿನ್‌ನ 20 ಕೋಟಿ ಡೋಸ್‌ಗಳನ್ನು ಉತ್ಪಾದಿಸಲಾಗುತ್ತದೆ ಎಂದು ತಿಳಿಸಲಾಗಿದೆ.

* ಕೇಂದ್ರ ಸರ್ಕಾರವು ಭಾರತ್ ಬಯೋಟೆಕ್ ಕಂಪನಿಯ ಉತ್ಪಾದನಾ ಘಟಕವನ್ನು ಗುಜರಾತ್ ರಾಜ್ಯದ ಅಂಕ್ಲೇಶ್ವರದಲ್ಲಿ ಸ್ಥಾಪಿಸಲು ಆಗಸ್ಟ್ ತಿಂಗಳ ಪ್ರಾರಂಭದಲ್ಲಿ ಅನುಮೋದನೆ ನೀಡಿತ್ತು.

## ಹೊಸ ವಾಹನಗಳಿಗೆ 'ಭಾರತ್ ಸರಣಿ' (ಬಿಎಚ್ ಸಿರೀಸ್) ಎನ್ನುವ ಹೊಸ ನೋಂದಣಿ ವ್ಯವಸ್ಥೆ



* ಪ್ರಸ್ತುತ ಎಲ್ಲ ರಾಜ್ಯಗಳಲ್ಲಿ ಅನ್ವಯವಾಗುವಂತೆ ಒಂದೇ ವಾಹನ ನೋಂದಣಿ ಸಂಖ್ಯೆಯನ್ನು ರೋಪಿಸಲಾಗಿದೆ ಅದುವೇ 'ಬಿಎಚ್' ಸರಣಿ.

* ಎಲ್ಲ ಹೊಸ ವಾಹನಗಳಿಗೆ 'ಭಾರತ್ ಸರಣಿ'(ಬಿಎಚ್ ಸಿರೀಸ್) ಎನ್ನುವ ಹೊಸ ನೋಂದಣಿ ವ್ಯವಸ್ಥೆಯನ್ನು ರೂಪಿಸಲಾಗಿದೆ.

* ಈ ಹೊಸ ನೋಂದಣಿ ವ್ಯವಸ್ಥೆಯನ್ನು ಹೊಂದಿರುವ ವಾಹನ ಮಾಲೀಕರು ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಸ್ಥಳಾಂತರಗೊಂಡಾಗ ಆ ರಾಜ್ಯದಲ್ಲಿ ಮರು ನೋಂದಣಿ ಮಾಡಿಸಿಕೊಳ್ಳುವ ಅಗತ್ಯ ವಿರುವದಿಲ್ಲ ಎಂದು ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು ಮಾಹಿತಿ ನೀಡಿದೆ.

* ಪ್ರಸ್ತುತ ಈ ಹೊಸ ನೋಂದಣಿ ವ್ಯವಸ್ಥೆಯನ್ನು ರಕ್ಷಣಾ ಸಿಬ್ಬಂದಿ, ಕೇಂದ್ರ ಹಾಗೂ ರಾಜ್ಯ ಸರ್ಕಾರಿ ಉದ್ಯೋಗಿಗಳು, ಸರ್ಕಾರಿ ಸ್ವಾಮ್ಯದ ಕಂಪನಿಗಳು, ಮತ್ತು ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಕಚೇರಿಗಳನ್ನು ಹೊಂದಿರುವ ಖಾಸಗಿ ಕಂಪನಿಗಳ ಉದ್ಯೋಗಿಗಳಿಗೆ ನೆರವಾಗುವ ನಿಟ್ಟಿನಲ್ಲಿ ಈ ಹೊಸ ವ್ಯವಸ್ಥೆಯನ್ನು ರೋಪಿಸಲಾಗಿದೆ ಎಂದು ಸಚಿವಾಲಯವು ಪ್ರಕಟಣೆಯಲ್ಲಿ ಮಾಹಿತಿಯನ್ನು ಬಹಿರಂಗ ಪಡಿಸಿದೆ.

* ಈ ಹೊಸ ನೋಂದಣಿ ವ್ಯವಸ್ಥೆಯು ಕೇಂದ್ರ ಮೋಟಾರು ವಾಹನಗಳ 12 ನೇ ತಿದ್ದುಪಡಿ ನಿಯಮವು ಇದೇ ಸೆಪ್ಟೆಂಬರ್ 15 ರಿಂದ ಜಾರಿಗೆಯಾಗಲಿದೆ, ಹಾಗೂ ಈ ಬಿಎಚ್ ಸರಣಿಯ ವಾಹನಗಳಿಗೆ ಈ ಹೊಸ ನೋಂದಣಿಯನ್ನು ಜಾಲತಾಣದ ಮೂಲಕ ಮಾಡಲಾಗುತ್ತದೆ ಎಂದು ಸಚಿವಾಲಯ ತಿಳಿಸಿದೆ.

* ಈ ಮೊದಲು ಯಾವುದೇ ವಾಹನ ಮಾಲೀಕರು ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಸ್ಥಳಾಂತರಗೊಂಡಾಗ ಆ ರಾಜ್ಯದಲ್ಲಿ ಅವರು 12 ತಿಂಗಳ ಒಳಗಾಗಿ ಮರು ನೋಂದಣಿ ಮಾಡಿಸಿಕೊಳ್ಳಬೇಕು ಎನ್ನುವ ನಿಯಮವಿತ್ತು.

## ಹುತಾತ್ಮರ ನವೀಕೃತ ಸ್ಮಾರಕ ಉದ್ಘಾಟಿಸಿದ ಪ್ರಧಾನಿ ಮೋದಿ



* ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ವರ್ಚುವಲ್ ಸಭೆಯ ಮೂಲಕ ಜಲಿಯನ್‌ವಾಲಾ ಬಾಗ್ ಹತ್ಯಾಕಾಂಡದ ಹುತಾತ್ಮರ ನವೀಕೃತ ಸ್ಮಾರಕವನ್ನು ಉದ್ಘಾಟಿಸಿದರು.

* ಜಲಿಯನ್ ವಾಲಾ ಬಾಗ್ ಭಾರತದ ಅಮೃತಸರದಲ್ಲಿರುವ ಒಂದು ಐತಿಹಾಸಿಕ ಉದ್ಯಾನವನ ಮತ್ತು 'ರಾಷ್ಟ್ರೀಯ ಪ್ರಾಮುಖ್ಯತೆಯ ಸ್ಮಾರಕ' ವಾಗಿದೆ, ಈ ಜಲಿಯನ್ ವಾಲಾ ಬಾಗ್ ಹತ್ಯಾಕಾಂಡವು 1919 ರ ಏಪ್ರಿಲ್.13 ರ ಬೈಸಾಖಿ ಹಬ್ಬದಂದು ಸಂಭವಿಸಿದೆ.

* ಪ್ರಸ್ತುತ ಜಲಿಯನ್ ವಾಲಾ ಬಾಗ್ ಹತ್ಯಾಕಾಂಡದಲ್ಲಿ ಗಾಯಗೊಂಡು ಸತ್ತವರ ನೆನಪಿಗಾಗಿ ಈ ಸ್ಮಾರಕವನ್ನು ಸಂರಕ್ಷಿಸಲಾಗಿದೆ.

## ಪ್ಯಾರಾಲಿಂಪಿಕ್ಸ್ ಸೈಕ್ಲಿಂಗ್ ವಿಭಾಗದಲ್ಲಿ ಚಿನ್ನ ಗೆದ್ದ ಬ್ರಿಟನ್ ದಂಪತಿ



* ಪ್ರಸ್ತುತ ಟೋಕಿಯೊದಲ್ಲಿ ನಡೆಯುತ್ತಿರುವ ಪ್ಯಾರಾಲಿಂಪಿಕ್ಸ್ ನ ಸೈಕ್ಲಿಂಗ್ ವಿಭಾಗದಲ್ಲಿ ಬ್ರಿಟನ್‌ನ ನೀಲ್ ಮತ್ತು ಲೋರಾ ಫಾಚೀ ದಂಪತಿ ಚಿನ್ನದ ಪದಕವನ್ನು ಜಯಿಸಿದ್ದಾರೆ.

* ಪ್ಯಾರಾಲಿಂಪಿಕ್ಸ್ ನ ಪುರುಷರ ಸೈಕ್ಲಿಂಗ್ ವಿಭಾಗದಲ್ಲಿ ನೀಲ್ ಮತ್ತು ಪೈಲಟ್ ಮ್ಯಾಟ್ ಜೋಡಿಯು ಬಿ1000 ಮೀ. ಸೈಕ್ಲಿಂಗ್ ರೇಸ್ ನ್ನು

58.038 ಸೆಕೆಂಡ್ಸನಲ್ಲಿ ತಲುಪಿ ಚಿನ್ನದ ಪದಕವನ್ನು ಜಯಿಸಿದ್ದಾರೆ.
* ಪ್ಯಾರಾಲಿಂಪಿಕ್ಸ್ ನ ಮಹಿಳಾ ಸೈಕ್ಲಿಂಗ್ ವಿಭಾಗದಲ್ಲಿ ಲೋರಾ ಮತ್ತು ಹಾಲ್ ಜೋಡಿಯು ಬಿ 3000 ಮೀ. ಸೈಕ್ಲಿಂಗ್ ರೇಸ್ ನ್ನು 3:19.60 ಕಾಲಾವಕಾಶದಲ್ಲಿ ಗುರಿ ತಲುಪಿ ಚಿನ್ನದ ಪದಕವನ್ನು ಜಯಿಸಿದ್ದಾರೆ.

## ಪ್ರಧಾನ ಮಂತ್ರಿ ಜನಧನ ಯೋಜನೆಗೆ 7 ವರ್ಷ ಪೂರ್ಣ




* ಪ್ರಸ್ತುತ '7' ವರ್ಷಗಳು ಪೂರ್ಣಗೊಳಿಸಿದ ಪ್ರಧಾನ ಮಂತ್ರಿ ಜನಧನ ಯೋಜನೆ, 2014 ಆಗಸ್ಟ 15 ರ ಸ್ವಾತಂತ್ರ್ಯ ದಿನದ ಭಾಷಣದಲ್ಲಿ ಈ ಯೋಜನೆಯನ್ನು ಘೋಷಣೆ ಮಾಡಿದ್ದರು, ಈ ಯೋಜನೆಯಿಂದಾಗಿ ಭಾರತದ ಅಭಿವೃದ್ಧಿ ಪಥವೇ ಬದಲಾಗಿದೆ ಎಂದು ಮೋದಿ ತಿಳಿಸಿದ್ದಾರೆ.
* ಸಾಮಾನ್ಯ ಜನರಿಗೆ ಬ್ಯಾಂಕ್ ಖಾತೆಗಳನ್ನು ತೆರೆಯಲು ಈ 'ಪ್ರಧಾನ ಮಂತ್ರಿ ಜನಧನ' ಯೋಜನೆಯು ಸಹಾಯವಾಗಿದೆ, ಮತ್ತು ಇದರಿಂದಾಗಿ ಭಾರತದ ಅಭಿವೃದ್ಧಿ ಪಥವೇ ಬದಲಾಗಿದೆ ಎಂದಿದ್ದಾರೆ,
* ಪ್ರಧಾನ ಮಂತ್ರಿ ಜನಧನ ಯೋಜನೆಯು ಅಸಂಖ್ಯಾತ ಭಾರತೀಯರ ಹಣಕಾಸಿನ ಲಭ್ಯತೆ ಮತ್ತು ಸಬಲೀಕರಣಕ್ಕೆ ಸಹಾಯವಾಗಿದೆ, ಈ ಯೋಜನೆಯಿಂದಾಗಿ ಪಾರದರ್ಶಕತೆಯನ್ನು ಹೆಚ್ಚಾಗಿದೆ ಎಂದು ಪ್ರಧಾನಿ ಮೋದಿ ಅವರು ಹೇಳಿದರು.
* ಈ ಯೋಜನೆಯ ಅಡಿಯಲ್ಲಿ 43.04 ಕೋಟಿ ಬ್ಯಾಂಕ್ ಖಾತೆಗಳ ತೆರೆಯಲಾಗಿದೆ, ಅದರಲ್ಲಿ 36.86 ಕೋಟಿ ಖಾತೆಗಳು ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿವೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಾಹಿತಿ ನೀಡಿದ್ದಾರೆ.

## ಪ್ಯಾರಾಲಿಂಪಿಕ್ಸ್ ನ ಮಹಿಳೆಯರ 100 ಮೀ. ಓಟದಲ್ಲಿ ವಿಶ್ವದಾಖಲೆ ಬರೆದ ಕ್ಸಿಯಾಗೆ ಚಿನ್ನದ ಪದಕ



* ಪ್ರಸ್ತುತ ಟೋಕಿಯೊದಲ್ಲಿ ನಡೆಯುತ್ತಿರುವ ಪ್ಯಾರಾಲಿಂಪಿಕ್ಸ್ ನ ಟಿ35 ಮಹಿಳೆಯರ 100 ಮೀ. ಓಟದಲ್ಲಿ ಚೀನಾ ದೇಶದ ಹೋ ಕ್ಸಿಯಾ ಎಂಬ ಮಹಿಳೆ ವಿಶ್ವದಾಖಲೆಯನ್ನು ನಿರ್ಮಿಸಿ ಚಿನ್ನದ ಪದಕವನ್ನು ಪಡೆದುಕೊಂಡಿದ್ದಾರೆ.
* ಆಸ್ಟ್ರೇಲಿಯಾದ ಇಸಿಸ್ ಹೋಲ್ಟ್ ಅವರು ಬೆಳ್ಳಿ ಪದಕವನ್ನು ಪಡೆದುಕೊಂಡಿದ್ದಾರೆ.
* ಗ್ರೇಟ್ ಬ್ರಿಟನ್‌ನ ಮರಿಯಾ ಲಿಲಿ ಅವರು ಕಂಚಿನ ಪದಕವನ್ನು ಪಡೆದುಕೊಂಡಿದ್ದಾರೆ.

* ಈ ಹಿಂದೆ ಚೀನಾದ ಹೋ ಕ್ಸಿಯಾ ಅವರು 2016 ರ ರಿಯೊ ಕೂಟದಲ್ಲಿ ಎರಡು ಚಿನ್ನದ ಪದಕವನ್ನು ಜಯಿಸಿದ್ದರು, ಇದೀಗ ಈ ಪ್ಯಾರಾಲಿಂಪಿಕ್ಸ್ ನಲ್ಲಿಯೂ ಕೂಡ ಚಿನ್ನದ ಪದಕವನ್ನು ಜಯಿಸಿದ್ದಾರೆ.
* ಪ್ರಸ್ತುತ ಬ್ರೆಜಿಲ್‌ನ ಯೆಲ್ಸಿನ್ ಜಾಕ್ಸ್ ಟೋಕಿಯೊದ ಈ ಕ್ರೀಡಾಕೂಟದ ಟ್ರ್ಯಾಕ್ ಮತ್ತು ಫೀಲ್ಡ್‌ನಲ್ಲಿ ಚಿನ್ನ ಜಯಿಸಿದ ಮೊದಲ ಅಥ್ಲೀಟ್ ಇವರಾಗಿದ್ದಾರೆ, ಇವರು 5 ಸಾವಿರ ಮೀ. ಟಿ11 ವಿಭಾಗದಲ್ಲಿ ಅವರು ಓಡಿ ಗುರಿ ತಲುಪಿ ಚಿನ್ನ ಪಡೆದುಕೊಂಡಿದ್ದಾರೆ.
* ಜಪಾನ್ ನ ಕೆನ್ಯಾ ಕರಾಸವಾ ಅವರು ಬೆಳ್ಳಿ ಪದಕವನ್ನು ಜಯಿಸಿದ್ದಾರೆ.
* ಜಪಾನ್ ದೇಶದ ಮತ್ತೋರ್ವ ಪ್ರಜೆ ಶಿನ್ಯಾ ವಾಡಾ ಅವರು ಕಂಚಿನ ಪದಕವನ್ನು ಜಯಿಸಿದ್ದಾರೆ.

## ಟೋಕಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿ 'ನಿಶಾದ್ ಕುಮಾರ್'ಗೆ ಬೆಳ್ಳಿ ಪದಕ



* ಪ್ರಸ್ತುತ ಭಾರತದ ನಿಶಾದ್ ಕುಮಾರ್ ಅವರು 2020 ರ ಟೋಕಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತ ದೇಶಕ್ಕೆ ಮತ್ತೊಂದು ಪದಕವನ್ನ ತಂದುಕೊಟ್ಟಿದ್ದಾರೆ, ಭಾರತೀಯ ನಿಶಾದ್ ಕುಮಾರ್ ಅವರು ಎತ್ತರ ಜಿಗಿತದಲ್ಲಿ ಬೆಳ್ಳಿ ಪದಕವನ್ನು ಜಯಿಸಿದ್ದಾರೆ.
* ಬೆಳ್ಳಿ ಪದಕ ಜಯಿಸಿರುವ ನಿಶಾದ್ ಕುಮಾರ್ ಅವರು ಮೂಲತಃ ಹಿಮಾಚಲ ಪ್ರದೇಶದ ಉನಾ ಮೂಲದವರಾಗಿದ್ದಾರೆ.
* ಟೋಕಿಯೊ ಪ್ಯಾರಾಲಿಂಪಿಕ್ಸ್‌ನ ಪುರುಷರ ಹೈಜಂಪ್ ಟಿ47ನಲ್ಲಿ ಎತ್ತರ ಜಿಗಿತದ ವಿಭಾಗದಲ್ಲಿ ನಿಶಾದ್ ಅವರು ಬೆಳ್ಳಿ ಪದಕ ಜಯಿಸಿದ್ದಾರೆ, ಇವರನ್ನು ಭಾರತೀಯ ಪ್ರಧಾನಿ ನರೇಂದ್ರ ಮೋದಿ ಅಭಿನಂದಿಸಿದ್ದಾರೆ.

## ಟರ್ಕಿ ತಾಲಿಬಾನ್ ನಡುವೆ ಕಾಬೂಲ್ ನಲ್ಲಿ ಮಾತುಕತೆ



* ಟರ್ಕಿ ರಾಷ್ಟ್ರವು ತಾಲಿಬಾನ್ ಗಳೊಂದಿಗೆ ಕಾಬೂಲ್ ನಲ್ಲಿ ಮೊದಲ ಮಾತುಕತೆಯನ್ನು ನಡೆಸಿದೆ, ಈ ಮಾತುಕತೆಯಲ್ಲಿ ತಾಲಿಬಾನ್‌ಗಳು ಅಂತರಾಷ್ಟ್ರೀಯ ವಿಮಾನ ನಿಲ್ದಾಣಗಳ ನಿರ್ವಹಣೆಯಲ್ಲಿ ನೆರವಾಗಬೇಕು ಎಂದು ಟರ್ಕಿ ದೇಶದ ಮುಂದೆ ಕೋರಿಕೆಯನ್ನು ಇಟ್ಟಿವೆ, ಸದ್ಯ ಇದನ್ನು ಟರ್ಕಿ ದೇಶವು ಪರಿಶೀಲಿಸುತ್ತಿದೆ ಎಂದು ಟರ್ಕಿ ಅಧ್ಯಕ್ಷ ರೆಸೆಪ್ ತಯ್ಯಿಪ್ ಎರ್ದೊಗನ್ ಅವರು ತಿಳಿಸಿದ್ದಾರೆ.
* ಟರ್ಕಿ ತಾಲಿಬಾನ್ ನಡುವಿನ ಈ ಮಾತುಕತೆ ಕಾಬೂಲ್ ವಿಮಾನ ನಿಲ್ದಾಣದಲ್ಲಿರುವ ಸೇನಾ ನೆಲೆಯಲ್ಲಿ ನಡೆದಿದೆ, ಹಾಗೂ ಕಾಬೂಲ್ ನಲ್ಲಿ ಟರ್ಕಿಯ ತಾತ್ಕಾಲಿಕ ರಾಯಭಾರಿ ಕಚೇರಿಯನ್ನೂ ತೆರೆದಿದೆ.

* ಪ್ರಸ್ತುತ ಟರ್ಕಿ ದೇಶವು ತನ್ನ ಮಿಲಿಟರಿ ಪಡೆಯನ್ನು ಕಾಬೂಲ್ ವಿಮಾನ ನಿಲ್ದಾಣದ ಭದ್ರತೆ ಹಾಗೂ ನಿರ್ವಹಣೆಗಾಗಿ ಆಫ್ಘಾನಿಸ್ತಾನದಲ್ಲೇ ಇರಿಸಲಾಗುವದು, ಆದರೆ ಸದ್ಯ ಯಾವುದೇ ಈ ಬಗ್ಗೆ ನಿರ್ಧಾರ ಕೈಗೊಂಡಿಲ್ಲ ಎಂದು ಟರ್ಕಿ ಅಧ್ಯಕ್ಷ ಎರ್ದೋಗನ್ ತಿಳಿಸಿದ್ದಾರೆ.
* ನೇಟೊ ಸದಸ್ಯನಾಗಿರುವ ಟರ್ಕಿ ದೇಶದ ಸೈನಿಕರು ಸುಮಾರು '6' ವರ್ಷಗಳಿಂದ ಅಫ್ಘಾನ್ ವಿಮಾನ ನಿಲ್ದಾಣಗಳ ಭದ್ರತಾ ಕಾರ್ಯದ ಜವಾಬ್ದಾರಿಯನ್ನು ವಹಿಸಿಕೊಂಡು ನಿರ್ವಹಿಸುತ್ತಿದ್ದರು.

# 31-08-2021

## ಪ್ಯಾರಾಲಿಂಪಿಕ್ಸ್ ನ ಜಾವೆಲಿನ್ ಸ್ಪರ್ಧೆಯಲ್ಲಿ ಚಿನ್ನ ಗೆದ್ದ ಸುಮಿತ್ ಗೆ ಅಭಿನಂದನೆ ತಿಳಿಸಿದ ಮೋದಿ



* ಪ್ರಸ್ತುತ ಜಪಾನ್ ಟೋಕಿಯೊದಲ್ಲಿ ನಡೆಯುತ್ತಿರುವ ಪ್ಯಾರಾಲಿಂಪಿಕ್ಸ್‌ನ ಜಾವೆಲಿನ್ ಥ್ರೋ ಸ್ಪರ್ಧೆಯಲ್ಲಿ ಭಾರತದ ಸುಮಿತ್ ಅಂತಿಲ್ ಅವರು ಚಿನ್ನದ ಪದಕವನ್ನು ಜಯಿಸಿ ವಿಶ್ವದಾಖಲೆಯನ್ನು ನಿರ್ಮಿಸಿದ್ದಾರೆ.
* ಪ್ರಸ್ತುತ ಇದೇ ವರ್ಷದಲ್ಲಿ ಭಾರತಕ್ಕೆ ಒಲಿದು ಬಂದ 2 ನೇ ಚಿನ್ನದ ಪದಕವಾಗಿದೆ, ಹಾಗೂ ಇದಲ್ಲದೇ ಮಹಿಳಾ SH1 ವಿಭಾಗದ 10 ಮೀ. ಏರ್ ರೈಫಲ್ ಸ್ಟ್ಯಾಂಡಿಂಗ್ ನಲ್ಲಿ ಅವನಿ ಲೇಖರಾ ಅವರು ಚಿನ್ನದ ಪದಕವನ್ನು ಜಯಿಸಿದ್ದಾರೆ.
* ಸುಮಿತ್ ಅಂತಿಲ್ ಅವರು 68.55 ಮೀ. ದೂರ ಜಾವೆಲಿನ್ ಎಸೆದು ವಿಶ್ವದಾಖಲೆಯನ್ನು ಬರೆದಿದ್ದಾರೆ.
* ಆಸ್ಟ್ರೇಲಿಯಾದ ಮಿಚಲ್ ಬುರೇನ್ ಅವರು 66.29 ಮೀ. ಜಾವೆಲಿನ್ ಎಸೆದು ಬೆಳ್ಳಿ ಪದಕವನ್ನು ಜಯಿಸಿದ್ದಾರೆ.
* ಶ್ರೀಲಂಕಾದ ದುಲಾನ್ ಕೊಡಿಥುವಕ್ಕು ಅವರು 65.61 ಮೀ. ಜಾವೆಲಿನ್ ಎಸೆದು ಕಂಚಿನ ಪದಕವನ್ನು ಜಯಿಸಿಕೊಂಡಿದ್ದಾರೆ.
* ಟೋಕಿಯೊ ಪ್ಯಾರಾಲಿಂಪಿಕ್ಸ್ ನಲ್ಲಿ ಡಿಸ್ಕಸ್ ಥ್ರೋನಲ್ಲಿ ಯೋಗೇಶ್ ಕತುನಿಯಾ ಅವರು ಬೆಳ್ಳಿಯ ಪದಕವನ್ನು ಜಯಿಸಿದ್ದಾರೆ.
* ದೇವೇಂದ್ರ ಜಝಾರಿಯಾ ಅವರು ಜಾವೆಲಿನ್ ಥ್ರೋನಲ್ಲಿ ಬೆಳ್ಳಿ ಪದಕವನ್ನು ಜಯಿಸಿದ್ದಾರೆ.
* ಸುಂದರ್ ಸಿಂಗ್ ಗುರ್ಜಾರ್ ಅವರು ಜಾವೆಲಿನ್ ಥ್ರೋನಲ್ಲಿ ಕಂಚಿನ ಪದಕವನ್ನು ಜಯಿಸಿದ್ದಾರೆ.
* ಪ್ಯಾರಾಲಿಂಪಿಕ್ಸ್ ನಲ್ಲಿ ಭಾಗವಹಿಸಿದ ಎಲ್ಲ ಕ್ರೀಡಾಪಟುಗಳಿಗೆ ರಾಷ್ಟ್ರಪತಿ ರಾಮನಾಥ್ ಕೋವಿಂದ್, ಪ್ರಧಾನಿ ಮೋದಿ ಸೇರಿದಂತೆ ಅನೇಕರು ಅಭಿನಂದನೆಗಳನ್ನೂ ತಿಳಿಸಿದ್ದಾರೆ.

## ಟೋಕಿಯೊ ಪ್ಯಾರಾಲಿಂಪಿಕ್ಸ್ ನಲ್ಲಿ ಚಿನ್ನ ಗೆದ್ದ ಅವನಿ ಲೇಖರಾ



* ಪ್ರಸ್ತುತ ಜಪಾನ್‌ನಲ್ಲಿ ನಡೆಯುತ್ತಿರುವ ಪ್ಯಾರಾಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಭಾರತೀಯ ಅವನಿ ಲೇಖರಾ ಅವರು ಐತಿಹಾಸಿಕ ಸಾಧನೆಯನ್ನು ಮಾಡಿದ್ದಾರೆ, ಅದುವೇ ಮಹಿಳೆಯರ 10 ಮೀ. ಏರ್ ರೈಫಲ್ ಸ್ಟ್ಯಾಂಡಿಂಗ್ SH1 ವಿಭಾಗದಲ್ಲಿ ಚಿನ್ನದ ಪದಕವನ್ನು ಜಯಿಸಿದ್ದಾರೆ.
* ಭಾರತೀಯ ಅವನಿ ಲೇಖರಾ ಅವರು ಈ ಸಾಧನೆ ಮಾಡುವ ಮೂಲಕ ಮೊದಲ ಮಹಿಳಾ ಪ್ಯಾರಾ ಅಥ್ಲೀಟ್ ಎಂಬ ಖ್ಯಾತಿಗೆ ಪಾತ್ರರಾದರು.
* ಪ್ರಸ್ತುತ ಪ್ಯಾರಾಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಚಿನ್ನದ ಪದಕವನ್ನು ಜಯಿಸಿದ ಅವನಿ ಲೇಖರಾ ಅವರಿಗೆ ಮಹೀಂದ್ರ ಗ್ರೂಪ್‌ನ ಅಧ್ಯಕ್ಷ ಆನಂದ್ ಮಹೀಂದ್ರಾ ಅವರು ತಮ್ಮ ಕಂಪನಿಯ ಎಸ್‌ಯುವಿ ಕಾರನ್ನು ಉಡುಗೊರೆಯಾಗಿ ನೀಡುವದಾಗಿ ಘೋಷಿಸಿದ್ದಾರೆ.
* ಪ್ಯಾರಾಲಿಂಪಿಕ್ ಚಿನ್ನದ ಪದಕ ಗೆದ್ದ ಮೊದಲ ಭಾರತೀಯ ಮಹಿಳೆ ಅವನಿ ಲೇಖರಾ ಅವರು ಜೈಪುರ ಮೂಲದವರಾಗಿದ್ದಾರೆ.

## ಏಷ್ಯನ್ ಜೂನಿಯರ್ ಬಾಕ್ಸಿಂಗ್ ಚಾಂಪಿಯನ್‌ಶಿಪ್ ನಲ್ಲಿ ರೋಹಿತ್ ಚಮೋಲಿಗೆ ಚಿನ್ನ



* ಏಷ್ಯನ್ ಜೂನಿಯರ್ ಬಾಕ್ಸಿಂಗ್ ಚಾಂಪಿಯನ್‌ಶಿಪ್'ನಲ್ಲಿ ಭಾರತದ ರೋಹಿತ್ ಚಮೋಲಿ ಅವರು 48ಕೆಜಿ ವಿಭಾಗದ ಫೈನಲ್ ಪಂದ್ಯದಲ್ಲಿ ಚಿನ್ನದ ಪದಕವನ್ನು ಪಡೆದುಕೊಂಡಿದ್ದಾರೆ, ಇತ್ತೀಚಿಗೆ ಈ ಟೂರ್ನಿಯು ದುಬೈನಲ್ಲಿ ನಡೆದಿದೆ.
* ಪ್ರಸ್ತುತ ಭಾರತದ ರೋಹಿತ್ ಚಮೋಲಿ ಅವರು ಮಂಗೋಲಿಯಾದ ಒಟ್‌ಗಾನ್‌ಬಯರ್ ತುವ್ಶಿಂಜಯ ಅವರ ವಿರುದ್ಧ ಜಯ ಸಾಧಿಸಿದ್ದಾರೆ.
* ಭಾರತವು ಜೂನಿಯರ್ ವಿಭಾಗದಲ್ಲಿ ಈಗಾಗಲೇ '6' ಕಂಚಿನ ಪದಕಗಳನ್ನು ಜಯಿಸಿಕೊಂಡಿದೆ.
* ಈ ಹಿಂದೆ 2019 ರ ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ ಜರುಗಿದ ಏಷ್ಯನ್ ಜೂನಿಯರ್ ಚಾಂಪಿಯನ್‌ಶಿಪ್‌ನಲ್ಲಿ ಭಾರತದ ಬಾಕ್ಸರ್‌ಗಳು ಬೆಳ್ಳಿ ಮತ್ತು ಕಂಚು ಸೇರಿ 21 ಪದಕಗಳನ್ನು ಜಯಿಸಿದ್ದರು.

## 'ಪ್ರತಿ ಬುಧವಾರ ವಿಶೇಷ ಲಸಿಕಾ ಉತ್ಸವ' ಆಚರಿಸಲಿರುವ ಕರ್ನಾಟಕ ರಾಜ್ಯ



* ಕರ್ನಾಟಕ ರಾಜ್ಯದಲ್ಲಿ ಇನ್ನು ಮುಂದೆ ಪ್ರತಿ ಬುಧವಾರ ವಿಶೇಷ ಲಸಿಕಾ ಉತ್ಸವ ನಡೆಸಿ ಸುಮಾರು 10 ಲಕ್ಷ ಲಸಿಕೆ ನೀಡಲಾಗುತ್ತದೆ ಎಂದು ರಾಜ್ಯ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ತಿಳಿಸಿದ್ದಾರೆ.
* ಪ್ರಸ್ತುತ ಕೇಂದ್ರ ಸರ್ಕಾರದಿಂದ ಆಗಸ್ಟ ತಿಂಗಳಿನಲ್ಲಿ 1.10 ಕೋಟಿ ಲಸಿಕೆ ರಾಜ್ಯಕ್ಕೆ ಬಂದಿದೆ, ಹಾಗೂ ಇನ್ನು ಮುಂದೆ ಪ್ರತಿ ದಿನ 5 ಲಕ್ಷ ಲಸಿಕೆ ನೀಡುವದಾಗಿ ಕೇಂದ್ರ ಸರ್ಕಾರ ತಿಳಿಸಿದೆ, ಇದರ ಮಧ್ಯೆ ವಾರದಲ್ಲಿ ಒಂದು ದಿನ ಅಂದರೆ ಪ್ರತಿ ಬುಧವಾರ ಲಸಿಕಾ ಉತ್ಸವ ನಡೆಸಲಾಗುತ್ತದೆ ಎಂದು ತಿಳಿಸಿದ್ದಾರೆ.

## ಆಲ್‌ರೌಂಡರ್ ಸ್ಟುವರ್ಟ್ ಬಿನ್ನಿ: ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಘೋಷಣೆ



* ಪ್ರಸ್ತುತ ಅಂತರರಾಷ್ಟ್ರೀಯ ಕ್ರಿಕೆಟ್ ಹಾಗೂ ಪ್ರಥಮ ದರ್ಜೆ ಕ್ರಿಕೆಟ್‌ಗೆ, ಟೀಮ್ ಇಂಡಿಯಾ ಕ್ರಿಕೆಟ್ ರ ಆಲ್‌ರೌಂಡರ್ ಕರ್ನಾಟಕ ಮೂಲದ ಸ್ಟುವರ್ಟ್ ಬಿನ್ನಿ ಅವರು 30 ಆಗಸ್ಟ 2021 ರಂದು ಕ್ರಿಕೆಟ್‌ನ ಎಲ್ಲಾ ಸ್ವರೂಪಗಳಿಂದ ನಿವೃತ್ತಿ ಘೋಷಿಸಿದ್ದಾರೆ.
* ಆಲ್‌ರೌಂಡರ್ ಸ್ಟುವರ್ಟ್ ಬಿನ್ನಿ ಅವರು 2014 ರಲ್ಲಿ ಟೀಮ್ ಇಂಡಿಯಾದಲ್ಲಿ ಸ್ಥಾನವನ್ನು ಪಡೆದುಕೊಂಡಿದ್ದರು, ಬಿನ್ನಿ ಅವರು ಒಟ್ಟು 6 ಟೆಸ್ಟ್ ಪಂದ್ಯ, 14 ಏಕದಿನ ಅಂತರರಾಷ್ಟ್ರೀಯ ಪಂದ್ಯ, 3 ಅಂತರರಾಷ್ಟ್ರೀಯ ಟಿ20 ಪಂದ್ಯ, 150 ಐಪಿಎಲ್ ಪಂದ್ಯ ಹಾಗೂ 100 ಕ್ಕೂ ಅಧಿಕ ದೇಶಿ ಕ್ರಿಕೆಟ್ ಟೂರ್ನಿಗಳಲ್ಲಿ ಆಟವಾಡಿದ್ದಾರೆ.
* ಸ್ಟುವರ್ಟ್ ಬಿನ್ನಿ ಅವರು ತಂದೆಯಾದ ರೋಜರ್ ಬಿನ್ನಿ ಅವರು ಟೀಮ್ ಇಂಡಿಯಾದ ಮಾಜಿ ಆಟಗಾರರಾಗಿದ್ದರು, ಹಾಗೂ 1983 ರಲ್ಲಿ ಭಾರತವು ಕ್ರಿಕೆಟ್ ವಿಶ್ವಕಪ್ ಗೆದ್ದಾಗ ಟೀಮ್ ನಲ್ಲಿ ಪ್ರಮುಖ ಆಟಗಾರರಾಗಿದ್ದರು.

## 'ಫಿಟ್ ಇಂಡಿಯಾ' ಆಯಪ್ ಬಿಡುಗಡೆಗೊಳಿಸಿದ ಕೇಂದ್ರ ಸರ್ಕಾರ



* ಕೇಂದ್ರ ಕ್ರೀಡಾ ಸಚಿವ ಅನುರಾಗ್ ಠಾಕೂರ್ ಅವರು ರಾಷ್ಟ್ರೀಯ ಕ್ರೀಡಾ ದಿನದ ಹಿನ್ನಲೆಯಿಂದಾಗಿ 'ಫಿಟ್ ಇಂಡಿಯಾ' ಮೊಬೈಲ್ ಅಪ್ಲಿಕೇಷನ್ ಬಿಡುಗಡೆ ಮಾಡಿದ್ದಾರೆ.
* ಈ ಹಿಂದೆ 2019 ರ ಆಗಸ್ಟ.29 ರಂದು ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಜನತೆಯ ಫಿಟ್ನೆಸ್ ಉತ್ತಮ ಗೊಳಿಸುವ ನಿಟ್ಟಿನಲ್ಲಿ ಫಿಟ್ ಇಂಡಿಯಾ ಮೂವ್‌ಮೆಂಟ್‌ಗೆ ಚಾಲನೆಯನ್ನು ನೀಡಿದ್ದಾರೆ.
* ಈ ಆಪ್ ಪ್ರಮುಖವಾಗಿ ಬಳಕೆದಾರರ ಫಿಟ್ನೆಸ್ ನ ಎಲ್ಲ ಮಾಹಿತಿಗಳನ್ನು ಸಂಗ್ರಹಿಸಿ ಫಲಿತಾಂಶಗಳನ್ನು ನೀಡುತ್ತದೆ, ಹಾಗೂ ದೇಹದ ತೂಕ, ಎತ್ತರದ ಬಗೆಗಿನ ನಿಖರವಾದ ಮಾಹಿತಿಯನ್ನು ಒದಗಿಸುತ್ತದೆ.
* ಪ್ರಸ್ತುತ ಈ ಫಿಟ್ ಇಂಡಿಯಾ ಆಪ್ ನ್ನು ಸ್ಪೋರ್ಟ್ಸ್ ಅಥಾರಿಟಿ ಆಫ್ ಇಂಡಿಯಾ ಅಭಿವೃದ್ಧಿ ಪಡಿಸಿದೆ.

## ಕೇಂದ್ರ ಆಯುಷ್ ಸಚಿವಾಲಯದಿಂದ ವೈ ಬ್ರೇಕ್ ಆಪ್ ಬಿಡುಗಡೆ




* 2021 ರ ಆಗಸ್ಟ. 29 ರಂದು ಕೇಂದ್ರ ಆಯುಷ್ ಸಚಿವಾಲಯವು ವಿಜ್ಞಾನ ಭವನದಿಂದ ವೈ ಬ್ರೇಕ್ ಆಪ್ ನ್ನು ಬಿಡುಗಡೆ ಮಾಡಿದೆ.
* ಈ ಆಪ್ ನ್ನು ಕೇಂದ್ರ ಆಯುಷ್ ಸಚಿವರಾಗಿರುವ ಸರ್ಬಾನಂದ ಸೋನೊವಾಲ್ ಆರಂಭಿಸಿದರು.
* ಆಯುಷ್ ಸಚಿವಾಲಯವು ಆಜಾದಿ ಕಾ ಅಮೃತ್ ಮಹೋತ್ಸವದ ಸ್ಮರಣಾರ್ಥವಾಗಿ ಈ ಅಭಿಯಾನವನ್ನು ಪ್ರಾರಂಭಿಸಿದೆ.
* ಕೇಂದ್ರ ಆಯುಷ್ ಸಚಿವಾಲಯವು ಈ ವೈ ಬ್ರೇಕ್ ಆಪ್ ಅಲ್ಲದೇ ಕೃಷಿ ಭೂಮಿಯಲ್ಲಿ ಔಷಧೀಯ ಸಸ್ಯಗಳ ಕೃಷಿ, ಮನೆಗಳಿಗೆ ಔಷಧೀಯ ಸಸ್ಯಗಳ ವಿತರಣೆ ಹಾಗೂ ಶಾಲಾ ಮತ್ತು ಕಾಲೇಜಿಗೆ ಹೋಗುತ್ತಿರುವ ವಿದ್ಯಾರ್ಥಿಗಳ ಸಂವೇದನೆಯಂತಹ ಒಂದು ವರ್ಷದ ಅಭಿಯಾನವನ್ನು ಈ ಆಯುಷ್ ವ್ಯವಸ್ಥೆಯಲ್ಲಿ ಆರಂಭಿಸಲಾಗಿದೆ ಎಂದು ತಿಳಿಸಿದ್ದಾರೆ.
* ಆಯುಷ್ ಸಚಿವಾಲಯವು ಆರಂಭಿಸಿದ ಚಟುವಟಿಕೆಗಳು ಇಂತಿವೆ: ಈ ವೈ ಬ್ರೇಕ್ ಆಪ್ ನ ಮೂಲಕ ರೈತರಿಗೆ ಸಹಾಯವಾಗುವಂತೆ ಸುಮಾರು 75,000 ಹೆಕ್ಟೇರ್ ಭೂಮಿಯಲ್ಲಿ ಔಷಧೀಯ ಸಸ್ಯಗಳ ಕೃಷಿಗಾಗಿ ಬಿಡುಗಡೆ ಮಾಡಲಾಗಿದೆ. ವಿಶೇಷವಾಗಿ60 ವರ್ಷಕ್ಕಿಂತ ಮೇಲ್ಪಟ್ಟ ಜನರಿಗೆ ಆಯುಷ್ ರೋಗನಿರೋಧಕ ಔಷಧಿಗಳ ವಿತರಣೆ. ಪ್ರಸ್ತುತ ಈ ಆಯುಷ್ ಆಪ್‌ಕ್ವಾರ್ ಕಾರ್ಯಕ್ರಮದಿಂದ 2021 ರಲ್ಲಿ ಸುಮಾರು 75 ಲಕ್ಷ ಕುಟುಂಬಗಳ ಮನೆ ಬಾಗಿಲಿಗೆ ಔಷಧೀಯ ಸಸ್ಯಗಳನ್ನು ತೆಗೆದುಕೊಂಡು ಹೋಗುವ ಕಾರ್ಯಕ್ರಮ ಆರಂಭಿಸಲಾಗುವುದು

ಎಂದು ಸಚಿವಾಲಯ ತಿಳಿಸಿದೆ.

## ಪರಮಾಣು ಪರೀಕ್ಷೆಗಳ ವಿರುದ್ಧ ಅಂತರರಾಷ್ಟ್ರೀಯ ದಿನ: ಆಗಸ್ಟ್ 29




* ಪ್ರತಿವರ್ಷವು ಆಗಸ್ಟ್ 29 ರಂದು ಪರಮಾಣು ಪರೀಕ್ಷೆಗಳ ವಿರುದ್ಧ ಅಂತಾರಾಷ್ಟ್ರೀಯ ದಿನದ ಕಾರ್ಯಕ್ರಮವನ್ನು ನಡೆಸಲಾಗುವದು.
* ಈ ದಿನದಂದು ಪರಮಾಣು ಶಸ್ತ್ರಾಸ್ತ್ರಗಳ ಪರೀಕ್ಷೆಯಿಂದಾಗುವ ಹಾನಿಕಾರಕ ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಈ ಕಾರ್ಯಕ್ರಮವನ್ನು ನೆಡಸಲಾಗುತ್ತದೆ.
* ಪರಮಾಣು ಪರೀಕ್ಷೆಗಳ ವಿರುದ್ಧ ಅಂತಾರಾಷ್ಟ್ರೀಯ ದಿನದ ಕಾರ್ಯಕ್ರಮವನ್ನು 2021 ನ್ನು 12 ನೇ ವಾರ್ಷಿಕೋತ್ಸವವನ್ನು ಕಾರ್ಯಕ್ರಮವೆಂದು ಗುರುತಿಸಲಾಗಿದೆ.
* ಪ್ರಸ್ತುತ ಪರಮಾಣು ಪರೀಕ್ಷೆಗಳ ವಿರುದ್ಧ ಅಂತರರಾಷ್ಟ್ರೀಯ ದಿನವನ್ನು 2009 ಡಿಸೆಂಬರ್. 2 ರಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆ 64 ನೇ ಅಧಿವೇಶನದಲ್ಲಿ ಸ್ಥಾಪನೆ ಮಾಡಲಾಗಿದೆ.
* ಮೊದಲ ಪರಮಾಣು ಪರೀಕ್ಷೆಗಳು: 1945 ರ ಜುಲೈ. 16 ರಂದು ಯುನೈಟೆಡ್ ಸ್ಟೇಟ್ಸ್ ಸೇನೆಯು ನ್ಯೂ ಮೆಕ್ಸಿಕೋದ ಮರುಭೂಮಿಯಲ್ಲಿ ಟ್ರಿನಿಟಿ ಎಂಬ ಮೊದಲ ಪರಮಾಣು ಪರೀಕ್ಷೆಯನ್ನು ನಡೆಸಿದೆ, ಅದೇ 1945 ರ ಆಗಸ್ಟ್ ನಲ್ಲಿ ಹಿರೋಷಿಮಾ ಮತ್ತು ನಾಗಸಾಕಿಯ ಮೇಲೆ ಪರಮಾಣು ಬಾಂಬು ಹಾಕಲು ಯುನೈಟೆಡ್ ಸ್ಟೇಟ್ಸ್ ಗೆ ಅಧಿಕಾರ ನೀಡಿತು.
* 1945 ಮತ್ತು 1996 ರ ನಡುವೆ ಅಂದಾಜು 2000 ಪರಮಾಣು ಪರೀಕ್ಷಾ ಸ್ಫೋಟಗಳನ್ನು ನಡೆಸಲಾಗಿದೆ.
* 1996 ರಲ್ಲಿ ಸಮಗ್ರ ಪರಮಾಣು ಪರೀಕ್ಷೆ ನಿಷೇಧ ಒಪ್ಪಂದ (CTBT) ಸ್ಥಾಪಿಸಲಾಗಿದೆ, ಈ ಒಪ್ಪಂದಕ್ಕೆ 170 ರಾಷ್ಟ್ರಗಳು ಸಹಿ ಹಾಕಿ ಅನುಮೋದಿಸಿವೆ, ಹಾಗೂ 15 ರಾಷ್ಟ್ರಗಳು ಒಪ್ಪಂದಕ್ಕೆ ಸಹಿ ಹಾಕಿವೆ ಆದರೆ ಅನುಮೋದನೇ ನೀಡಿಲ್ಲ, ಹಾಗೂ ಇನ್ನು 11 ರಾಷ್ಟ್ರಗಳು ಈ ಒಪ್ಪಂದಕ್ಕೆ ಸಹಿ ಹಾಕಿಲ್ಲ.

## ಇ ಗೋಪಾಲಾ ಅಪ್ಲಿಕೇಶನ್ನ ವೆಬ್ ಆವೃತ್ತಿಯನ್ನು ಪ್ರಾರಂಭಿಸಲಾಗಿದೆ



* ಪ್ರಸ್ತುತ ರಾಷ್ಟ್ರೀಯ ಡೈರಿ ಅಭಿವೃದ್ಧಿ ಮಂಡಳಿಯು ಈ ಇ ಗೋಪಾಲಾದ ವೆಬ್ ಆವೃತ್ತಿಯನ್ನು ಅಭಿವೃದ್ಧಿಪಡಿಸಿದೆ, ಹಾಗೂ ಇದು ಡೈರಿ ರೈತರಿಗೆ ಅನುಕೂಲವಾಗುವ ಪೋರ್ಟಲ್ ಇದಾಗಿದೆ.
* ಪ್ರಸ್ತುತ ಡೈರಿ ರೈತರಿಗೆ ನೈಜ ಸಮಯದ ಮಾಹಿತಿಯನ್ನು ನೀಡಲು NAMDB ವೆಬ್ ಪೋರ್ಟಲ್ ನ್ನು NDDB ಕೂಡ ಆರಂಭಿಸಿದೆ.
* ಇ ಗೋಪಾಲ ಆಪ್ ಸಮಗ್ರ ತಳಿ ಸುಧಾರಣೆ ಮಾರುಕಟ್ಟೆ ಮತ್ತು ಮಾಹಿತಿ ನೀಡಲು ರೈತರಿಗೆ ನೆರವಾಗಲಿದೆ.
* ಪ್ರಸ್ತುತ ರೈತರಿಗೆ ತಮ್ಮ ಜಾನುವಾರುಗಳನ್ನು ನಿರ್ವಹಿಸಲು ಈ ಇ ಗೋಪಾಲ ವೇದಿಕೆಯು ನೆರವು ನೀಡುತ್ತದೆ, ಹಾಗೂ ಪ್ರಾಣಿಗಳ ಪೋಷಣೆ ಮತ್ತು ಪ್ರಾಣಿಗಳ ಚಿಕಿತ್ಸೆ ಬಗ್ಗೆ ರೈತರಿಗೆ ಮಾಹಿತಿಯನ್ನು ನೀಡುತ್ತದೆ.

## ಭಾರತೀಯ ರೈಲ್ವೇಸ್ ನಿಂದ 58 ವಂದೇ ಭಾರತ್ ರೈಲುಗಳಿಗಾಗಿ ಟೆಂಡರ್



* ಪ್ರಸ್ತುತ ಭಾರತೀಯ ರೈಲ್ವೇಸ್ 58 ವಂದೇ ಭಾರತ್ ರೈಲು ಸೆಟ್ ಗಳಿಗೆ ಟೆಂಡರ್ ಕರೆದಿದೆ.
* ಈ ಹಿಂದೆ ಆಗಸ್ಟ್. 15 ರಂದು ಪ್ರಧಾನಿ ಮೋದಿ ಅವರು ತಿಳಿಸಿರುವ ಪ್ರಕಾರ ಅಜಾದಿ ಕಾ ಅಮೃತ್ ಮಹೋತ್ಸವದ 75 ವಾರಗಳಲ್ಲಿ 75 ರೈಲುಗಳನ್ನು ಚಲಾಯಿಸಲು ಟೆಂಡರ್ ಕರೆಯಲಾಗಿದೆ.
* ಈ ಭಾರತೀಯ ರೈಲ್ವೇಸ್ ಟೆಂಡರ್ ಪ್ರಕಾರ 2024 ರ ಮಾರ್ಚ್ ವೇಳೆಗೆ 102 ವಂದೇ ಭಾರತ್ ರೈಲುಗಳನ್ನು ರೈಲ್ವೇಗೆ ನೀಡಲಾಗುತ್ತದೆ, ಈ 102 ವಂದೇ ಭಾರತ್ ರೈಲುಗಳ ಪೈಕಿ 75 ರೈಲುಗಳು 2022 ರ ಆಗಸ್ಟ್. 15 ರೊಳಗೆ ಭಾರತೀಯ ರೈಲ್ವೇಗೆ ನೀಡಲಾಗುತ್ತದೆ.
* ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲನ್ನು, ಭಾರತೀಯ ಸೆಮಿ ಹೈಸ್ಪೀಡ್, ಇಂಟರ್'ಸಿಟಿ ಇಎಂಯು ರೈಲನ್ನು "ಟ್ರೈನ್ 18' ಎಂದು ಕರೆಯಲಾಗುತ್ತದೆ, ಹಾಗೂ ಈ ರೈಲುಗಳು ತಮಿಳುನಾಡು ರಾಜ್ಯದ ಚೆನ್ನೈನ ಪೆರಂಬೂರಿನ ಇಂಟೆಗ್ರಲ್ ಕೋಚ್ ಫ್ಯಾಕ್ಟರಿಯಲ್ಲಿ ತಯಾರಿಸಲಾಗುತ್ತಿದೆ.
* 2019 ರ ಫೆಬ್ರವರಿ. 15 ರಂದು ರೈಲು 18 ನ್ನು ಪ್ರಾರಂಭಿಸಲಾಗಿದೆ, ಇದಕ್ಕೆ 2019 ರ ಜನೇವರಿ. 27 ರಂದು 'ವಂದೇ ಭಾರತ್ ಎಕ್ಸ್‌ಪ್ರೆಸ್' ಎಂದು ಹೆಸರು ಇಡಲಾಗಿದೆ.
* ಪ್ರಸ್ತುತ ಈ 'ರೈಲು 18' ಗಳು ಗರಿಷ್ಠ 200 ಕಿಮೀ/ಗಂ ವೇಗದಲ್ಲಿ ಚಲಿಸುವ ಸಾಮರ್ಥ್ಯ ಹೊಂದಿದೆ, ಆದರೆ ಈಗಿರುವ ಟ್ರ್ಯಾಕ್‌ಗಳು ಈ ವೇಗವನ್ನು ಬೆಂಬಲಿಸುವ ಸಾಮರ್ಥ್ಯವನ್ನು ಹೊಂದಿಲ್ಲ, ಈ ಕಾರಣದಿಂದ ಈ ರೈಲುಗಳು 130 ಕಿಮೀ/ಗಂ ಗರಿಷ್ಠ ವೇಗದಲ್ಲಿ ತಮ್ಮ ಕಾರ್ಯವನ್ನು ನಿರ್ವಹಿಸಲಿವೆ.
* ಈ 'ಟ್ರೈನ್ 18' ಭಾರತದಲ್ಲಿ ಅತಿ ವೇಗವಾಗಿ ಚಲಿಸುವ ರೈಲು ಎಂಬ ಕೀರ್ತಿಗೆ ಪಾತ್ರವಾಗಿವೆ.

# Current affairs of August 2021 from KPSC Vaani